# ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳ ಸಾರಾಂಶ

ಪ್ರಕಟಣೆ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

'ನಿರ್ಮಾಣ ಭವನ', ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು – 560010
ದೂರವಾಣಿ : 080 23378375–80
ಇ–ಮೇಲ್ : souharda@souharda.coop | ವೆಬ್‌ಸೈಟ್ : www.souharda.coop

**ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳ ಸಾರಾಂಶ**

ಮೊದಲ ಮುದ್ರಣ : ಆಗಸ್ಟ್ 2015

ಪ್ರತಿಗಳು : 500

ಪುಟಗಳು : 128

ಬೆಲೆ : ರೂ.60/–

ಪ್ರಕಾಶಕರು : **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
'ನಿರ್ಮಾಣ ಭವನ', ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು – 560010 ದೂರವಾಣಿ : 080 23378375–80
ಇ–ಮೇಲ್ : souharda@souharda.coop
ವೆಬ್‌ಸೈಟ್ : www.souharda.coop.

ಮುದ್ರಕರು :

# ಮೊದಲ ಮಾತು



**ಆತ್ಮೀಯ ಸಹಕಾರಿ ಬಂಧುಗಳೇ,**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಆರೋಗ್ಯಕರ ಬೆಳವಣಿಗೆಗಾಗಿ ಅಗತ್ಯವಾಗುವ ಅನೇಕ ವಿಷಯಗಳ ಬಗ್ಗೆ ಕೈಪಿಡಿಗಳನ್ನು, ಪುಸ್ತಿಕೆಗಳನ್ನು, ಪ್ರಕಟಣೆಗಳನ್ನು ಕಾಲಕಾಲಕ್ಕೆ ಪ್ರಕಟಿಸುತ್ತ ಬಂದಿರುವುದು ಸಹಕಾರಿಗಳಿಗೆಲ್ಲ ತಿಳಿದಿರುವ ವಿಷಯ.

ಅನೇಕ ವಿಷಯಗಳ ಬಗ್ಗೆ ಸಹಕಾರಿಗಳು ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ನ್ಯಾಯಾಲಯಗಳ ನೆರವು ಪಡೆಯುವುದು ಸರ್ವೆಸಾಮಾನ್ಯ. ನೋಂದಣೆ ಮೊದಲ್ಗೊಂಡು, ಉಪವಿಧಿಗಳ ತಿದ್ದುಪಡಿ, ಸಹಕಾರಿ ಸಂಸ್ಥೆಗಳನ್ನು ಒಂದುಗೂಡಿಸುವುದು, ವಿಭಜಿಸುವುದು, ಚುನಾವಣೆಗೆ ಸಂಬಂಧಿಸಿದ ವಿಷಯಗಳು, ಆಡಳಿತ ಮಂಡಳಿ ರದ್ದುಪಡಿಸುವಿಕೆ, ಆಡಳಿತಾಧಿಕಾರಿಗಳ ನೇಮಕ, ವಿಚಾರಣೆ, ಅಧಿಭಾರ ನಡುವಳಿಕೆಗಳು, ದಾವಾ ಪ್ರಕರಣಗಳು ಹಣ ದುರುಪಯೋಗ, ಆದೇಶ ಮತ್ತು ತೀರ್ಪುಗಳನ್ನು ಜಾರಿಮಾಡುವ ವಿಧಾನ ಹಾಗೂ ಸಮಾಪನೆ ಇತ್ಯಾದಿ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಹಲವಾರು ಮಹತ್ವದ ತೀರ್ಪುಗಳಾಗಿವೆ. ಇಷ್ಟೊಂದು ತೀರ್ಪುಗಳಿದ್ದಾಗ್ಯೂ ಸಹ ಅನೇಕ ಬಾರಿ ಸಹಕಾರ ಸಂಸ್ಥಗಳು ಇವುಗಳ ಸರಿಯಾದ ಮಾಹಿತಿಗಳು ದೊರಕದೆ ಆತಂಕದಲ್ಲಿದ್ದು ಅನಗತ್ಯವಾಗಿ ಕಾನೂನು ಸಲಹೆ ಪಡೆಯುವ ಹಾಗೂ ನ್ಯಾಯಾಲಯಗಳ ಮೊರೆಹೋಗುವುದನ್ನು ಗಮನಿಸಲಾಗಿದೆ. ಈ ತೊಂದರೆಗಳನ್ನು ನಿವಾರಿಸುವುದಕ್ಕಾಗಿಯೇ ಸಂಯುಕ್ತ ಸಹಕಾರಿಯು **"ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದ ಉಚ್ಚ ನ್ಯಾಯಾಲಯದ ತೀರ್ಪುಗಳ ಸಾರಾಂಶ"** ಪುಸ್ತಕವನ್ನು ಸಿದ್ಧಪಡಿಸಿದೆ.

ಈ ಪುಸ್ತಕದಲ್ಲಿ ಸರ್ವೆಸಾಮಾನ್ಯವಾಗಿ ಸಹಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ನಿಯಮಗಳು 1960 ಹಾಗು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಇವುಗಳ ವಿವಿಧ ವಿಷಯಗಳಿಗೆ ಸಂಬಂಧಿಸಿದ ಮಹತ್ವದ

1961 ವರೆಗಿನ 2013 ವರೆಗಿನ ತೀರ್ಪುಗಳ ಸಂಕ್ಷಿಪ್ತ ಸಾರಾಂಶವನ್ನು ಸೈಟೇಶನ್ ಸಂಖ್ಯೆಯೊಂದಿಗೆ ಪ್ರಕಟಿಸಲಾಗಿದೆ. ಸಂಯುಕ್ತ ಸಹಕಾರಿಯ ಕಾನೂನು ವಿಭಾಗದ ಅಧಿಕಾರಿಗಳು ಕಳೆದ ಒಂದು ವರ್ಷದಿಂದ ತೀರ್ಪುಗಳನ್ನು ಸಂಗ್ರಹಿಸಲು ಶ್ರಮವಹಿಸಿದ್ದಾರೆ. ಕಾನೂನು ತಜ್ಞರ ಸಲಹೆ ಪಡೆಯಲಾಗಿದೆ. ಸಹಕಾರ ಇಲಾಖೆಯ ನಿವೃತ್ತ ಹಿರಿಯ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಇವುಗಳನ್ನು ಸಂಪಾದಿಸಿ ಮುನ್ನುಡಿ ಬರೆದಿದ್ದಾರೆ. ಶ್ರೀ ರಾಮಾಜೋಯಿಸ್ ಹೈಕೋರ್ಟಿನ ಮಾಜಿ ಮುಖ್ಯನಾಯಾಧೀಶರು ಹಾಗೂ ನಿವೃತ್ತ ರಾಜ್ಯಪಾಲರು, ಶ್ರೀ ಕೆ.ಎಮ್.ನಟರಾಜ ಅಪರ ಸಾಲಿಸಿಟರ್ ಜನರಲ್ ಭಾರತ ಸರಕಾರ ಇವರುಗಳು ಈ ತೀರ್ಪುಗಳ ಸಂಗ್ರಹ ಕಾರ್ಯವನ್ನು, ಇದೊಂದು ಅತ್ಯಂತ ಮಹತ್ವದ ಕಾರ್ಯ ಎಂದು ಶ್ಲಾಘಿಸಿ ಮುನ್ನುಡಿಗಳನ್ನು ಕಳುಹಿಸಿದ್ದಾರೆ. ಈ ಪುಸ್ತಕ ಸಹಕಾರಿ ಸಂಸ್ಥೆಗಳಿಗೆ, ಸೌಹಾರ್ದ ಸಹಕಾರಿಗಳಿಗೆ, ಸಹಕಾರಿ ನೇತಾರರಿಗೆ, ವಕೀಲರಿಗೆ, ಇಲಾಖಾಧಿಕಾರಿಗಳಿಗೆ ಅತ್ಯಂತ ಪ್ರಯೋಜನಕಾರಿಯಾಗಬಹುದೆಂದು ಸಂಯುಕ್ತ ಸಹಕಾರಿಯು ಭಾವಿಸಿದೆ.

ತಾವುಗಳು ಈ ಸಾರಾಂಶ ಸಂಗ್ರಹ ಪುಸ್ತಕವನ್ನು ಓದಿ ಪ್ರಯೋಜನ ಪಡೆದುಕೊಂಡರೆ ಸಂಯುಕ್ತ ಸಹಕಾರಿಯ ಈ ಪ್ರಯತ್ನ ಸಾರ್ಥಕ. ಈ ಪ್ರಕಟಣೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಾಗೂ ಸಲಹೆಗಳನ್ನು ಸ್ವಾಗತಿಸುತ್ತೇವೆ.

**ಗುರುನಾಥ ಜಾಂತಿಕರ**
ಅಧ್ಯಕ್ಷರು

# Justice Dr. M. RAMA JOIS

Former Chief Justice of Punjab and Haryana High Court and
Former Governor of Jharkhand and Bihar
Former Member of Parliament, (Rajya Sabha)


Date : July 30, 2015



ಕರ್ನಾಟಕ ಸರ್ಕಾರದ ಸಹಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತ ಅಪರ ನಿಬಂಧಕರಾಗಿರುವ ಶ್ರೀ ಸಿ. ಎನ್. ಪರಶಿವಮೂರ್ತಿಯವರು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದಡಿಯಲ್ಲಿ ಪರಸ್ಪರ ಸಹಕಾರದೊಡನೆ, ತಮಗೆ ಅವಶ್ಯಕವಾದ ಸೌಲಭ್ಯಗಳನ್ನು ಪಡೆಯಲು ಸೂಕ್ತ ಮಾರ್ಗದರ್ಶನ ಹಾಗೂ ನಿರ್ದೇಶನಗಳನ್ನೊಳಗೊಂಡಿದ್ದು, ಅವುಗಳನ್ನು ಸೌಹಾರ್ದ ಸಹಕಾರಿಗಳನ್ನು ರಚಿಸಿಕೊಂಡು, ಅದರ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಅವಶ್ಯಕವಾದ ಎಲ್ಲ ಮಾಹಿತಿಗಳನ್ನು ಈ ಹೊತ್ತಿಗೆಯಲ್ಲಿ ಸಂಗ್ರಹಿಸಿ ನೀಡಿದ್ದಾರೆ ಹಾಗೂ ಪ್ರತಿಯೊಂದು ಸೌಹಾರ್ದ ಸಹಕಾರಿಗೂ ಅಂದರೆ ಅದರ ಸದಸ್ಯರಿಗೆ, ಆಡಳಿತ ಮಂಡಳಿಯ ಅಧಿಕಾರಿಗಳಿಗೆ ಅತ್ಯಂತ ಉಪಯುಕ್ತವಾಗಿದೆ. ಈ ಶಾಸನ ಮತ್ತು ಅದರ ಉದ್ದೀಶ್ಯವನ್ನು ಸ್ವಾರ್ಥರಹಿತವಾಗಿ, ಪರರ ಹಿತಕ್ಕಾಗಿ ಬಳಸುವುದರ ಮೂಲಕ ಶಾಸನದ ಸಾರ್ಥಕತೆ ಸಾಧಿಸಬಹುದು.

ಸ್ವಾಯತ್ತತೆ, ಸ್ವಯಂ ಆಡಳಿತ ಸೌಹಾರ್ದ ಸಹಕಾರಿಯ ಘೋಷಣಾ ವಾಕ್ಯಗಳಾಗಿರುವುದರಿಂದ ಅವುಗಳನ್ನು ಯಶಸ್ವಿಯಾಗಿ ನಡೆಸುವ ಜವಾಬ್ದಾರಿ ಎಲ್ಲ ಸದಸ್ಯರ, ಆಡಳಿತ ಮಂಡಳಿ ಸದಸ್ಯರ ಮತ್ತು ಸಹಕಾರಿಯ ನೌಕರರ ಜವಾಬ್ದಾರಿಯಾಗಿದೆ.

ಅವರೆಲ್ಲರೂ, ತಮ್ಮ ತಮ್ಮ ಕರ್ತವ್ಯಗಳನ್ನು ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಈ ಪುಸ್ತಕ ಕೈಪಿಡಿಯಾಗಿದ್ದು, ಇವರೆಲ್ಲರ ಉಪಯೋಗಕ್ಕಾಗಿ ಶ್ರೀ ಪರಶಿವಮೂರ್ತಿಯವರು ಸಂಪಾದಿಸಿರುವ ಪುಸ್ತಕ ಸಮಗ್ರವಾಗಿದ್ದು, ಬಹಳ ಉಪಯುಕ್ತವಾಗಿದೆ. ಸಂಬಂಧಪಟ್ಟ ಎಲ್ಲರೂ ಇದರ ಉಪಯೋಗ ಪಡೆಯಬೇಕೆಂಬುದೇ ಈ ಪುಸ್ತಕದ ಉದ್ದೇಶ. ಇದೊಂದು ಅವರು ಮಾಡಿರುವ ಬಹು ಉಪಯೋಗಿ ಹಾಗೂ ಸ್ತುತ್ಯಾರ್ಹ ಪುಸ್ತಕವಾಗಿದೆ. ಸೌಹಾರ್ದ ಸಹಕಾರಿಯ ಚಟುವಟಿಕೆಗಳಲ್ಲಿ ಭಾಗವಹಿಸುವವರೆಲ್ಲರೂ ಇದರ ಉಪಯೋಗ ಪಡೆಯಬಹುದಾಗಿದೆ.

[ಮ. ರಾಮಾ ಜೋಯಿಸ್]


"Sri Shaila"

No. 870-C, 5th Block, Rajajinagar, Bangalore - 560 010 • Ph: 080 - 23151770 • E-mail: ramajois31@gmail.com

**K.M. NATARAJ**
**Additional Solicitor General of India**

**No. 4306,High Point-4**
**Palace Road, Bengaluru-01**
**Mob. : 98450 00171**
**Email:asgsouthzone@gmail.com**



ಸಹಕಾರ ಸಂಘಗಳ ಕಾಯ್ದೆಗೆ ಸಂಬಂಧಪಟ್ಟಂತೆ ನ್ಯಾಯಾಲಯಗಳು ವಿವಿಧ ಸಂದರ್ಭಗಳಲ್ಲಿ ಕೊಟ್ಟ ತೀರ್ಪಿನ ಮುಖ್ಯಾಂಶಗಳನ್ನು ಕ್ರೋಢೀಕರಿಸಿ, ಕೈಪಿಡಿಯ ರೂಪದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಹೊರತರುತ್ತಿರುವುದು ಪ್ರಶಂಸನೀಯ.

ಸಹಕಾರ ಸಂಘಗಳು ಇದೀಗ ಸಂವಿಧಾನದ ಮಾನ್ಯತೆ ಪಡೆದ ಸಂಸ್ಥೆಗಳಾಗಿದ್ದು ಇವುಗಳ ಆಡಳಿತ 'ಸಹಕಾರಿ ತತ್ವಗಳ' ಮೇಲೆ ನಡೆಯಬೇಕಿದ್ದು, ಇಂತಹ ಸಂಸ್ಥೆಗಳನ್ನು ರೂಪಿಸುವುದು ನಾಗರೀಕನ ಮೂಲಭೂತ ಹಕ್ಕಾಗಿ ಇದೀಗ ಪರಿಗಣಿಸಲ್ಪಡುತ್ತಿದೆ. ಇಂತಹ ಸಂಸ್ಥೆಗಳು ಜನಸಾಮಾನ್ಯರಿಗೆ ತಲುಪಿ, ಸಹಕಾರದ ಮೂಲ ತತ್ವಗಳಡಿ, ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸಬೇಕಾದಂತಹ ಕಾರ್ಯದಲ್ಲಿ ತೊಡಗಬೇಕಾಗಿದೆ. ವಿವಿಧ ಸಂದರ್ಭಗಳಲ್ಲಿ ನ್ಯಾಯಾಲಯಗಳು ಸಹಕಾರಿ ಕಾನೂನಿನ ವ್ಯಾಖ್ಯಾನಗಳನ್ನು ಮಾಡಿದ ತೀರ್ಪುಗಳ ಮುಖ್ಯಾಂಶಗಳನ್ನು 'ಕನ್ನಡ ಭಾಷೆಯಲ್ಲಿ' ಹಾಗೂ ವಿವಿಧ ತೀರ್ಪುಗಳ ಸಂಗ್ರಹವನ್ನು 'ಇಂಗ್ಲೀಷ್ ಭಾಷೆ'ಯಲ್ಲಿ ಕರ್ನಾಟಕದ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥೈಸಿಕೊಳ್ಳುವ ರೀತಿಯಲ್ಲಿ ಕ್ರೋಢೀಕರಿಸಿ, ಪುಸ್ತಕ ರೂಪದಲ್ಲಿ ಹೊರತಂದಿರುವುದು ಸಹಕಾರ ಕ್ಷೇತ್ರಕ್ಕೆ, ಸೌಹಾರ್ದ ಸಂಯುಕ್ತ ಸಹಕಾರಿ ನೀಡಿದ ಬಹುದೊಡ್ಡ ಕೊಡುಗೆಯಾಗಿದೆ.

ಈ ಕೈಪಿಡಿಯು ಸಹಕಾರಿಗಳಿಗೆ ಸಹಕಾರಿಯಾಗಲಿ, ನ್ಯಾಯವಾದಿಗಳಿಗೆ ಮತ್ತು ಜನಸಾಮಾನ್ಯರ ಅಧ್ಯಯನಕ್ಕೆ ಪೂರಕವಾಗಲಿ ಮತ್ತು ರಾಜ್ಯದ ಎಲ್ಲಾ ಕಡೆ ಈ ಕೈಪಿಡಿಯು ದೊರಕುವಂತಾಗಲಿ ಎಂದು ಹಾರೈಸುತ್ತೇನೆ.

(K.M.NATARAJ)
Additional Solicitor General of India

# ಮುನ್ನುಡಿ



ಸಹಕಾರಿ ಆಂದೋಲನ ಶಾಸನಬದ್ಧವಾಗಿ ಪ್ರಾರಂಭವಾಗಿ 111 ವರ್ಷಗಳಾಗಿದ್ದರೂ, ಈ ಆಂದೋಲನ ಒಂದು ಜೀವನ ಕ್ರಮವಾಗಿದೆ. 1904ರ ಕಾಯಿದೆ ಬ್ರಿಟೀಷರ ಆಳ್ವಿಕೆಯಲ್ಲಿ ಪ್ರಾಂತೀಯವಾಗಿ ಪ್ರಾರಂಭವಾದರೂ, ಸ್ವಾತಂತ್ರ್ಯ ನಂತರ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಹಕಾರ ಕಾಯಿದೆಯನ್ನು ರಚಿಸಿಕೊಂಡಿದೆ. ನಮ್ಮ ರಾಷ್ಟ್ರದಲ್ಲಿ ಮಾತ್ರ ಸಹಕಾರ ಕಾಯಿದೆ ಸಂಘಗಳ ಸ್ಥಾಪನೆ, ಸದಸ್ಯತ್ವ, ಆಡಳಿತ ಮಂಡಲಿ, ಸಾಮಾನ್ಯ ಸಭೆ, ಮಂಡಳಿ ರದ್ಧತಿ, ವಿವಾದಗಳು, ಮಂಡಳಿ ಮತ್ತು ಸಾಮಾನ್ಯ ಸಭೆಯ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳು, ಸಮಾಪನೆ ಮತ್ತಿತರ ವಿಷಯಗಳನ್ನು ಒಳಗೊಂಡಿದೆ. ಇದಕ್ಕೆ ಪೂರಕವಾಗಿ ಸಹಕಾರ ಸಂಘಗಳ ನಿಯಮಗಳನ್ನು ಜಾರಿ ಮಾಡಿದೆ. ಇದರ ಜೊತೆಗೆ ಸಹಕಾರ ಸಂಘಗಳನ್ನು ಮೇಲ್ವಿಚಾರಣೆ, ಮಾರ್ಗದರ್ಶನ ಮತ್ತು ತಾತ್ವಿಕ ನಿರ್ದೇಶನ ನೀಡಲು ನಿಬಂಧಕರ ನೇಮಕಾತಿಗೆ ಅವಕಾಶ ಕಲ್ಪಿಸಿದೆ.

ಸಹಕಾರಿ ಕಾಯಿದೆ ಜಾರಿಗೆ ಬಂದ ನಂತರ, ಕಾರ್ಯನಿರ್ವಹಣೆ ಸಂದರ್ಭದಲ್ಲಿ ಉಂಟಾಗುವ ವಿವಾದಗಳನ್ನು ತೀರ್ಮಾನಿಸಲು ವಿವಿಧ ನ್ಯಾಯಾಲಯಗಳು ವಿವಿಧ ಕಾಯಿದೆಗಳಲ್ಲಿ ರಚನೆಗೊಂಡಿವೆ. ಸಹಕಾರಿ ನ್ಯಾಯಾಲಯ, ಕಾರ್ಮಿಕ ನ್ಯಾಯಾಲಯಗಳು ಪ್ರಾಥಮಿಕ ಹಂತದಲ್ಲಿ, ಎರಡನೇ ಹಂತದಲ್ಲಿ ನ್ಯಾಯಾಧೀಕರಣಗಳು ಮತ್ತು ಮೇಲ್ಮಟ್ಟದಲ್ಲಿ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳು. ಈ ನ್ಯಾಯಾಲಯಗಳು ನೀಡುವ ತೀರ್ಪುಗಳನ್ನು ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಕ್ರೋಢೀಕರಿಸಿ ಪ್ರಕಟಿಸುವ ಪ್ರಯತ್ನಗಳು ಆಗಿಲ್ಲ. ಹಲವು ಪ್ರಕಾಶಕರು ಕಾಯಿದೆಯನ್ನು ವಿಮರ್ಶಿಸುವಾಗ ಕೆಲವು ತೀರ್ಪುಗಳನ್ನು ಸೇರಿಸಿ ಪ್ರಕಟಿಸಿದರೂ, ಅವುಗಳು ಬಹುಸಂಖ್ಯೆಯಲ್ಲಿರುವುದಿಲ್ಲ.

"ಸಹಕಾರ" ಎಂಬ ವಿಷಯ ರಾಜ್ಯ ಪಟ್ಟಿಯಲ್ಲಿರುವುದರಿಂದ ಸಂವಿಧಾನಾತ್ಮಕವಾಗಿ ರಾಜ್ಯ ಸರ್ಕಾರಗಳೇ ಸಹಕಾರ ಕಾಯಿದೆ ರಚಿಸಬೇಕು. ಅದರಂತೆ ಎಲ್ಲಾ ರಾಜ್ಯಗಳು ಕಾಯಿದೆ ರಚಿಸಿದೆ.

ಆದರೆ ಎಲ್ಲಾ ರಾಜ್ಯ ಸರ್ಕಾರಗಳು ಏಕರೀತಿಯಲ್ಲಿ ಇರುವುದಿಲ್ಲ. ಇದಕ್ಕೆ ಪೂರಕವಾಗಿ ಕರ್ನಾಟಕ ರಾಜ್ಯ ರಚಿಸಿದ ಉದಾರೀಕೃತ ಕಾಯಿದೆ "ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯಿದೆ" ಮಾದರಿಯಲ್ಲಿಯೂ ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸುವುದು ಒಂದು ಮೂಲಭೂತ ಹಕ್ಕಾಗಿ ಸೇರ್ಪಡೆ ಮಾಡಿ, ರಾಜ್ಯ ಸರ್ಕಾರಗಳು ಸಹಕಾರ ಸಂಸ್ಥೆಗಳನ್ನು ಸರ್ಕಾರ/ನಿಬಂಧಕರ ನಿಯಂತ್ರಣದಿಂದ ಮುಕ್ತಿ ನೀಡಿ, ಈ ಸಂಸ್ಥೆಗಳು ಸ್ವಾಯತ್ತ, ಸ್ವತಂತ್ರ, ಸ್ವಯಂ ನಿಯಂತ್ರಿತ ಸಂಸ್ಥೆಗಳನ್ನಾಗಲು ಅವಕಾಶ ಕಲ್ಪಿಸಿದೆ. ಈ ಉದಾರೀಕರಣದಿಂದ ಸಹಕಾರ ಸಂಸ್ಥೆಗಳು ಸ್ವಾಯತ್ತತೆ ಹೆಸರಿನಲ್ಲೂ ಸ್ವೇಚ್ಛಾಚಾರಿಕೆ ಪ್ರಕಟಿಸಲು ಪ್ರಯತ್ನ ಪಡಬಹುದೆಂದು, ವಿವಿಧ ನ್ಯಾಯಾಲಯಗಳು ನೀಡಿದ ತೀರ್ಪಿನ ಮುಖ್ಯಾಂಶಗಳನ್ನು ಸಹಕಾರಿಗಳ/ಸಹಕಾರಿ ಸಂಘಗಳ ಗಮನಕ್ಕೆ ತರುವುದು ಅವಶ್ಯಕವೆಂದು ತಿಳಿದು, ಸಂಯುಕ್ತ ಸಹಕಾರಿ ನಡೆಸಿದ ಪ್ರಯತ್ನ ಪ್ರಶಂಸನೀಯ.

97ನೇ ಸಂವಿಧಾನ ತಿದ್ದುಪಡಿ ನಂತರ 2013 ಮತ್ತು 2014ರಲ್ಲಿ ಸಹಕಾರ ಸಂಘಗಳ ಕಾಯಿದೆ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಗೆ ಮಹತ್ತರ ತಿದ್ದುಪಡಿಗಳನ್ನು ಮಾಡಿದೆ. ಈ ತಿದ್ದುಪಡಿಗಳ ನಂತರ ನ್ಯಾಯಾಲಯಗಳ ತೀರ್ಪುಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಾಗಿಲ್ಲ. ನಾನು ಸಹಕಾರ ಇಲಾಖೆಗೆ ದಿನಾಂಕ 09–04–1970ರಂದು ಸೇರ್ಪಡೆಗೊಂಡು ದಿನಾಂಕ 31–05–1998ರಂದು ನಿವೃತ್ತಿ ಹೊಂದಿದ್ದೇನೆ. ಈ ಅವಧಿಯಲ್ಲಿ ನ್ಯಾಯಾಲಯಗಳು ನೀಡಿದ ತೀರ್ಪುಗಳನ್ನು ಅಭ್ಯಾಸ ಮಾಡಿ, ಅವುಗಳನ್ನು ಅನುಸರಿಸಿ ತೀರ್ಪುಗಳನ್ನು ನೀಡಿದ್ದೇನೆ. ನ್ಯಾಯಾಲಯದ ತೀರ್ಪುಗಳನ್ನು ಅಭ್ಯಾಸ ಮಾಡುವ ಸಂಕ್ಷಿಪ್ತ ಟಿಪ್ಪಣಿಯನ್ನು ಕನ್ನಡದಲ್ಲಿ ಆಗಿಂದಾಗ್ಗೆ ತಯಾರಿಸಿದ್ದೇನೆ.

ಈ ತೀರ್ಪುಗಳು ಸಹಕಾರಿಗಳಿಗೆ, ಸಹಕಾರಿ ಸಂಸ್ಥೆಗಳಿಗೆ ಅದರಲ್ಲೂ ಪ್ರಮುಖವಾಗಿ ಆಡಳಿತ ಮಂಡಲಿ ಸದಸ್ಯರಿಗೆ ಮಾರ್ಗದರ್ಶಿಯಂತೆ ಅಳವಡಿಸಿಕೊಳ್ಳಲು, ಈ ತೀರ್ಪುಗಳ ಸಂಕ್ಷಿಪ್ತ ಟಿಪ್ಪಣಿ ಅನುಕೂಲವಾಗುತ್ತದೆಂದು ಭಾವಿಸಿ ಈ ಪ್ರಯತ್ನ ಮಾಡಲಾಗಿದೆ. ಆದರೆ ಸಹಕಾರಿಗಳು ಈ ಸಂಕ್ಷಿಪ್ತ ಟಿಪ್ಪಣಿಯನ್ನು ಅಳವಡಿಸಿಕೊಳ್ಳುವ ಪೂರ್ವದಲ್ಲಿ ತೀರ್ಪಿನ ಪೂರ್ಣಪಾಠವನ್ನು ಅಭ್ಯಾಸ ಮಾಡಿ, ಆ ನಂತರ ಜಾರಿಗೆ ತರಬೇಕು. ಈ ಪ್ರಕಟಣೆಗೆ ಸಂಯುಕ್ತ ಸಹಕಾರಿ ತೋರಿದ ಆಸಕ್ತಿ ಬಹುಮುಖ್ಯ. ಅದಕ್ಕಾಗಿ ನಾನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಗಳಿಗೆ, ಅದರಲ್ಲೂ ಶ್ರೀ ಶ್ರೀಕಾಂತ ಬರುವೆ ಅವರಿಗೆ ನನ್ನ ಅಭಿಮಾನದ ನಮನ. ಇದರ ಜೊತೆಗೆ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಸತೀಶ್ಚಂದ್ರ ಅವರಿಗೆ ನನ್ನ ನಮನ.

ಈ ಪ್ರಕಟಣೆಯಿಂದ ಸಹಕಾರಿಗಳಿಗೆ ಉಪಯೋಗವಾಗುವುದಾದರೆ ಅದರಿಂದ ಸಂತೋಷಪಡುವ ವ್ಯಕ್ತಿ ನಾನು.

**– ಸಿ.ಎನ್. ಪರಶಿವಮೂರ್ತಿ**

# ಪರಿವಿಡಿ


| | |
|---|---|
| ನೋಂದಣಿ | 11 |
| ಉಪನಿಯಮಗಳ ತಿದ್ದುಪಡಿ | 17 |
| ಸಹಕಾರ ಸಂಘಗಳನ್ನು ಒಟ್ಟುಗೂಡಿಸುವುದು ಮತ್ತು ವಿಭಜಿಸುವುದು | 21 |
| ಚುನಾವಣೆ | 23 |
| ಚುನಾವಣಾಧಿಕಾರಿಗೆ ಸಂಬಂಧಪಟ್ಟ ಹಲವು ತೀರ್ಪುಗಳು | 33 |
| ಆಡಳಿತ ಮಂಡಳಿಯನ್ನು ರದ್ದುಪಡಿಸುವುದು ಮತ್ತು ಆಡಳಿತಾಧಿಕಾರಿ ನೇಮಕ | 36 |
| ವಿಶೇಷಾಧಿಕಾರಿ ನೇಮಕ | 52 |
| ಲೆಕ್ಕತಪಾಸಣೆ | 53 |
| ವಿಚಾರಣೆ | 54 |
| ಅಧಿಭಾರ ನಡವಳಿಕೆಗಳು | 58 |
| ದಾವಾ ಪ್ರಕರಣಗಳು | 65 |
| ವಿಳಂಬ ವಿನಾಯಿತಿ ಅರ್ಜಿ | 72 |
| ವಿವಾದಗಳ ಇತ್ಯರ್ಥ | 72 |
| ಕಲಂ 117ಕ್ಕೆ ಸಂಬಂಧಪಟ್ಟ ತೀರ್ಪುಗಳು | 88 |
| ಆದೇಶ ಮತ್ತು ತೀರ್ಪುಗಳನ್ನು ಜಾರಿ ಮಾಡುವ ವಿಧಾನ | 89 |
| ಕಲಂ 101ಕ್ಕೆ ಸಂಬಂಧಪಟ್ಟ ತೀರ್ಪುಗಳು | 93 |
| ಹಣದುರುಪಯೋಗ | 95 |
| ಸಮಾಪನೆ | 96 |
| ಸಹಕಾರಿ ಕಾಯಿದೆಯಲ್ಲಿನ ಕೆಲವು ತೀರ್ಪುಗಳು | 97 |
| ಚುನಾವಣಾಧಿಕಾರಿಗೆ ಸಂಬಂಧಪಟ್ಟ ಹಲವು ತೀರ್ಪುಗಳು | 108 |
| ಸೌಹಾರ್ದ ಸಹಕಾರಿ ಕಾಯಿದೆಯಡಿಯಲ್ಲಿ ಸಮಾಪನೆಗೆ ಸಂಬಂಧಿಸಿದಂತೆ ತೀರ್ಪುಗಳು | 110 |
| ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960 | 112 |
| ಕರ್ನಾಟಕ ರಾಜ್ಯ ಲೇವಾದೇವಿಗಾರರ ಕಾಯಿದೆ 1961 | 127 |

# ತೀರ್ಪುಗಳು

**ನೋಂದಣಿ :**

1. ಒಂದೇ ಕಾರ್ಯವ್ಯಾಪ್ತಿಯಲ್ಲಿ ಮತ್ತೊಂದು ಸಹಕಾರ ಸಂಘವನ್ನು ನೋಂದಾಯಿಸಲು ನಿಬಂಧಕರು ಅವಶ್ಯಕವೆಂದು ಮನಗಂಡು ಒಪ್ಪಿಗೆ ಕೊಟ್ಟಾಗ ಅದು ನಿಯಮಬಾಹಿರವಲ್ಲ. ಮತ್ತೊಂದು ಸಹಕಾರ ಸಂಘವನ್ನು ವಿಶೇಷ ಪ್ರಸಂಗವೆಂದು ನೋಂದಾಯಿಸಿದಾಗ ಅಂತಹ ನೋಂದಾವಣೆ ಅಸಿಂಧುವಲ್ಲ. 2006(1) ಕೆಸಸಿಆರ್ ಎಸ್ಎನ್ 56

2. ಯಾವುದೆ ಒಂದು ಸಹಕಾರ ಸಂಘವನ್ನು ನೋಂದಣಿ ಮಾಡುವಾಗ ಆರ್ಥಿಕವಾಗಿ ಸಬಲವಲ್ಲವೆಂದು ಮತ್ತು ಆ ಪ್ರಸ್ತಾವನೆಯನ್ನು ತಿರಸ್ಕರಿಸುವುದು ಅಸಿಂಧುವಲ್ಲ. ಅದು ಒಂದು ಹಕ್ಕೂ ಅಲ್ಲ. ಐಎಲ್ಆರ್ 1990(1) ಕೆಎಆರ್ 665/1989(2) ಕೆಎಲ್ಜೆ 356

3. ಯಾವುದೇ ಒಂದು ಸಹಕಾರ ಸಂಘವನ್ನು ನೊಂದಾಯಿಸುವಾಗ ಮತ್ತೊಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಯ ಗ್ರಾಮವನ್ನು ಸೇರಿಸಿ ನೋಂದಣಿ ಮಾಡಿದಾಗ, ನಿಬಂಧಕರು ಯಾವ ಸಹಕಾರ ಸಂಘದ ವ್ಯಾಪ್ತಿಯಲ್ಲಿ ಆ ಗ್ರಾಮ ಸೇರಿಕೊಂಡಿದೆಯೋ ಅದನ್ನು ಕೈಬಿಡಲು ಸಂಬಂಧಪಟ್ಟ ಸಂಘಕ್ಕೆ ನಿರ್ದೇಶನ ನೀಡುವುದು ನಿಬಂಧಕರ ಜವಾಬ್ದಾರಿ. 2000(4) ಕೆಸಿಸಿಆರ್ ಎಸ್ಎನ್ 146/2000(3) ಕೆಎಲ್ಜೆ 86

4. ಒಂದು ಸಹಕಾರ ಸಂಘವನ್ನು ನೋಂದಾವಣೆ ಮಾಡುವಾಗ ಅದು ಆರ್ಥಿಕ ಸಬಲತೆ ಆಗುವ ಸಾಧ್ಯತೆ ಮತ್ತು ಸಹಕಾರಿ ಆಂದೋಲನಕ್ಕೆ ಪೂರಕವಾಗಿಲ್ಲದಿದ್ದರೆ, ಅಂತಹ ಸಂಘವನ್ನು ನೊಂದಾಯಿಸತಕ್ಕದ್ದಲ್ಲ. ಮತ್ತು ಅದಕ್ಕೆ ಪೂರಕವಾಗಿ ಕಲಂ 12(6)ರ್ನ್ವಯ ನಿರ್ದೇಶನ ನೀಡಿ ತಿದ್ದುಪಡಿ ಮಾಡಬಹುದು. (2000(2) ಕೆಸಿಸಿಆರ್ 867/ಐಎಲ್ಆರ್ 2000(1)ಕೆಎಆರ್ 464/ 2000(3) ಕೆಎಲ್ಜೆ 86)

5. ಒಂದು ಸಹಕಾರ ಸಂಘದ ನೋಂದಣಿ ಅರ್ಜಿಯನ್ನು ಸರ್ಕಾರದ ನೀತಿಯನ್ನು ಕಾಯಲಾಗುತ್ತಿದೆ ಎಂದ ಕಾರಣಕ್ಕೆ ತಡೆಹಿಡಿಯತಕ್ಕದ್ದಲ್ಲ. ಮತ್ತು ಇದಕ್ಕೆ ಪೂರಕವಾಗಿ ನಿಬಂಧಕರು ಒಂದು ಹಿಂಬರಹ ನೀಡುವಂತೆ ಸರ್ಕಾರದ ನೀತಿಯನ್ನು ಕಾಯುವ ಅವಶ್ಯಕತೆ ಇಲ್ಲ. 1992(3) ಕೆಎಲ್‌ಜೆ 659.

6. ಮತ್ತೊಂದು ಸಹಕಾರ ಸಂಘದ ಜೊತೆ ವ್ಯವಹಾರಿಕ ಸಂಘರ್ಷವಾಗುತ್ತದೆಂದು ಒಂದು ಸಂಘದ ನೋಂದಾವಣೆಯನ್ನು ತಡೆಹಿಡಿಯತಕ್ಕದ್ದಲ್ಲ. ಯಾವ ಸಂಘವನ್ನು ನೋಂದಾಯಿಸಬಹುದೆಂದು ನಿಬಂಧಕರು ತೀರ್ಮಾನ ಮಾಡಿದಾಗ ಅದು ಸಿಂಧುವಾಗತಕ್ಕದ್ದು. 1989(1) ಕೆಎಲ್‌ಜೆ 127

7. ಯಾವುದೇ ಒಂದು ಸಹಕಾರ ಸಂಘವನ್ನು ಮುಖ್ಯ ಪ್ರವರ್ತಕರ ಅರ್ಜಿಯ ಮೇಲೆ ನೋಂದಾಯಿಸಲಾಗಿದೆಯೋ, ಅಂತಹ ಸಂಘಕ್ಕೆ, ನಿಬಂಧಕರು ಆಡಳಿತ ಮಂಡಳಿಗೆ ಲಿಖಿತ ನಿರ್ದೇಶನ ನೀಡಿ, ಸದಸ್ಯರನ್ನು ಸೇರಿಸಿಕೊಳ್ಳಲು ಮತ್ತು ಅಂತಹ ಸದಸ್ಯರು ಮಹಾಸಭೆಯಲ್ಲಿ ಭಾಗವಹಿಸಲು ಅಧಿಕಾರವಿದೆಯೆಂದು ನಿರ್ದೇಶನ ಕೊಡತಕ್ಕದ್ದಲ್ಲ. 1998(4) ಕೆಎಲ್‌ಜೆ 471

8. ಯಾವುದೇ ಒಂದು ಸಹಕಾರ ಸಂಘದ ನೌಕರ, ಸಂಘದ ವ್ಯವಹಾರದ ಬಗ್ಗೆ ಕಾರ್ಯ ನಿರ್ವಹಿಸುವಾಗ ಕ್ರಿಮಿನಲ್ ಕಾಯಿದೆಯಡಿ ಕ್ರಮ ಜರುಗಿಸುವಾಗ, ಸಹಕಾರ ಸಂಘವನ್ನು ರಾಜ್ಯ ಎಂದು ತಿಳಿಯತಕ್ಕದ್ದಲ್ಲ. ಆದ್ದರಿಂದ ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರದ ಒಪ್ಪಿಗೆ ಬೇಕಾಗಿಲ್ಲ. ಎಐಆರ್ 1981 ಎಸ್‌ಸಿ 1345/1981 ಸಿಎಲ್‌ಜೆ 871

9. ಕಾನೂನುಬದ್ಧವಾಗಿ ಒಂದು ಸಹಕಾರ ಸಂಘಕ್ಕೆ ನೊಂದಣಿ ಪ್ರಮಾಣ ಪತ್ರ ಜಾರಿ ಮಾಡಿದಾಗ, ಅದು ಸ್ವಾಭಾವಿಕ ನ್ಯಾಯದನ್ವಯ ಇರುತ್ತದೆ. ಪ್ರತಿಯೊಬ್ಬ ಸದಸ್ಯನಿಗೂ ನೋಂದಣಿ ಆದೇಶ ಜಾರಿ ಮಾಡುವ ಅವಶ್ಯಕತೆ ಇಲ್ಲ. ಎಐಆರ್ 1985 ಎಸ್‌ಸಿ 973

10. ಒಂದು ಸಹಕಾರ ಸಂಘವನ್ನು ರಾಜ್ಯ ಎಂದು ಸಂವಿಧಾನದ 12ನೇ ವಿಧಿಯನ್ವಯ ಕರೆಯಲಾಗದು. ಆದ್ದರಿಂದ ರಿಟ್ ಅರ್ಜಿಯನ್ನು ಸಂವಿಧಾನದ ವಿಧಿ 226ರನ್ವಯ ಹೊರಡಿಸತಕ್ಕದ್ದಲ್ಲ. 1981 (2)ಕೆಎಲ್‌ಜೆ 533/ಐಎಲ್‌ಆರ್ 1981 (2) ಕೆಎಆರ್ 1039/ಎಐಆರ್ ಎನ್‌ಓಸಿ 98

11. ಒಂದು ಸಹಕಾರ ಸಂಘದ ಅಧ್ಯಕ್ಷರು ಮತ್ತು ನಿರ್ದೇಶಕರ ಮೇಲೆ ಆರೋಪ ಹೊರಿಸಿದಾಗ ಆ ಆರೋಪವನ್ನು ಸಂಘಕ್ಕೆ ವಿರುದ್ಧವಾಗಿ ಎಂದು ಪರಿಗಣಿಸತಕ್ಕದ್ದಲ್ಲ. ಆದ್ದರಿಂದ ಒಂದು ಸಹಕಾರ ಸಂಘವನ್ನು ಸಂಬಂಧಪಟ್ಟ ಕಕ್ಷಿದಾರ ಎಂದು ತಿಳಿಯತಕ್ಕದ್ದಲ್ಲ. 1967(2) ಎಂಎಲ್‌ಜೆ 149

12. ಒಂದು ಸಹಕಾರ ಸಂಘ ಮಾಡಿಕೊಂಡ ಒಪ್ಪಂದವನ್ನು ರಾಜ್ಯ ಸರ್ಕಾರ ಅಥವಾ ಇನ್ನಾವುದೇ ಪ್ರಾಧಿಕಾರ ಪರಿಶೀಲಿಸುವುದು, ಒಪ್ಪಿಗೆ ಕೊಡುವುದು, ತಿರಸ್ಕರಿಸುವುದು ಅಥವಾ ಮಾರ್ಪಾಡು ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದಲ್ಲ. ಇಂತಹ ಮಧ್ಯಪ್ರವೇಶಕ್ಕೆ ಸಂಘದ ಉಪನಿಯಮಗಳೇ ನಿಯಂತ್ರಿಸತಕ್ಕದ್ದು. 1981(2) ಕೆಎಲ್‌ಜೆ 533/ಐಎಲ್‌ಆರ್ 1981(2) ಕೆಎಆರ್ 1039/ಎಐಆರ್ 1982 ಎನ್‌ಓಸಿ 98

13. ಒಂದು ಸಹಕಾರ ಸಂಘವನ್ನು ನೋಂದಾಯಿಸುವಾಗ ಆ ಸಂಘವು ನಡೆಸಬೇಕೆಂದಿರುವ ದ್ಯೇಯೋದ್ದೇಶಗಳು ಕಾನೂನಿನಲ್ಲಿ ಅಳವಡಿಸಿರುವ ಉದ್ದೇಶಗಳಿಗೆ ವಿರುದ್ಧವಾಗಿ ಇರತಕ್ಕದ್ದಲ್ಲ. ಒಂದು ಸಹಕಾರ ಸಂಘದ ಉಪನಿಯಮಗಳನ್ನು ನೋಂದಾಯಿಸಲು ತಿರಸ್ಕರಿಸಿದಾಗ ಕಾರಣಗಳನ್ನು ತಿಳಿಸಿ ಸಂವಿಧಾನದ ಆರ್ಟಿಕಲ್ 19ರ ವಿರುದ್ಧವಾಗಿ ಇಲ್ಲವೆಂದು ತೀರ್ಮಾನಿಸಬೇಕು. ಐಎಲ್ಆರ್ 1990(1) ಕರ್ನಾಟಕ 665/1989(2) ಕೆಎಲ್‌ಜೆ 356.

14. ಸರ್ಕಾರವು ತನ್ನ ಅಧಿಕಾರವನ್ನು ಚಲಾಯಿಸಿ ನಿಬಂಧಕರ ಅಧಿಕಾರವನ್ನು ಕೆಳ ಅಧಿಕಾರಿಗೆ ವರ್ಗಾಯಿಸಿದಾಗ ಆ ಅಧಿಕಾರದ ಮಿತಿಯೊಳಗೆ ಕೆಳ ಅಧಿಕಾರಿ ಅಧಿಕಾರ ಚಲಾಯಿಸಬಹುದು. ಒಂದು ಸಂಘದ ಉಪನಿಯಮಗಳನ್ನು ನೋಂದಾವಣೆ ಮಾಡುವಾಗ ಆ ಕೊಡಮಾಡಲ್ಪಟ್ಟ ಅಧಿಕಾರವನ್ನು ಚಲಾಯಿಸುತ್ತಾನೆ. ಉಪನಿಯಮಗಳ ನೋಂದಾವಣೆಯನ್ನು ತಿರಸ್ಕರಿಸಿದಾಗ ಆ ಆದೇಶವನ್ನು ಪುನರ್ ವಿಮರ್ಶೆ ಮಾಡಲು ನಿಬಂಧಕರಿಗೆ ಸಲ್ಲಿಸತಕ್ಕದ್ದು. ನಿಬಂಧಕರೇ ಉಪನಿಯಮಗಳ ನೋಂದಾವಣೆ ತಿರಸ್ಕರಿಸಿದಾಗ ಅದರ ಮೇಲ್ಮನವಿ ಅಥವಾ ಪುನರ್ ವಿಮರ್ಶೆ ಸರ್ಕಾರಕ್ಕೆ ಇರತಕ್ಕದ್ದು. ಎಐಆರ್ 1973 ಪಾಟ್ನಾ 77(ಡಿಬಿ).

15. ಒಂದು ಸಹಕಾರ ಸಂಘ ತನ್ನ ಸದಸ್ಯರ ಆರ್ಥಿಕ ಬೆಳವಣಿಗೆಗೆ ಮತ್ತು ಸಾಮಾನ್ಯ ಜನರ ಕಲ್ಯಾಣಕ್ಕೆ ನೋಂದಾಯಿಸಬಹುದು. ಉಪನಿಯಮಗಳ ನೋಂದಾಣೆಯನ್ನು ನೋಂದಾಯಿಸುವಾಗ ಕಲಂ 4ರಲ್ಲಿ ನಿಬಂಧಕರ ವಿವೇಚನೆಗೆ ಎಂದಿದ್ದರೂ ಕಲಂ 7ರ ಎಲ್ಲಾ ಷರತ್ತುಗಳನ್ನು ಪೂರೈಸಿದಾಗ ನೋಂದಾವಣೆಯನ್ನು ತಿರಸ್ಕರಿಸತಕ್ಕದ್ದಲ್ಲ. ಎಐಆರ್ 1993 ಕರ್ನಾಟಕ 117.

16. ಒಂದು ಸಹಕಾರ ಸಂಘವನ್ನು ನೋಂದಾಯಿಸುವಾಗ ಮತ್ತೊಂದು ಸಂಘದ ಕಾರ್ಯವ್ಯಾಪ್ತಿಗೆ ವಿಸ್ತರಿಸುವಾಗ ನಿಬಂಧಕರು ಒಂದು ಸಂಘದ ವ್ಯಾಪ್ತಿಯನ್ನು ನಿರ್ಧರಿಸಿ ಆದೇಶ ಹೊರಡಿಸತಕ್ಕದಲ್ಲ. ಆದರೆ ಯಾವ ಸಂಘದ ವ್ಯಾಪ್ತಿಗೆ ಹೊಸ ಸಂಘದ ಕಾರ್ಯವ್ಯಾಪ್ತಿ ವಿಸ್ತರಿಸಬೇಕೋ ಅದಕ್ಕೆ ಅವಕಾಶ ಕಲ್ಪಿಸಿ ಮಾರ್ಪಡಿಸಬೇಕು. 2000(3) ಕರ್ನಾಟಕ ಎಲ್‌ಜೆ 86/2000(4) ಕೆಸಿಸಿಆರ್ ಎಸ್‌ಎನ್ 146.

17. ಒಂದು ಸಹಕಾರ ಸಂಘವನ್ನು ನೋಂದಾಯಿಸುವಾಗ ಆ ಸಂಘವು ಆರ್ಥಿಕವಾಗಿ ವಿಕೃತ ಅಥವಾ ಅಸ್ವಸ್ಥ ಸ್ಥಿತಿ ಅಥವಾ ಸಹಕಾರಿ ಆಂದೋಲನಕ್ಕೆ ಉಪಯುಕ್ತವಲ್ಲದ ಬೈಲಾ ತಿದ್ದುಪಡಿಯನ್ನು ಕಲಂ 12(6)ರನ್ವಯ ಮಾರ್ಪಡಿಸುವುದು ಸೂಕ್ತವಲ್ಲ. ಐಎಲ್ಆರ್ 94 ಕರ್ನಾಟಕ 2525 (ಡಿಬಿ)/1981(1) ಕರ್ನಾಟಕ ಎಲ್‌ಜೆ ಎಸ್‌ಎನ್ 71(ಡಿಬಿ) ಈ ಉಲ್ಲೇಖದಲ್ಲಿ ಆಧರಿಸಿ 2000(2) ಕೆಸಿಸಿಆರ್ 867/ಐಎಲ್ಆರ್ 2000(1) ಕರ್ನಾಟಕ 264/2000(3) ಕರ್ನಾಟಕ ಎಲ್‌ಜೆ 83.

18. ಒಂದು ಸಹಕಾರ ಸಂಘವನ್ನು ನೋಂದಾಯಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರ ಆ ನೋಂದಾವಣೆ ಬಗ್ಗೆ ತಾತ್ವಿಕ ತೀರ್ಮಾನಕ್ಕೆ ಕಾಯುತ್ತಿದ್ದೇನೆ ಎಂದು ನೋಂದಾವಣೆ ಮುಂದಿಡತಕ್ಕದ್ದಲ್ಲ. ಹಾಗೂ ನಿಬಂಧಕರಿಂದ ಈ ರೀತಿಯ ಹಿಂಬರಹ ನೀಡಲು ನಿಬಂಧಕರ ಲಿಖಿತವಾಗಿ ಕೇಳತಕ್ಕದಲ್ಲ. ಹಾಗೂ ಈ ನೋಂದಾವಣೆ ಸರ್ಕಾರದ ನೀತಿಯಂತರ ಇದೆ

ಎಂಬುದನ್ನು ಪ್ರಮಾಣಿಕರಿಸಬೇಕಾಗಿಲ್ಲ. 1992(3) ಕೆಎಲ್‌ಜೆ 659.

19. ಸಂಘಗಳಲ್ಲಿ ಸ್ಪರ್ಧೆಯನ್ನು ತಪ್ಪಿಸಲು ಉಪನಿಯಮಗಳ ನೋಂದಾವಣೆ ತಿರಸ್ಕರಿಸಲಾಗದು. ಕಾಯಿದೆ ಕಲಂ 7ರನ್ವಯ ವಿದಿಸಿರುವ ಷರತ್ತುಗಳನ್ನು ಪೂರೈಸಿದರೆ ನೋಂದಾವಣೆ ಮಾಡತಕ್ಕದ್ದು. 1989(1) ಕೆಎಲ್‌ಜೆ 127.

20. ನಿಬಂಧಕರು ಒಂದು ಸಹಕಾರ ಸಂಘದ ಉಪನಿಯಮಗಳನ್ನು ನೋಂದಾಯಿಸುವ ಸಂದರ್ಭದಲ್ಲಿ ಆ ಸಂಘದ ಉಪನಿಯಮಗಳು ಸಮರ್ಪಕವಾಗಿದೆಯೇ? ಕಾನೂನಿಗೆ ವಿರುದ್ಧವಲ್ಲವೇ? ಆ ಸಂಘದ ಧ್ಯೇಯೋದ್ದೇಶಗಳು ಸಾಮಾನ್ಯ ನ್ಯಾಯ ತತ್ವಕ್ಕೆ ಅನುಗುಣವಾಗಿದೆಯೇ? ಎಂಬುದನ್ನು ಗಮನಿಸಬೇಕು. ಆದರೆ ಮುಖ್ಯ ಪ್ರವರ್ತಕರಿಗೆ ಕೆಲವು ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಬೇಕೆಂದು ಹಾಗೂ ಪದಾಧಿಕಾರಿಗಳಾಗಲು ಅವಕಾಶ ಕೊಡಬೇಕೆಂದು ನಿರ್ದೇಶನ ಕೊಡುವ ಅಧಿಕಾರ ಇಲ್ಲ. 1998(4) ಕೆಎಲ್‌ಜೆ 471.

21. ಒಂದು ಸಹಕಾರ ಸಂಘದ ಬೈಲಾದಲ್ಲಿ ರಿಜಿಸ್ಟ್ರಾರ್‌ರವರಿಗೆ ಪ್ರಥಮ ಆಡಳಿತ ಮಂಡಳಿ ನೋಂದಣಿಯನ್ನು ನಾಮನಿರ್ದೇಶನ ಮಾಡಲು ಅಧಿಕಾರ ಕೊಟ್ಟಿದ್ದರೆ ಆ ಅಧಿಕಾರವನ್ನು ಚಲಾಯಿಸುವಾಗ ಆ ನೋಂದಾಯಿತ ಸಂಘದ ಸದಸ್ಯರಲ್ಲಿ ಮಾತ್ರ ನಾಮ ನಿರ್ದೇಶನ ಮಾಡತಕ್ಕದ್ದು. ಐಎಲ್‌ಆರ್ 1963 ಮೈಸೂರು 488/1963(1) ಮೈಸೂರು ಲಾ ಜರ್ನಲ್ 556. ಈ ತೀರ್ಪು ಈಗ ಅವಶ್ಯಕತೆ ಬರುವುದಿಲ್ಲ. ಹೊಸದಾಗಿ ನೋಂದಾವಣೆಯಾದ ಆಡಳಿತ ಮಂಡಳಿಯನ್ನು ಚುನಾವಣೆ ಮಾಡಿ ಸದಸ್ಯರಲ್ಲಿಯೇ ಆಯ್ಕೆ ಮಾಡಲು ಕಾನೂನನ್ನು ತಿದ್ದುಪಡಿ ಮಾಡಲಾಗಿದೆ.

22. ಒಂದು ಸಹಕಾರ ಸಂಘದ ಉಪನಿಯಮ ಕಾನೂನು ಎಂದು ತಿಳಿಯತಕ್ಕದಲ್ಲ. 1983(1) ಕೆಎಲ್‌ಜೆ 106.

23. ಒಂದು ಸಹಕಾರ ಸಂಘ ರಿಟ್ ಅರ್ಜಿ ಸಲ್ಲಿಸಲು ಬರುವುದಿಲ್ಲ. ಏಕೆಂದರೆ ಅದು ಒಂದು ಕಾನೂನುಬದ್ದ ಪ್ರಾಧಿಕಾರವಲ್ಲ. ಐಎಲ್‌ಆರ್ 1976(1) ಕರ್ನಾಟಕ 75/1975 ಕೆಎಲ್‌ಜೆ 312/ ಕೆಎಆರ್ 1976 ಕರ್ನಾಟಕ(1) (ಡಿಬಿ).

24. ಒಬ್ಬ ಸದಸ್ಯನನ್ನು ಸದಸ್ಯತ್ವದಿಂದ ತೆಗೆದುಹಾಕುವಾಗ ಸಂಘವು ಆ ವಿಷಯವನ್ನು ಪರಿಶೀಲಿಸುವಾಗ ಇತರ ವಿಷಯಗಳ ಪರಿಶೀಲನೆ ಸಮಯದಲ್ಲಿ ಎಂಬ ವಿಷಯವನ್ನು ವಿಷಯದಡಿ ಸದಸ್ಯನನ್ನು ತೆಗೆದಾಗ ಆ ತೀರ್ಮಾನಕ್ಕೆ ಪೂರ್ವದಲ್ಲಿ ಕಾರಣ ಕೇಳುವ ನೋಟೀಸ್ ಎಂದು ಪರಿಗಣಿಸತಕ್ಕದಲ್ಲ. ಒಬ್ಬ ಸದಸ್ಯನಿಗೆ ಆ ಸಹಕಾರ ಸಂಘದ ಸದಸ್ಯತ್ವ ಅವನ ಅಮೂಲ್ಯ ಹಕ್ಕು ಸದಸ್ಯನಾದ ಕೂಡಲೇ ಅವನಿಗೆ ಕೆಲವು ಸೌಲಭ್ಯಗಳು ಲಭಿಸತಕ್ಕದ್ದು. ಆ ಸೌಲಭ್ಯಗಳನ್ನು ಕಿತ್ತುಕೊಳ್ಳಲಾಗದು. ಒಂದು ಸಹಕಾರ ಸಂಘದ ಬೈಲಾದಲ್ಲಿ ಈ ವಿಷಯಕ್ಕೆ ಅವಕಾಶವಿದ್ದರೆ ಅಂತಹ ವಿಷಯವನ್ನು ಸಭೆಯಲ್ಲಿ ಚರ್ಚಿಸಬೇಕಾದರೆ ಸ್ಪಷ್ಟವಾಗಿ ಯಾವ ಸದಸ್ಯನನ್ನು ತೆಗೆಯಲು ವಿಷಯ ಮಂಡಿಸಲಾಗಿದೆ ಮತ್ತು ಆ ವ್ಯಕ್ತಿಗೆ ಅವಕಾಶ ಕೊಡಲಾಗಿದೆಯೇ? ಎಂಬುದು ಮುಖ್ಯ. ಈ ರೀತಿಯ ತೀರ್ಮಾನ ಆಗದೇ ಇರುವುದರಿಂದ ಒಬ್ಬ ಸದಸ್ಯನನ್ನು ಅವಕಾಶ ಕಲ್ಪಿಸದೆ ತೆಗೆದುಹಾಕಿರುವುದು ಸ್ವಾಭಾವಿಕ ನ್ಯಾಯದ

ಉಲ್ಲಂಘನೆಯಾಗಿದೆ. ಐಎಲ್ಆರ್ 1967(2) ಮೈಸೂರು 388/1969(2) ಮೈಸೂರು ಎಲ್‌ಜೆ 336(ಡಿಬಿ) ಹಾಗೂ ಎಐಆರ್ 1987 ಎಸ್‌ಸಿ 849.

25. ಯಾವುದೇ ಒಂದು ಸಹಕಾರ ಸಂಘವನ್ನು ಮತ್ತೊಂದು ಸಹಕಾರ ಸಂಘದ ವ್ಯಾಪ್ತಿಗೆ ನೋಂದಯಿಸತಕ್ಕದ್ದಲ್ಲವೆಂದು ಕಾನೂನಿನಲ್ಲಿ ವಿರೋಧವಿಲ್ಲ. ಸ್ಪರ್ಧೆ ಎಂಬ ಕಾರಣಕ್ಕೆ ನೋಂದಾವಣೆ ತಿರಸ್ಕರಿಸತಕ್ಕದಲ್ಲ. 1989(1) ಕೆಎಲ್‌ಜೆ 127.

26. ಒಂದು ಸಹಕಾರ ಸಂಘದ ಉಪನಿಯಮಗಳು ಸಹಕಾರ ಸಂಘಗಳ ಕಾಯಿದೆಗೆ ವಿರುದ್ಧವಾಗಿದ್ದರೆ ಆ ಉಪನಿಯಮವನ್ನು ನೋಂದಾಯಿಸತಕ್ಕದಲ್ಲ. ಐಎಲ್ಆರ್ 1979 ಮೈಸೂರು 330/1964(1) ಮೈಸೂರು ಎಲ್‌ಜೆ 289(ಡಿಬಿ)

27. ಕಾಯಿದೆಯಲ್ಲಿ ತಿದ್ದುಪಡಿ ಮಾಡುವಾಗ ಸಂಘಕ್ಕೆ ವಿವರಣೆ ಕೊಡುವ ಅವಕಾಶ ಕಲ್ಪಿಸಿ ಆದೇಶ ಹೊರಡಿಸಬೇಕು. ಆಡಳಿತ ಮಂಡಳಿ ಮತ್ತು ಮಹಾಸಭೆಗೆ ಬಹಳಷ್ಟು ವ್ಯತ್ಯಾಸವಿದೆ. ಎಐಆರ್ 1981 ಒರಿಸ್ಸಾ 112/51/ 1981 ಸಿಎಲ್‌ಟಿ 421.

28. ಒಂದು ಸಹಕಾರ ಸಂಘವನ್ನು ನೋಂದಾಯಿಸುವಾಗ ನಿಬಂಧಕರು ಪ್ರಸ್ತಾಪಿಸಿದ ಸಹಕಾರ ಸಂಘದ ದ್ಯೇಯೋದ್ದೇಶಗಳು ಮತ್ತು ನೋಂದಾಯಿಸಿದ ನಂತರ ಅ ಸಂಘವು ಸುಭದ್ರವಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಶಕ್ತಿ ಇದೆ ಎಂದು ಮನಗಂಡು ನೋಂದಾಯಿಸತಕ್ಕದ್ದು. ಆದರೆ ಹಣವಂತರೇ ಈ ಸಂಘದ ಅನುಕೂಲ ಪಡೆಯಲು ಅವಕಾಶವಿದೆ ಎಂಬ ಕಾರಣಕ್ಕೆ ತಕರಾರು ತೆಗೆಯುವಂತಿಲ್ಲ. ನೋಂದಾವಣೆಗೆ ಅವಶ್ಯವಾದ ಷರತ್ತುಗಳನ್ನು ಪೂರೈಸಿದ ನಂತರ ಆ ಷರತ್ತುಗಳಿಗೆ ಮೀರಿ ಮತ್ಯಾವುದೇ ವಿಷಯವನ್ನು ನೋಂದಾವಣೆ ಸಮಯದಲ್ಲಿ ಪರಿಗಣಿಸತಕ್ಕದಲ್ಲ. ಎಐಆರ್ 1960 ಎಪಿ 123.

29. ಒಂದು ಸಂಘದ ಕಾರ್ಯವ್ಯಾಪ್ತಿಯಲ್ಲಿ ಮತ್ತೊಂದು ಸಂಘವನ್ನು ನೋಂದಾಯಿಸಬಾರದೆಂಬುದು ಕಾನೂನಿಗೆ ವಿರುದ್ಧ. 1968(1) ಎಪಿ ಡಬ್ಲ್ಯೂಆರ್ 52.

30. ಒಂದು ಸಹಕಾರ ಸಂಘ ಒಂದು ಕಾನೂನಿನಡಿ ರಚನೆಯಾದ ಸಂಘ ಅಲ್ಲ. ಆದ್ದರಿಂದ ಒಂದು ಸಹಕಾರ ಸಂಘದ ನೌಕರ ಕಾನೂನಿನ ಅರ್ಥದಲ್ಲಿ ಸರ್ಕಾರಿ ನೌಕರನಂತೆ ಇರುವುದಿಲ್ಲ. ಎಐಆರ್ 1981 ಎಸ್‌ಸಿ 1345.

31. ಒಂದು ಸಹಕಾರ ಸಂಘವನ್ನು ಒಂದು ಸರ್ಕಾರಕ್ಕೆ ಹೋಲಿಸತಕ್ಕದಲ್ಲ. ಹಾಗೂ ಸರ್ಕಾರದ ನಿಯಂತ್ರಣಕ್ಕೆ ಮತ್ತೊಂದು ನಿಯಂತ್ರಣದಡಿ ಕೆಲಸ ನಿರ್ವಹಿಸುವುದಿಲ್ಲ. ಆದ್ದರಿಂದ ಸಹಕಾರ ಸಂಘಕ್ಕೆ ನೇರವಾಗಿ ರಿಟ್ ಅರ್ಜಿ ಸಲ್ಲಿಸಲು ಬರುವುದಿಲ್ಲ. 1981(1) ಕೆಎಲ್‌ಜೆ 533/ಐಎಲ್ಆರ್ 1981(2) ಕರ್ನಾಟಕ 1039.

32. ಕಾಯಿದೆಯಲ್ಲಿ ಒಂದು ಸಹಕಾರ ಸಂಘಕ್ಕೆ ನೋಟೀಸ್ ಜಾರಿ ಮಾಡುವ ಅಧಿಕಾರವಿದ್ದರೆ ಆ ನೋಟೀಸನ್ನು ಸಹಕಾರ ಸಂಘಕ್ಕೆ ತಿಳಿಸಿದರೆ ಸಾಕು. ಪ್ರತಿಯೊಬ್ಬ ಸದಸ್ಯನಿಗೂ ನೋಟೀಸ್ ಜಾರಿ ಮಾಡಬೇಕೆಂಬ ನಿಯಮವಿಲ್ಲ. ಎಐಆರ್ 1985 ಎಸ್‌ಸಿ 973.

33. ಒಂದು ಸಹಕಾರ ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರ ಮೇಲೆ ಆರೋಪ ಮಾಡಿದರೆ ಅದನ್ನು ಸಹಕಾರ ಸಂಘದ ಮೇಲೆ ಆರೋಪ ಎಂದು ತಿಳಿಯತಕ್ಕದಲ್ಲ. 1962(2) ಎಂಎಲ್‌ಜೆ 149.

34. ಒಂದು ಸಹಕಾರ ಸಂಘ ತನ್ನ ಆಸ್ತಿಯನ್ನು ಬಾಡಿಗೆಗಾಗಲಿ ಗುತ್ತಿಗೆಗಾಗಲಿ ಕೊಟ್ಟಾಗ ಅದನ್ನು ಪರಿಶೀಲಿಸಲು ಒಪ್ಪಿಗೆ ಕೊಡಲು ತಿರಸ್ಕರಿಸಲು ಮಾರ್ಪಡಿಸಲು ಅಥವಾ ಇನ್ನಾವುದೇ ರೀತಿಯ ಮಧ್ಯಪ್ರವೇಶಕ್ಕೆ ಅವಕಾಶವಿಲ್ಲ. ಒಂದು ಸಹಕಾರ ಸಂಘವು ತಾನು ಹೊಂದಿದ ಆಸ್ತಿಯನ್ನು ಯಾವ ರೀತಿ ಉಪಯೋಗಿಸಬೇಕೆಂದು ಉಪನಿಯಮದಲ್ಲಿ ಸೂಚಿಸಲಾಗಿದೆಯೋ, ಆ ರೀತಿ ನಡೆಯತಕ್ಕದ್ದು. ಈ ರೀತಿ ವ್ಯವಹರಿಸಿದಾಗ ಸಂಬಂಧಪಟ್ಟ ಆಡಳಿತ ಮಂಡಳಿ ಸದಸ್ಯರನ್ನು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡತಕ್ಕದಲ್ಲ. ಹಾಗೂ ಸಹಕಾರ ಸಂಘವನ್ನು ಕಕ್ಷಿದಾರರನ್ನಾಗಿ ಮಾಡದೆ ವ್ಯಕ್ತಿಗತವಾಗಿ ಮಾಡತಕ್ಕದಲ್ಲ. ಎಐಆರ್ 1961 ಕೇರಳ 258.

35. ಒಂದು ಸಹಕಾರ ಸಂಘದ ಮೇಲೆ ಪಡೆದ ಡಿಕ್ರಿಯನ್ನು ಆ ಸಂಘದ ಸದಸ್ಯರ ಮೇಲೆ ಅಂದರೆ ವೈಯಕ್ತಿಕವಾಗಿ ಜಾರಿ ಮಾಡಲಾಗದು. ಏಕೆಂದರೆ ಆ ಸದಸ್ಯನು ಸರ್ಕಾರದ ಭಾಗವಲ್ಲ. ಒಂದು ಸಹಕಾರ ಸಂಘ ಸಮಾಪನೆಗೊಂಡಾಗಲು ಅಂತಹ ಸಂದರ್ಭದಲ್ಲಿ ಆ ಸಂಘದ ಆಸ್ತಿಯು ಸರ್ಕಾರದ ಆಸ್ತಿಯಾಗುವುದಿಲ್ಲ. ಎಐಆರ್ 1957 ಅಲಹಾಬಾದ್ 492.

36. ಒಂದು ಸಹಕಾರ ಸಂಘ ರಿಟ್ ಅರ್ಜಿ ಸಲ್ಲಿಸಲು ಬರುವುದಿಲ್ಲ ಎಂಬ ತೀರ್ಪಿಗೆ ಮಧ್ಯಪ್ರದೇಶ ಉಚ್ಚ ನ್ಯಾಯಾಲಯ ವ್ಯತಿರಿಕ್ತ ತೀರ್ಪನ್ನು ನೀಡಿದೆ.

37. ಕಾನೂನಿನ ನಿಯಮಗಳು ಮತ್ತು ಸಹಕಾರ ಸಂಘದ ಉಪನಿಯಮಗಳಿಗೂ ಸ್ವಲ್ಪಮಟ್ಟಿನ ವ್ಯತ್ಯಾಸವಿದೆ. ಉಪನಿಯಮಗಳನ್ನು ಕಿತ್ತುಹಾಕಬಹುದು. ಆದರೆ ಆ ಉಪನಿಯಮಗಳನ್ನು ಕಾನೂನಿನಡಿಯಲ್ಲಿ ನೋಂದಾಯಿಸಿ ಒಂದು ಒಪ್ಪಂದ ಎಂದಷ್ಟೇ ತಿಳಿಯತಕ್ಕದಲ್ಲ. ಪ್ರತಿಯೊಂದು ಒಪ್ಪಂದವು ಪಕ್ಷಗಳು ಒಮ್ಮತಕ್ಕೆ ಬಂದ ಒಂದು ಉಪನಿಯಮ ಪಕ್ಷಗಳು ಆ ಒಪ್ಪಂದಕ್ಕೆ ಒಪ್ಪಿ ಬದ್ಧರಾಗಿರತಕ್ಕದ್ದು. ಅಂದರೆ ಕಾನೂನಿನ ಅಡಿಯಲ್ಲಿ ಈ ಒಪ್ಪಂದಗಳಿಗೆ ಅಧಿಕಾರ ಪ್ರಾಪ್ತವಾಗುತ್ತದೆ. ಒಂದು ಕಾನೂನಿನಲ್ಲಿ ಯಾವೊಬ್ಬ ಜಾರಿ ಮಾಡುವ ವ್ಯಕ್ತಿ ಅತಿರೇಕ ಮಾಡಿದಾಗ ರಿಟ್ ಮುಖಾಂತರ ಮಧ್ಯಪ್ರವೇಶಿಬಹುದು. ಅದೇ ರೀತಿ ಉಪನಿಯಮಗಳನ್ನು ಉಲ್ಲಂಘಿಸಿದಾಗ ಪ್ರಶ್ನಿಸಬಹುದಾಗಿದೆ. ಆದ್ದರಿಂದ ಒಂದು ಸಹಕಾರ ಸಂಘ ರಿಟ್ ಸಲ್ಲಿಸಬಹುದು. 1961 ಎಂಪಿಎಲ್‌ಜೆ 1059.

38. ಒಂದು ಸಹಕಾರ ಸಂಘ ತನ್ನ ಉಪನಿಯಮಗಳನ್ನು ಮಹಾಸಭೆಯ ಠರಾವಿನ ಮುಖಾಂತರ 2/3 ಅಂಶದ ಸದಸ್ಯರು ಒಪ್ಪಿಗೆ ಕೊಟ್ಟರೆ ಅದು ಒಪ್ಪಿಗೆಯಾದಂತೆ ಐಎಲ್‌ಆರ್ 1965 ಮೈಸೂರು 1198.

39. ಒಬ್ಬ ಅನರ್ಹ ಅಧ್ಯಕ್ಷ ರಿಟ್ ಅರ್ಜಿಯನ್ನು ದಾಖಲಿಸಲು ಅಧಿಕಾರ ಇದೆ. ಅರ್ಜಿದಾರ ಸಹಕಾರ ಸಂಘ ಈ ರಿಟ್ ಅರ್ಜಿಯನ್ನು ಅಧ್ಯಕ್ಷರ ಮುಖಾಂತರ ಪರಿಹಾರ ಕೇಳಿ ಸಲ್ಲಿಸಬಹುದಾಗಿದೆ. ಐಎಲ್‌ಆರ್ 1994 ಕರ್ನಾಟಕ 1913.

## ಉಪನಿಯಮಗಳ ತಿದ್ದುಪಡಿ :

1. ತಿದ್ದುಪಡಿ ಪ್ರಸ್ತಾವನೆಯನ್ನು ನಿಬಂಧಕರಿಗೆ ಸಲ್ಲಿಸಿದಾಗ ಆ ಪ್ರಸ್ತಾವನೆಯನ್ನು ತೀರ್ಮಾನಿಸುವುದು ನಿಬಂಧಕರ ಕಾನೂನುಬದ್ದ ಕರ್ತವ್ಯ. ನಿಬಂದಕರು ಆಲಸ್ಯತೆಯನ್ನು ಗಂಭೀರವಾಗಿ ಅವಲೋಕಿಸಬೇಕಾಗುತ್ತದೆ. ಕರ್ತವ್ಯಲೋಪ, ಕರ್ತವ್ಯದ ಉಲ್ಲಂಘನೆಯಾದಂತೆ. 1988 (3) ಕೆಎಆರ್ 2179

2. ಒಂದು ಸಹಕಾರ ಸಂಘದ ಉಪನಿಯಮಗಳ ತಿದ್ದುಪಡಿ ಮುಖಾಂತರ ಮತ್ತೊಂದು ಸಂಘದ ಕಾರ್ಯವ್ಯಾಪ್ತಿಗೆ ವಿಸ್ತರಿಸಲಾಗಿದ್ದರೆ, ಅಂತಹ ತಿದ್ದುಪಡಿಗೆ ಒಪ್ಪಿಗೆ ಕೊಡುವ ಪೂರ್ವದಲ್ಲಿ ಸಂಬಂದಪಟ್ಟ ಸಹಕಾರ ಸಂಘಕ್ಕೆ ನೋಟೀಸ್ ಜಾರಿ ಮಾಡತಕ್ಕದ್ದು. 1981(1) ಕೆಎಲ್‌ಜೆ ಎಸ್‌ಎನ್ 71 (ಡಿಬಿ)

3. ಒಂದು ಉಪನಿಯಮಗಳ ತಿದ್ದುಪಡಿ ಸರ್ವಸದಸ್ಯರ ನಿರ್ಣಯಗಳ ರೂಪದಲ್ಲಿ ತರಬೇಕು ಮತ್ತು ಈ ನಿರ್ಣಯ ಬಹುಮತದಿಂದ ಒಪ್ಪಿಗೆಯಾಗಿರಬೇಕು. ಬಹುಮತ ಎಂದರೆ ಸಭೆಯಲ್ಲಿ ಹಾಜರಿದ್ದು ಮತ ನೀಡಿದವರಲ್ಲಿ 2/3ರಷ್ಟು ಸಂಖ್ಯೆ ಮತದಾರರು ಠರಾವಿನ ಪರವಾಗಿ ಮತ ನೀಡಿರಬೇಕು. ಹಾಜರಿದ್ದು ಮತ ನೀಡಿದ ಸದಸ್ಯರು ಎಂದರೆ ಅವರು ಮತ ನೀಡಲೀ, ಬಿಡಲೀ ಸಭೆಯಲ್ಲಿ ಹಾಜರಿದ್ದ ಸದಸ್ಯರು ಎಂದರ್ಥ. ಮತ ನೀಡಿದವರು ಮಾತ್ರ ಎಂದರ್ಥವಾಗುವುದಿಲ್ಲ. 1996(1) ಎಂವೈಎಸ್ ಎಲ್‌ಜೆ 215.

4. ಉಪನಿಯಮವನ್ನು ತಿದ್ದುಪಡಿ ಮಾಡಿದಾಗ ಮತ್ತು ಅದಕ್ಕೆ ಒಪ್ಪಿಗೆ ಕೊಟ್ಟಾಗ ಅದನ್ನು ಕಾಲ್ಪನಿಕ ಎಂದು ತಿಳಿಯತಕ್ಕದ್ದಲ್ಲ. ನಿರ್ದಿಷ್ಟಪಡಿಸಿದ ದಿನದಂದು ಎಂಬ ಶಬ್ದದ ಅರ್ಥವನ್ನು ಮುಂದೆ ಬರುವ ದಿನವೆಂದು ಅರ್ಥೈಸಬೇಕೇ ವಿನಹ ನೋಂದಣಿ ಮಾಡಿದ ಮುಂಚಿನ ದಿನವೆಂದು ಅರ್ಥ ಮಾಡಲಾಗದು. 1980(1) ಕೆಎಲ್‌ಜೆ 475.

5. ಕೆಲವು ವ್ಯಕ್ತಿಗಳನ್ನು ಸದಸ್ಯತನದಿಂದ ಕಿತ್ತುಹಾಕಲು ಮತ್ತು ಅವರ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕನ್ನು ತೆಗೆದುಹಾಕಲು ಮಾಡಿದ ತಿದ್ದುಪಡಿ ಉಪನಿಯಮಗಳು ಅಸಿಂಧುವಾಗತಕ್ಕದ್ದು. 1985(1) ಕೆಎಲ್‌ಜೆ ಎಸ್‌ಎನ್ 211.

6. ಒಂದು ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿ ಮಾಡಲು ನಿಬಂಧಕರು ಸೂಚಿಸಿದರೂ ಆ ಸಂಘದ ಮಹಾಸಭೆ ನಿಬಂಧಕರು ಪ್ರಸ್ತಾಪಿಸಿದ ಉಪನಿಯಮದ ತಿದ್ದುಪಡಿ ತಿರಸ್ಕರಿಸಿತು. ನಿಬಂಧಕರು ಆ ತಿರಸ್ಕರಿಸಿದ ಉಪನಿಯಮಗಳನ್ನು ಸಂಘಕ್ಕೆ ನೋಟೀಸ್ ಕೊಡಲಾರದೆ ನೋಂದಾಯಿಸಿದರು. ನಿಬಂಧಕರು ಸಂಘಕ್ಕೆ ಅವಕಾಶ ಕಲ್ಪಿಸದೆ ಮತ್ತು ಮಹಾಸಭೆಯಲ್ಲಿ ಸೂಚಿತ ತಿದ್ದುಪಡಿಯನ್ನು ತಿರಸ್ಕರಿಸಲು ಕಾರಣ ಕೇಳದೆ ನೋಂದಾಯಿಸಿರುವುದು ತಪ್ಪು. ಎಐಆರ್ 1958 ಬಾಂಬೆ 330.

7. ಒಂದು ಸಹಕಾರ ಸಂಘ ಸ್ವಯಂಸ್ಫೂರ್ತಿಯಿಂದ ತನ್ನ ಉಪನಿಯಮಗಳನ್ನು ತಿದ್ದುಪಡಿ ಮಾಡಬಹುದು. ಅಥವಾ ನಿಬಂಧಕರ ಸೂಚನೆ ಅಥವಾ ನಿರ್ದೇಶನದಂತೆ ತಿದ್ದುಇಪಡಿ

ಮಾಡಬಹುದು. ಆ ವಿಷಯವನ್ನು ಮಹಾಸಭೆ ಒಪ್ಪದೆ ಇದ್ದಾಗ ಅದಕ್ಕೆ ಕಾರಣಗಳನ್ನು ತಿಳಿಯತಕ್ಕದ್ದು. ಈ ತಿದ್ದುಪಡಿಯ ಅವಶ್ಯಕತೆಯನ್ನು ಸಾಮಾನ್ಯ ಸದಸ್ಯರಿಗೆ ತಿದ್ದುಪಡಿ ಮಾಡಲು ಕಾರಣಗಳನ್ನು ತಿಳಿಸಬೇಕು.

8. ತಿದ್ದುಪಡಿಯಾದ ಉಪನಿಯಮಗಳನ್ನು ನೋಂದಾಯಿಸಬೇಕು. ಒಂದು ತಿದ್ದುಪಡಿ ಉಪನಿಯಮವನ್ನು ನೋಂದಾವಣೆಗೆ ಸಲ್ಲಿಸಿದಾಗ ನಿಬಂಧಕರು ಆ ತಿದ್ದುಪಡಿಯನ್ನು ನೋಂದಾವಣೆ ಮಾಡಲಿಕ್ಕೆ ಸಾಮಾನ್ಯ ಅವಧಿಯನ್ನು ತೆಗೆದುಕೊಳ್ಳಬಹುದು. ಆದರೆ ನಿಧಾನಗತಿಯನ್ನು ಅನುಸರಿಸತಕ್ಕದಲ್ಲ. ಐಎಲ್ಆರ್ 1988(3) ಕರ್ನಾಟಕ 213.

9. ಒಂದು ಸಹಕಾರ ಸಂಘದ ವ್ಯಾಪ್ತಿಯನ್ನು ವಿಸ್ತರಿಸುವಾಗ ಮತ್ತೊಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಯೊಳಗೆ ವಿಸ್ತರಿಸಿದರೆ ಅಂತಹ ಮತ್ತೊಂದು ಸಹಕಾರ ಸಂಘಕ್ಕೆ ಅವರ ಹೇಳಿಕೆಯನ್ನು ಕೇಳಲಾಗದೆ ವಿಸ್ತರಿಸತಕ್ಕದಲ್ಲ. ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗುತ್ತದೆ. 1981(1) ಕೆಎಲ್ಜೆ ಎಸ್ಎನ್ 71(ಡಿಬಿ)

10. ಒಂದು ಸಹಕಾರ ಸಂಘದ ಉಪನಿಯಮಗಳನ್ನು ತಿದ್ದುಪಡಿ ಮಾಡಿ ಆ ತಿದ್ದುಪಡಿಯಲ್ಲಿ ಸದಸ್ಯರನ್ನು ತೆಗೆದುಹಾಕುವ ಮತ್ತು ಅವರು ಮತ ಚಲಾಯಿಸಿ ಪ್ರತಿನಿಧಿಗಳನ್ನು ಕಳುಹಿಸುವ ಅವಕಾಶ ತಪ್ಪಿಸಿದರೆ ಅದು ಕಾನೂನುಬದ್ಧವಾಗಿರತಕ್ಕದಲ್ಲ. 1975(1) ಕೆಎಲ್ಜೆ ಎಸ್ಎನ್ 211.

11. ಒಂದು ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿಗೆ ನೋಂದಾಯಿಸುವುದು ಒಂದು ಕಾನೂನುಬದ್ಧ ಅಧಿಕಾರ. ಆ ಅಧಿಕಾರವನ್ನು ಚಲಾಯಿಸುವಾಗ ನಿಬಂಧಕರು ಹೊಣೆಗಾರಿಕೆಯಿಂದ ಆ ಅಧಿಕಾರವನ್ನು ಚಲಾಯಿಸತಕ್ಕದ್ದು. ಮನಸೋ ಇಚ್ಛೆ ನಿರ್ಧರಿಸತಕ್ಕದಲ್ಲ. 1969 ಅಲಹಾಬಾದ್ ಎಲ್ಜೆ 304.

12. ನಿಬಂಧಕರು ಒಂದು ಸಹಕಾರ ಸಂಘದ ಉಪನಿಯಮಗಳನ್ನು ತಿದ್ದುಪಡಿ ನೋಂದಾಯಿಸುವಾಗ ಸದಸ್ಯತೆಯ ಅರ್ಹತೆಯ ಬಗ್ಗೆಯೂ ನೋಂದಾಯಿಸಲು ಅರ್ಹತೆ ಇದೆ. 1982 ಪಿಎಲ್ಜೆ 221.

13. ನಿಬಂಧಕರು ಬೈಲಾ ತಿದ್ದುಪಡಿಯನ್ನು ನೋಂದಾಯಿಸುವಾಗ ವೈಯಕ್ತಿಕ ಹೇಳಿಕೆ ಪಡೆಯಲು ಅವಶ್ಯಕತೆ ಇಲ್ಲ. ಇದು ಸ್ವಾಭಾವಿಕ ನ್ಯಾಯದ ತತ್ವಕ್ಕೆ ವಿರುದ್ಧವಲ್ಲ. 1969 ಅಲಹಾಬಾದ್ ಎಲ್ಜೆ 304.

14. ಒಂದು ಸಹಕಾರ ಸಂಘದ ಉಪನಿಯಮಗಳ ತಿದ್ದುಪಡಿ ಆ ತಿದ್ದುಪಡಿ ನೋಂದಾವಣೆಯಾದ ದಿನಾಂಕಕ್ಕೆ ಅಥವಾ ಮುಂದೆ ಸೂಚಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು. 1969(2) ಮೈಸೂರು ಎಲ್ಜೆ 320.

15. ಒಂದು ಸಹಕಾರ ಸಂಘ ತನ್ನ ಬೈಲಾವನ್ನು ನಿಬಂಧಕರಿಗೆ ರವಾನಿಸಿದರೆ ಅದು ತಿದ್ದುಪಡಿಯಾದಂತೆ ಆಗುವುದಿಲ್ಲ. ನಿಬಂಧಕರು ಆ ತಿದ್ದುಪಡಿಯನ್ನು ಸ್ವೀಕರಿಸಿ ನೋಂದಾಯಿಸುವ ತನಕ ತಿದ್ದುಪಡಿಯಾದ ಬೈಲಾ ಜಾರಿಗೆ ಬರತಕ್ಕದಲ್ಲ. ಒಂದು ತಿದ್ದುಪಡಿಯನ್ನು ನೋಂದಾಯಿಸಬೇಕೇ, ಬೇಡವೇ ಎಂಬುದು ನಿಬಂಧಕರ ಅಧಿಕಾರ ವ್ಯಾಪ್ತಿ. ತಿದ್ದುಇಪಡಿ ನೋಂದಾವಣೆಯಾದ ನಂತರ ನಿಬಂಧಕರ ಆ ತಿದ್ದುಪಡಿಯನ್ನು ಸಹಕಾರ ಸಂಘಕ್ಕೆ ರವಾನಿಸಬೇಕು. 1971 ಪಿಎಲ್ಜೆ 666.

16. ಒಂದು ಸಹಕಾರ ಸಂಘದ ತಿದ್ದುಪಡಿ ಉಪನಿಯಮಗಳು ನೋಂದಾವಣೆಯಾಗಿದೆ. ಆ ನೋಂದಾವಣೆಯಾಗಿದ್ದರೆ ಆ ತಿದ್ದುಪಡಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದಲ್ಲ. 1973. 1973 ಪಿಎಲ್‌ಆರ್ 915/1971 ಸಿಎಲ್‌ಜೆ 1005.

17. ಯಾವುದೇ ಒಂದು ಸಹಕಾರ ಸಂಘದ ಉಪನಿಯಮಗಳು ಕಾನೂನಿನಲ್ಲಿ ಕಲ್ಪಿಸಿರುವ ಮಿತಿಗೆ ವಿರುದ್ಧವಾದರೆ ಅಂತಹ ಉಪನಿಯಮ ನೋಂದಾವಣೆಯಾಗಿದ್ದರೂ ಕಾನೂನುಬದ್ಧವಲ್ಲ. 1975(1) ಗುಜರಾತ್ ಎಲ್‌ಆರ್ 382.

18. ನಿಬಂಧಕರು ಒಂದು ಉಪನಿಯಮವನ್ನು ತಿದ್ದುಪಡಿಯಾದ ದಿನಾಂಕದಂದು ಅದು ಅಂತಿಮವಾಗಿ ಸೇರ್ಪಡೆಯಾಗಿದೆ ಎಂದು ಅರ್ಥ. ಆದರೆ ಇದು ಉಚ್ಚ ನ್ಯಾಯಾಲಯದ ಪರಿಶೀಲನೆಗೆ ಒಳಪಟ್ಟು ಎಂದು ತಿಳಿಯತಕ್ಕದ್ದು. ಐಎಲ್‌ಆರ್ 1970 ಗುಜರಾತ್ 1105.

19. ನಿಬಂಧಕರು ಒಂದು ಸಹಕಾರ ಸಂಘಕ್ಕೆ ಅದರ ಉಪನಿಯಮಗಳ ತಿದ್ದುಪಡಿ ಮಾಡಲು ಸೂಚಿಸಿದಾಗ ಆ ಸಂಘದ ಆಕಿಳಿಗಾದ್ಧಿಕಾಏ ಒಪ್ಪಿಗೆ ಸೂಚಿಸಿ ಪತ್ರ ಬರೆದರೆ ಅಂದರೆ ಮಹಾಸಭೆಯ ಒಪ್ಪಿಗೆ ಪಡೆದು ಠರಾವಿನ ಮುಖಾಂತರ ನಿಬಂಧಕರಿಗೆ ರವಾನಿಸಿದರೆ ಅಂತಹ ತಿದ್ದುಪಡಿ ಕಾನೂನಿಗೆ ವಿರುದ್ಧ. 1974 ಪಿಎಲ್‌ಜೆ 13.

20. ಮೀನುಗಾರಿಕೆ ನಿರ್ದೇಶಕರು ಸಹಾಯಕ ನಿಬಂಧಕರ ಅಧಿಕಾರವನ್ನು ಚಲಾಯಿಸುವಾಗ ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿ ಮಾಡಿ ನೋಂದಾಯಿಸುತ್ತಾನೆ. ಮೇಲ್ಮನವಿ ನಿಬಂಧಕರಿಗೆ ಇರತಕ್ಕದ್ದು ಎಂದಿದ್ದರೂ ಆ ಅಧಿಕಾರವನ್ನು ಮೀನುಗಾರಿಕೆ ಇಲಾಖೆಯ ನಿರ್ದೇಶಕರಿಗೆ ಸರ್ಕಾರದ ಆದೇಶದಿಂದ ವರ್ಗಾಯಿಸಿದಾಗ ಪುನರ್ ವಿಮರ್ಶಾ ಅರ್ಜಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಎಐಆರ್ 1982 ಎಪಿ 53.

21. ಒಂದು ಸಹಕಾರ ಸಂಘದ ಉಪನಿಯಮಗಳನ್ನು ತಿದ್ದುಪಡಿಯಲ್ಲಿ ನೋಂದಾಯಿಸಿದಾಗ ಆ ಬಗ್ಗೆ ತಕರಾರು ಬಂದಾಗ ಅದು ದಾವಾ ಪ್ರಕರಣ ಆಗತಕ್ಕದಲ್ಲ. ಅಂದರೆ ಸದಸ್ಯ ಮತ್ತು ಸಂಘಗಳ ಬಗ್ಗೆ ಮತ್ತು ನಿಬಂಧಕರ ಮಧ್ಯೆ ಇದು ದಾವಾ ಆಗುವುದಿಲ್ಲ. ಎಎಲ್‌ಆರ್ 1965 ಮೈಸೂರು 1198/1960 66(1) ಮೈಸೂರು ಎಲ್‌ಜೆ 215.

22. ಒಂದು ಸಹಕಾರ ಸಂಘದ ಉಪನಿಯಮಗಳನ್ನು ತಿದ್ದುಪಡಿ ಮಾಡುವ ಪ್ರಸ್ತಾವನೆ ಯಾವ ಉಪನಿಯಮವನ್ನು ತಿದ್ದುಪಡಿ ಮಾಡಲಾಗುತ್ತದೆಯೋ ಅದರ ಸ್ಪಷ್ಟ ವಿವರಣೆಯನ್ನು ಮಹಾಸಭೆಯ 15 ದಿವಸ ಮುಂಚಿತವಾಗಿ ಪ್ರತಿಯೊಬ್ಬ ಸದಸ್ಯನಿಗೂ ರವಾನಿಸತಕ್ಕದ್ದು. ಈ ತಿದ್ದುಪಡಿಯಲ್ಲಿ ಒಂದು ಗುಂಪಿನ ಸದಸ್ಯರ ಮತ ಚಲಾಯಿಸುವ ಹಕ್ಕನ್ನು ಕಿತ್ತುಕೊಳ್ಳುವುದಾಗಿದ್ದು, ಅಂತಹ ತಿದ್ದುಪಡಿಯನ್ನು ಕಾನೂನಿನ ಒಂದು ತಪ್ಪು ಎಂದು ಪರಿಗಣಿಸಿ ಅಂತಹ ತಿದ್ದುಪಡಿ ನೋಂದಾಯಿಸಿರುವುದನ್ನು ವಜಾ ಮಾಡಲಾಗಿದೆ. ರಿಟ್ ಅರ್ಜಿ ಸಂಖ್ಯೆ 10149 ಮತ್ತು 10150/1985 ದಿನಾಂಕ : 7–8–1987 (ಕ್ಯಾಂಪ್ಕೊ)

23. ಒಂದು ಸಹಕಾರ ಸಂಘ ತನ್ನ ಸಂಘದ ಸದಸ್ಯರಲ್ಲಿ ಒಂದು ಗುಂಪಿನ ಅಂದರೆ ವೃತ್ತಿಗೆ ಸಮಾನವಾದ ಗುಂಪಿಗೆ ಸೀಮಿತಗೊಳಿಸಿ ತಿದ್ದುಪಡಿ ಮಾಡಿದಾಗ ಅದು ಕಾನೂನಿಗೆ ವಿರುದ್ಧ

ಅಥವಾ ರಿಜಿಸ್ಟ್ರಾರ್‌ರವರು ಈ ತಿದ್ದುಪಡಿಯನ್ನು ನೋಂದಾಯಿಸಲು ಬರುವುದಿಲ್ಲ ಎಂದು ಅರ್ಥೈಸತಕ್ಕದಲ್ಲ. ಎಐಆರ್ 1955 ಎನ್‌ಯೂಸಿ (ಬಾಂಬೆ 4495)

24. ಸಹಕಾರ ಸಂಘಗಳ ನಿಬಂಧಕರು ಉಪನಿಯಮವನ್ನು ಕಡ್ಡಾಯವಾಗಿ ತಿದ್ದುಪಡಿ ಮಾಡಲು ಸೂಚಿಸುವ ಪೂರ್ವದಲ್ಲಿ ಅಂತಹ ತಿದ್ದುಪಡಿ ಆ ಸಹಕಾರ ಸಂಘದ ಹಿತಕ್ಕೆ ಅವಶ್ಯಕ ಎಂಬ ತೀರ್ಮಾನಕ್ಕೆ ಬರುವುದು ಅತ್ಯವಶ್ಯಕ. 1983 ಎಂಪಿಡಬ್ಲ್ಯೆಂ 83.

25. ಒಂದು ಸಹಕಾರ ಸಂಘದ ಬೈಲಾ ತಿದ್ದುಪಡಿಯಾದಾಗ ಅದು ಒಂದು ನಾಮ ಮಾತ್ರ ನೋಂದಾವಣೆಯಲ್ಲ. ಅದು ಒಂದು ಕಾನೂನುಬದ್ಧ ಕ್ರಮ. ಆ ತಿದ್ದುಪಡಿ ಇಂತಹ ಜಾರಿಗೆ ಬರತಕ್ಕದ್ದು ಎಂದು ಕಲಂ 13ರಲ್ಲಿ ತಿಳಿಸಿರುವುದರ ಅರ್ಥ ನೋಂದಾವಣೆಯಾದ ದಿನಾಂಕವನ್ನು ಅಥವಾ ನೋಂದಾವಣೆಯಾದ ನಂತರದ ಮತ್ಯಾವುದೇ ದಿನಾಂಕದಿಂದ ಜಾರಿಗೆ ಬರಬಹುದು. ಆದರೆ ಆ ದಿನಾಂಕ ಯಾವುದೇ ಕಾರಣಕ್ಕೂ ನೋಂದಣಿ ಪೂರ್ವ ದಿನಾಂಕ ಆಗತಕ್ಕದಲ್ಲ. 1975(1) ಕೆಎಲ್‌ಜೆ ಎಸ್‌ಎನ್ 211.

26. ಒಂದು ಸಹಕಾರ ಸಂಘದ ಉಪನಿಯಮವನ್ನು ನಿಬಂಧಕರು ತಿದ್ದುಪಡಿ ಮಾಡಿ ನೋಂದಾಯಿಸಿದಾಗ ಆ ಆದೇಶದಲ್ಲಿ ದಿನಾಂಕವನ್ನು ನಮೂದಿಸದಿದ್ದರೆ ಆ ತಿದ್ದುಪಡಿಯಾದ ಬೈಲಾ ನೋಂದಾವಣೆಯಿಂದ ದಿನಾಂಕದಿಂದ ಜಾರಿಗೆ ಬರತಕ್ಕದ್ದು. ಹಾಗೂ ಅದು ನೋಂದಾವಣೆಯಾದ ದಿನಾಂಕಕ್ಕಿಂತ ಹಿಂದಿನ ದಿನ ನಿಂದಾವಣೆಯಾಗಿದೆ ಎಂದು ತಿಳಿಯತಕ್ಕದಲ್ಲ. ಐಎಲ್‌ಆರ್ 1980(2) ಕರ್ನಾಟಕ 1234/1980(1) ಕೆಎಲ್‌ಜೆ 475.

27. ಒಂದು ಸಹಕಾರ ಸಂಘದ ಬೈಲಾ ತಿದ್ದುಪಡಿ ಮಾಡುವಾಗ ಆ ತಿದ್ದುಪಡಿ ಮಾಡಬೇಕಾದ ವಿಷಯಗಳು ಸ್ಪಷ್ಟವಾಗಿ ಪ್ರತಿಯೊಬ್ಬ ಸದಸ್ಯನಿಗೂ ಮುಂಚೆಯೇ ರವಾನಿಸತಕ್ಕದ್ದು. 1988(1) ಕೆಎಲ್‌ಜೆ 152/ಎಐಆರ್ 1988 ಕರ್ನಾಟಕ 243.

28. ಒಂದು ಸಹಕಾರ ಸಂಘದ ಬೈಲಾ ತಿದ್ದುಪಡಿ ದಾವಾ ಪ್ರಕರಣ ಆಗುವುದಿಲ್ಲ. ನಿಬಂಧಕರು ಇಂತಹ ಅರ್ಜಿಯನ್ನು ದಾವಾ ಎಂದು ಪರಿಗಣಿಸಿ ತೀರ್ಮಾನ ಮಾಡತಕ್ಕದಲ್ಲ. ಮಹಾಸಭೆಯಲ್ಲಿ 2/3 ಅಂಶದ ಸದಸ್ಯರು ಒಪ್ಪಿಗೆ ಕೊಟ್ಟಿದ್ದರೆ ಅದನ್ನು ನಿಯಮಬದ್ಧ ತಿದ್ದುಪಡಿ ಎಂದು ಪರಿಗಣಿಸತಕ್ಕದ್ದು. ಐಎಲ್‌ಆರ್ 1965 ಮೈಸೂರು 1198/ಎಐಆರ್ 1966 ಮೈಸೂರು 274/1966(1) ಮೈಸೂರು ಎಲ್‌ಜೆ 215.

29. ಒಂದು ಸಹಕಾರಿ ಕೇಂದ್ರ ಬ್ಯಾಂಕಿನ ಶಾಖೆಯನ್ನು ಮತ್ತೊಂದು ಕೇಂದ್ರ ಬ್ಯಾಂಕಿನ ವ್ಯಾಪ್ತಿಯಲ್ಲಿ ಸ್ಥಾಪಿಸಲು ತಿದ್ದುಪಡಿಯನ್ನು ನೋಂದಾಯಿಸಲಾಯಿತು. ಈ ಆದೇಶದ ಮೇಲೆ ಪುನರ್ ವಿಮರ್ಶ ಅರ್ಜಿಯನ್ನು ಸಲ್ಲಿಸಿದಾಗ ಆ ಅರ್ಜಿಯನ್ನು ವಿಚಾರಣೆ ಮಾಡುವ ಅವಶ್ಯಕತೆಗೆ ಅನುಗುಣವಾಗಿ ಪುನರ್ ವಿಮರ್ಶೆ ಮಾಡಿದ ಪ್ರಾಧಿಕಾರ ಆ ಅರ್ಜಿಯನ್ನು ಸಲ್ಲಿಸಿದವರಿಗೆ ಅವಕಾಶ ಕಲ್ಪಿಸಬೇಕೆಂದು ಆದೇಶಿಸಿದ್ದು, ಈ ಆದೇಶ ಸರಿಯಾದ ಕ್ರಮ. 1994(4) ಕೆಎಲ್‌ಜೆ 203 (ಡಿಬಿ)/ಐಎಲ್‌ಆರ್ 1994 ಕರ್ನಾಟಕ 2525.

30. ಉಪನಿಯಮದಡಿ ತಿದ್ದುಪಡಿ ನೋಂದಾವಣೆಯಾದ ದಿನಾಂಕದಿಂದ ಅನ್ವಯವಾಗುತ್ತದೆ. ಉಪನಿಯಮದ ಅಂತರ್ಗತ ಈ ಬಗ್ಗೆ ಪರ್ಯಾಯ ದಿನಾಂಕ ಸೂಚಿಸಿದಾಗ ಅದು ನೋಂದಾವಣೆಯಾದ ದಿನಾಂಕದಿಂದ ಮುಂದೆ ಯಾವುದಾದರೂ ದಿನಾಂಕದಿಂದ ಅನ್ವಯವಾಗುತ್ತದೆ. ಪಾಲು ಬಂಡವಾಳದ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯ ನೋಂದಾವಣೆ ಆದ ದಿನಾಂಕದಿಂದ ನಂತರ ಸೇರಿಸಲ್ಪಟ್ಟ ಸದಸ್ಯರಿಗೆ ಮಾತ್ರ ಈ ಬದಲಾವಣೆ ಅನ್ವಯ ಎಂದು ತೀರ್ಪು ಕೊಟ್ಟಿದೆ. ಆಯಾ ಸಮಯದಲ್ಲಿ ನಿಗಧಿಪಡಿಸಿದ ಷರತ್ತುಗಳನ್ವಯ ವಿಧಿಬದ್ಧವಾಗಿ ಸೇರಿಸಲ್ಪಟ್ಟ ಸದಸ್ಯತ್ವದ ಹಕ್ಕನ್ನು ಪೂರ್ವಾನ್ವಯವಾಗಿ ಬದಲಾಯಿಸಲು ಬರುವುದಿಲ್ಲ. ರಿಟ್ ಅರ್ಜಿ ಸಂಖ್ಯೆ 47673 ಮತ್ತು 47574 ರಿಂದ 78ರವರೆಗೆ ದಿನಾಂಕ:25–7–2004

## ಸಹಕಾರ ಸಂಘಗಳನ್ನು ಒಟ್ಟುಗೂಡಿಸುವುದು ಮತ್ತು ವಿಭಜಿಸುವುದು :

1. ಒಂದು ಸಹಕಾರ ಸಂಘವನ್ನು ಮತ್ತೊಂದು ಸಹಕಾರ ಸಂಘದಲ್ಲಿ ಕೂಡಿಸುವುದಾಗಲಿ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸುವುದಾಗಲಿ ನಿಬಂಧಕರು ಪರಿಗಣಿಸುವಾಗ ಆ ಸಂಘಗಳ ಆರ್ಥಿಕ ಸಬಲತೆ ಹಾಗೂ ಹೊಸ ಸಂಘದ ಸೃಷ್ಟಿ ಅಥವಾ ಹಾಲಿ ಇರುವ ಸಂಘದ ಪುನರ್ ಘಟನೆ ಮಾಡುವಾಗ ಅದನ್ನು ಸೂಕ್ಷ್ಮವಾಗಿ ಸರಿಯಾಗಿ ಯಾವ ಪ್ರಭಾವಕ್ಕೂ ಒಳಗಾಗದೆ ಅಂಕಿ ಸಂಖ್ಯೆಗಳನ್ನು ಪರಿಶೀಲಿಸಿ ಮಾಡತಕ್ಕದ್ದು. ಯಾವುದೇ ಸಹಕಾರ ಸಂಘ ಹಿಂದೆ ಅಸ್ತಿತ್ವದಲ್ಲಿ ಇತ್ತೋ ಅಂತಹ ಸಂಘದ ಹೇಳಿಕೆಯನ್ನು ಪಡೆದಿದ್ದರೆ ಆ ಸಂಘದ ಅಸ್ತಿತ್ವಕ್ಕೆ ನಷ್ಟ ಮತ್ತು ತೊಡಕು ಉಂಟಾಗಬಹುದು. ಆದ್ದರಿಂದ ಬೈಲಾ ನೋಂದಾವಣೆ ಮಾಡುವಾಗ ತೊಂದರೆಗೆ ಒಳಗಾಗುವ ಸಂಘಗಳನ್ನು ಕೇಳಿ ಆದೇಶಿಸಬೇಕು. 1994(4) ಕೆಎಲ್‌ಜೆ 303/ಐಎಲ್‌ಆರ್ 1995 ಕರ್ನಾಟಕ 2525(ಡಿಬಿ)

2. ಒಂದು ಸಂಘವನ್ನು ಒಗ್ಗೂಡಿಸುವಾಗ ಅಥವಾ ವಿಭಜಿಸುವಾಗ ಆ ಸಹಕಾರ ಸಂಘದ ಮಹಾಸಭೆಯಲ್ಲಿ 2/3 ಅಂಶದ ಸದಸ್ಯರ ಬಹುಮತದೊಂದಿಗೆ ಠರಾಯಿಸಬೇಕು. ಆ ಸಂಘದ ಆಡಳಿತಾಧಿಕಾರಿ ಇಂತಹ ಠರಾವನ್ನು ಮಾಡಲು ಶಕ್ತನಲ್ಲ. 1974(2) ಕೆಎಲ್‌ಜೆ ಎಸ್‌ಎನ್ 12.

3. ಸಂಘಗಳನ್ನು ಒಗ್ಗೂಡಿಸುವುದು ನಿಯಮದ ಅತಿರಿಕ್ತ ಅಧಿಕಾರ ಚಲಾವಣೆಯಾಗುವುದಿಲ್ಲ. ನಿಬಂಧಕರ ಉದ್ದೇಶ ಸದಸ್ಯರಲ್ಲಿ ಉಳಿತಾಯ ಸಹೋದ್ಯೋಗಿಗಳ ಸಹಕಾರ ಮತ್ತು ಸಹಬಾಳ್ವೆ ಉದ್ದೇಶವಾಗಿರತಕ್ಕದ್ದು. ನಿಬಂಧಕರು ಒಂದು ಸಹಕಾರ ಸಂಘದ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರವೇ ಒಗ್ಗೂಡಿವಿಕೆಗೆ ಕ್ರಮ ಜರುಗಿಸಬೇಕು. ಒಗ್ಗೂಡಿಸುವುದು ಸಂವಿಧಾನದ ಕಲಂ 14ರ ವಿರೋಧ ಎಂದು ತಿಳಿಯಲಾಗದು. ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಈ ಒಗ್ಗೂಡುವಿಕೆ ಸಂವಿಧಾನಬದ್ಧವಾಗಿದೆ. ಎಐಆರ್ 1968 ಪಾಟ್ನಾ 211.

4. ನಿಬಂಧಕರು ಒಂದು ಸಹಕಾರ ಸಂಘವನ್ನು ಮತ್ತೊಂದು ಸಂಘದ ಜೊತೆ ಒಗ್ಗುಡಿಸುವಾಗ ಯಾವ ಪ್ರಭಾವಕ್ಕೂ ಒಳಗಾಗದೆ ಸಂಬಂಧಪಟ್ಟ ಸಹಕಾರ ಸಂಘಗಳನ್ನು ಕೇಳಿ ಅವುಗಳ ಆರ್ಥಿಕ

ಪರಿಸ್ಥಿತಿ ಪರಿಶೀಲಿಸಿ ನಿಷ್ಪಕ್ಷಪಾತ ಅರ್ಧನ್ಯಾಯಿಕ ಪ್ರಾಧಿಕಾರದಂತೆ ಕರ್ತವ್ಯ ನಿರ್ವಹಿಸಬೇಕು. 1972(2) ಸಿಡಬ್ಲ್ಯೂಆರ್ 1931(ಡಿಬಿ)

5. ನಿಬಂಧಕರು ಒಂದು ಸಹಕಾರ ಸಂಘವನ್ನು ಮತ್ತೊಂದು ಸಹಕಾರ ಸಂಘದ ಜೊತೆ ಒಗ್ಗೂಡಿಸುವಾಗ ಸಂಬಂಧಪಟ್ಟ ಎಲ್ಲಾ ಸಹಕಾರ ಸಂಘಗಳನ್ನು ಕೇಳಿ ನಂತರ ಒಗ್ಗೂಡಿಸುವಿಕೆ ಆದೇಶ ಮಾಡತಕ್ಕದ್ದು. ಇದು ಸಾಮಾಜಿಕ ನ್ಯಾಯದ ರೀತಿ ಹಾಗೂ ನಿಬಂಧಕರು ಇದನ್ನು ಅರ್ಧನ್ಯಾಯಿಕ ಪ್ರಾಧಿಕಾರವೆಂದು ತಿಳಿದು ಆದೇಶಿಸಬೇಕು. ಎಐಆರ್ 1973 ಒರಿಸ್ಸಾ 148(ಡಿಬಿ)

6. ಒಂದು ಸಹಕಾರ ಸಂಘದ ಹೇಳಿಕೆ ಪಡೆದು ಎಂದರೆ ಸಹಕಾರ ಸಂಘಕ್ಕೆ ನೋಟೀಸ್ ಕೊಟ್ಟರೆ ಸಾಕು. ಆದರೆ ವ್ಯಕ್ತಿಗತ ಆ ಸಂಘದ ಸದಸ್ಯರೆಲ್ಲರಿಗೂ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ. 1979 ಪಿಎಲ್‌ಜೆ 129.

7. ಒಂದು ಸಹಕಾರ ಸಂಘ ಒಗ್ಗೂಡಿಸುವಿಕೆಗೆ ತೀರ್ಮಾನಿಸುವಾಗ ಪ್ರತಿಯೊಬ್ಬ ಸದಸ್ಯನಿಗೂ ಹಾಗೂ ಸಾಲ ಪಡೆದ ಸಂಸ್ಥೆಗೂ ನೋಟೀಶ್ ಜಾರಿ ಮಾಡಿ ಒಪ್ಪಿಗೆ ಪಡೆಯುವುದು ಕಾನೂನಿನ ಅವಶ್ಯಕತೆ. 1976 ಪಿಎಲ್‌ಜೆ 445.

8. ಒಂದು ಸಹಕಾರ ಸಂಘವನ್ನು ಮತ್ತೊಂದು ಸಹಕಾರ ಸಂಘದ ಜೊತೆ ಒಗ್ಗೂಡಿಸಿ ಆದೇಶಿಸುವಾಗ ಆ ಸಂಘದ ಸದಸ್ಯರ ಏಳಿಗೆಗೆ ಗಮನಹರಿಸಬೇಕು. 1979 ಪಿಎಲ್‌ಜೆ 129.

9. ಸಹಕಾರ ಸಂಘಗಳನ್ನು ಒಗ್ಗೂಡಿಸುವಾಗ ಸದಸ್ಯರಿಗೆ ಸಾಲಗಾರರಿಗೆ ನೋಟೀಸ್ ಕೊಡುವುದು ಅವಶ್ಯಕ 1979 ಪಿಎಲ್‌ಜೆ 129(ಎಫ್‌ಬಿ)

10. ಒಂದು ಸಹಕಾರ ಸಂಘವನ್ನು ಮತ್ತೊಂದು ಸಂಘದ ಜೊತೆ ಒಗ್ಗೂಡಿಸುವಾಗ ಪ್ರತಿಯೊಂದ ಸಂಘದ ಸದಸ್ಯರಿಗೆ ಮತ್ತು ಸಾಲಗಾರರಿಗೆ ಕೊಟ್ಟಿರುವ ಅಧಿಕಾರವನ್ನುಕಿತ್ತುಕೊಂಡಂತೆ. ಹಾಗೂ ಹಣಕಾಸು ಪೂರೈಸುವ ಸಂಸ್ಥೆ ಜೊತೆ ಸಮಾಲೋಚಿಸಿ ಒಟ್ಟುಗೂಡಿಸುವ ತೀರ್ಮಾನ ಕೈಗೊಳ್ಳಬೇಕು. 1976 ಪಿಎಲ್‌ಜೆ 302.

11. ನಿಬಂಧಕರು ಒಗ್ಗೂಡಿಸುವಿಕೆ ತೀರ್ಮಾನ ತೆಗೆದುಕೊಳ್ಳುವಾಗ ಸಂಘದ ಸದಸ್ಯರ ಹಿತವನ್ನೇ ಪರಿಗಣಿಸಬೇಕೆಂಬುದನ್ನು ಪ್ರಾರಂಭದಲ್ಲಿಯೇ ತೀರ್ಮಾನಿಸಬೇಕು. ಆದರೆ ಆ ಅಧಿಕಾರವನ್ನು ಪರಮಾಧಿ ಅಧಿಕಾರವೆಂದು ತಿಳಿದು ಒಂದು ಅಥವಾ ಅದಕ್ಕಿಂತ ಹೆಚ್ಚು ಸಹಕಾರ ಸಂಘಗಳನ್ನು ಒಗ್ಗೂಡಿಸಲಾಗದು. ಈ ಆದೇಶವನ್ನು ಪರಿಗಣಿಸುವಾಗ ಪ್ರತಿಯೊಂದು ಸಹಕಾರ ಸಂಘದ ಸದಸ್ಯತ್ವ, ಆಸ್ತಿ–ಜವಾಬ್ದಾರಿ ಕರ್ತವ್ಯಗಳು ಮತ್ತು ಜವಾಬ್ದಾರಿಗಳೂ ಪರಿಗಣಿಸಿ ಆ ನಂತರವೇ ಆದೇಶಿಸಬೇಕು. 1979 ಪಿಎಲ್‌ಜೆ 129.

12. ಮೇಲ್ಮನವಿ ವಿಚಾರಣೆಗೆ ಬಾಕಿ ಇದ್ದಾಗ ಸಹಾಯಕ ನಿಬಂಧಕರು 3 ಸಹಕಾರ ಸಂಘಗಳನ್ನು ಒಗ್ಗೂಡಿಸಿ ಆದೇಶಿಸಿರುವುದು ಅಸಿಂಧು. ಎಐಆರ್ 1972 ಪಾಟ್ನಾ 276.

13. ಸಹಕಾರ ಸಂಘಗಳನ್ನು ಒಗ್ಗೂಡಿಸುವಿಕೆ ಎಂದರೆ ಒಂದು ಸಹಕಾರ ಸಂಘಕ್ಕಿಂತ ಹೆಚ್ಚಿರಲೇಬೇಕು. ಒಗ್ಗೂಡಿಸುವಿಕೆ ಎಂದರೆ ಕನಿಷ್ಠ ಎರಡು ಸಹಕಾರ ಸಂಘಗಳಾದರೂ ಒಗ್ಗೂಡಬೇಕು. ಹೆಸರು ಬದಲಾವಣೆಯಿಂದ ಒಗ್ಗೂಡಿಸುವಿಕೆ ಆಗಿದೆ ಎಂದು ತಿಳಿಯತಕ್ಕದಲ್ಲ. 1979 ಎಐಎಲ್ಎಲ್ಆರ್ 13 (ಆಲ್ ಇಂಡಿಯಾ ಲ್ಯಾಂಡ್ ಲಾಸ್ ರಿಪೋರ್ಟ್)

14. ಸಹಕಾರ ಸಂಘಗಳನ್ನು ಒಗ್ಗೂಡಿಸುವಿಕೆಗೆ ಸರ್ಕಾರವೇ ತನ್ನ ಅಧಿಕಾರವನ್ನು ಚಲಾಯಿಸಿ ಸಹಾಯಕ ನಿಬಂಧಕರಿಗೆ ಕೊಟ್ಟಾಗ ಅದು ಪ್ರತ್ಯಾಯೋಜಿತ ಅಥವಾ ವಹಿಸಿಕೊಟ್ಟ ಅಧಿಕಾರ ಆಗುವುದಿಲ್ಲ. ಅದು ಸಹಕಾರ ಸಂಘಗಳ ಕಾಯಿದೆ ಅನ್ವಯ ಚಲಾಯಿಸುವ ಅಧಿಕಾರ. ಪ್ರತಿಯೊಬ್ಬ ಸದಸ್ಯನಿಗೂ ನೋಟೀಸ್ ಕೊಡಬೇಕೆಂದು ಕಾನೂನಿನಲ್ಲಿ ಸೂಚಿಸಬೇಕೆಂಬ ಅವಶ್ಯಕತೆ ಇಲ್ಲ. ಒಂದು ಸಂಘವನ್ನು ಮತ್ತೊಂದು ಸಂಘದ ಜೊತೆ ಒಗ್ಗೂಡಿಸುವಾಗ ಸಾರ್ವಜನಿಕ ಮತ್ತು ಆಡಳಿತ ಸುವ್ಯವಸ್ಥೆಯಲ್ಲಿ ಅವಶ್ಯಕ ಎಂದು ಪರಿಗಣಿಸತಕ್ಕದ್ದು. 1979 ಪಿಎಲ್ಜೆ 129.

15. ಸಹಕಾರ ಸಂಘಗಳ ಒಗ್ಗೂಡಿಸುವಿಕೆ ಮೇಲಾಧಿಕಾರಿಗಳ ನಿರ್ದೇಶನದಂತೆ ಮಾಡತಕ್ಕದಲ್ಲ. ನಿಬಂಧಕರು ಅವರು ತನ್ನ ಮನಸ್ಸು ಕೊಟ್ಟು ವಿಮರ್ಶೆ ಮಾಡಿ ಆದೇಶಿಸತಕ್ಕದ್ದು. 1976 ಪಿಎಲ್ಆರ್ 565.

16. ಯಾವುದೇ ಒಗ್ಗೂಡಿಸುವಿಕೆ ಆದೇಶವನ್ನು ಚಿತ್ತಮನಸ್ಸಿನಿಂದ ವಿಮರ್ಶಿಸಿ ಆದೇಶಿಸಬೇಕು. ಎಐಆರ್ 1978 ಕರ್ನಾಟಕ 148/1978(1) ಕೆಎಲ್ಜೆ 302.

**ಚುನಾವಣೆ :**

1. ಚುನಾವಣಾಧಿಕಾರಿಯು ನಾಮಪತ್ರ ಸಲ್ಲಿಸುವ ದಿನಾಂಕದಂದೇ ನಾಮಪತ್ರವನ್ನು ವಾಪಸ್ ಪಡೆಯಬಹುದು. ಯಾವ ನಾಮಪತ್ರವನ್ನು ವಾಪಸ್ಸಾತಿ ಪಡೆಯಲಾಗಿದೆಯೋ ಆ ವಾಪಸ್ ಪಡೆಯುವಿಕೆ ವಾಪಸ್ ಪಡೆಯುವ ದಿನಾಂಕದಂದೇ ಪಡೆಯಬೇಕೆಂದಿಲ್ಲ. ಅಂತಹ ಪ್ರಸಂಗದಲ್ಲಿ ಚುನಾವಣಾಧಿಕಾರಿಯು ಅಂತಹ ನಾಮಪತ್ರ ಹಿಂಪಡೆದು ಚುನಾವಣೆಯಲಿ ಸ್ಪರ್ಧಿಸಲು ಅವಕಾಶ ಕಲ್ಪಿಸತಕ್ಕದ್ದಲ್ಲ. 1975 ಕೆಎಲ್ಜೆ 66 ಎಸ್ಎನ್ 51.

2. ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಲ್ಲಿ ಪದಾಧಿಕಾರಿಗಳ ಆಯ್ಕೆಗೆ ಸ್ಪಷ್ಟವಾಗಿ ನೀತಿಯನ್ನು ರೂಪಿಸಿರುವುದರಿಂದ ಪ್ರತ್ಯೇಕವಾದ ಉಪವಿಧಿಗಳನ್ನು ರಚಿಸುವ ಅವಶ್ಯಕತೆ ಇಲ್ಲ. 1981 (1) ಕೆಎಲ್ಜೆ 88

3. ಚುನಾವಣಾಧಿಕಾರಿಯು ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಿದ ನಂತರ ಯಾವುದೇ ಕಾರಣಕ್ಕೂ ಚುನಾವಣೆಯನ್ನು ಮುಂದೂಡತಕ್ಕದ್ದಲ್ಲ. ಕೆಎಲ್ಜೆ 4114.

4. ನಾಮಪತ್ರ ಸಲ್ಲಿಸುವ ವ್ಯಕ್ತಿಯ ಹೆಸರಿನಲ್ಲಿ ವ್ಯತ್ಯಾಸವಿದ್ದರೆ ಅಂತಹ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ ಐಎಲ್ಆರ್ 1995 ಕೆಎಆರ್ 2187.

5. ಚುನಾವಣಾಧಿಕಾರಿಯು ಸಂಘದ ಕಾರ್ಯದರ್ಶಿಗೆ ನಾಮಪತ್ರ ಸ್ವೀಕರಿಸಲು ಅಧಿಕಾರ ಕೊಟ್ಟಿದ್ದರೂ ಚುನಾವಣಾಧಿಕಾರಿಯೇ ನಾಮಪತ್ರವನ್ನು ಸ್ವೀಕರಿಸಲು ಯಾವುದೇ ಅಡತಡೆಗಳಿರತಕ್ಕದ್ದಲ್ಲ. ಐಎಲ್‌ಆರ್ 1985(4) ಕೆಎಆರ್ 3685.

6. ಒಬ್ಬ ನಿರ್ದೇಶಕನನ್ನು ಕಲಂ 29ಸಿ ಅನ್ವಯ ಅನರ್ಹನೆಂದು ಘೋಷಿಸಿದಾಗ ಅಂತಹ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹನಲ್ಲ. 1979(1) ಕೆಎಲ್‌ಜೆ 431.

7. ಚುನಾವಣಾ ಫಲಿತಾಂಶವನ್ನು ಪ್ರಕಟಿಸುವಾಗ ಯಾವ ಸ್ಥಾನದಿಂದ ಯಾವ ವಿಭಾಗದಿಂದ ಚುನಾವಣೆಗೆ ಸ್ಪರ್ಧಿಸಿದ್ದಾರೋ ಆ ಆಧಾರದ ಮೇಲೆಯೇ ಚುನಾವಣೆ ಫಲಿತಾಂಶ ಪ್ರಕಟಿಸತಕ್ಕದ್ದು. ಒಟ್ಟು ಮತ ಚಲಾವಣೆಯಾದ ಮತದಾನದ ಆಧಾರದ ಮೇಲೆ ಹೆಚ್ಚು ಮತಗಳಿಸಿದವನನ್ನು ಚುನಾಯಿತನಾದನೆಂದು ಪ್ರಕಟಿತಕ್ಕದ್ದಲ್ಲ. ಐಎಲ್‌ಆರ್ 2000 ಕೆಎಆರ್ 143.

8. ನಿರ್ದೇಶಕರು 3 ಸತತ ಆಡಳಿತ ಮಂಡಳಿ ಸಭೆಗೆ ಗೈರುಹಾಜರಾದಲ್ಲಿ ಅವರು ನಿರ್ದೇಶಕತನವನ್ನು ಕಳೆದುಕೊಳ್ಳುತ್ತಾರೆ. ಆದರೆ ಅಂತಹ ನಿರ್ದೇಶಕನು ಅನರ್ಹಗೊಳ್ಳುವುದಿಲ್ಲ. ತೊಡಕುಂಟಾದ ವ್ಯಕ್ತಿ ಕಾಯಿದೆ 70ರನ್ವಯ ಉಪ ನಿಬಂಧಕರ ಮುಂದೆ ಅರ್ಜಿ ಸಲ್ಲಿಸಿದಾಗ ಆ ತೀರ್ಮಾನ ಆದ ನಂತರವೇ ಅನರ್ಹಗೊಳ್ಳತಕ್ಕದ್ದು. 1985 ಕೆಎಲ್‌ಜೆ 326.

9. 9 ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಸಲಾಯಿತು. ಆ ಸಂದರ್ಭದಲ್ಲಿ 3 ಜನರನ್ನು ಹೊರತುಪಡಿಸಿ ಉಳಿದೆಲ್ಲಾ ಉಮೇದುವಾರರು ನಾಮಪತ್ರವನ್ನು ವಾಪಸ್ ಪಡೆದರು. ಅಂತಹ ಸಂದರ್ಭದಲ್ಲಿ ಮೂವರು ಮಾತ್ರ ಆಯ್ಕೆಯಾಗಿದ್ದಾರೆಂದು ಉಳಿದ 6 ಜನರ ಆಯ್ಕೆಗಾಗಿ ಹೊಸದಾಗಿ ಚುನಾವಣೆ ಮಾಡಿ ಆಯ್ಕೆ ಮಾಡತಕ್ಕದ್ದು. 1982(1) ಕೆಎಲ್‌ಜೆ ಎಸ್‌ಎನ್13 ಡಿಬಿ

10. ಒಂದು ಸಹಕಾರ ಸಂಘವು ಮತ್ತೊಂದು ಸಹಕಾರ ಸಂಘದ ಸದಸ್ಯರಾಗಿದ್ದರೆ ಅಂತಹ ಸಂಘಕ್ಕೆ ಪ್ರತಿನಿಧಿಯನ್ನು ಕಳುಹಿಸುವಾಗ ನಿರ್ದೇಶಕರಲ್ಲಿ ಒಬ್ಬರನ್ನು ಕಳುಹಿಸತಕ್ಕದ್ದು. ಆ ಪ್ರತಿನಿಧಿ ಮಾತ್ರ ಮತ್ತೊಂದು ಸಂಘದಲ್ಲಿ ಮತ ಚಲಾಯಿಸತಕ್ಕದ್ದು. ಐಎಲ್‌ಆರ್ 2000 ಕೆಎಆರ್ 1195.

11. ಕಲಂ 20ರನ್ವಯ ಸುಸ್ತಿದಾರನೆಂದು ಪರಿಗಣಿಸಬೇಕಾದರೆ ಸಾಲವನ್ನು ಪಡೆದ ದಿನಾಂಕವನ್ನು ಗಮನಿಸಬೇಕು. ಮತ್ತು ಅವನು ಕೊಟ್ಟ ಅರ್ಜಿಯ ದಿನಾಂಕ ಅಥವಾ ಮಂಜೂರಾದ ದಿನಾಂಕವನ್ನು ಪರಿಗಣಿಸತಕ್ಕದ್ದಲ್ಲ. ಐಎಲ್‌ಆರ್ 1986(3) ಕೆಎಆರ್ 2683.

12. ಪದಾಧಿಕಾರಿಗಳ ಆಯ್ಕೆಗೆ ಕೋರಂ ಅವಶ್ಯಕತೆ ಕಡ್ಡಾಯ. ಐಎಲ್‌ಆರ್ 2003(3) ಕೆಎಆರ್ 486 ಡಿಬಿ

13. ಪದಾಧಿಕಾರಿಗಳ ಅವಧಿ ಎರಡೂವರೆ ವರ್ಷ ಎಂದಿದ್ದಾಗ ವರ್ಷದ ಮಧ್ಯದಲ್ಲಿ ಚುನಾವಣೆ ನಡೆದಾಗ ವರ್ಷವನ್ನು ಮಾಚ 31ಕ್ಕೆ ಮುಕ್ತಾಯವಾಗತಕ್ಕದ್ದು. ಮತ್ತು ಮುಂದಿನ ವರ್ಷಕ್ಕೂ ಒಂದು ವರ್ಷವೆಂದು ತಿಳಿಯತಕ್ಕದ್ದು. 2001(3) ಕೆಎಲ್‌ಜೆ 663 ಡಿಬಿ

14. ಪ್ರತಿಯೊಂದು ಸಹಕಾರ ಸಂಘವು ನಿಯಮ 13ಎ ಅನ್ವಯ ಗುರುತಿತಿನ ಪತ್ರ ಕೊಡಬೇಕೆಂದಿದ್ದರೂ ಆ ಗುರುತಿನ ಪತ್ರವನ್ನು ಪಡೆಯುವುದು ಸದಸ್ಯರ ಜವಾಬ್ದಾರಿ. ಐಎಲ್‌ಆರ್ 2001 ಕೆಎಆರ್ 3837.

15. ಒಂದು ಸಹಕಾರ ಸಂಘದ ಪರವಾಗಿ ಕಮಿಷನ್ ಏಜೆಂಟ್ ಎಂದು ನೇಮಕ ಮಾಡಿದಾಗ ಅಂತಹ ವ್ಯಕ್ತಿ ಸಂಘದ ಪರವಾಗಿ ಠೇವಣಿ ಸಂಗ್ರಹಿಸುತ್ತಿದ್ದು, ಅಂತಹ ವ್ಯಕ್ತಿಯು ಸಂಘ ಮಾಡುತ್ತಿರುವ ವ್ಯವಹಾರವನ್ನೇ ಮಾಡುತ್ತಿರುವುದರಿಂದ ಅಂತಹ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಿ ನಿರ್ದೇಶಕನಾಗಲು ಅನರ್ಹ 1989(2) ಕೆಎಲ್‌ಜೆ 272

16. ಸಹಕಾರ ಸಂಘದ ಚುನಾವಣೆ ನಡೆಸಲು ನಿಬಂಧಕರು ಚುನಾವಣಾಧಿಕಾರಿಯನ್ನು ನೇಮಿಸುತ್ತಾರೆ. ಚುನಾವಣಾಧಿಕಾರಿಯು ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿಲ್ಲ. 1983(2) ಕೆಎಲ್‌ಜೆ 479

17. ನ್ಯಾಯಾಲಯವು ಚುನಾವಣೆ ಅಕ್ರಮವೆಂದು ತೀರ್ಮಾನಿಸಿ ತೀರ್ಪು ಕೊಟ್ಟಾಗ ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಒಬ್ಬ ಮಧ್ಯಸ್ಥದಾರರನ್ನು ಅಥವಾ ಚುನಾವಣಾಧಿಕಾರಿಯನ್ನು ಅಥವಾ ವಿಶೇಷಾಧಿಕಾರಿಯನ್ನು ಚುನಾವಣೆಯನ್ನು ನಡೆಸಲು ನೇಮಕ ಮಾಡತಕ್ಕದ್ದಲ್ಲ. 1998(2) ಡಿಎಲ್‌ಜೆ 85

18. ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುವುದು. ಚುನಾವಣಾಧಿಕಾರಿ ದಿನ, ವೇಳೆ, ಸ್ಥಳ ನಿಗದಿಪಡಿಸಿ ಆದೇಶ ಹೊರಡಿಸಿದಾಗ(ಐಎಲ್‌ಆರ್ 1969 ಎಪಿ 910)

19. ಚುನಾವಣೆ ನಡವಳಿಕೆಗಳಲ್ಲಿ–ಚುನಾವಣೆ ಘೋಷಣೆಯಲ್ಲಿ ತಪ್ಪುಗಳಿವೆ ಎಂಬ ಕಾರಣಕ್ಕೆ ಚುನಾವಣೆ ಮುಗಿಯುವ ಪೂರ್ವದಲ್ಲಿ ಪ್ರಶ್ನಿಸುವಂತಿಲ್ಲ. (1966(2) ಎಪಿಎಲ್‌ಜೆ (65).

20. ಚುನಾವಣೆ ಮುಗಿಯುವ ತನಕ ಚುನಾವಣೆ ಬಗ್ಗೆ ದಾವಾ ದಾಖಲಿಸಲು ಬರುವುದಿಲ್ಲ. ಮತ್ತು ಅದು ಸಿಂಧುವಾಗಬಾರದು. (ಪ್ರೀಮೆಚ್ಯೂರ್ಡ್) 1985 ಸಿಟಿಜೆ 280.

21. ಎಲ್ಲಿ ಕಾನೂನಿನ ತಿದ್ದುಪಡಿ ಮುಖಾಂತರ ಆಡಳಿತ ಮಂಡಳಿ ಅವಧಿ ವಿಸ್ತರಿಸಲಾಗಿದೆಯೋ ಅಂತಹ ಸಂದರ್ಭದಲ್ಲಿ ವಿಸ್ತರಿಸಿದ ಅವಧಿಗೆ ಮುನ್ನಾ ಹೊಸ ಆಡಳಿತ ಮಂಡಳಿ ಚುನಾವಣೆ ಮಾಡತಕ್ಕದ್ದಲ್ಲ.(ಎಐಆರ್ 1990 ಎನ್‌ಒಸಿ 65(ಎಂ.ಪಿ)

22. ತಿದ್ದುಪಡಿ ಮುಖಾಂತರ ವಿಸ್ತರಿಸಿದ ಅವಧಿಯೊಳಗೆ ಹೊಸ ಆಡಳಿತ ಮಂಡಳಿ ಚುನಾವಣೆ ಮುಖಾಂತರ ರಚನೆ ಆಗುವುದಿಲ್ಲವೋ ಅಂತಹ ಸಮಯದಲ್ಲಿ ಹಳೆಯ ಆಡಳಿತ ಮಂಡಳಿ ತನ್ನ ಸ್ಥಾನ ಖಾಲಿ ಮಾಡಿದೆ ಎಂದು ಭಾವಿಸತಕ್ಕದ್ದು. 1983 ಎಂಪಿಡಬ್ಲ್ಯೆನ್ 467.

23. ನಿಬಂಧಕರು ಚುನಾವಣೆ ಮುಕ್ತಾಯವಾಗುವ ತನಕ, ಫಲಿತಾಂಶ ಘೋಷಿಸುವ ತನಕ ಯಾವುದೇ ಮಧ್ಯಂತರ ಆದೇಶ ಹೊರಡಿಸುವ ಅಧಿಕಾರ ಹೊಂದಿಲ್ಲ. ಎಐಆರ್ 1986 ಎಂಪಿ 29–ಎಆರ್ 1985 ಎಂಪಿ 80–1985 ಎಂಪಿಎಲ್‌ಜೆ 140.

24. ನಾಮಪತ್ರ ತಿರಸ್ಕರಿಸಿದ ಪ್ರತಿಯೊಂದು ಪ್ರಸಂಗದಲ್ಲಿಯೂ ದಾವಾ ಪ್ರಕರಣವನ್ನು ದಾಖಲಿಸಬಹುದು. ಎಐಆರ್ 1977 ಎಸ್‌ಸಿ 1703–ಎಆರ್ 1975 ಎಸ್‌ಸಿ 2140–1989 ಎಂಪಿಎಲ್‌ಜೆ 208.

25. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ಯಾವುದೇ ಕಾರಣಕ್ಕೂ ಅದನ್ನು ತಡೆಯುವ ಅಥವಾ ನಿಲ್ಲಿಸತಕ್ಕದ್ದಲ್ಲ. ಈ ತತ್ವ ಲೋಕಲ್ ಬಾಡೀಸ್ ಮತ್ತು ಸಹಕಾರ ಸಂಘಗಳಿಗೂ ಅನ್ವಯವಾಗುತ್ತದೆ–1982(2) ಎಸ್‌ಸಿಸಿ 218.

26. ನ್ಯಾಯಾಲಯಗಳ ಮಧ್ಯಪ್ರವೇಶದಿಂದ ವಿಧಾನ ಮಂಡಳದ ಚುನಾವಣೆ ನಿಧಾನವಾಗುವುದಾಗಲಿ, ಮುಂದೂಡುವುದಾಗಲಿ, ಮಧ್ಯಂತರದಲ್ಲಿ ಪ್ರವೇಶ ಮಾಡಬಾರದು. ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳಿಸುವ ತನಕ ಇದು ಲೋಕಲ್ ಬಾಡೀಸ್ ಮತ್ತು ಸಹಕಾರ ಸಂಘಗಳಿಗೂ ಅನ್ವಯವಾಗುತ್ತದೆ.–ಎಐಆರ್ 1952 ಎಸ್‌ಸಿ 64.

27. ಮತ ಚಲಾಯಿಸಿದ ಒಂದು ಸಹಕಾರ ಸಂಘದ ಪ್ರತಿನಿಧಿ ಆ ಸಂಘದ ಸದಸ್ಯನೇ? ಅಲ್ಲವೇ? ಎಂದು ಕಲಂ 70ರಡಿ ಪ್ರಶ್ನಿಸತಕ್ಕದ್ದು. ರಿಟ್ ಅರ್ಜಿ ಮೂಲಕ ಅಲ್ಲ. 1968(2) ಮೈಸೂರು ಎಲ್‌ಜೆ 393 ಡಿಬಿ.

28. ಸುಸ್ತಿದಾರರ ಪಟ್ಟಿಯಲ್ಲಿ ಒಬ್ಬ ವ್ಯಕ್ತಿಯ ಹೆಸರಿನ ಸೇರ್ಪಡೆ ಪ್ರಶ್ನಿಸಲು ದಾವಾ ಪ್ರಕರಣ ದಾಖಲಿಸಬೇಕು. ರಿಟ್ ಅರ್ಜಿ ಅಲ್ಲ. 1984(1) ಕೆಎಲ್‌ಜೆ ಎಸ್‌ಎನ್ 43.

29. ಎಲ್ಲಿ ನ್ಯಾಯಾಧಿಕರಣ(ಟ್ರಿಬ್ಯೂನಲ್) ಚುನಾವಣೆಯನ್ನು ಕಿತ್ತುಹಾಕುತ್ತದೆಯೋ ಅಂತಹ ಪ್ರಸಂಗದಲ್ಲಿ ಹೊಸ ಚುನಾವಣೆ ನಡೆಸಲು ಆದೇಶಿಸತಕ್ಕದ್ದು. 1988(2) ಬಿಎಲ್‌ಜೆ 85.

30. ಒಬ್ಬ ಸದಸ್ಯನು ಸದಸ್ಯತ್ವದಿಂದ ಕಿತ್ತು ಹಾಕಲ್ಪಟ್ಟಾಗ ಅಥವಾ ಅಧಿಕಾರವನ್ನು ಕಿತ್ತುಕೊಂಡಾಗ ಅದನ್ನು ಪ್ರಶ್ನಿಸಲು ನೇರ ಪ್ರಾಧಿಕಾರ ಇದೆ ಎಂಬ ಕಾರಣಕ್ಕಾಗಿ ರಿಟ್ ಅರ್ಜಿಗೆ ಅರ್ಹನಲ್ಲ ಎಂಬ ತೀರ್ಮಾನಕ್ಕೆ ಬರಲಾಗದು–ಐಎಲ್‌ಆರ್ 1969(2) ಮೈಸೂರು ಎಲ್‌ಜೆ 336 ಡಿಬಿ.

31. ಆಡಳಿತ ಮಂಡಳಿ ಪದಾಧಿಕಾರಿ ಚುನಾವಣೆಗೆ ಸಂಬಂಧಪಟ್ಟ ಪ್ರಕರಣಗಳನ್ನು ಕಲಂ 20ರ ಬಗ್ಗೆ ದಾವಾ ದಾಖಲಿಸತಕ್ಕದ್ದು. ಎಐಆರ್ 1985 ಎನ್‌ಓಸಿ 66.

32. ಮತದಾರ ಪಟ್ಟಿ ಅನ್ವಯ 14(ಎ) ತಯಾರಿಸಿಲ್ಲವಾದರೆ ಉಚ್ಚ ನ್ಯಾಯಾಲಯ ಆರ್ಟಿಕಲ್ 226ರಲ್ಲಿ ರಿಟ್ ಮುಖಾಂತರ ಮಧ್ಯಪ್ರವೇಶ ಮಾಡಬಹುದು. ಕಲಂ 70ರಲ್ಲಿ ಅವಕಾಶವಿದೆ ಎಂದು ಇದನ್ನು ತಳ್ಳಿಹಾಕುವಂತಿಲ್ಲ. 1988(2) ಬಿಎಲ್‌ಜೆ ಎಸ್‌ಎನ್ 48.

33. ಹಳೆಯ ಚುನಾವಣಾ ವೇಳಾಪಟ್ಟಿಯಂತೆ ಚುನಾವಣೆ ನಡೆದರೆ, ರಿಟ್ ಅರ್ಜಿ ಮುಖಾಂತರ ಅಂತಹ ಪ್ರಕರಣದಲ್ಲಿ ಚುನಾವಣಾ ತಕರಾರು ಅರ್ಜಿ ಸಲ್ಲಿಸಬಹುದು; ಎಂಬ ಕಾರಣಕ್ಕೆ ಉಚ್ಚ ನ್ಯಾಯಾಲಯ ಮಧ್ಯ ಪ್ರವೇಶ ಮಾಡಬಹುದು ಎಂದು ಬರುವುದಿಲ್ಲ. ಐಎಲ್‌ಆರ್ 1991 (ಸಿ) ಕೆಎಲ್‌ಎನ್ 577–1991(4) ಕೆಎಲ್‌ಜೆ 256(ಡಿಬಿ)

34. ಚುನಾವಣೆಗೆ ಸಂಬಂಧಪಟ್ಟ ತಕರಾರು ಅರ್ಜಿ ಚುನಾವಣೆ ಪ್ರಕ್ರಿಯೆ ಪ್ರಾರಂಭವಾದಾಗ ಕಲಂ 70ರಡಿ ಮಧ್ಯ ಪ್ರವೇಶಿಸತಕ್ಕದಲ್ಲ. ಸಾಮಾನ್ಯವಾಗಿ ದಾವಾ ಮುಖಾಂತರ ಇತ್ಯರ್ಥ ಮಾಡತಕ್ಕದ್ದು. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ಮಧ್ಯಪ್ರವೇಶ ಮಾಡತಕ್ಕದಲ್ಲ. ಐಎಲ್‌ಆರ್ 1995 ಕೆಎಆರ್.

35. ಒಂದು ಸಹಕಾರ ಸಂಘದ ಪ್ರತಿನಿಧಿ ಚುನಾವಣೆಗೆ ಸಂಬಂಧಪಟ್ಟ ತಕರಾರು ಅರ್ಜಿ ಸಲ್ಲಿಸಲು ಅರ್ಹ. 1979 ಎಐಎಲ್‌ಎಲ್‌ಆರ್ 41)

36. ಸಮರ್ಪಕ ಮತದಾರರ ಪಟ್ಟಿ ಇಲ್ಲದೆ ಚುನಾವಣೆ ನಡೆದರೆ ಅದು ಸರಿಯಾದ ಚುನಾವಣೆ ಅಲ್ಲ. ಚುನಾವಣೆ ರದ್ದುಗೊಳಿಸಿ ಹೊಸ ಚುನಾವಣೆ ನಡೆಸತಕ್ಕದ್ದು–1978 ಪಿಎಲ್‌ಜೆ 344

37. ಚುನಾವಣೆಯನ್ನು ಕಾನೂನು ನಿಯಮಗಳನ್ವಯ ನಡೆಸದೆ ಇದ್ದರೆ ನಿಬಂಧಕರು ಅಂತಹ ಚುನಾವಣೆ ತಿರಸ್ಕರಿಸಿ ಆಡಳಿತಾಧಿಕಾರಿಯನ್ನು ನೇಮಿಸಬಹುದು. 1975 ಪಿಎಲ್‌ಜೆ 481

38. ಸಹಾಯಕ ನಿಬಂಧಕರು ದಾವಾ ಪ್ರಕರಣ ಇಲ್ಲದಿದ್ದರೂ ನಡೆದ ಚುನಾವಣೆಗೆ ಕಿತ್ತುಹಾಕಲು ಅರ್ಹನಲ್ಲ. 1979 ಆರ್‌ಇವಿ ಎಲ್‌ಆರ್ 685 ಡಿಬಿ ಪಂಜಾಬ್ ಮತ್ತು ಹರಿಯಾಣ.

39. ಒಂದು ಸಹಕಾರ ಸಂಘದ ಪ್ರತಿನಿಧಿಯ ಅನರ್ಹತೆಯನ್ನು ಪರಿಗಣಿಸತಕ್ಕದ್ದಲ್ಲ. ಅದನ್ನು ಪ್ರತಿನಿಧಿಸುವ ಸಹಕಾರ ಸಂಘ ಅನರ್ಹತೆ ಹೊಂದಿದ್ದರೆ ಅದನ್ನು ಪರಿಗಣಿಸಬೇಕು. 1981 ಪಿಎಲ್‌ಜೆ 398.

40. ಸಮಿತಿಯ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಸದಸ್ಯರನ್ನು ಆಯ್ಕೆಯಾಗಿದ್ದಾರೆಂದು ಆಗಿಂದಾಗ್ಗೆ ಘೋಷಿಸತಕ್ಕದ್ದು. 1979 ಪಿಎಲ್‌ಆರ್ 45 ಎಸ್‌ಎನ್.

41. ಕೋರಂಗೆ ಸಂಬಂಧಪಟ್ಟ ನಿಯಮ, ಚುನಾವಣಾಧಿಕಾರಿ, ಆಡಳಿತ ಮಂಡಳಿ ಪದಾಧಿಕಾರಿ ಚುನಾವಣೆಗೆ ಅನ್ವಯಿಸುವುದಿಲ್ಲ–1972(8) ಕೋಆಪ್ ಎಲ್‌ಜೆ 128.

42. ಒಬ್ಬ ವ್ಯಕ್ತಿ ಚುನಾವಣೆ ಸಮಯದಲ್ಲಿ ಸ್ಪರ್ಧಿಸಲು ಅನರ್ಹಗೊಂಡಿದ್ದರೆ ಅಥವಾ ಅರ್ಹನಲ್ಲದಿದ್ದರೆ ಅಂತಹ ವಿಷಯವನ್ನು ದಾವಾ ದಾಖಲಿಸುವ ಮೂಲಕ ಪ್ರಶ್ನಿಸಬೇಕು–1979 ಎಐಎಲ್‌ಎಲ್‌ಆರ್ 375.

43. ಚುನಾವಣೆಯನ್ನು ಮಧ್ಯದಲ್ಲೇ ನಿಲ್ಲಿಸಬೇಕಾದರೆ ನಡವಳಿಕೆ ದಾಖಲಿಸಲು ಸಾಧ್ಯವೇ ಇಲ್ಲವೆಂದು ಪರಿಗಣಿಸಿದಾಗ ಮಾತ್ರ. 1971(7) ಕೋಆಪ್ ಎಲ್‌ಜೆ 64.

44. ಚುನಾವಣೆಯನ್ನು ತಾಂತ್ರಿಕ ಕಾರಣದ ಆಧಾರದ ಮೇಲೆ ರದ್ದುಗೊಳಿಸತಕ್ಕದಲ್ಲ. ಅಂದರೆ ಅಧ್ಯಕ್ಷರು, ವ್ಯವಸ್ಥಾಪಕರು ಸೇರಿ ಚುನಾವಣೆ ಕಾರ್ಯಕ್ರಮ ರೂಪಿಸಿದ್ದರೆ, ವ್ಯವಸ್ಥಾಪಕರು ಹೊರಡಿಸಬೇಕಾದ ಸಂದರ್ಭದಲ್ಲಿ ಅಂತಹ ಚುನಾವಣೆ ರದ್ದುಗಳಿಸತಕ್ಕದಲ್ಲ. 1977 ಪಿಎಲ್‌ಜೆ 108

45. ಚುನಾವಣೆ ಎಂದರೆ ಹಲವಾರು ಹಂತಗಳಿರುತ್ತದೆ. ಬಹಳಷ್ಟು ಹಂತ ಎಂದರೆ ಚುನಾವಣೆ ಫಲಿತಾಂಶದ ಮೇಲೆ ಪ್ರಭಾವ ಬೀರುವ ಪ್ರತಿಯೊಂದು ಹಂತ–1960(2) ಎಂಎಡಿಎಲ್‌ಜೆ 392.

46. ಕಾನೂನು ಮತ್ತು ನಿಯಮಗಳ ವಿರುದ್ಧ, ಆದರೆ ಬೈಲಾ ಅನ್ವಯ ಚುನಾವಣೆ ನಡೆದಿದ್ದರೆ ಅಂತಹ ಚುನಾವಣೆ ಸಿಂಧುವಲ್ಲ. 1970(40) ಕಟಕ್ ಎಲ್‌ಜೆ 441.

47. ಒಂದು ಸಹಕಾರ ಬ್ಯಾಂಕ್ ತನ್ನ ವಾರ್ಷಿಕ ಮಹಾಸಭೆಯನ್ನು, ಆಡಳಿತ ಮಂಡಳಿ ಪದಾಧಿಕಾರಿ ಚುನಾವಣೆಯನ್ನು ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇದ್ದಾಗಲೂ ತಿಳುವಳಿಕೆ ಇಲ್ಲದೆ ಅಥವಾ ಗಮನಕ್ಕೆ ತೆಗೆದುಕೊಳ್ಳದೆ ನಡೆಸಿದಾಗ ಅಂತಹ ಚುನಾವಣೆ ನಡೆದಿಲ್ಲ ಎಂದು ತಿಳಿಯತಕ್ಕದ್ದು. ಒಂದು

ಪಕ್ಷ ಚುನಾವಣೆಗೆ ತಡೆಯಾಜ್ಞೆ ಸಂಬಂಧಿಸಿದವರಿಗೆ ತಿಳಿಸಿದಾಗ್ಯೂ ನ್ಯಾಯಾಲಯ ಚುನಾವಣೆ ರದ್ದು ಮಾಡತಕ್ಕದ್ದು. ತಡೆಯಾಜ್ಞೆ ನೀಡಿದ್ದ ಆದೇಶ ನಂತರ ತೆರವಾಗಿದೆ ಎಂಬ ಕಾರಣದಿಂದ ಯಾವುದೇ ವ್ಯತ್ಯಾಸ ಇರುವುದಿಲ್ಲ. ರಿಟ್ ಅರ್ಜಿ ವಿಚಾರಣೆಯಲ್ಲಿ ಇದ್ದಾಗ ಚುನಾವಣೆ ನಡೆದ ದಿನಾಂಕದಂದು ಬಾಕಿ ಉಳಿದಿದೆ ಎಂದು ಭಾವಿಸತಕ್ಕದ್ದು. ಎಐಆರ್ 1982 ಪಾಟ್ನಾ 8.

48. ಚುನಾವಣೆ ಫಲಿತಾಂಶ ಹೊರ ಬೀಳುವವರೆಗೆ ಯಾವುದೇ ರೀತಿಯ ನ್ಯೂನತೆ ಆಧಾರದ ಮೇಲೆ ಚುನಾವಣೆ ನಿಲ್ಲಿಸತಕ್ಕದಲ್ಲ. ಎಐಆರ್ 1972 ಬಾಂಬೆ 129.

49. ನಿಬಂಧಕರು ಅಥವಾ ಸರ್ಕಾರ ಚುನಾವಣೆ ಪ್ರಕ್ರಿಯೆಗೆ ಅಥವಾ ಚುನಾವಣೆ ಮುಂದೂಡಿಕೆ ಬಗ್ಗೆ ನಿರ್ದೇಶನ ಕೊಡಲು ಬರುವುದಿಲ್ಲ. ನಿಬಂಧಕರು ಅಥವಾ ಸರ್ಕಾರ ಚುನಾವಣೆ ನಡವಳಿಕೆ ಮಾರ್ಪಡಿಸಲು ಅವಶ್ಯಕ ಎಂಬ ಆಧಾರದ ಮೇಲೆ ಮಧ್ಯಪ್ರವೇಶಿಸಲಾಗದು. 1985(1) ಎಐಎಲ್‌ಎಲ್‌ಆರ್ 636.

50. ಎಲ್ಲಿ ದಾವಾ ದಾಖಲಾಗಿಲ್ಲವೋ ಅಥವಾ ತೀರ್ಮಾನವಾಗಿಲ್ಲವೋ ಅಥವಾ ಮೇಲ್ಮನವಿ ಸಲ್ಲಿಸಿಲ್ಲವೋ ಅಂತಹ ಪ್ರಸಂಗದಲ್ಲಿ ಸರ್ಕಾದ ದಾವಾ ದಾಖಲಿಸಲು ತನ್ನ ಪುರಸ್ಕರಣೆ (ರಿವಿಷನ್) ಅಧಿಕಾರ ಚಲಾಯಿಸಲು ಬರುವುದಿಲ್ಲ. ಎಐಆರ್ 1982 ಪಾಟ್ನಾ114.

51. ಒಬ್ಬ ಸದಸ್ಯ ಒಂದು ಸಹಕಾರ ಸಂಘದ ವ್ಯವಹಾರದಲ್ಲಿ ಮೋಸ, ವಂಚನೆ ಮಾಡಿದ್ದಾನೆ ಎಂಬ ಆಧಾರದ ಮೇಲೆ ಚುನಾವಣೆ ತಕರಾರು ಅರ್ಜಿ ದಾಖಲಿಸಬಹುದ. 1968 ಕೆಇಆರ್ ಎಲ್‌ಜೆ 260.

52. ಯಾವುದೇ ಹೆಸರಿಸದ ಕಕ್ಷಿದಾರರಿಂದ ದಾವಾ ದಾಖಲಾಗಿದೆಯೋ–ಪದಾಧಿಕಾರಿ ಚುನಾವಣೆಯಲ್ಲಿ– ಅಂತಹ ಪ್ರಸಂಗದಲ್ಲಿ ದಾವಾ ಪ್ರಕರಣ ತೀರ್ಮಾನಿಸಲು ಅಧಿಕಾರ ಹೊಂದಿಲ್ಲ. ಆದ್ದರಿಂದ ಚುನಾವಣೆ ಬಗ್ಗೆ ಹೊರಡಿಸಿದ ತೀರ್ಪು ಅಸಿಂಧು ಮತ್ತು ಕಾನೂನುಬಾಹಿರ. ಎಐಆರ್ 1978 ಗೋವಾ 34.

53. ಸರ್ಕಾರ ಕಲಂ 28ರನ್ವಯ ಆಡಳಿತ ಮಂಡಳಿ ಅವಧಿಯನ್ನು ವಿಸ್ತರಿಸಿದರೂ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಆ ಸಮಿತಿ ಅವಧಿ ಮುಗಿಯುವ ಅವಧಿಗೆ ಅನುಗುಣವಾಗಿ ನಡೆಯತಕ್ಕದ್ದು. ಐಎಲ್‌ಆರ್ 1991(1) ಕೆಎಎನ್ 24–1998(2) ಕೆಎಲ್‌ಜೆ 439 ಡಿಬಿ.

54. ಚುನಾವಣೆ ಪ್ರತಿನಿಧಿ ಅವಧಿ ಅವನು ಆಯ್ಕೆಯಾದ ದಿನದಿಂದ ಪ್ರಾರಂಭವಾಗುತ್ತದೆ. ಸಹಕಾರಿ ವರ್ಷ ಎಂಬ ಪದಕ್ಕೆ ಚುನಾಯಿತ ಆದನೆಂದು ಘೋಷಿಸಿದ ವರ್ಷದಿಂದ ಪರಿಗಣಿಸತಕ್ಕದ್ದು. ಚುನಾವಣೆಗೆ ಸ್ಪರ್ಧಿಸಿದ ವರ್ಷ ಎಂದು ಪರಿಗಣಿಸತಕ್ಕದಲ್ಲ. ಎಐಆರ್ 1982 ಎನ್‌ಸಿ 831.

55. ನಿಬಂಧಕರಿಗೆ ಚುನಾವಣೆಗೆ ಸಂಬಂಧಪಟ್ಟಂತೆ ನಿಯಮಗಳನ್ನು ವಿಮರ್ಶಿಸುವ(ಇಂಟರ್‌ಪ್ರಿಟಿ) ಮತ್ತು ಅಭಿಪ್ರಾಯ ತಿಳಿಸುವ ಅಧಿಕಾರ ಇರುವುದಿಲ್ಲ. ಮತ ಚಲಾವಣೆಗೆ ಸಂಬಂಧಪಟ್ಟಂತೆ ಒಂದಕ್ಕಿಂತ ಹೆಚ್ಚು ಆಡಳಿತ ಮಂಡಳಿ ಕೊಡುವ ಅಧಿಕಾರ ಇಲ್ಲ. ಎಐಆರ್ 1972 ಎಸ್‌ಸಿ 758.

56. ಹಳೆಯ ಚುನಾವಣೆ ತಕರಾರು ಅರ್ಜಿ ವಿಲೇವಾರಿ ಆಗಿಲ್ಲ ಎಂಬ ಕಾರಣಕ್ಕೆ ಹೊಸ ಚುನಾವಣೆ ಮುಂದೂಡಲುಬರುವುದಿಲ್ಲ.1982(2) ಕೆಎಲ್‌ಜೆ ಎಸ್‌ಎನ್–10.

57. ಆಡಳಿತ ಮಂಡಳಿ ಚುನಾವಣೆಗೆ ಚುನಾವಣೆ ಪ್ರಕಟಣೆ ಹೊರಡಿಸಿದಾಗ 2 ಸ್ಥಾನಗಳ ಮೀಸಲಾತಿ ಬಗ್ಗೆ ಪ್ರಕಟಿಸಿರದಿದ್ದರೆ–1 ಪರಿಶಿಷ್ಟ ಜಾತಿ;ವರ್ಗಕ್ಕೆ, 1 ಸ್ಥಾನ ಹಿಂದುಳಿದ ಜನಾಂಗಕ್ಕೆ, ಅಂತಹ ಚುನಾವಣೆ ಕಾನೂನು ಬಾಹಿರ, ಅನರ್ಹ, ಕಾನೂನಿಗೆ ವಿರುದ್ಧ. ಎಐಆರ್ 1984 ಎಸ್‌ಸಿ 192.

58. ಚುನಾವಣೆಗೆ ನೇಮಿಸಲ್ಪಟ್ಟ ಅಧಿಕಾರಿ ಗುರುತಿನ ಚೀಟಿ ತೋರಿಸಿದ ನಂತರ ಮತ ಪತ್ರ ಕೊಡತಕ್ಕದ್ದು. ಐಎಲ್‌ಆರ್ 1968 ಮೈಸೂರು ಎಲ್‌ಜೆ 393 ಡಿಬಿ

59. ಮತಪಟ್ಟಿಯಲ್ಲಿ ಹೆಸರು ಸೇರಿಸಿಲ್ಲ ಎಂಬುದಕ್ಕೆ ದಾವಾ ಪ್ರಕರಣವನ್ನು ಮಧ್ಯಸ್ಥಗಾರರು ತೀರ್ಮಾನಿಸಬೇಕು. ರಿಟ್ ಅರ್ಜಿ ಮುಖಾಂತರ ಅಲ್ಲ. ಎಐಆರ್ ಎನ್‌ಒಸಿ 66.

60. ಚುನಾವಣಾಧಿಕಾರಿ ಒಂದು ಸಂಘದ ಆಡಳಿತ ಮಂಡಳಿ ಮತ್ತು ಮಹಾಸಭೆಯ ಎಲ್ಲಾ ಅಧಿಕಾರ ಹೊಂದಿರುತ್ತಾನೆ. ಎಲ್ಲಿ ಚುನಾವಣೆ ನ್ಯಾಯಾಲಯದ ಆದೇಶದನ್ವಯ ನಿಂತು ಹೋಗಿರುತ್ತದೆಯೋ ತಡೆಯಾಜ್ಞೆ ತೆರವಾದಾಗ ಎಲ್ಲಿ ಚುನಾವಣೆ ನಿಂತುಹೋಗಿತ್ತೋ ಅಲ್ಲಿಂದ ಪುನರಾರಂಭಿಸತಕ್ಕದ್ದು. ಎಲ್ಲಿ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿಲ್ಲವೋ ಅಂತಹ ಸಂದರ್ಭದಲ್ಲಿ ಹೊಸ ಚುನಾವಣೆ ವೇಳಾಪಟ್ಟಿ ಪ್ರಾರಂಭಿಸುವುದು ಎಐಎಲ್‌ಎಲ್‌ಆರ್ 1986(3) ಕೆಎಎನ್ 2270.

61. ನಿಯಮ 14(2)ರನ್ವಯ ನೇಮಿಸಲ್ಪಟ್ಟ ಚುನಾವಣಾಧಿಕಾರಿ ಚುನಾವಣೆ ಫಲಿತಾಂಶವನ್ನು ಪ್ರಕಟಿಸುವ ಅಧಿಕಾರ ಹೊಂದಿರುತ್ತಾರೆ. 1989(1) ಕೆಎಲ್‌ಜೆ 17.

62. ಸ್ಪರ್ಧಿಸಲು ಒಪ್ಪಿಗೆ ಕೊಟ್ಟಾಗ ನ್ಯೂನತೆ ಇದೆ ಎಂಬ ಆಧಾರದ ಮೇಲೆ ನಾಮಪತ್ರ ತಿರಸ್ಕರಿಸಿದರೆ ಅದು ನ್ಯಾಯಕ್ಕೆ ವಿರೋಧ–1989(1) ಕೆಎಲ್‌ಜೆ 130.

63. ಸುಸ್ತಿದಾರರರಾದವನು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾಗಿದ್ದರೂ ಮತ ಚಲಾಯಿಸುವ ಹಕ್ಕು ಕಳೆದುಕೊಳ್ಳುವುದಿಲ್ಲ. 1984(1) ಕೆಎಲ್‌ಜಿ ಎಸ್‌ಎನ್ 43.

64. ನಿಯಮ ಪಾಲಿಸುವುದು ಕಡ್ಡಾಯ ವಾರ್ಷಿಕ ಮಹಾಸಭೆ ನಡೆಸಲು ಸಾಧ್ಯವಾಗದೆ ಹೋದಾಗ ಹೊಸ ದಿನಾಂಕ ನಿಗದಿಪಡಿಸಿದರೆ ಹೊಸ ಚುನಾವಣಾ ವೇಳಾಪಟ್ಟಿ ಹೊರಡಿಸುವ ಅವಶ್ಯಕತೆ ಇಲ್ಲ. ಎಲ್ಲಿ ನಿಂತಿರುತ್ತದೋ ಅಲ್ಲಿಂದ ಪ್ರಾರಂಭಿಸಬಹುದು. ಯೆಲ್‌ಆರ್ 1979(1) ಕೆಆರ್‌ಎನ್ ಎಸ್‌ಎನ್ 57–1979(1) ಕೆಎಲ್‌ಜೆ 371.

65. ಚುನಾವಣಾಧಿಕಾರಿ ಸಂಘದ ಕಾರ್ಯದರ್ಶಿಗೆ ನಾಮಪತ್ರ ಸ್ವೀಕರಿಸುವ ಅಧಿಕಾರ ಕೊಟ್ಟಿದ್ದರೂ ತಾನೇ ನಾಮಪತ್ರ ಸ್ವೀಕರಿಸುವ ಅಧಿಕಾರ ಕಳೆದುಕೊಳ್ಳುವುದಿಲ್ಲ. ಐಎಲ್‌ಆರ್ 1985(4) ಕೆಎಎನ್ 3685.

66. ಸಹಕಾರಿ ನಿಯಮಗಳಲ್ಲಿ ನಾಮಪತ್ರವನ್ನು ಸ್ವೀಕರಿಸುವ ಸಮಯ ನಿಗಧಿಪಡಿಸಲು ಚುನಾವಣಾಧಿಕಾರಿಗೆ ಅಧಿಕಾರ ಕೊಟ್ಟಿದೆ. ಅದರಲ್ಲಿ 6 ಅಥವಾ 7 ಸ್ಪಷ್ಟ ದಿವಸ ಎಂದು

ನಮೂದಿಸಿದೆ. ಆದರೆ ಇದಕ್ಕಿಂತ ಹೆಚ್ಚು ಅವಧಿ (9 ಸ್ಪಷ್ಟ ದಿನಗಳು) ನಿಗದಿಪಡಿಸಿದ್ದರೆ ಅದು ಕಾನೂನುಬದ್ಧ ಹಾಗೂ ಸಿಂಧು. 1981(1) ಕೆಎಲ್‌ಜೆ 158.

67. ನಾಮಪತ್ರವನ್ನು ಕಾರ್ಯದರ್ಶಿಗೆ ಸಲ್ಲಿಸುವುದು ಬದ್ಧತೆಯಲ್ಲ, ಅದು ಒಂದು ಸೂಚನೆ. ಎಲ್ಲಾ ನೌಕರರಿಗೆ ನಾಮಪತ್ರ ಸ್ವೀಕರಿಸಲು ಅಧಿಕಾರ ಇರತಕ್ಕದ್ದು. ಅದರಲ್ಲೂ ಕಾರ್ಯ ಚುನಾಯಿತ ಪ್ರತಿನಿಧಿ ಇದ್ದು ನಾಮಪತ್ರ ಸ್ವೀಕರಿಸುವಾಗ ಹಾಜರಿರದಿದ್ದಲ್ಲಿ. 1963(1) ಮೈಸೂರು ಎಲ್‌ಜೆ 390.

68. ಚುನಾವಣಾಧಿಕಾರಿಗೆ ಚುನಾವಣೆ ಮುಂದೂಡುವ ಅಧಿಕಾರ ಇಲ್ಲ. ಎಐಆರ್ 1980 ಎಪಿ 98.

69. ಸಂಘದ ಕಾರ್ಯದರ್ಶಿಗೂ ಚುನಾವಣೆ ಮುಂದೂಡುವ ಅಧಿಕಾರ ಇಲ್ಲ. ಎಐಆರ್ 1979 ಕೆಎಆರ್ 4ಐಎಲ್‌ಆರ್1979(1) ಕೆಎಎನ್ 293.

70. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ನಿಬಂಧಕರು ಅಥವಾ ಸಹಾಯಕ ನಿಬಂಧಕರು ಚುನಾವಣೆ ಪ್ರಕ್ರಿಯೆಯಲ್ಲಿ ಮಧ್ಯ ಪ್ರವೇಶಿಸಲು ಅಧಿಕಾರ ಇಲ್ಲ. ಚುನಾವಣೆ ಮುಗಿಯುವ ತನಕ ಸಹಾಯಕ ನಿಬಂಧಕರು ಚುನಾವಣೆ ಮುಂದೂಡುವ ಅಧಿಕಾರ ಹೊಂದಿಲ್ಲ. 1984(2) ಎಐಎಲ್‌ಎಲ್‌ಆರ್ 10 ಪಂಜಾಬ್

71. ಸರ್ಕಾರ ಚುನಾವಣೆ ಮುಂದೂಡುವ ಅಧಿಕಾರ ಹೊಂದಿಲ್ಲ. ಎಐಆರ್ 1978 ಎನ್‌ಓಸಿ 18 ಎಂಪಿ.

72. ವಾರ್ಷಿಕ ಮಹಾಸಭೆ ಮುಂದೂಡಿ ಹೊರಡಿಸಿದ ಆದೇಶ ವಾರ್ಷಿಕ ಮಹಾಸಭೆಗೆ ಮಾತ್ರ ಇರತಕ್ಕದ್ದು. ಎಐಆರ್ 1978 ಕೆಎಎನ್ 37.

73. ಚುನಾವಣೆ ಸಮಯದಲ್ಲಿ ನಿಬಂಧಕರವರು ಒಬ್ಬ ಮೇಲ್ವಿಚಾರಕರನ್ನು ಹಾಜರಾಗಲು ಹೊರಡಿಸಿದ ಆದೇಶ (ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಯಲ್ಲಿ) ಅಸಿಂಧು, ನ್ಯಾಯಸಮ್ಮತವಲ್ಲ. ಎಐಆರ್ 1984 ಗುಜರಾತ್ 36.

74. ಅಧ್ಯಕ್ಷರ ಆಯ್ಕೆ ಮತ್ತೊಮ್ಮೆ ಮಾಡಬೇಕೆಂದು ನೀಡಿದ ಆದೇಶ ಚುನಾವಣೆಯಲ್ಲಿ ಮಧ್ಯಪ್ರವೇಶ ಮಾಡಿದಂತಾಗುತ್ತದೆ. 1983 ಕೆಎಲ್‌ಟಿ 1065.

75. ಉಚ್ಚ ನ್ಯಾಯಾಲಯವು ಚುನಾವಣಾಧಿಕಾರಿಗೆ, ಚುನಾವಣೆಗೆ ತಡೆಯಾಜ್ಞೆ ನೀಡಿದ್ದರೂ ಮಹಾಸಭೆ ಚುನಾವಣೆ ಮುಂದುವರೆಸಿ ಆಯ್ಕೆ ಮಾಡಲು ಬರುವುದಿಲ್ಲ. 1968 ಸಿಎಲ್‌ಜೆ 76.

76. ನಿಬಂಧಕರು ನೇಮಿಸಿದ ಚುನಾವಣಾಧಿಕಾರಿ ಆಡಳಿತ ಮಂಡಳಿ ಮತ್ತು ಸಂಘದ ಆಡಳಿತವನ್ನು ವಹಿಸಿಕೊಳ್ಳುತ್ತಾನೆ–ಚುನಾವಣೆ ಮುಗಿಯುವ ತನಕ–1968(2) ಎಂಎಲ್‌ಜೆ 320 ಡಿಬಿ.

77. ಒಬ್ಬ ವ್ಯಕ್ತಿ ತನ್ನ ಹೆಸರನ್ನು ಸದಸ್ಯರ ಪಟ್ಟಿಯಿಂದ ತೆಗೆದುಹಾಕುವ ತನಕ, ಸದಸ್ಯನ ಅರ್ಹತೆ ಹೊಂದಿರುತ್ತಾನೆ. 1964 ಎಂಎಲ್‌ಜೆ ಸಪ್ಲಿಮೆಂಟ್ 41.

78. ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರವನ್ನು 3 ತಿಂಗಳು ಸಂರಕ್ಷಿಸಬೇಕೆಂದಾಗ ಚುನಾವಣೆ ತಕರಾರು ಅರ್ಜಿಯಲ್ಲಿ ದಾಖಲೆಗಳನ್ನು ನಾಶ ಅಥವಾ ಸುಟ್ಟು ಹಾಕಿದ್ದರ ಬಗ್ಗೆ ಆಕ್ಷೇಪಿಸಲಾಗದು. 1966(1) ಎಂಎಲ್‌ಜೆ 636 ಡಿಬಿ.

79. ನಿಬಂಧಕರು ಚುನಾವಣೆಗೆ ಆದೇಶಿಸಿದ ಬಗ್ಗೆ ರಾಜ್ಯಪತ್ರದಲ್ಲಿ (ಗೆಜೆಟ್) ಪ್ರಕಟಿಸುವ ಅವಶ್ಯಕತೆ ಇಲ್ಲ 1964 ಎಂಎಲ್‌ಜೆ ಸಪ್ಲಿಮೆಂಟ್ 41.

80. ಚುನಾವಣಾಧಿಕಾರಿಗೆ ಸದಸ್ಯರನ್ನು ಸೇರಿಸಿಕೊಳ್ಳಲು ಮತ್ತು ಮತಪಟ್ಟಿಯಲ್ಲಿ ಹೆಸರು ಸೇರಿಸಲು ಅಧಿಕಾರ ಹೊಂದಿಲ್ಲ. ಅವರ ಕರ್ತವ್ಯ ಚುನಾವಣೆ ನಡೆಸುವುದು ಮಾತ್ರ–ಎಐಆರ್ 1984 ಕೆಎಎನ್ 127/

81. ಒಂದು ಸಹಕಾರ ಸಂಘ ಚುನಾವಣೆ ನಿಯಮ ವಿರುದ್ಧ [14(ಎ)] ಬೈಲಾ ರಚನೆ ಮಾಡಲು ಅಧಿಕಾರ ಇಲ್ಲ. 1981(1) ಕೆಎಲ್‌ಜೆ 88.

82. ಚುನಾವಣೆ ಅರ್ಜಿ ವಿಚಾರಣೆ ಮಾಡುವಾಗ ನಿಬಂಧಕರು, ಮಧ್ಯಸ್ಥದಾರರು ನ್ಯಾಯಾಲಯದ ತೀರ್ಪು ಆಧರಿಸಿ ತೀರ್ಪು ಕೊಡಬಹುದು. ಆದರೆ ಇದರಲ್ಲಿ ನ್ಯಾಯ, ಸಮಾನತೆ, ಸಮಾನ ಪರಿಜ್ಞಾನ (ಜಸ್ಟಿಸ್, ಈಕ್ವಿಟಿ ಮತ್ತು ಗುಡ್ ಕನ್ಸ್‌ನ) ದಿಂದ ನಿಷ್ಪಕ್ಷವಾಗಿ ತೀರ್ಮಾನಿಸತಕ್ಕದ್ದು. ಕಾನೂನು ಅಡಿ ನ್ಯಾಯಬದ್ಧವಾಗಿರಬೇಕು. 1975(2) ಕೆಎಲ್‌ಜೆ 235

83. ನಿಬಂಧಕರು ಚುನಾವಣೆ ತಕರಾರು ಅರ್ಜಿ ಸ್ವೀಕರಿಸಬಹುದು. ನಿಯಮ 31(4) ರಲ್ಲಿ ತೀರ್ಮಾನಿಸುವ ಅಧಿಕಾರ ಹೊಂದಿರುತ್ತಾರೆ. ಕಲಂ 70, 118 ಒಟ್ಟಾರೆ ಅರ್ಥ, ನಿಬಂಧಕರು ಮಧ್ಯಸ್ಥದಾರರು ಅಥವಾ ದಾವಾ ತೀರ್ಮಾನಿಸುವ ಯಾವುದೇ ಅಧಿಕಾರಿ, ಸಿವಿಲ್ ನ್ಯಾಯಾಲಯ ಹೊಂದಿದ ಎಲ್ಲಾ ಅಧಿಕಾರ ಹೊಂದಿರುತ್ತಾನೆ. ಇದಕ್ಕೆ ಪೂರಕವಾಗಿ ನ್ಯಾಯಾಲಯಗಳ ಹಿಂದಿನ (ಪ್ರಿಸಿಡೆಂಟ್) ತೀರ್ಪುಗಳು ಆ ಅಧಿಕಾರ ವ್ಯಾಪ್ತಿಗೆ ಬರುತ್ತದೆ. ಐಎಲ್‌ಆರ್ 1975(2) ಕೆಎಎನ್ 1682–19752) ಕೆಎಲ್‌ಜೆ 235.

84. ಚುನಾವಣೆಯನ್ನು ಯಾವ ರೀತಿ ಮಾಡಬೇಕು ಎಂದು ನಿಗಧಿಪಡಿಸಿದ್ದರೆ, ಆ ನಿಯಮದಂತೆ ಚುನಾವಣೆ ನಡೆಯಬೇಕು. 1974 ಸಿಎಲ್‌ಜೆ 93.

85. ಒಂದು ಸಹಕಾರ ಸಂಘದ ಸದಸ್ಯರು ಒಟ್ಟುಗೂಡಿ ಚುನಾವಣೆ ನಡೆಸತಕ್ಕದ್ದು. ನಿಯಮದಡಿ ಚುನಾವಣೆ ನಡೆಯಬೇಕೆಂದು ಸೂಚಿಸಿದ್ದರೂ ಬೈಲಾ ನಿಯಮಗಳನ್ನು ಅನುಸರಿಸಿ ಚುನಾವಣೆ ನಡೆಯಬೇಕೆಂದು ನಿಗಧಿಪಡಿಸಬಹುದು. ಎಐಆರ್ 1968 ಪಂಜಾಬ್ 178.

86. ಮತಪಟ್ಟಿ ನ್ಯೂನತೆಗಳ ಬಗ್ಗೆ ಚುನಾವಣಾಧಿಕಾರಿ ಮುಂದೆ ಅವಧಿಗೆ ಅನುಗುಣವಾಗಿ ಸಲ್ಲಿಸತಕ್ಕದ್ದು. ನಿಬಂಧಕರು ಆರೋಪದ ಆಧಾರದ ಮೇಲೆ ಚುನಾವಣೆಯನ್ನು ಅನಿರ್ದಿಷ್ಟ ಕಾಲ ಮುಂದೂಡಲು ಅಧಿಕಾರ ಇಲ್ಲ. 1977 ಪಿಎಲ್‌ಜೆ 12.

87. ಆಡಳಿತ ಮಂಡಳಿ ತಯಾರಿಸಿದ ಸದಸ್ಯರ ಪಟ್ಟಿಯನ್ನು ಚುನಾವಣೆಯಲ್ಲಿ ಮತದಾರರ ಪಟ್ಟಿ ಎಂದು ಭಾವಿಸಲಾಗದು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕರು ಹಾಲಿ ಇರುವ

ಸಂಘಳ ಸ್ಪಷ್ಟ ಅರ್ಹ ಸದಸ್ಯರ ಸಂಘಳ ಮತ ಚಲಾಯಿಸುವ ಹಕ್ಕು ಹೊಂದಿರುವ ಸಂಘಗಳು, ಆಡಳಿತ ಮಂಡಳಿಯ ಸದಸ್ಯರ ಆಯ್ಕೆಯಲ್ಲಿ ಭಾಗವಹಿಸಲು ಅರ್ಹರಿರಬೇಕು. ಮತ್ತು ಅಂತಹ ಸದಸ್ಯರು ಮತ ಚಲಾಯಿಸುವ ಹಕ್ಕು ಪಡೆದಿರಬೇಕು. ಚುನಾವಣೆ ತಕರಾರು ಮೇಲ್ಮನವಿ ಸಲ್ಲಿಸಿದ್ದರೆ ತೀರ್ಪಿಗಾಗಿ ಚುನಾವಣಾಧಿಕಾರಿ ಕಾಯಬೇಕು. ನಾಮಪತ್ರ ಒಪ್ಪಿದ ಬಗ್ಗೆ/ತಿರಸ್ಕರಿಸಿದ ಬಗ್ಗೆ ಆಗಿಂದಾಗ್ಗೆ ತೀರ್ಮಾನಿಸಬೇಕು. ಉಪನಿಬಂಧಕರು ದಾವಾ ಅರ್ಜಿ ವಿಲೇವಾರಿ ಬಗ್ಗೆ ತಕರಾರು ದಾಖಲಿಸದೆ ರಿಟ್ ದಾಖಲಿಸುವಾಗ ಅವರಿಗೆ ಅನುಕೂಲ ಆದೇಶ ಬಂದಿಲ್ಲವೆಂದು ಉಪನಿಬಂಧಕರು ತೀರ್ಮಾನಿಸುವ ಅಧಿಕಾರದ ಬಗ್ಗೆ ರಿಟ್ ದಾಖಲಿಸುವ ಅವಕಾಶ ಇರತಕ್ಕದಲ್ಲ. ಐಎಲ್ಆರ್ 1968(1) ಪಂಜಾಬ್ 159.

88. ಮತಪಟ್ಟಿ ಬಗ್ಗೆ ತಕರಾರನ್ನು ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು ಎತ್ತಬೇಕು. ನಂತರವಲ್ಲ. 1978 ಪಿಎಲ್‌ಜೆ 120.

89. ಒಂದು ಸಹಕಾರ ಸಂಘದ ಪರವಾಗಿ ಮತ ಚಲಾಯಿಸಲು ಆ ಸಂಘದ ಅಂತಹ ವ್ಯಕ್ತಿಯನ್ನು ನೇಮಿಸಿಕೊಳ್ಳಬೇಕು. 1968(2) ಮೈಸೂರು ಎಲ್‌ಜೆ 528.

90. ಚುನಾವಣಾಧಿಕಾರಿ ನೇಮಿಸಿದ ನಂತರ ನಿಬಂಧಕರಿಗೆ ಚುನಾವಣೆ ಮುಂದೂಡಲು ಅಧಿಕಾರ ಇಲ್ಲ. ಎಐಆರ್ 1989 ಆರ್‌ಎಜೆ 32, 1987(2) ಆರ್‌ಎಲ್‌ಆರ್ 471.

91. ಚುನಾವಣೆಯಲ್ಲಿ ಭಾಗವಹಿಸಿದ್ದ ಅಭ್ಯರ್ಥಿ ಅಧಿಕಾರ ಗ್ರಹಣ ಹಗುರವಾಗಿ ಪರಿಗಣಿಸತಕ್ಕದ್ದಲ್ಲ. ಅದರಲ್ಲೂ ಪೂರ್ವಭಾವಿ ಹಂತದ ಆದೇಶದ ಮುಖಾಂತರ, ಎಂಸಿಟಿಡಿ–ಸಿಎಲ್‌ಜೆ 1965 ಪೇಜ್ 15.

92. ಮಧ್ಯಸ್ಥದಾರರು ಹೊರಡಿಸಿದ ತಡೆಯಾಜ್ಞೆಯಲ್ಲಿ ಜಯಶಾಲಿಯಾದ ವ್ಯಕ್ತಿಯ ಅವಧಿ ಅಧಿಕಾರ ಗ್ರಹಣ ತಪ್ಪಿಸುವುದು, ಆ ವ್ಯಕ್ತಿಯ ಅಧಿಕಾರ ಕಿತ್ತುಕೊಂಡಂತೆ. ಚುನಾವಣೆ ರದ್ದುಗೊಳಿಸುವ ತನಕ ಆಯ್ಕೆಯಾದ ವ್ಯಕ್ತಿ ಅಧಿಕಾರ ಗ್ರಹಣ ಮಾಡುವ ಅಧಿಕಾರ ಹೊಂದಿರುತ್ತಾರೆ. ಮೈಸೂರು ಸಿಎಟಿಡಿ ಆರ್‌ಪಿ 5/1966.

93. ಶ್ರೇಷ್ಟ ನ್ಯಾಯಾಲಯ ಒಂದಕ್ಕಿಂತ ಹೆಚ್ಚು ಪ್ರಕರಣದಲ್ಲಿ ಸ್ವಾಭಾವಿಕ ನ್ಯಾಯ ತತ್ವದಡಿ ಆಯ್ಕೆಯಾದ ವ್ಯಕ್ತಿ ಅಧಿಕಾರವನ್ನು ಹಗುರವಾಗಿ ಪರಿಗಣಿಸಿ ಅಧಿಕಾರ ಗ್ರಹಣದಲ್ಲಿ ಮಧ್ಯಪ್ರವೇಶ ಮಾಡಕೂಡದು. ಸ್ವಲ್ಪ ಸಮಯದ ಅವಧಿಗಾದರೂ ಜಯಶೀಲನಾದ ವ್ಯಕ್ತಿ ಅಧಿಕಾರ ಹೊಂದದಂತೆ ಸೂಚಿಸತಕ್ಕದ್ದಲ್ಲ. ಇಂತಹ ತೀರ್ಪುಗಳನ್ನು ಸ್ವಾಭಾವಿಕ ನ್ಯಾಯದಡಿ ತಡೆಗಟ್ಟಬೇಕು. ಎಂಸಿಎಟಿಡಿ ವಾಲ್ಯೂಮ್ 1 ಪೇಜ್ 41.

94. ಸಾಮಾನ್ಯವಾಗಿ ದಾವಾ ದಾಖಲಿಸಿ ಮಧ್ಯಂತರ ಆದೇಶಕ್ಕೆ ಕೇಳಿದ ಪರಿಹಾರ ದಾವಾದಲ್ಲಿ ಕೇಳಿರುವ ಪರಿಹಾರ ಒಂದೆ ಆದರೆ, ಈ ಪ್ರಸಂಗದಲ್ಲಿ ಮಧ್ಯಂತರ ಆದೇಶದಲ್ಲಿ ಪರಿಹಾರ ಕೊಡತಕ್ಕದಲ್ಲ. 1964 ಸಿಟಿಡಿ ಆನೆಗುಂದಿ ಪುಸ್ತಕದ ಪುಟ 444.

95. ಮಧ್ಯಂತರ ಆದೇಶ ಪ್ರಾಧಿಕಾರದ ಅಧಿಕಾರ. ಆದರೆ ಅಂತಹ ಆದೇಶ ಒಟ್ಟು ಕಕ್ಷಿದಾರನ ಅಧಿಕಾರ

ಕಿತ್ತುಕೊಳ್ಳತಕ್ಕದಲ್ಲ. ಆದರೆ ಅಂತಹ ಆದೇಶದಿಂದ ನ್ಯಾಯ ಸಿಗುತ್ತದೆ ಎನ್ನುವುದಾದರೆ ಮಾತ್ರ ಆದೇಶಿಸಬೇಕು. 16(1) ಎಂಸಿಟಿ 68–69.

96. ಚುನಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರಣಕ್ಕೂ ದಾವಾ ಪ್ರಕರಣ ಸ್ವೀಕರಿಸಿದ ನಂತರ ಆಂತರಿಕ ಆಜ್ಞೆಯ ಮುಖಾಂತರ, ಚುನಾವಣೆಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. ತಡೆಯಾಜ್ಞೆ ನೀಡುವುದು ಸೂಕ್ತವಲ್ಲ. ಇದಕ್ಕೆ ಪೂರಕವಾಗಿ ಎಐಆರ್ 1954 ಎಸ್‌ಸಿ 210 ಮತ್ತು ಎಐಆರ್ 1967 ಎಸ್‌ಸಿ 249 ತೀರ್ಪುಗಳಲ್ಲಿ ಸೂಚಿಸಿದ ನೀತಿ ನಿಯಮಗಳನ್ನು ಪಾಲಿಸದೇ ಮಧ್ಯಂತರ ಆದೇಶಗಳ ಮುಖಾಂತರ ಚುನಾಯಿತ ಪ್ರತಿನಿಧಿಗಳ ಪದಗ್ರಹಣಕ್ಕೆ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. 1972 ಎಂಸಿಎಟಿಡಿ ಅಪೀಲ್ 103/1971.

97. ಚುನಾಯಿತ ನಿರ್ದೇಶಕರು ಆಯ್ಕೆಯಾದ ಸಹಕಾರ ಸಂಘದ ನಿರ್ದೇಶಕರಾಗಿ ಪದಗ್ರಹಣ ಮಾಡಲು ಯಾವುದೇ ರೀತಿಯ ಮಧ್ಯಪ್ರವೇಶ ಮಾಡತಕ್ಕದ್ದಲ್ಲ ಎಂಬ ತೀರ್ಪು ಎಐಆರ್ 1954 ಎಸ್‌ಸಿ 710ರಲ್ಲಿ ನಿರ್ದೇಶನವಿದ್ದರೂ, ಅಂತಹ ತಡೆಯಾಜ್ಞೆಯನ್ನು ಉಪ ನಿಬಂಧಕರು ಭಾರತೀಯ ಶ್ರೇಷ್ಠ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ಆದೇಶಿಸಿದ್ದರೆ, ಅಂತಹ ನಿರ್ದೇಶನಕ್ಕೆ ಪುನರ್ ವಿಮರ್ಶೆ ಅರ್ಜಿಯನ್ನು ದಾಖಲಿಸಿ ಪರಿಹಾರ ಪಡೆಯಬಹುದು. ಮೇಲ್ಕಂಡ ತೀರ್ಪಿನಲ್ಲಿ ಆಯ್ಕೆಯಾದ ನಿರ್ದೇಶಕರು ತಮ್ಮ ಸ್ಥಾನವನ್ನು ಅಲಂಕರಿಸಲು ಅಥವಾ ಪದಗ್ರಹಣ ಮಾಡಲು ಉಪ ನಿಬಂಧಕರಾಗಲೀ ಸಹಾಯಕ ನಿಬಂಧಕರಾಗಲೀ ಮಧ್ಯಂತರ ಆದೇಶ ನೀಡತಕ್ಕದ್ದಲ್ಲ. 1972 ಎಂಸಿಎಟಿಡಿ ರಿವಿಷನ್ ಪಿಟಿಷನ್ 34/1972.

## ಚುನಾವಣಾಧಿಕಾರಿಗೆ ಸಂಬಂಧಪಟ್ಟ ಹಲವು ತೀರ್ಪುಗಳು :

ಮೇಲ್ಕಂಡ ಪಟ್ಟಿಯನ್ನು ಸಹ ಗಮನದಲ್ಲಿರಿಸಿಕೊಳ್ಳಬೇಕು.

1) ಚುನಾವಣಾಧಿಕಾರಿ ನಾಮಪತ್ರಗಳ ಪರಿಶೀಲನೆ ಸಮಯದಲ್ಲಿ ತಕರಾರು ಪರಿಶೀಲಿಸಿ ತೀರ್ಮಾನಿಸುವ ಅಧಿಕಾರ ಹೊಂದಿರುತ್ತಾರೆ. 1982(2) ಎಪಿಎಲ್‌ಜೆ 220.

2) ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ ಯಾವುದೇ ಕಾರಣಕ್ಕೂ ಅದನ್ನು ನಿಲ್ಲಿಸತಕ್ಕದಲ್ಲ. 1982(2) ಎಸ್‌ಸಿಸಿ 218.

3) ಮತ ಚಲಾಯಿಸುವ ಒಬ್ಬ ಸಹಕಾರ ಸಂಘದ ಪ್ರತಿನಿಧಿ, ಆ ಸಂಘದ ಸದಸ್ಯನೇ ಅಲ್ಲವೆ ಎಂದು ಕಲಂ 70ರಡ್ತಿಗಯಹುಜಕಕ56ಎ4ದ್ಗಯ67ತಡಪ್ರಶ್ನಿಸತಕ್ಕದ್ದು. 1968(2) ಮೈಸೂರು ಎಲ್‌ಜೆ 393 ಡಿಬಿ.

4) ಸುಸ್ತಿದಾರರ ಪಟ್ಟಿಯಲ್ಲಿ ಒಬ್ಬ ವ್ಯಕ್ತಿಯ ಹೆಸರು ಸೇರ್ಪಡೆ ಪ್ರಶ್ನಿಸಲು ದಾವಾ ದಾಖಲಿಸಬೇಕು. 1984(1) ಕೆಎಲ್‌ಟಿ ಎಸ್‌ಎನ್ 43.

5) ಒಂದು ಸಹಕಾರ ಸಂಘದ ಪ್ರತಿನಿಧಿ ಅನರ್ಹತೆಯನ್ನು ಪರಿಶೀಲಿಸತಕ್ಕದಲ್ಲ. ಪ್ರತಿನಿಧಿಸುವ ಒಂದು ಸಹಕಾರ ಸಂಘದ ಅನರ್ಹತೆ ಪರಿಗಣಿಸಬೇಕು. 1981 ಪಿಎಲ್‌ಜೆ 398.

6) ಸಮಿತಿಯ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಸದಸ್ಯರನ್ನು ಆಯ್ಕೆಯಾಗಿದ್ದಾರೆಂದು ಆಗಿಂದಾಗ್ಗೆ ಘೋಷಿಸತಕ್ಕದ್ದು. 1979 ಪಿಎಲ್‌ಆರ್ 45 ಎಸ್‌ಎನ್.

7) ಚುನಾವಣೆ ಸಂಬಂಧ ಚುನಾವಣಾಧಿಕಾರಿ ಆಡಳಿತ ಮಂಡಳಿ ಮತ್ತು ಚುನಾವಣೆಯ ಎಲ್ಲಾ ಅಧಿಕಾರ ಹೊಂದಿರುತ್ತಾನೆ. ಎಐಆರ್ 1984 ಕೆಎಆರ್ 12;1983(2) ಕೆಎಲ್‌ಜೆ 439.

8) ಚುನಾವಣಾಧಿಕಾರಿ ಚುನಾವಣೆಗೆ ನೇಮಿಸಲ್ಪಟ್ಟ ಅಧಿಕಾರಿ ಗುರುತಿನ ಚೀಟಿ ತೋರಿಸಿದ ನಂತರ ಮತಪತ್ರ ಕೊಡತಕ್ಕದ್ದು. ಐಎಲ್‌ಆರ್ 1968 ಎಂವೈಎಸ್ 645–1968 ಎಂವೈಎಸ್ ಎಲ್‌ಜೆ 393 ಡಿಬಿ.

9) ಚುನಾವಣಾಧಿಕಾರಿ ಒಂದು ಸಂಘದ ಆಡಳಿತ ಮಂಡಳಿ ಮತ್ತು ಮಹಾಸಭೆ ಅಧಿಕಾರ ಹೊಂದಿರುತ್ತಾನೆ. ಎಲ್ಲಿ ಚುನಾವಣೆ ನ್ಯಾಯಾಲದ ಆದೇಶದನ್ವಯ ನಿಂತು ಹೋಗಿರುತ್ತದೆಯೋ ಆ ತಡೆಯಾಜ್ಞೆ ತೆರವಾದಾಗ ಎಲ್ಲಿ ಚುನಾವಣೆ ನಿಂತು ಹೋಗಿತ್ತೋ ಅಲ್ಲಿಂದ ಪುನರಾರಂಭಿಸಬೇಕು. ಎಲ್ಲಿ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿಲ್ಲವೋ ಅಂತಹ ಪ್ರಸಂಗದಲ್ಲಿ ಹೊಸ ಚುನಾವಣಾ ವೇಳಾಪಟ್ಟಿ ಪ್ರಕಟಿಸತಕ್ಕದ್ದು. ಐಎಲ್‌ಆರ್ 1986(3) ಕೆಎಆರ್ 2270.

10) ನಿಯಮ 14(2)ರ ಅನ್ವಯ ನೇಮಿಸಲ್ಪಟ್ಟ ಚುನಾವಣಾಧಿಕಾರಿ ಚುನಾವಣೆ ಫಲಿತಾಂಶ ಪ್ರಕಟಿಸುವ ಅಧಿಕಾರ ಇದೆ. 1989(1) ಕೆಎಲ್‌ಜೆ 17.

11) ಸ್ಪರ್ಧಿಸಲು ಒಪ್ಪಿಗೆ ಕೊಟ್ಟಾಗ ನ್ಯೂನ್ಯತೆ ಆಧಾರದ ಮೇಲೆ ನಾಮಪತ್ರ ತಿರಸ್ಕರಿಸಿದರೆ ನ್ಯಾಯಕ್ಕೆ ವಿರುದ್ಧ. 1989(1) ಕೆಎಲ್‌ಜೆ 130.

12) ಚುನಾವಣಾಧಿಕಾರಿ ಸಂಘದ ಕಾರ್ಯದರ್ಶಿಗೆ ನಾಮಪತ್ರ ಸ್ವೀಕರಿಸುವ ಅಧಿಕಾರ ಕೊಟ್ಟಿದ್ದರೂ ತಾನೇ ನಾಮಪತ್ರ ಸ್ವೀಕರಿಸುವ ಅಧಿಕಾರ ಕಳೆದುಕೊಳ್ಳುವುದಿಲ್ಲ. ಐಎಲ್‌ಆರ್ 1985(4) ಕೆಎಎನ್ 3685.

13) ನಿಯಮ ಪಾಲಿಸುವುದು ಕಡ್ಡಾಯ, ವಾರ್ಷಿಕ ಮಹಾಸಭೆ ಕಾರಣಾಂತರದಿಂದ ನಡೆಸಲು ಸಾಧ್ಯವಾಗದೆ ಹೋದಾಗ ಹೊಸ ಚುನಾವಣೆ ನಿಗಧಿಪಡಿಸಿದರೆ ಹೊಸ ಚುನಾವಣಾ ವೇಳಾಪಟ್ಟಿ ಹೊರಡಿಸುವ ಅಗತ್ಯ ಇಲ್ಲ. ಎಲ್ಲಿ ನಿಂತಿತ್ತೋ ಅಲ್ಲಿಂದಲೇ ಪ್ರಾರಂಭಿಸಬಹುದು. ಐಎಲ್‌ಆರ್ 1979 (1) ಕೆಎಆರ್ ಎಸ್‌ಎನ್ 57;1979(1) ಕೆಎಲ್‌ಜೆ 371.

14) ನಾಮಪತ್ರಗಳನ್ನು ಕಾರ್ಯದರ್ಶಿಗೆ ಸಲ್ಲಿಸುವುದು ಬದ್ಧತೆ ಅಲ್ಲ. ಅದು ಸೂಚನೆ. ಪ್ರತಿಯೊಬ್ಬ ನೌಕರರಿಗೆ ನಾಮಪತ್ರ ಸ್ವೀಕರಿಸಲು ಅಧಿಕಾರ ಇರತಕ್ಕದ್ದು. ಅದರಲ್ಲೂ ಕಾರ್ಯದರ್ಶಿಯು ಚುನಾಯಿತ ಪ್ರತಿನಿಧಿ ಇದ್ದು ನಾಮಪತ್ರ ಸ್ವೀಕರಿಸುವ ಸಮಯದಲ್ಲಿ ಹಾಜರಿರದಿದ್ದರೆ. 1963(1) ಎಂವೈಎಸ್ ಎಲ್‌ಜೆ 390.

15) ನಿಬಂಧಕರು ಸೂಚಿಸುವ ಚುನಾವಣಾಧಿಕಾರಿ ಸಂಘದ ಆಡಳಿತ ಮಂಡಳಿ ಆಡಳಿತ ವಹಿಸಿಕೊಳ್ಳುತ್ತಾನೆ. ಚುನಾವಣೆ ಮುಗಿಯುವ ತನಕ–1968(2) ಎಂಎಲ್‌ಜೆ 320 ಡಿಬಿ.

16) ಚುನಾವಣಾಧಿಕಾರಿ ಸದಸ್ಯರನ್ನು ಸೇರಿಸಿಕೊಳ್ಳಲು ಮತಪಟ್ಟಿಯಲ್ಲಿ ಹೆಸರು ಸೇರಿಸಲು ಅಧಿಕಾರ ಇಲ್ಲ. ಅವರ ಕರ್ತವ್ಯ ಚುನಾವಣೆ ನಡೆಸುವುದು ಮಾತ್ರ. ಎಐಆರ್ 1984 ಕೆಎಎನ್ 127.

17) ಮತ ಯಾರಿಗೆ ಚಲಾಯಿಸಲಾಗಿದೆ ಎಂದು ಗೊತ್ತಾದರೂ ತಿಳಿಯಬಹುದಾಗಿದ್ದರೂ ಮತ ತಿರಸ್ಕರಿಸಲಾಗದು. ಎಐಆರ್ 1983 ಎಸ್‌ಸಿ 1293.

18) ಮತ ಪತ್ರಕ್ಕೆ ಚುನಾವಣೆಗೆ ನೇಮಿಸುವ ಅಧಿಕಾರಿ ಸಹಿ ಮಾಡದೆ ಇದ್ದಾಗ–ಚುನಾವಣೆಯ ಮತ ಪತ್ರಕ್ಕೆ ಅಧಿಕಾರಿ ಸಹಿ ಅವಶ್ಯಕ. ಅದರಿಂದಲೇ ಕಾನೂನನ್ನು ಪಾಲಿಸತಕ್ಕದ್ದು. ಎಐಆರ್ 1983 ಎಸ್‌ಸಿ 1311.

19) ಮಹಾಸಭೆ ಪೂರ್ವಕ್ಕೆ 30 ದಿನಕ್ಕೆ ಸದಸ್ಯರಾಗಿ ಸೇರಿದವರು ಮಾತ್ರ ಮತ ಪಟ್ಟಿಯಲ್ಲಿ ಸೇರುತ್ತಾರೆ. ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರನ್ನು ಮತ ಪಟ್ಟಿಯಲ್ಲಿ ಸೇರಿಸತಕ್ಕದ್ದು. 30 ದಿನಗಳಲ್ಲಿ ಸೇರಿಸಲ್ಪಟ್ಟ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ. ಎಐಆರ್ 1984 ಕೆಇಆರ್ 78.

20) ನೋಂದಾಯಿತ ಸಹಕಾರ ಸಂಘ, ಮಹಾಸಭೆಯು ನಡೆಯುವ 30 ದಿನಗಳ ಪೂರ್ವದಲ್ಲಿ ಸದಸ್ಯರನ್ನು ಸೇರಿಸುವುದಾಗಲಿ, ಷೇರು ವರ್ಗಾವಣೆ ಮಾಡುವುದಾಗಲಿ ಮಾಡತಕ್ಕದಲ್ಲ. ಈ ರೀತಿ ಸೇರಿಸಿಕೊಂಡಾಗ ವರ್ಗಾವಣೆಗೊಂಡರೂ ಅಂತಹ ಸದಸ್ಯರಿಗೆ ಮತ ಸಲಾಯಿಸುವ ಹಕ್ಕು ಇಲ್ಲ. ಎಐಆರ್ 1984 ಕೆಇಆರ್ 24.

21) ಸಹಕಾರ ಸಂಘಗಳ ಬೈಲಾದಡಿ ಸದಸ್ಯತ್ವ ಅರ್ಹತೆ ನಿಗಧಿಪಡಿಸಬಹುದು. ಅಂತಹ ಅರ್ಹತೆ ಗಳಿಸಿದ ನಂತರವೇ ಸದಸ್ಯರು ತಮ್ಮ ಹಕ್ಕುಗಳಿಸಲು ಅರ್ಹತೆ ಹೊಂದಿರುತ್ತಾರೆ. ಪ್ರತಿಯೊಬ್ಬ ಸದಸ್ಯನಿಗೆ ಒಂದು ಮತ ಎಂದು ಮತ ಚಲಾಯಿಸುವ ಹಕ್ಕು ಹೊಂದಿರುತ್ತಾನೆ. ಮತ್ತು ಚಲಾಯಿಸುವ ಹಕ್ಕು ತಾನು ವ್ಯವಹರಿಸಿದ ಸಾಲ ಪ್ರಮಾಣ, ಠೇವಣಿ, ಹಿಂದಿನ ವರ್ಷದಲ್ಲಿ ನಿಗಧಿಪಡಿಸಿದಂತೆ ಇರತಕ್ಕದ್ದು. 1981 ಪಿಎಲ್‌ಜೆ 108 (ಪಂಜಾಬ್).

22) ಹೊಸದಾಗಿ ಸೇರ್ಪಡೆಯಾದ ಸದಸ್ಯರು ಮತ ಚಲಾಯಿಸುವ ಹಕ್ಕಿನಿಂದ ಪರಿಚಿತರಲ್ಲ. ಸೇರಿಸಿಕೊಂಡಿದ್ದ ಸದಸ್ಯರು ಮತ ಚಲಾಯಿಸಿದಾಗ ಅಲ್ಪ ಮತದಿಂದ ಬಹುಮತ ಪಡೆಯಲು ಸೇರಿಸಲಾಗಿದೆ ಎಂಬ ತಕರಾರು ಉದ್ಭವವಾಗುತ್ತದೆ ಎಂಬ ಕಾರಣದ ಆಧಾರದಲ್ಲಿ ಹೊಸ ಸದಸ್ಯರು ಹಳೆಯ ಸದಸ್ಯರಂತೆಯೇ ಸೇರಿಸಲ್ಪಟ್ಟ ಸದಸ್ಯರೆಂದು ತಿಳಿಯತಕ್ಕದ್ದು. 1984(2) ಎಐಎಲ್ ಎಲ್‌ಆರ್ 10.

23) ಮತಪಟ್ಟಿ ನ್ಯೂನತೆಗಳು ಚುನಾವಣಾಧಿಕಾರಿ ಮುಂದೆ ಅವಧಿಗನುಗುಣವಾಗಿ ಸಲ್ಲಿಸತಕ್ಕದ್ದು. 1977 ಪಿಎಲ್‌ಜೆ 12.

24) ಚುನಾವಣೆ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದರೆ ತೀರ್ಪಿಗಾಗಿ ಚುನಾವಣಾಧಿಕಾರಿ ಕಾಯಬೇಕು. ನಾಮಪತ್ರ ಒಪ್ಪಿಗೆ/ತಿರಸ್ಕರಣೆ ಬಗ್ಗೆ ತುರ್ತಾಗಿ ತೀರ್ಮಾನಿಸಬೇಕು. ಐಎಲ್‌ಆರ್ 1968(1) ಪಂಜಾಬ್ 159.

25) ಒಂದು ಸಹಕಾರ ಸಂಘದ ಪರವಾಗಿ ಮತ ಚಲಾಯಿಸಲು ಸಂಘವು ಅಂತಹ ವ್ಯಕ್ತಿಯನ್ನು ನೇಮಿಸಬೇಕು. 1968(2) ಎಂಎಲ್‌ಜೆ 528.

## ಆಡಳಿತ ಮಂಡಳಿಯನ್ನು ರದ್ದುಪಡಿಸುವುದು ಮತ್ತು ಆಡಳಿತಾಧಿಕಾರಿ ನೇಮಕ :

1. ಸಹಕಾರ ಸಂಘಗಳ ನಿಬಂಧಕರು ಪ್ರತಿಯೊಂದು ಸಹಕಾರ ಸಂಘದ ಆಡಳಿತ ಮಂಡಳಿಯನ್ನು ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ರಚನೆ ಮಾಡಲು ಕ್ರಮ ಕೈಗೊಳ್ಳುವುದು ಒಂದು ಪ್ರಾಥಮಿಕ ಕರ್ತವ್ಯ. ಕಾನೂನುಬದ್ಧವಾಗಿ ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವುದು ಜವಾಬ್ದಾರಿ ಮತ್ತು ಕರ್ತವ್ಯ. ಚುನಾವಣಾಧಿಕಾರಿಯನ್ನು ನೇಮಕ ಮಾಡಿದರೆ ತನ್ನ ಕೆಲಸ ಮುಗಿಯಿತೆಂದು ತಿಳಿಯತಕ್ಕದ್ದು. ಚುನಾವಣಾಧಿಕಾರಿ ನೇಮಕ ಮಾಡಿದ ನಂತರ ಚುನಾವಣಾ ವೇಳಾಪಟ್ಟಿ ಪ್ರಕಟಿಸಲು ಆಡಳಿತಾಧಿಕಾರಿ ಅಥವಾ ಆಡಳಿತ ಮಂಡಳಿ ದಿನಾಂಕ, ವೇಳೆ ಮತ್ತು ಸ್ಥಳವನ್ನು ನಿಗಧಿಪಡಿಸಬೇಕು, ಯಾವುದೇ ಒಂದು ಸಂಘ ಇಂತಹ ಕ್ರಮಗಳನ್ನು ಜರುಗಿಸದಿದ್ದರೆ ನಿಬಂಧಕರು ಮಧ್ಯಪ್ರವೇಶ ಮಾಡಿ ದಿನಾಂಕ ನಿಗಧಿಪಡಿಸಲು ಚುನಾವಣಾಧಿಕಾರಿ ಚುನಾವಣಾ ವೇಳಾಪಟ್ಟಿಯನ್ನು ನೀಡಿ, ಚುನಾವಣೆಯನ್ನು ಸಮರ್ಪಕವಾಗಿ ಮುಕ್ತಾಯಗೊಳಿಸಲು ಕ್ರಮ ಜರುಗಿಸಬೇಕು. 2008(4) ಕೆಸಿಸಿಆರ್ 2437. 2009(3) ಕೆಎಲ್‌ಜೆ 380/ಎಐಆರ್ 2009 (ಎನ್‌ಒಸಿ) 114(ಕೆಎಆರ್)

2. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸುವಾಗ ಅದನ್ನು ಒಂದು ಸಾಮಾನ್ಯ ಪ್ರಕ್ರಿಯೆಯಂತೆ, ಕಛೇರಿಯಲ್ಲಿಯ ನಿರ್ವಹಣೆಯಂತೆ ದಿನನಿತ್ಯದಲ್ಲಿ ನಡೆಸುವ ವ್ಯವಹಾರದಂತೆ ನಡೆಸತಕ್ಕದ್ದಲ್ಲ. ಆಡಳಿತ ಮಂಡಳಿಯನ್ನು ರದ್ದುಪಡಿಸುವುದು ಪೂರ್ಣ ಸ್ವತಂತ್ರತೆ ಆಗುವುದಿಲ್ಲ. ಮತ್ತು ಅದಕ್ಕೆ ಸಕಾರಣಗಳಿಲ್ಲದಿದ್ದರೆ ಆಡಳಿತ ಮಂಡಳಿಯನ್ನು ರದ್ದುಪಡಿಸತಕ್ಕದ್ದಲ್ಲ. ಅದಕ್ಕೆ ಪೂರಕವಾಗಿ ಆಡಳಿತ ಮಂಡಳಿಯು ಸತತವಾಗಿ ತನ್ನ ಕಾರ್ಯನಿರ್ವಹಣೆಯಲ್ಲಿ ತಪ್ಪು ಮಾಡುತ್ತಿದೆ, ಅಂದರೆ ನಿರ್ದೇಶನಗಳು, ಸೂಚನೆಗಳನ್ನು ಕೊಟ್ಟಿದ್ದರೂ ಅವುಗಳನ್ನು ಪಾಲಿಸದೇ ತಪ್ಪುಗಳನ್ನು ಮಾಡುತ್ತಲೇ ಹೋದಾಗ, ಅಂತಹ ಆಡಳಿತ ಮಂಡಳಿಯನ್ನು ರದ್ದುಪಡಿಸಬೇಕು. ಮೊದಲನೇ ಸಾರಿ ತಪ್ಪುಗಳ ಸೂಚನೆಗಳನ್ನು ಕೊಟ್ಟು ಆಡಳಿತ ಮಂಡಳಿಯನ್ನು ರದ್ದುಪಡಿಸತಕ್ಕದ್ದಲ್ಲ. ಆಡಳಿತ ಮಂಡಳಿಯನ್ನು ರದ್ದುಪಡಿಸುವುದು ಕೊನೆಯ ಅಸ್ತ್ರವಾಗಿರಬೇಕು. ಈ ಅಸ್ತ್ರವನ್ನು ಅತಿ ವಿರಳವಾಗಿ ಪ್ರಯೋಗಿಸಬೇಕು. ಅಂದರೆ ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ, ನಿಬಂಧಕರು ಪೂರ್ಣ ಪ್ರಮಾಣದ ನಂಬಿಕೆಯ ತೀರ್ಮಾನಕ್ಕೆ ಬಂದ ನಂತರವೇ ಸಮಿತಿಯನ್ನು ರದ್ದುಪಡಿಸಬೇಕು. ಈ ಸಂಘದ ಆಡಳಿತ ಮಂಡಳಿಯನ್ನು ಮುಂದುವರಿಸಿಕೊಂಡು ಹೋದರೆ ಸಂಘದ ಧ್ಯೇಯೋದ್ದೇಶಗಳನ್ನು, ಸೇವೆಗಳನ್ನು ಕೊಡಲಾಗುವುದಿಲ್ಲವೆಂಬುದನ್ನು ಮನದಟ್ಟಾಗಬೇಕು. ಈ ರೀತಿಯ ಸಮರ್ಪಕ ಕಾರಣಗಳಿಂದಲೇ ಆಡಳಿತ ಮಂಡಳಿಯನ್ನು ರದ್ದುಪಡಿಸಬೇಕು. 2008(2) ಕೆಸಿಸಿಆರ್ 1203/2009(1) ಕೆಎಲ್‌ಜೆ 201

3. ಒಂದು ಮಾರಾಟ ಸಹಕಾರ ಸಂಘದ ಪ್ರತಿನಿಧಿಯಾಗಿ ಮಾರುಕಟ್ಟೆ ಸಮಿತಿಯ ನಿರ್ದೇಶಕನಾಗಿದ್ದರೆ ಅಂತಹ ಮಾರಾಟ ಸಹಕಾರ ಸಂಘದ ಪ್ರತಿನಿಧಿ, ಆ ಸಂಘದ ನಿರ್ದೇಶಕರಲ್ಲಿ ಒಬ್ಬರಾಗಿ ಮುಂದುವರಿಯದಿದ್ದರೆ, ಅಂತಹ ಸಂದರ್ಭದಲ್ಲಿ ಮಾರುಕಟ್ಟೆ ಸದಸ್ಯತ್ವವನ್ನೂ ಕಳೆದುಕೊಳ್ಳುತ್ತಾರೆ. 2001(1) ಕೆಸಿಸಿಆರ್ ಎಸ್‌ಎನ್ 18/ಐಎಲ್‌ಆರ್ 2001(1) ಕೆಎಆರ್ 1126(ಡಿಬಿ)

4. ಉಚ್ಛ ನ್ಯಾಯಾಲಯದ ತೀರ್ಮಾನಕ್ಕೆ ಪೂರಕವಾಗಿ ಯಾವುದೇ ತೀರ್ಮಾನ ತೆಗೆದುಕೊಂಡಾಗ, ಆ ತೀರ್ಮಾನವು ಒಂದು ಮಾದರಿಯಲ್ಲಿ ಇರಬೇಕೆಂದಿಲ್ಲ. ಮೇಲ್ಮನವಿ ಪ್ರಾಧಿಕಾರವು ಆ ತೀರ್ಮಾನಕ್ಕೆ ಪೂರಕವಾಗಿ ತನ್ನ ಅನುಮೋದನೆಯನ್ನು ಕೊಟ್ಟಾಗ ಕಾರಣಗಳನ್ನು ಕೊಡುವ ಅವಶ್ಯಕತೆ ಇಲ್ಲ. ಅಂದರೆ ಸಹಾಯಕ ನಿಬಂಧಕರು ಕೊಟ್ಟ ಕಾರಣವನ್ನೇ ಅನುಮೋದಿಸಿದಂತಾಗುತ್ತದೆ. ಆಡಳಿತ ಮಂಡಳಿಯನ್ನು ರದ್ದುಪಡಿಸಿದ ನಂತರ ನಾಲ್ಕು ವರ್ಷದ ಅವಧಿಗೆ ಅಂತಹ ಅನರ್ಹಗೊಂಡ ನಿರ್ದೇಶಕನು ಚುನಾಯಿತನಾಗತಕ್ಕದ್ದಲ್ಲ ಎಂಬುದು ಸಂವಿಧಾನದ ಪರಿಚ್ಛೇದ 19ಕ್ಕೆ ವಿರುದ್ಧವಲ್ಲ ಅಥವಾ ತೀರ್ಮಾನ ವೈಯಕ್ತಿಕವೂ ಅಲ್ಲ. 1989(1) ಕೆಎಲ್‌ಜೆ 292

5. ಒಬ್ಬ ಉಪನಿಬಂಧಕರು ಒಂದು ಸಂಘಕ್ಕೆ ವಿಶೇಷಾಧಿಕಾರಿಯನ್ನು ನೇಮಿಸಿದ ನಂತರ ಉಚ್ಛ ನ್ಯಾಯಾಲಯವು ಆಂತರಿಕ ಅರ್ಜಿಯ ಆಧಾರದ ಮೇಲೆ ಮಧ್ಯಂತರ ಆದೇಶವನ್ನು ಕೊಟ್ಟ ನಂತರ, ಉಪನಿಬಂಧಕರು ವಿಶೇಷಾಧಿಕಾರಿ ಅವಧಿಯನ್ನು 6 ತಿಂಗಳ ಅವಧಿಗೆ ವಿಸ್ತರಿಸಿದರೂ ಆ ಸಮಯದಲ್ಲಿ ವಿಶೇಷಾಧಿಕಾರಿಗೆ ವಿಸ್ತರಿಸಿದ ಅವಧಿಯನ್ನು ಕಿತ್ತುಹಾಕಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ವಹಿಸಿಕೊಡುವಂತೆ ನಿರ್ದೇಶಿಸಲಾಯಿತು. 2003(4) ಕೆಸಿಸಿಆರ್ ಎಸ್‌ಎನ್ 262/ಐಎಲ್‌ಆರ್ 2003(2) ಕೆಎಆರ್ 1268/ಕೆಎಲ್‌ಜೆ 107.

6. ಉಚ್ಛ ನ್ಯಾಯಾಲಯವು, ಒಂದು ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿದಾಗ, 2003(3) ಮೇಲ್ಮನವಿ ರೂಪದಲ್ಲಿ ರಿಟ್ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ. ಎಐಆರ್ 1970 ಎಸ್‌ಸಿ 992

7. ನಿರ್ದೇಶಕರು ಕೊಟ್ಟ ವಿವರಣೆಯನ್ನು ತಿರಸ್ಕರಿಸಿದಾಗ ಯಾವ ಕಾರಣಕ್ಕಾಗಿ ಆ ವಿವರಣೆಯನ್ನು ತಿರಸ್ಕರಿಸಲಾಗಿದೆ ಎಂಬುದನ್ನು ವಿವರಿಸದೇ ಆಡಳಿತ ಮಂಡಳಿಯನ್ನು ರದ್ದುಪಡಿಸಿದಾಗ ಅಂತಹ ಆದೇಶ ಹೊರಡಿಸುವಾಗ ಯಾವುದೇ ನೀತಿ ನಿಯಮ ಪಾಲಿಸಲಾಗಿಲ್ಲವೆಂದು ಅದನ್ನು ಮನಸೋ ಇಚ್ಛೆ ಮಾಡಲಾಗಿದೆಯೆಂದು ತಿಳಿಯತಕ್ಕದ್ದು. 1988(2) ಕೆಎಲ್‌ಜೆ 213

8. ಕಲಂ 30(1)ರಡಿ ಆದೇಶ ಹೊರಡಿಸುವಾಗ ನಿಬಂಧಕರು ಸ್ವತಂತ್ರವಾಗಿ ಒಂದು ಅಭಿಪ್ರಾಯಕ್ಕೆ ಬಂದ ನಂತರವೇ ಆಡಳಿತ ಮಂಡಳಿಯನ್ನು ರದ್ದುಪಡಿಸಬೇಕು. ಯಾವುದೇ ಒಂದು ಸಮಿತಿ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಮತ್ತು ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾಗಿದ್ದಾರೆಂದು, ಸಮಿತಿ ಮುಂದುವರಿದರೆ ಸಂಘದ ವ್ಯವಹಾರ ವಿಸ್ತರಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದ ನಂತರವೇ ರದ್ದುಪಡಿಸಬೇಕು 1966(2) ಎಂಎಲ್‌ಜೆ 225/

ಐಎಲ್ಆರ್ 1966 ಎಂವೈಎಸ್ 1168 (ಡಿಬಿ)

9. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಸ್ವತಂತ್ರ ತೀರ್ಮಾನಕ್ಕೆ ಬರಲಾಗಿದೆಯೆಂದು ಮತ್ತು ಸಾಕಷ್ಟು ದಾಖಲೆಗಳ ಆಧಾರದ ಮೇಲೆ ಮತ್ತು ಪ್ರಾಧಿಕಾರವು ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ಆದೇಶ ಮಾಡದಿದ್ದರೆ, ಅದು ಊರ್ಜಿತವಾಗತಕ್ಕದ್ದಲ್ಲ. 1983(2) ಕೆಎಲ್‌ಜೆ 313

10. ಒಂದು ಹಿಂದಿನ ಆಡಳಿತ ಮಂಡಳಿ ಸಂಘದ ವ್ಯವಹಾರವನ್ನು ನಡೆಸಲು ವಿಫಲವಾಗಿದ್ದರೆ ಮುಂದಿನ ಆಯ್ಕೆಯಾದ ಸಮಿತಿ, ಆ ಅವ್ಯವಹಾರದಲ್ಲಿ ಜವಾಬ್ದಾರರಾಗತಕ್ಕದ್ದಲ್ಲ. 1976(2) ಕೆಎಲ್‌ಜೆ 123(ಡಿಬಿ)

11. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸುವ ಸಂದರ್ಭದಲ್ಲಿ ಮೌಖಿಕ ವಿವರಣೆ ಕೊಡಲು ಅವಕಾಶ ಕಲ್ಪಿಸಬೇಕಾಗಿಲ್ಲ. 1983(2) ಕೆಎಲ್‌ಜೆ 313

12. ಯಾವುದೇ ಒಂದು ಆಡಳಿತ ಮಂಡಳಿಗೆ ಆರೋಪ ಪಟ್ಟಿಯನ್ನು ಕಳುಹಿಸಿ ಲಿಖಿತ ಉತ್ತರಗಳನ್ನು ಅಪೇಕ್ಷಿಸಿದಾಗ ಅದು ಸ್ವಾಭಾವಿಕ ನ್ಯಾಯ ನೀತಿಗೆ ವಿರುದ್ಧವಾಗುವುದಿಲ್ಲ. ಕಾನೂನು ರಚನೆ ಮಾಡಿದಾಗ ಸ್ಪಷ್ಟವಾಗಿ ನಿರ್ದೇಶಕರ ವಿವರಣೆಯನ್ನು ಕೇಳಬೇಕಾಗಿಲ್ಲವಾದ್ದರಿಂದ ಲಿಖಿತ ಹೇಳಿಕೆಯೇ ಸಮರ್ಪಕ ಅವಕಾಶ. 1978(1) ಕೆಎಲ್‌ಜೆ 127/ಐಎಲ್ಆರ್ 1978 ಕೆಎಆರ್ 485(ಡಿಬಿ)

13. ನಿಬಂಧಕರು ಒಂದು ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ ಲಿಖಿತ ಹೇಳಿಕೆಯನ್ನು ಸ್ವೀಕರಿಸಿದ ನಂತರ, ಆದೇಶ ಮಾಡಿದಾಗ, ವೈಯಕ್ತಿಕ ಮೌಖಿಕ ವಿವರಣೆ ಪಡೆಯಲು ಅವಕಾಶ ಕಲ್ಪಿಸಿಲ್ಲವೆಂಬ ಕಾರಣದಿಂದ ಸಂವಿಧಾನದ ಪರಿಚ್ಛೇದ 226ರಲ್ಲಿ ರಿಟ್ ಅರ್ಜಿ ಊರ್ಜಿತವಾಗುವುದಿಲ್ಲ. 1992 ಕೆಎಲ್‌ಜೆ 182.

14. ಆಡಳಿತ ಮಂಡಳಿಯನ್ನು ರದ್ದುಪಡಿಸುವ ಸಂಬಂಧದಲ್ಲಿ ಹೊರಿಸಿದ ಆರೋಪ ಒಂದು, ಮತ್ತು ವಿವರಣೆ ಮತ್ತೊಂದಕ್ಕೆ ಸಂಬಂಧಪಟ್ಟಿದ್ದರೆ, ಅದು ಅಭಾಸದ ಹೊಂದಾಣಿಕೆಯಾಗುತ್ತದೆ. ಇಂತಹ ಅಭಾಸಗಳ ಆಧಾರದ ಮೇಲೆ ಆಡಳಿತ ಮಂಡಳಿಯನ್ನು ರದ್ದುಪಡಿಸಿದ್ದರೆ, ಅದು ಮೇಲ್ನೋಟಕ್ಕೆ ದಾಖಲೆಯ ತಪ್ಪು ಎಂದು ಗೊತ್ತಾಗುತ್ತದೆ. ಆಡಳಿತ ಮಂಡಳಿಗೆ ಕಾರಣ ಕೇಳುವ ನೋಟೀಸಿನಲ್ಲಿ ಹೊರಿಸಿದ ಆರೋಪಗಳಿಗೂ ನಿರ್ದೇಶಕರು ಕೊಟ್ಟ ಉತ್ತರಗಳಿಗೂ ಸಂಬಂಧವಿಲ್ಲದ ಮತ್ತು ಆರೋಪಕ್ಕೆ ಪೂರಕವಾದ ಪರಿಶೀಲನೆ ಮಾಡದೇ ಹೆಚ್ಚುವರಿ ಆರೋಪಗಳನ್ನು ಹೊರಿಸಿ ಆಡಳಿತ ಮಂಡಳಿಯನ್ನು ರದ್ದುಪಡಿಸುವುದು ಕಾನೂನುಬದ್ದವಲ್ಲ. 1976(2) ಕೆಎಲ್‌ಜೆ 123(ಡಿಬಿ)

15. ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಆಡಳಿತ ಮಂಡಳಿಯ ನಿರ್ದೇಶಕರನ್ನು ತೆಗೆದುಹಾಕಿದಾಗ ಅಂತಿಮ ಆದೇಶದಲ್ಲಿ, ಆ ನಿರ್ದೇಶಕರನ್ನು ತೆಗೆದ ಬಗ್ಗೆ, ನೋಟೀಸ್ ಜಾರಿ ಮಾಡಿಲ್ಲವೆಂಬ ಕಾರಣಕ್ಕೆ ಆ ಆದೇಶ ಕಾನೂನಿಗೆ ವಿರುದ್ಧವಾಗುವುದಿಲ್ಲ 1966(2) ಎಂಎಲ್‌ಜೆ 225/ಐಎಲ್ಆರ್ 1966 ಕೆಎಆರ್ 1168 (ಡಿಬಿ)

16. ಒಂದು ಆಡಳಿತ ಸಮಿತಿಯನ್ನು ರದ್ದುಪಡಿಸಿದಾಗ, ಪ್ರತಿಯೊಬ್ಬ ಸಂಘದ ನಿರ್ದೇಶಕನೂ

ಸಂವಿಧಾನದ ಪರಿಚ್ಛೇದ 226ರಲ್ಲಿ ಪ್ರಶ್ನಿಸುವ ಅಧಿಕಾರ ಹೊಂದಿರುತ್ತಾನೆ. ಅಂತಹ ಸಂದರ್ಭದಲ್ಲಿ ಅರ್ಜಿದಾರ ಅವನಿಗೆ ಪೂರಕವಾದ ಆದೇಶ ಪಡೆದಾಗ, ಅದು ಎಲ್ಲ ನಿರ್ದೇಶಕರಿಗು ಅನ್ವಯವಾಗುತ್ತದೆ. 1976(2) ಕೆಎಲ್‌ಜೆ 123(ಡಿಬಿ)

17. ಒಂದು ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸಿ, ಒಂದು ಹೊಸ ಸಮಿತಿಯನ್ನು ಅಥವಾ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿದಾಗ, ತೆಗೆದುಹಾಕಿದ ಮತ್ತು ನೇಮಿಸಿದ ಆದೇಶವು ಒಂದೇ ಆದೇಶವಾಗಿರುತ್ತದೆ. ಅವುಗಳನ್ನು ಪ್ರತ್ಯೇಕ ಆದೇಶವೆಂದು ತಿಳಿಯತಕ್ಕದ್ದಲ್ಲ. ಕಲಂ 106(1)(ಇ) ನಲ್ಲಿ ಮೇಲ್ಮನವಿ ಸಲ್ಲಿಸಲು ಕಲ್ಪಿಸಿರುವ ಅವಕಾಶ ಸಮರ್ಪಕವಾಗಿದ್ದು, ಇದಕ್ಕೆ ರಿಟ್ ಅರ್ಜಿ ಮುಖಾಂತರ ಪ್ರಶ್ನಿಸಿದರೆ ಅದು ಸಿಂಧುವಲ್ಲ. 1980(1) ಕೆಎಲ್‌ಜೆ ಎಸ್‌ಎನ್ 42/ಎಐಆರ್ 1979 ಕೆಎಎನ್‌ಟಿ ಎನ್‌ಒಸಿ 201.

18. ಕಲಂ 106ರಲ್ಲಿ ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸಿದಾಗ ಮೇಲ್ಮನವಿ ಸಲ್ಲಿಸಲು ಸಮರ್ಪಕ ಮತ್ತು ಸಾಧು ಪರಿಹಾರ. ಅದನ್ನು ಸಂವಿಧಾನದ ಪರಿಚ್ಛೇದ 226ರಲ್ಲಿ ಊರ್ಜಿತವಲ್ಲ. 1981 ಕೆಎಲ್‌ಜೆ 48.

19. ನಿಬಂಧಕರ ಅಧಿಕಾರವನ್ನು ಕಾಯಿದೆ ಬದ್ಧವಾಗಿ ಉಪ ನಿಬಂಧಕರಿಗೆ ವರ್ಗಾಯಿಸಿದಾಗ ಮತ್ತು ಒಂದು ಆಡಳಿತ ಮಂಡಳಿಯನ್ನು ಉಪ ನಿಬಂಧಕರು ರದ್ದುಪಡಿಸಿದಾಗ, ಅಂತಹ ಆದೇಶವಾದ ಮೇಲೆ 106(2)(ಬಿ) ಯಡಿ ಸಂಯುಕ್ತ ನಿಬಂಧಕರು ಮೇಲ್ಮನವಿ ಸ್ವೀಕರಿಸತಕ್ಕದ್ದು. ಅದನ್ನು ರಾಜ್ಯ ಸರ್ಕಾರದ ಮುಂದ ಸಲ್ಲಿಸತಕ್ಕದ್ದಲ್ಲ. 1970(1) ಎಂಎಲ್‌ಜೆ 530(ಡಿಬಿ)

20. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆದೇಶ ಹೊರಡಿಸಿದಾಗ ನಿರ್ದೇಶಕರು ಕೊಟ್ಟ ವಿವರಣೆಯನ್ನು ಪರಿಶೀಲಿಸದೇ ಮತ್ತು ಪ್ರತಿಯೊಂದು ಆರೋಪಕ್ಕೆ ಸಂಬಂಧಪಟ್ಟಂತೆ ಪರಾಮರ್ಶಿಸದೇ, ಒಂದು ಸಾಮಾನ್ಯ ಷರಾ ಬರೆದು ಎಲ್ಲಾ ಆರೋಪಗಳು ರುಜುವಾತಾಗಿದೆ ಎಂದು ಆದೇಶ ಮಾಡಿದರೆ ಅದನ್ನು ಸಮರ್ಪಕ ಆದೇಶ (ಸ್ಪೀಕಿಂಗ್ ಆರ್ಡರ್) ಎಂದು ಪರಿಗಣಿಸತಕ್ಕದ್ದಲ್ಲ. 1989(2) ಕೆಎಲ್‌ಜೆ 17.

21. ಆಡಳಿತಾಧಿಕಾರಿ ಅಥವಾ ವಿಶೇಷಾಧಿಕಾರಿ ಒಂದು ಸಂಘಕ್ಕೆ ನೇಮಕಗೊಂಡಾಗ ಅವರು ಆ ಸಂಘದ ಎಲ್ಲ ವ್ಯವಹಾರವನ್ನು ನಡೆಸಿಕೊಂಡು ಹೋಗಬಹುದು ಮತ್ತು ಕಾನೂನುಬದ್ಧವಾದ ಎಲ್ಲ ಕೆಲಸಗಳನ್ನು ನಿರ್ವಹಿಸಬಹುದು. ಅವರ ಅವಧಿಯಲ್ಲಿ ಚುನಾವಣೆಯನ್ನು ನಡೆಸುವುದು ಒಂದು ಜವಾಬ್ದಾರಿ. ಚುನಾವಣೆ ನಡೆಸುವ ಸಂದರ್ಭದಲ್ಲಿ ಮತದಾರರ ಪಟ್ಟಿ ತಯಾರಿಸುವುದು ಒಂದು ಕೆಲಸ. ಆದರೆ ಹೊಸತಾಗಿ ಸದಸ್ಯರನ್ನು ಸೇರಿಸಿಕೊಳ್ಳುವುದು ಅವನ ಅಧಿಕಾರವಲ್ಲ. ಎಐಆರ್ 1997 ಎಸ್‌ಸಿ 2925/1997(6) ಎಸ್‌ಸಿಸಿ 37.

22. ಆಡಳಿತಾಧಿಕಾರಿಯು ಹೊಸದಾಗಿ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಹೊಂದಿಲ್ಲ. ಈ ಹಿಂದೆ ಎಐಆರ್ 1987 ಎಸ್‌ಸಿ 2925 ಮತ್ತು ಎಐಆರ್ 1994 ಎಸ್‌ಸಿ 85 ತೀರ್ಪಿನನ್ವಯ ಸೇರಿಸಿಕೊಳ್ಳತಕ್ಕದ್ದಲ್ಲ. 1999(2) ಕೆಸಿಸಿಆರ್ 1312/1999(4) ಕೆಎಲ್‌ಜೆ 346(ಡಿಬಿ)

23. ಒಂದು ಸಹಕಾರ ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸಿ 4 ವರ್ಷದವರೆವಿಗೆ ಆಡಳಿತಾಧಿಕಾರಿಯಾಗಿ ನೇಮಿಸಬಹುದು. ಆದರೆ 2 ವರ್ಷಗಳ ನಂತರ ಸಾಮಾನ್ಯ ಸಭೆಯ ಅಭಿಪ್ರಾಯ ಕೇಳಬೇಕು. ಕಾನೂನಿನಲ್ಲಿಯೇ ಸ್ಪಷ್ಟವಾಗಿ ಈ ಅವಕಾಶ ಕಲ್ಪಿಸಿರುವುದರಿಂದ ಕಲಂ 121ರನ್ವಯ ಸರ್ಕಾರ ಈ ನೀತಿಗೆ ವಿರುದ್ಧವಾಗಿ ಅವಧಿಯನ್ನು ವಿಸ್ತರಿಸುತ್ತಾ ಹೋದರೆ ಅದು ಕಾನೂನುಬಾಹಿರ ಐಎಲ್‌ಆರ್ 1981(1) ಕೆಎಆರ್ 18

**ಟಿಪ್ಪಣಿ :** ಈ ತೀರ್ಮಾನವು ಹಾಲಿ ಇರುವ ಕಲಂ 30ರಲ್ಲಿ ಅವಧಿಯನ್ನು 6 ತಿಂಗಳು ಅನಂತರ 6 ತಿಂಗಳಿನಂತೆ 2 ಬಾರಿ ವಿಸ್ತರಣೆಗೆ ಅವಕಾಶ ಇರುವುದರಿಂದ, ಈ ಅವಧಿಯೊಳಗೆ ನೇಮಕಮಾಡಿದರೆ ಈ ತೀರ್ಪು ಅನ್ವಯವಾಗುವುದಿಲ್ಲ.

24. ಹಾಲಿ ಇರುವ ಸಮಿತಿ, ಹಿಂದಿನ ಸಮಿತಿ ಮಾಡಿದ ಅವ್ಯವಹಾರಗಳಿಗೆ ಜವಾಬ್ದಾರರಲ್ಲ. ಒಂದು ಸಮಿತಿಯು ಸತತವಾಗಿ ತಪ್ಪು ಮಾಡುತ್ತಿದ್ದರೆ ಅಥವಾ ನಿರ್ಲಕ್ಷತನದಿಂದ ಕೆಲಸ ನಿರ್ವಹಿಸುತ್ತಿದ್ದರೆ ಅದು ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲವೆಂದು ಆಡಳಿತ ಮಂಡಳಿಯನ್ನು ರದ್ದುಪಡಿಸಬಹುದು. 2000(3) ಕೆಸಿಸಿಆರ್ ಎಸ್‌ಎನ್ 82/ಐಎಲ್‌ಆರ್ 2000(3) ಕೆಎಆರ್ 2841/2005 ಕೆಎಲ್‌ಜೆ 365.

25. ಆಡಳಿತಾಧಿಕಾರಿಯನ್ನು ನೇಮಿಸಿದಾಗ, ಆ ಆಡಳಿತಾಧಿಕಾರಿಯು ಆಡಳಿತ ಮಂಡಳಿಗೆ ಇರುವ ಅಧಿಕಾರವನ್ನು ಚಲಾಯಿಸಬಹುದು. ಆದರೆ ಮಹಾಸಭೆಗೆ ಕೊಡಮಾಡಿರುವ ಅಧಿಕಾರವನ್ನು ಆಡಳಿತಾಧಿಕಾರಿ ಚಲಾಯಿಸತಕ್ಕದ್ದಲ್ಲ. 1974(2) ಕೆಎಲ್‌ಜೆ ಎಸ್‌ಎನ್ 12

26. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಿದಾಗ, ರದ್ದುಪಡಿಸಿದ ಆಡಳಿತ ಮಂಡಳಿಯು ನಿಗಧಿಪಡಿಸಿದ ದಿನಾಂಕದಂದೇ ಚುನಾವಣೆ ನಡೆಸಬೇಕೆಂಬ ಬದ್ಧತೆಯಿಲ್ಲ. ಆಡಳಿತಾಧಿಕಾರಿಯನ್ನು ನೇಮಿಸಿದ 6 ತಿಂಗಳೊಳಗಾಗಿ ಚುನಾವಣೆ ನಡೆಸಬಹುದು. ಆದಷ್ಟು ಬೇಗ ಮಹಾಸಭೆಯನ್ನು ಕರೆದು ಚುನಾವಣೆ ಮಾಡಬೇಕೆಂದಿದ್ದರೆ ಅದು ಆಡಳಿತಾಧಿಕಾರಿಯ ಅವಧಿ ಮುಗಿಯುವ ಪೂರ್ವದಲ್ಲಿ ಚುನಾವಣೆ ನಡೆಸಬೇಕು ಹಾಗೂ ಆಡಳಿತ ಮಾಡಿದ ಅವ್ಯವಹಾರಗಳ ಬಗ್ಗೆ ಸಮರ್ಪಕ ಅನುಪಾಲನಾ ಕ್ರಮ ಜರುಗಿಸಬೇಕು. 1999(4) ಕೆಸಿಸಿಆರ್ ಎಸ್‌ಎನ್ 222

27. ಆಡಳಿತ ಮಂಡಳಿಯನ್ನು ರದ್ದುಪಡಿಸಿದಾಗ ಉಪಕಲಂ 3ರನ್ವಯ ನಿರ್ದೇಶಕರು ಅನರ್ಹತೆ ಗೊಳ್ಳುವುದು ಕ್ಲಾಸ್ ಎ ಮತ್ತು ಬಿ ಉಪಕಲಂ 1(ಎ)(ಬಿ) ಅಡಿಯಲ್ಲಿ ಮಾತ್ರ. ಅಂದರೆ ಆಡಳಿತ ಮಂಡಳಿಯ ಸದಸ್ಯರು ರಾಜೀನಾಮೆ ಕೊಟ್ಟಾಗ ಅಂತಹ ಸದಸ್ಯರು ಕಲಂ 30(3) ರಲ್ಲಿ ಅನರ್ಹತೆಗೊಳ್ಳುವುದಿಲ್ಲ. ಏಕೆಂದರೆ ಕಲಂ 29ಬಿ ಗೆ ವಿರುದ್ಧವಾಗುತ್ತದೆ. ಐಎಲ್‌ಆರ್ 1992(4) ಕೆಎಆರ್ 3620/1992(4) ಕೆಎಲ್‌ಜೆ 658(ಡಿಬಿ)

28. ನಿಬಂಧಕರು ಹಣಕಾಸು ಪೂರೈಕೆ ಮಾಡುವ ಸಂಸ್ಥೆಯ ಜೊತೆ ಸಮಾಲೋಚಿಸಬೇಕೆಂಬುದು ಕಲಂ 30(1)ರ ಪೂರ್ವದಲ್ಲಿ ಸಮಾಲೋಚಿಸಬೇಕೆಂದಲ್ಲ. ಕಲಂ 30(1)ರ ಪೂರ್ವದಲ್ಲಿ

ಸಮಾಲೋಚಿಸುವ ಅವಶ್ಯಕತೆ ಇಲ್ಲ. 1973(2) ಕೆಎಲ್‌ಜೆ ಎಸ್‌ಎನ್ 24/ಐಎಲ್‌ಆರ್ 1973 ಕೆಎಆರ್ 1170

29. ಭಾರತೀಯ ರಿಸರ್ವ್ ಬ್ಯಾಂಕ್ ಮನವಿಯ ಆಧಾರದ (30(5)) ಮೇಲೆ ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ವಿಚಾರಣೆ ಮಾಡುವ ಅವಶ್ಯಕತೆ ಇಲ್ಲ. 2008(5) ಕೆಸಿಸಿಆರ್ 2976/2008(2) ಕೆಎಲ್‌ಜೆ 469/2008(1) ಎಸ್‌ಸಿ 137/2008 ಎಐಆರ್ ಎಸ್‌ಸಿಡಬ್ಲ್ಯೂ 540/ಎಐಆರ್ 2008 ಎಸ್‌ಸಿ 994/2008(1) ಎಸ್‌ಸಿಸಿ 770

30. ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರಲ್ಲಿರುವ ಆಡಳಿತ ಮಂಡಳಿಯ ರದ್ದತಿಯ ಬಗ್ಗೆ ಕೊಟ್ಟ ತೀಪುಗಳ ಸಾರಾಂಶ

31. ನಿಬಂಧಕರು ಸಹಕಾರಿಯ ಆಡಳಿತಾಧಿಕಾರಿಯನ್ನೇ ಚುನಾವಣಾಧಿಕಾರಿಯನ್ನಾಗಿ ನೇಮಿಸಿರಬಹುದೇ ಎಂಬುದಕ್ಕೆ ಉಚ್ಚ ನ್ಯಾಯಾಲಯ ಅಧಿಕಾರವಿದೆ ಎಂದು ತೀರ್ಮಾನಿಸಿದೆ. ನಿಬಂಧಕರು ಒಂದು ಸಹಕಾರಿಯ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಿದಾಗ ಹಾಗೂ ಆಡಳಿತಾಧಿಕಾರಿಗೆ ನಿರ್ದೇಶನವು 3 ತಿಂಗಳಲ್ಲಿ ಚುನಾವಣೆ ಮಾಡಬೇಕೆಂದು ಸೂಚನೆ ಇದ್ದು, ಅಂತಹ ಸಂದರ್ಭದಲ್ಲಿ ಆಡಳಿತಾಧಿಕಾರಿಯನ್ನೇ ಚುನಾವಣಾಧಿಕಾರಿಯನ್ನಾಗಿ ನೇಮಿಸಿದ್ದು, ಅದು ಕಾನೂನಿಗೆ ವಿರೋಧವಲ್ಲ. ಆಡಳಿತಾಧಿಕಾರಿಯನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲವೆಂದು ಪ್ರತಿಪಾದಿಸತಕ್ಕದದಲ್ಲ. ನಿಬಂಧಕರು ಚುನಾವಣಾಧಿಕಾರಿಯನ್ನು ನೇಮಿಸುವಾಗ ಕಲಂ 26 ಉಪಕಲಂ (2)ನ್ನು ಪಾಲಿಸಿದ್ದಾರೆ. 2004 ಕೆಸಿಸಿಆರ್ ಎಸ್‌ಎನ್ 510. ಐಎಲ್‌ಆರ್ 2004(4) ಕೆಎಆರ್ 5106. 2005(1) ಕೆಎಲ್‌ಜೆ 240

32. ಕಾಯಿದೆಯಲ್ಲಿ ಸ್ಪಷ್ಟವಾಗಿ ಮುಖ್ಯ ಕಾರ್ಯನಿರ್ವಾಹಕ ತನಗೆ ಕೊಡಮಾಡಿದ ಅಧಿಕಾರನ್ನು ಮತ್ತೊಬ್ಬರಿಗೆ ವಹಿಸಿಕೊಡಬಾರದೆಂದಿದ್ದರೂ (ಅಧ್ಯಕ್ಷರಿಗೆ) ಅಂತಹ ಅಧಿಕಾರವನ್ನು ಚಲಾಯಿಸಿ ಪ್ರಕರಣವನ್ನು ದಾಖಲಿಸಿದರೆ ಅದು ಸರಿಯಾದ ಕ್ರಮವಲ್ಲ. ಪ್ರಕರಣವನ್ನು ದಾಖಲಿಸುವ ಅಧಿಕಾರ ಮುಖ್ಯ ಕಾರ್ಯನಿರ್ವಾಹಕನಿಗೆ ಮಾತ್ರ ಇರತಕ್ಕದ್ದು. ಮತ್ತು ಆ ಅಧಿಕಾರವನ್ನು ಅಧ್ಯಕ್ಷರು ದಾಖಲಿಸಿದಾಗ ಅದನ್ನು ವಜಾ ಮಾಡತಕ್ಕದ್ದು. 2009(1) ಕೆಸಿಸಿಆರ್ 749/ 2009(2) ಕೆಎಲ್‌ಜೆ 593/ಎಐಆರ್ 2009 ಎನ್‌ಒಸಿ 1532(ಕೆಎಆರ್)

33. ಸಹಕಾರಿಗೆ ಆಡಳಿತಾಧಿಕಾರಿಯನ್ನು ನೇಮಿಸಬಾರದೇಕೆಂಬ ಕರಣ ಕೇಳುವ ನೋಟೀಸ್ ಜಾರಿ ಮಾಡಿದಾಗ ಅದಕ್ಕೆ ಉತ್ತರವಾಗಿ ಸಕಾರಣಗಳನ್ನು ಕೊಡದೇ ಇದ್ದರೆ ಸರ್ಕಾರವು ಆಡಳಿತಾಧಿಕಾರಿಯನ್ನು ನೇಮಿಸಲು ಅಧಿಕಾರ ಹೊಂದಿದೆ. 2009(1) ಕೆಸಿಸಿಆರ್ 749/2009(2) ಕೆಎಲ್‌ಜೆ 593/ಐಎಆರ್ 2009ಎನ್‌ಒಸಿ 1532(ಕೆಎಆರ್)

34. ಯಾವುದೇ ಒಂದು ಆಡಳಿತ ಮಂಡಳಿ ಮಹಾಸಭೆಗೆ ಕೊಟ್ಟ ಅಧಿಕಾರವನ್ನು ಚಲಾಯಿಸತಕ್ಕದಲ್ಲ. ಹಾಗೇ ಮಾಡಬೇಕಾದಾಗ ಆ ಅಧಿಕಾರಗಳು ಅಂತಹ ಅಧಿಕಾರಿಗೆ ವರ್ಗಾವಣೆ ಆಗಿರಬೇಕು.

1968(2) ಮೈಸೂರು ಎಲ್‌ಜೆ 528 ಡಿಬಿ.

35. ಒಂದು ಸಹಕಾರ ಸಂಘದ ಅಂತಿಮ ಅಧಿಕಾರ ಮಹಾಸಭೆ ಸದಸ್ಯರಿಗೆ ಇರತಕ್ಕದ್ದು. ಆಡಳಿತ ಮಂಡಳಿಯನ್ನು ನಿರ್ದೇಶಕರಿಗೆ ಪರಮಾಪ್ತ ಅಧಿಕಾರ ಇರುವುದಿಲ್ಲ. ಎಲ್ಲಿ ಮಹಾಸಭೆಯನ್ನು ಸಮಾಲೋಚಿಸಿ ಸಮಾಪನೆಗೊಳ್ಳಲು ಆಡಳಿತ ಮಂಡಳಿ ಶಿಪಾರಸ್ಸು ಮಾಡಿಲ್ಲವೋ ಅಂತಹ ಅಧಿಕಾರ ಸರಿಯಲ್ಲ. ಹಾಗೂ ತಪ್ಪು. ಐಎಲ್‌ಆರ್ 1990(2) ಕರ್ನಾಟಕ 1785/ಎಐಆರ್ 1991 ಕರ್ನಾಟಕ ಎನ್‌ಒಸಿ 15(ಎ)

36. ಒಂದು ಸಹಕಾರ ಸಂಘದ ಬೈಲಾದಲ್ಲಿ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರ ಆಡಳಿತ ಮಂಡಳಿಗೆ ಕೊಡಲಾಗಿದ್ದರೂ ಮಹಾಸಭೆಗೆ ಮೇಲ್ವಿಚಾರಣೆ ಮಾಡುವ ಆಡಳಿತಾತ್ಮಕ ಅಧಿಕಾರಗಳನ್ನು ಕಿತ್ತುಕೊಳ್ಳಲಾಗದು. ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರ ಮಹಾಸಭೆಯ ಅಧಿಕಾರ ವ್ಯಾಪ್ತಿಗೆ ಮೀರಿದ್ದಲ್ಲ. ಒಬ್ಬ ವ್ಯಕ್ತಿಯನ್ನು ಸದಸ್ಯನೆಂದು ಠರಾವಿನ ಮುಖಾಂತರ ಆಡಳಿತ ಮಂಡಳಿ ಸೇರಿಸಕೊಳ್ಳದೆ ಇದ್ದರೂ ಅಂತಹ ವ್ಯಕ್ತಿ ಮಹಾಸಭೆ ಒಪ್ಪಿಗೆ ಕೊಟ್ಟ ಆಧಾರದ ಮೇಲೆ ಸದಸ್ಯನಾಗಿ ಸೇರ್ಪಡೆಯಾಗುತ್ತಾನೆ. ಎಐಆರ್ 1961 ಮಧ್ಯಪ್ರದೇಶ 40.

37. ವಿಶೇಷ ಮಹಾಸಭೆಯನ್ನು ನಿಬಂಧಕರು ಅಥವಾ ಸದಸ್ಯರ ಮನವಿ ಇಲ್ಲದೆ ಇದ್ದರೂ ಕರೆಯಲು ಅಧಿಕಾರ ಇದೆ. 1975(1) ಕೆಎಲ್‌ಜೆ ಎಸ್‌ಎನ್ 183.

38. ಒಂದು ಸಹಕರ ಸಂಘದ ಆಡಳಿತ ಮಂಡಳಿ ತನಗೆ ಕೊಟ್ಟ ಅಧಿಕಾರ ಪರಮಾಪ್ತವೆಂದು ತಿಳಿಯತಕ್ಕದಲ್ಲ ಹಾಗೂ ಮಹಾಸಭೆಯನ್ನು ಕೀಳು ಮಟ್ಟದಿಂದ ನೋಡತಕ್ಕದಲ್ಲ. ಐಎಲ್‌ಆರ್ 1980 ಕರ್ನಾಟಕ 1085.

39. ಆಡಳಿತ ಮಂಡಳಿ ಉಪನಿಯಮಗಳಲ್ಲಿ ಮಹಾಸಭೆ ತನಗೆ ಕೊಟ್ಟ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಜವಾಬ್ದಾರರಾಗಿರತಕ್ಕದ್ದು. ಎಐಆರ್ 1988 ಪಿ ಅಂಡ್ ಹೆಚ್ 77.

40. ಒಂದು ಆಡಳಿತ ಮಂಡಳಿಯ ಅವಧಿ 3 ವರ್ಷಗಳಿದ್ದರೆ ಆ ಅವಕಾಶಕ್ಕೆ ಕಾಯಿದೆಯಲ್ಲಿ ತಿದ್ದುಪಡಿ ತಂದು 5 ವರ್ಷಕ್ಕೆ ವಿಸ್ತರಿಸಿದಾಗ ಅಂತಹ ಆಡಳಿತ ಮಂಡಳಿ 5 ವರ್ಷದವರೆಗೂ ಮುಂದುವರೆಯಲು ಅವಕಾಶ ಇದೆ. ಎಐಆರ್ 1980ಎಮ್‌ಪಸೊ65 ಮಧ್ಯಪ್ರವೇಶ.

41. ಆಡಳಿತ ಮಂಡಳಿಯ ನಿರ್ದೇಶಕರ ಅವಧಿ 12 ತಿಂಗಳು ಇಂಗ್ಲೀಷ್ ಕ್ಯಾಲೆಂಡರ್‌ನಂತೆ ಇರತಕ್ಕದ್ದು. 1994(4) ಕೆಎಲ್‌ಜೆ 311/1993(3) ಕೆಎಲ್‌ಜೆ 180 ಎಫ್‌ಬಿ.

42. ವರ್ಷ ಎಂದರೆ ಸಹಕಾರಿ ವರ್ಷ ಎಂದು ಹಾಗೂ ಅದು ಕ್ಯಾಲೆಂಡರ್ ಇಯರ್ ಇರತಕ್ಕದಲ್ಲ. ಕಲಂ 28ಎ ಮತ್ತು ವಿವರಣೆ 28ಎ(3)ಕ್ಕೆ ಕೊಟ್ಟ ವಿವರಣೆ ಮತ್ತು ಸಹಕಾರಿ ವರ್ಷ ಎಂದಿರುವುದರಿಂದ 1984(4) ಕರ್ನಾಟಕ 3784 ಡಿಬಿ.

43. ಚುನಾವಣೆಯನ್ನು ನಡೆಸುವ ಜವಾಬ್ದಾರಿ (ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ) ಆಯ್ಕೆ ಮಾಡುವ ಜವಾಬ್ದಾರಿ ಆಡಳಿತ ಮಂಡಳಿಗೆ ಇರತಕ್ಕದ್ದು. ಚುನಾವಣೆಯನ್ನು ಸರ್ಕಾರ

ಮುಂದೂಡಿದರೂ, ಪದಾಧಿಕಾರಿಗಳ ಆಯ್ಕೆ ನಡೆಸತಕ್ಕದ್ದು. ಐಎಲ್ಆರ್ 1991(1) ಕರ್ನಾಟಕ 224/1992 ಕೆಎಲ್‌ಜೆ 479 ಡಿಬಿ.

44. ಆಡಳಿತ ಮಂಡಳಿ ಸದಸ್ಯರು ದಿನನಿತ್ಯದ ವ್ಯವಹಾರದಲ್ಲಿ ಯಾವುದೇ ಪಾತ್ರ ಇರುವುದಿಲ್ಲ. ಆದರೆ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ ಮತ್ತು ಲೆಕ್ಕಾಧಿಕಾರಿ ಈ ಕೆಲಸ ಮಾಡುತ್ತಾರೆ. ಪದಾಧಿಕಾರಿಗಳು ಹೊಸ ಆಡಳಿತ ಮಂಡಳಿ ಆಯ್ಕೆಯಾದಾಗ ಅವರಿಗೆ ಅಧಿಕಾರ ಹಸ್ತಾಂತರಿಸುವುದು ಅವರ ಕರ್ತವ್ಯ ಸರ್ಕಾರವು ವಾರ್ಷಿಕ ಮಹಾಸಭೆಯನ್ನು ಮುಂದೂಡಿ ಆಗ ಪದಾಧಿಕಾರಿಗಳನ್ನು ತೆಗೆದುಹಾಕಿ ಮತ್ತೆ ಚುನಾವಣೆ ನಡೆಸಲು ಸೂಚಿಸಬಹುದು. ಎಐಆರ್ 1990 ಕರ್ನಾಟಕ 290/1989(2) ಕೆಎಲ್‌ಜೆ 277.

45. ಆಡಳಿತ ಮಂಡಳಿ ಚುನಾವಣೆ ನಡೆದು ನಿಯಮ 13, 14, 14(ಎ) ಪಾಲಿಸಿಲ್ಲವೆಂದು ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ತೀರ್ಮಾನಿಸಿದಾಗ ಹೊಸ ಚುನಾವಣೆಗೆ ಆದೇಶಿಸಬೇಕು. ಪ್ರಾಧಿಕರಣಕ್ಕೆ ಆಡಳಿತಾಧಿಕಾರಿ ಆಕಿಳಿಗಾದ್ಧಿಕಾಎ, ಚುನಾವಣೆಧಿಕಾರಿ, ವಿಶೇಷ ಅಧಿಕಾರಿ ನೇಮಿಸುವ ಅಧಿಕಾರ ಇಲ್ಲ. 1988(2) ಬಿಎಲ್‌ಜೆ 85.

46. ಸಹಕಾರ ಸಂಘ ಕಾಯಿದೆ 15–8–1998ಕ್ಕೆ ತಿದ್ದುಪಡಿ ಮಾಡುವ ಪೂರ್ವದಲ್ಲಿ ಆಡಳಿತ ಮಂಡಳಿಯ ಅವಧಿ 3 ವರ್ಷವೆಂದು ಹಾಗೂ ಅಧ್ಯಕ್ಷರ ಅವಧಿ ಒಂದು ವರ್ಷವೆಂದು ಇದ್ದು ತಿದ್ದುಪಡಿಯಾದ ನಂತರ ಪದಾಧಿಕಾರಿ ಅವಧಿ ಎರಡೂವರೆ ವರ್ಷವೆಂದು ಆಡಳಿತ ಮಂಡಳಿ 5 ವರ್ಷವೆಂದು ನಮೂದಿಸಿದ್ದರೂ, ತಿದ್ದುಪಡಿಗೆ ಇದ್ದ ಪೂರ್ವದ ಅವಧಿಗೆ ಅಧ್ಯಕ್ಷರಿಗೆ ಅನ್ವಯವಾಗತಕ್ಕದ್ದು. ಏಕೆಂದರೆ ಆಡಳಿತ ಮಂಡಳಿ ಅವಧಿ 3 ವರ್ಷ ಎಂದು ಇದ್ದು, ಆ ಅವಧಿಯ ಮುಕ್ತಾಯದ ಪೂರ್ವದಲ್ಲಿ ಅಧ್ಯಕ್ಷರ ಅವಧಿಯು ಮುಕ್ತಾಯವಾಗತಕ್ಕದ್ದು. ಅಧ್ಯಕ್ಷರ ಅವಧಿಯನ್ನು 2.5 ವರ್ಷಕ್ಕೆ ವಿಸ್ತರಿಸಿದರೆ 3 ವರ್ಷಕ್ಕಿಂತಲೂ ಹೆಚ್ಚು ಆಡಳಿತ ಮಂಡಳಿ ಸಮಿತಿ ಅವಧಿ ವಿಸ್ತರಿಸಿದಂತಾಗುತ್ತದೆ. ಆದ್ದರಿಂದ ಅಧ್ಯಕ್ಷರು ತಿದ್ದುಪಡಿ ಪೂರ್ವದಲ್ಲಿ ಅನುಸರಿಸುತ್ತಿರುವ ನೀತಿಯನ್ನು ಮುಂದುವರೆಸತಕ್ಕದ್ದು. ಐಎಲ್ಆರ್ 2000(4) ಕರ್ನಾಟಕ 367/2000(4) ಕೆಸಿಸಿಆರ್ 2524.

47. ಆಡಳಿತ ಮಂಡಳಿ ಚುನಾವಣೆಗೆ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಹಾಗೂ ಮಹಿಳೆಯರಿಗಾಗಿಯೇ ಸ್ಥಾನ ಕಾಯ್ದಿರಿಸಿದಾಗ ಪರಿಶಿಷ್ಟ ಜಾತಿ ಮತ್ತು ಜನಾಂಗಕ್ಕೆ ಸೇರಿದ ಒಬ್ಬ ಅಭ್ಯರ್ಥಿ 1107 ಮತಗಳನ್ನು ಪಡೆದು ಗೆದ್ದ ಅಭ್ಯರ್ಥಿಗಿಂತ 327 ಮತಗಳನ್ನು ಪಡೆದಿದ್ದ. ಆದರೆ ಸೋತ ಪರಿಶಿಷ್ಟ ಜಾತಿ/ಜನಾಂಗದ ಅಭ್ಯರ್ಥಿ ಕಾಯ್ದಿರಿಸಿದ ಸ್ಥಾನದಿಂದ ಸ್ಪರ್ಧಿಸಿ ಸೋತಿದ್ದರೂ, ಅದೇ ಸಂಘದ ಸಾಮಾನ್ಯ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ತನಗೆ ಲಭ್ಯವಾದ ಮತಗಳ ಸಂಖ್ಯೆಗಳಿಗಿಂತಲೂ ಕಡಿಮೆ ಗಳಿಸಿದ ವ್ಯಕ್ತಿಯನ್ನು ಆಯ್ಕೆಯಾದರೆಂದು ಘೋಷಿಸುವುದಕ್ಕೆ ಬದಲಾಗಿ ತಾನು ಕೊನೆಯ 3 ಅಭ್ಯರ್ಥಿಗಳು ಸಾಮಾನ್ಯ ಸ್ಥಾನದಿಂದ ಗೆದ್ದಾಗಿ 1009, 998 ಮತ್ತು 963 ಮತ ಗಳಿಸಿದ್ದು, ತನ್ನನ್ನು ಆ ವರ್ಗದಿಂದ ಆಯ್ಕೆಯಾದಂತೆ ಘೋಷಿಸಬೇಕೆಂದು ಕೋರಿದ್ದ ಅರ್ಜಿ ಪರಿಶೀಲಿಸಿದ ಉಚ್ಚ ನ್ಯಾಯಾಲಯ ಮೀಸಲು ಸ್ಥಾನದಿಂದ ಸ್ಪರ್ಧಿಸಿದ್ದಾಗಿ, ಅದು ವಿಶೇಷ ಗುಂಪೆಂದು ಹಾಗೂ

ಆ ಸ್ಥಾನದಿಂದ ಆಯ್ಕೆಯಾಗಬೇಕೆ ಹೊರತು ಹೆಚ್ಚು ಮತ ಗಳಿಸಿದ್ದರೂ ಮತ್ತೊಂದು ವರ್ಗದ ನಿರ್ದೇಶಕರ ಆಯ್ಕೆ ಗುಂಪಿನಿಂದ ಆಯ್ಕೆಯಾದಂತರ ಘೋಷಿಸಲಾಗದು. ಅದು ನಿಯಮಬಾಹಿರ. 2004 ಕೆಸಿಸಿಆರ್ ಎಸ್‌ಎನ್ 151/2004 ಕೆಎಲ್‌ಜೆ 48.

48. ದಿನಾಂಕ: 15–8–1998ಕ್ಕಿಂತ ಪೂರ್ವದಲ್ಲಿ ಇದ್ದ ಆಡಳಿತ ಮಂಡಳಿಯ ಅವಧಿ 3 ವರ್ಷ ಮತ್ತೊಂದು 15–8–1998ರ ನಂತರ ಅದರ ಅವಧಿ 5 ವರ್ಷ ಅಧ್ಯಕ್ಷರ ಅವಧಿ ಒಂದು ವರ್ಷ ಮತ್ತು ತಿದ್ದುಪಡಿಯ ನಂತರ 2.5 ವರ್ಷ. ಈ ನೀತಿಯನ್ನು ವ್ಯತ್ಯಾಸ ಮಾಡುವುದು ಸರಿಯಲ್ಲ. ಇದು ಮುಂದುವರೆಯತಕ್ಕದ್ದು. 2004(4) ಕೆಸಿಸಿಆರ್ ಎಸ್‌ಎನ್ 150/2004 ಕೆಎಲ್‌ಜೆ 429.

49. ಕರ್ನಾಟಕ ಆರ್ಡಿನೆನ್ಸ್ ಸಂಖ್ಯೆ: 4/89 ರನ್ವಯ ಅಧ್ಯಕ್ಷರ ಚುನಾವಣೆ ನಡೆದು ಆ ಅವಧಿಯಲ್ಲಿ ಆರ್ಡಿನೆನ್ಸ್ ಅನ್ವಯ ನಾಮನಿರ್ದೇಶನ ಮಾಡಿದ ವ್ಯಕ್ತಿ ಸ್ಪರ್ಧಿಸಲು ಅವಕಾಶ ಕಲ್ಪಿಸಿದ್ದು, ಅದನ್ನು ತಪ್ಪು ಎಂದು ತೀರ್ಮಾನಿಸತಕ್ಕದಲ್ಲ. ಏಕೆಂದರೆ ಈ ಆರ್ಡಿನೆನ್ಸ್ ಅನ್ವಯ ಚುನಾವಣೆ ನಡೆದಿದೆ ಎಂದು ಅರ್ಜಿದಾರನು ಹೇಳಿದಾಗ ಅಂತಹ ಚುನಾವಣೆಯಲ್ಲಿ ನಾಮನಿರ್ದೇಶಕರು ನಾಮನಿರ್ದೇಶನ ತಪ್ಪು ಅಥವಾ ಸ್ಪರ್ಧಿಸುವುದು ತಪ್ಪು ಎಂದು ಹೇಳಲಾಗದು. 2001(3) ಕೆಎಲ್‌ಜೆ 187.

50. ಸರ್ಕಾರದಿಂದ ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಅದೇ ವ್ಯಕ್ತಿಯನ್ನು ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ನಾಮನಿರ್ದೇಶನ ಮಾಡಿ ಕಳುಹಿಸಿರುವುದು ಒಬ್ಬ ವ್ಯಕ್ತಿ ಪ್ರತ್ಯೇಕ ಎರಡು ವಿಭಾಗಗಳಿಂದ ನಾಮನಿರ್ದೇಶನ ಮಾಡಿದಂತಾಗುತ್ತದೆ. ಒಬ್ಬ ವ್ಯಕ್ತಿ ಒಂದು ಗುಂಪಿನಿಂದ ಮಾತ್ರ ಸ್ಥಾನ ಪಡೆಯಬಹುದು. ಆದ್ದರಿಂದ ಜಿಲ್ಲಾ ಬ್ಯಾಂಕಿನಿಂದ ನಾಮನಿರ್ದೇಶನ ಮಾಡಿರುವುದು ಕಾನೂನು ಬಾಹಿರ ಹಾಗೂ ಇದು ಕಾಯಿದೆಯ 28ಎ(2)(3) ಅನ್ವಯ ತಪ್ಪು. 2001(3) ಕೆಎಲ್‌ಜೆ 187.

51. ಒಬ್ಬ ನಾಮ ನಿರ್ದೇಶಿತ ನಿರ್ದೇಶಕನನ್ನು ತೆಗೆದುಹಾಕಲು ನಿಬಂಧಕರಿಗೆ ಅಧಿಕಾರ ಇದೆ. ತೆಗೆದುಹಾಕುವಾಗ ಅವನು ಅನರ್ಹ ಎಂಬ ಕಾರಣಕ್ಕೆ ನಿಯಮಗಳನ್ನು ಪಾಲಿಸಿ ತೆಗೆಯತಕ್ಕದ್ದು. ಈ ನಿಯಮ ಚುನಾಯಿತ ಮತ್ತು ನಾಮನಿರ್ದೇಶಿತ ವ್ಯಕ್ತಿಗಳಿಗೆ ಸಮಾನವಾಗಿ ಅನ್ವಯವಾಗುತ್ತದೆ. 2000(1) ಕೆಎಲ್‌ಜೆ 452/ಐಎಲ್‌ಆರ್ 2001(1) ಕರ್ನಾಟಕ 681.

52. ಆಯ್ಕೆಯಾದ ಸದಸ್ಯರನ್ನು ಅಥವಾ ನಾಮನಿರ್ದೇಶನ ಮಾಡಿದ ಸದಸ್ಯರನ್ನು ತೆಗೆದುಹಾಕುವಾಗ ಮನಸೋಇಚ್ಛೆ ತೆಗೆಯತಕ್ಕದಲ್ಲ. ನಿಯಮದಲ್ಲಿ ಮತ್ತು ಕಾನೂನಿನಲ್ಲಿ ನಿಗಧಿಪಡಿಸಿರುವ ನೀತಿಗೆ ಅನುಸಾರವಾಗಿ ಒಬ್ಬ ಚುನಾಯಿತ ಸದಸ್ಯನನ್ನು ಅಥವಾ ನಾಮ ಮಾತ್ರ ಸದಸ್ಯರ ರದ್ದುಪಡಿಸುವುದನ್ನು ಈ ನೀತಿ ಅನ್ವಯವೇ ತೆಗೆದುಹಾಕಬೇಕು. 2000(1) ಕರ್ನಾಟಕ 542ಐಎಲ್‌ಆರ್ 541.

53. ನಾಮನಿರ್ದೇಶನ ಮಾಡಿದ ನಿರ್ದೇಶಕರು ನಾಮನಿರ್ದೇಶನ ಮಾಡಿದ ಪ್ರಾಧಿಕಾರದ

ಅಧಿಕಾರದನ್ವಯ ಸರ್ಕಾರವು ಸೇರಿಸಿದಾಗ ತೆಗೆದುಹಾಕುವ ಮತ್ತು ಯಾವ ಕಾರಣವನ್ನು ಕೇಳದೆ ತೆಗೆದುಹಾಕುವ ಅಧಿಕಾರ ಹೊಂದಿದೆ. 2000(1) ಕರ್ನಾಟಕ 542 ಐಎಲ್ಆರ್ 541

54. ಸಹಾಯಧನ ಪಡೆದ ಸಹಕಾರ ಸಂಘಗಳಿಗೆ ನಾಮನಿರ್ದೇಶನ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ಕಲಂ 29ರನ್ವಯ ಸರ್ಕಾರ ತೀರ್ಮಾನ ತೆಗೆದುಕೊಂಡಾಗ ನಾಮನಿರ್ದೇಶನ ಮಾಡಬಹುದು. ವಾಪಸ್ಸು ಪಡೆಯಬಹುದು. ಇದಕ್ಕೆ ಯಾವುದೇ ಕಾರಣ ಕೇಳುವ ನೋಟೀಸ್ ನೀಡತಕ್ಕದಲ್ಲ. ಯಾವ ಕಲಂನನ್ವಯ ನಾಮನಿರ್ದೇಶನ ವಾಪಸ್ ಪಡೆಯಲಾಗಿದೆ ಎಂದು ನಮೂದಿಸದೆ ಇದ್ದರೂ ಆ ಆದೇಶವನ್ನು ತಪ್ಪು ಎಂದು ಹೇಳತಕ್ಕದಲ್ಲ. 2002(1) ಕೆಸಿಸಿಆರ್ 424.

55. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ 5 ವರ್ಷದ ಅವಧಿಗೆ ಸರ್ಕಾರ ನಾಮನಿರ್ದೇಶನ ಮಾಡಿತ್ತು. ಆ ನಾಮನಿರ್ದೇಶನ ಅವಧಿ ಮುಗಿಯುವ ಪೂರ್ವದಲ್ಲಿ ಆ ನಾಮನಿರ್ದೇಶನವನ್ನು ಸರ್ಕಾರ ವಾಪಸ್ ಪಡೆಯಿತು. ಇದಕ್ಕೆ ಉಚ್ಚ ನ್ಯಾಯಾಲಯ ಮಧ್ಯಪ್ರವೇಶ ಮಾಡಲಿಲ್ಲ. ಮೇಲ್ಮನವಿಯಲ್ಲಿ ಇದನ್ನು ಎತ್ತಿಹಿಡಿಯಲಾಯಿತು. 2002(2) ಕೆಸಿಸಿಆರ್ 1115 ಡಿಬಿ.

56. ಒಂದು ಸಹಕಾರ ಸಂಘದ ಪದಾಧಿಕಾರಿಗಳು ಆಯ್ಕೆಯನ್ನು ಚುನಾವಣೆ ನಂತರವೇ ಕರೆಯತಕ್ಕದ್ದು. ಚುನಾವಣೆ ಪೂರ್ವದಲ್ಲಿ ಕಾರ್ಯದರ್ಶಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆಯನ್ನು 28(2)ರಲಿ ಅಸಿಂಧುವಾಗುತ್ತದೆ. ಇದನ್ನು ಪ್ರಶ್ನಿಸಬೇಕಾದರೆ ಕೆಳ ನ್ಯಾಯಾಲಯದಲ್ಲಿ ಅರ್ಜಿ ಹಾಕಿಕೊಳ್ಳಬೇಕು. 1981(1) ಕೆಎಲ್‌ಜೆ ಎ10 ಡಿಬಿ.

57. ನಾಮನಿರ್ದೇಶನವನ್ನು ರದ್ದುಗೊಳಿಸುವ ಅಧಿಕಾರ ಪ್ರಥಮ ಆಡಳಿತ ಮಂಡಳಿಗೆ ನಾಮನಿರ್ದೇಶನ ಮಾಡಿದಾಗ ಅನ್ವಯಿಸತಕ್ಕದಲ್ಲ. ಐಎಲ್ಆರ್ 1968 ಕರ್ನಾಟಕ 912.

58. ಸಹಕಾರ ಸಂಘಗಳ ಕಾಯಿದೆ 29 ಮತ್ತು 53ಎ ರನ್ವಯ ನಾಮನಿರ್ದೇಶನ ಮಾಡುವಾಗ ಅವುಗಳನ್ನು ಪ್ರತ್ಯೇಕವಾಗಿ ಚಲಾಯಿಸಬಹುದು. ಹಾಗೂ ಅವುಗಳನ್ನು ಒಟ್ಟುಗೂಡಿಸತಕ್ಕದಲ್ಲ. ಸರ್ಕಾರ ಕಲಂ 53ಎ ರನ್ವಯ 5 ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಿ ಕಲಂ 29ರನ್ವಯ ಮತ್ತು 3 ಜನರನ್ನು ನಾಮನಿರ್ದೇಶನ ಮಾಡುವುದು ಸರಿಯಲ್ಲ. ಐಎಲ್ಆರ್ 1979(1) ಕರ್ನಾಟಕ 180.

59. ಕಲಂ 29 ಮತ್ತು 53ಎ ಯನ್ನು ಒಟ್ಟು ಸಂಖ್ಯೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದಲ್ಲ. ಕಲಂ 53ಎ ಯನ್ನು ಕಲಂ 29ಕ್ಕೆ ಒಂದು ವಿವರಣೆ ಎಂದು ತಿಳಿಯತಕ್ಕದ್ದು. 1987(2) ಕೆಎಲ್‌ಜೆ 389.

60. ಸರ್ಕಾರ ನಾಮನಿದೇಶನ ಮಾಡುವ ಅಧಿಕಾರವನ್ನು ಬೈಲಾದಲ್ಲಿ ಇರುವ ಅವಕಾಶ ಉಪಯೋಗಿಸಿ ತಿರುಚಬಹುದು. ಐಎಲ್ಆರ್ 1993(3) ಕರ್ನಾಟಕ 2218.

61. ನಿಬಂಧಕರು ಒಬ್ಬ ಆಡಳಿತ ಮಂಡಳಿಯ ಸದಸ್ಯನನ್ನು ಸ್ವಯಂಸ್ಫೂರ್ತಿಯಿಂದ ತೆಗೆದುಹಾಕಲು, ಕಿತ್ತುಹಾಕಲು ಅಧಿಕಾರಿ ಹೊಂದಿಲ್ಲ. ಐಎಲ್ಆರ್ 1972 ಕರ್ನಾಟಕ ಎಸ್ಎನ್ 123/318.

62. ಸರ್ಕಾರ ಒಂದು ಸಹಕಾರ ಸಂಘಕ್ಕೆ ನಾಮನಿರ್ದೇಶನ ಮಾಡುವಾಗ ಆ ಸಂಘಕ್ಕೆ ಸರ್ಕಾರದ ಗ್ಯಾರಂಟಿ ಸಾಲ ವಾಪಸ್ಸು ಮಾಡಲು ಕೊಟ್ಟಿದ್ದರೆ ಅಂತಹ ನಾಮನಿರ್ದೇಶನ ಸಂವಿಧಾನದ ಪರಿಚ್ಛೇದ

19(1)(ಜಿ)ಗೆ ವಿರೋಧವಲ್ಲ. ಐಎಲ್‌ಆರ್ 1987(1) 650/1987(2) ಕೆಎಲ್‌ಜೆ ಎಸ್‌ಎನ್ 252.

63. ನಿರ್ದೇಶಕತನದಿಂದ ಅನರ್ಹತೆಗೊಳಿಸುವಾಗ ಆ ಸಹಕಾರ ಸಂಘಕ್ಕೆ ಮಾತ್ರ ಸೀಮಿತವಾಗದೆ ಅದನ್ನು ಬೇರೆ ಸಹಕಾರ ಸಂಘಗಳಿಗೂ ಚುನಾಯಿತರಾಗಲು ನೇಮಿಸಲಾಗದು ಅನ್ವಯವಾಗುತ್ತದೆ. ಐಎಲ್‌ಆರ್ 1973 1463/1979(1) ಕೆಎಲ್‌ಜೆ 430.

64. ಚುನಾವಣೆಗೆ ಪೂರ್ವದಲ್ಲಿ ಅನರ್ಹ ಹೊಂದಿದ್ದರೆ ಅದು ಕಲಂ 70ರನ್ವಯ ನಿರ್ಧರಿಸಬೇಕಾದ ವಿಷಯ. 1979(1) ಕೆಎಲ್‌ಜೆ 124.

65. ಯಾವುದೇ ಒಂದು ಸಹಕಾರ ಸಂಘದ ಸಭೆಗಳಲ್ಲಿ 3 ಸತತ ಸಭೆಗಳಿಗೆ ಗೈರುಹಾಜರಾದಾಗ ಸದಸ್ಯತ್ವ ಕಳೆದುಕೊಳ್ಳುತ್ತಾರೆ ಎಂದರೆ ಸದಸ್ಯತ್ವದಿಂದ ಕಿತ್ತುಹಾಕಿದ ಹಾಗೆ ಅದನ್ನು ಉಪ ನಿಬಂಧಕರು ನಿರ್ಧರಿಸತಕ್ಕದಲ್ಲ. ಅದು ಕಲಂ 70ರನ್ವಯ ತೀರ್ಮಾನವಾಗಬೇಕಾದ ವಿಷಯ. ಐಎಲ್‌ಆರ್ 1979 ಕರ್ನಾಟಕ 702/1972 ಕೆಎಲ್‌ಜೆ 326.

66. ಒಬ್ಬ ನಿರ್ದೇಶಕನ ಅನರ್ಹತೆಯನ್ನು ಪ್ರತಿಯೊಂದ ಪ್ರಸಂಗದಲ್ಲೂ ಅಷ್ಟು ಅವಧಿಗೆ ಅನರ್ಹತೆಗೊಳಿಸಬೇಕು ಎಂದು ಪ್ರತ್ಯೇಕವಾಗಿ ತೀರ್ಮಾನಿಸತಕ್ಕದ್ದು. ಅನರ್ಹತೆಗೊಳಿಸುವಾಗ ಮಾಡಿದ ತಪ್ಪಿನ ಪ್ರಮಾಣದ ಮೇಲೆ ಅವಧಿ ನಿಗಧಿಪಡಿಸಬೇಕು.

67. ಆಡಳಿತ ಮಂಡಳಿಯನ್ನು ರದ್ದುಪಡಿಸಲು ಕಾರಣ ಕೇಳುವ ನೋಟೀಸ್ ಜಾರಿ ಮಾಡಿದಾಗ ಮೌಖಿಕ ಅವಕಾಶ ಕೊಡುವ ಅವಶ್ಯಕತೆ ಇಲ್ಲ. ಅವಕಾಶ ಕೊಡಬೇಕೆಂದಿರುವುದು ಮೌಖಿಕ ಹೇಳಿಕೆ ಪಡೆಯುವುದು ಎಂದು ಅರ್ಥೈಸಲಾಗದು ಹಾಗೂ ಲಿಖಿತ ಹೇಳಿಕೆ ಪಡೆದರೂ ಸಾಕು ಎಂದು ಅರ್ಥೈಸತಕ್ಕದ್ದು. ಐಎಲ್‌ಆರ್ 1983(2) ಕೆಎಲ್‌ಜೆ 313.

68. ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ವಿಚಾರಣೆಯಲ್ಲಿದ್ದಾಗ ನಿಬಂಧಕರು ಆಡಳಿತ ಮಂಡಳಿಯನ್ನು ರದ್ದುಪಡಿಸಲು ಕಾರಣ ಕೇಳುವ ನೋಟೀಸ್ ಕೊಟ್ಟಿದದು, ಆ ಅವಧಿಯಲ್ಲಿ ಆಡಳಿತ ಮಂಡಳಿ ರದ್ದುಪಡಿಸಿದರೆ ಅದು ದುರುದ್ದೇಶದಿಂದ ಮತ್ತು ಸಾಮಾನ್ಯ ನ್ಯಾಯಕ್ಕೆ ವಿರುದ್ಧವಾಗಿದೆ ಎಂದು ಪರಿಗಣಿಸತಕ್ಕದ್ದು. 1987(3) ಕೆಎಲ್‌ಜೆ 443.

69. ನಿಬಂಧಕರು ಒಂದು ಸಹಕಾರ ಸಂಘಕ್ಕೆ ಕಾರಣ ಕೇಳುವ ನೋಟೀಸ್ ಜಾರಿ ಮಾಡುವ ಪೂರ್ವದಲ್ಲಿ ಹಣಕಾಸು ಪೂರೈಸುವ ಸಂಸ್ಥೆಯನ್ನು ಅಭಿಪ್ರಾಯ ಕೇಳುವ ಅವಶ್ಯಕತೆ ಇಲ್ಲ. ನಿರ್ದೇಶಕರು ಕಾರಣ ಕೇಳುವ ನೋಟೀಸ್‌ಗಿಂತ ಹೆಚ್ಚುವರಿಯಾಗಿ ಯಾವುದೇ ನೋಟೀಶ್ ಕೇಳತಕ್ಕದಲ್ಲ. ಕಲಂ 30ರಲ್ಲಿ ಸಮಿತಿಯನ್ನು ರದ್ದು ಮಾಡುವ ಅಧಿಕಾರ ಎಂದು ತಿಳಿಯತಕ್ಕದಲ್ಲ. ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ ನಂತರ ವಿವರಣೆ ಪಡೆದು ಹೊಸ ಸಮಿತಿ ಅಥವಾ ಆಡಳಿತ ಅಧಿಕಾರಿ ನೇಮಿಸುವ ಅಧಿಕಾರ ಇದೆ. ಐಎಲ್‌ಆರ್ 1973 ಕರ್ನಾಟಕ 1130 ಡಿಬಿ.

70. ಸ್ವಾಭಾವಿಕ ನ್ಯಾಯದನ್ವಯ ನೋಟೀಸ್ ಜಾರಿ ಮಾಡಲಾಗದೇ ಹಾಗೂ ಅವಕಾಶ ಕಲ್ಪಿಸದೆ ಮತ್ತು ತಕರಾರನ್ನು ದಾಖಲಿಸಲು ಅವಕಾಶ ಕೊಡದೆ ಇದ್ದಾಗ ಅದು ಸ್ವಾಭಾವಿಕ ನ್ಯಾಯ ಮುರಿದಂತೆ. ಐಎಲ್‌ಆರ್ 1978 478/1978(1) ಕೆಎಲ್‌ಜೆ 127.

71. ಒಂದು ಸಹಕಾರ ಸಂಘದ ಆಡಳಿತ ಮಂಡಳಿಯನ್ನು ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ರದ್ದುಪಡಿಸುವ ಪೂರ್ವದಲ್ಲಿ ಉತ್ತರಗಳನ್ನು ಪರಿಶೀಲಿಸಿ ಸಮರ್ಥನೀಯ ಕಾರಣ ಕೊಟ್ಟು ಆಡಳಿತ ಮಂಡಳಿ ರದ್ದುಪಡಿಸದಿದ್ದರೆ ಅದು ಸಮರ್ಥನೀಯವಲ್ಲ. 1989(2) ಕೆಎಲ್‌ಜೆ 17.

72. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿ ನೇಮಿಸಿದಾಗ ಎರಡು ವರ್ಷ ಕಳೆದ ನಂತರ ಮತ್ತೆ ವಿಸ್ತರಿಸಬೇಕಾದರೆ ಮಹಾಸಭೆಯ ಬಹುಮತದ ಒಪ್ಪಿಗೆ ಪಡೆದು ಮುಂದುವರೆಸತಕ್ಕದ್ದು. ಐಎಲ್‌ಆರ್ 1981 ಕರ್ನಾಟಕ 18.

73. ಕಲಂ 30ರನ್ವಯ ರದ್ದುಪಡಿಸಲಾದ ಆಡಳಿತ ಮಂಡಳಿ ಕಲಂನ ಆದೇಶ ಕಲಂ 106(2)(ಎ) ಅನ್ವಯ ರಾಜ್ಯ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಬಹುದು. ಆ ಮೇಲ್ಮನವಿ ಪರಿಶೀಲಿಸಿ ಆಡಳಿತ ಮಂಡಳಿ ರದ್ದುಪಡಿಸಿ ಆದೇಶವನ್ನು ಕಿತ್ತುಹಾಕಬಹುದು. ಐಎಲ್‌ಆರ್ 1979(2) ಕರ್ನಾಟಕ ಎಸ್‌ಎನ್ 124/1981 ಕೆಎಲ್‌ಜೆ ಎಸ್‌ಎನ್ 42/ಎಐಆರ್ 1979 ಎನ್‌ಒಸಿ 209.

74. ಕಲಂ 108ರನ್ವಯ ಸರ್ಕಾರದ ಮಂತ್ರಿಗಳು ಆಡಳಿತ ಮಂಡಳಿ ರದ್ದುಪಡಿಸಿದ ಬಗ್ಗೆ ತಡೆಯಾಜ್ಞೆ ನೀಡಿದ್ದರೆ ಅದನ್ನು ರಿಟ್ ಅರ್ಜಿ ಮುಖಾಂತರ ಪುನರ್ ಪರಿಶೀಲಿಸಲಾಗದು. 1989(2) ಕೆಎಲ್‌ಜೆ 556.

75. ಒಂದು ಆಡಳಿತ ಮಂಡಳಿಯನ್ನು ಕಾನೂನಿಗೆ ವಿರುದ್ಧವಾಗಿ ರದ್ದುಪಡಿಸಿದರೆ ಅಂತಹ ಸಂಘದ ಸದಸ್ಯ ರಿಟ್ ಅರ್ಜಿ ಮುಖಾಂತರ ಪ್ರಶ್ನಿಸಬಹುದು. ಆ ರಿಟ್ ಅರ್ಜಿಯಲ್ಲಿ ಸಿಕ್ಕಿದ ಪರಿಹಾರ ಪ್ರತಿಯೊಬ್ಬ ತೊಂದರೆಗೀಡಾದ ಸದಸ್ಯನಿಗೂ ಆ ಆಡಳಿತ ಮಂಡಳಿಗೂ ಅನ್ವಯವಾಗತಕ್ಕದ್ದು. ನಿರ್ದೇಶಕರ ಮಂಡಳಿ ಪ್ರತಿ ನಿರ್ದೇಶಕರಿಗೆ ಅರ್ಜಿ ದಾಖಲಿಸುವ ಅವಶ್ಯಕತೆ ಇಲ್ಲ. 1976(2) ಕೆಎಲ್‌ಜೆ 123.

76. ಆಡಳಿತಾಧಿಕಾರಿ ನೇಮಿಸಿದಾಗ ಅವನೇ ಅವಧಿ ಮುಗಿದ ನಂತರವೂ ಆ ಸಂಘದ ಒಬ್ಬ ನೌಕರನನ್ನು ಕೆಲಸದಿಂದ ತೆಗೆದುಹಾಕಿದಾಗ ಅಂತಹ ಆದೇಶ ಕಾನೂನುಬಾಹಿರ. ಆಡಳಿತಾಧಿಕಾರಿ ಅವಧಿಯಲ್ಲಿ ಹಿಂದಿನ ದಿನಾಂಕದಿಂದ ಜಾರಿಯಾಗುವಂತೆ ಮುಂದುವರೆಯುವುದು ಕಾನೂನಿನಲ್ಲಿ ಅವಕಾಶವಿಲ್ಲ. 1983(1) ಎಐಎಲ್‌ಎಲ್‌ಆರ್ 551.

77. ಆಡಳಿತಾಧಿಕಾರಿ ಅವಧಿ ಮುಗಿದ ನಂತರ ಅವನು (ಫಂಕ್ಷನ್ ಅಫಿಷಿಯೋ) ಎಂದಾಗುತ್ತಾನೆ ಹಾಗೂ ಅವನು ಮಾಡಿದ ಎಲ್ಲಾ ಆದೇಶಗಳು ತಪ್ಪು. 1974 ಪಿಎಲ್‌ಆರ್ 31.

78. ಒಂದು ಸಹಕಾರ ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸಲು ಕಾರಣ ಕೇಳುವ ನೋಟೀಸ್ ಜಾರಿ ಮಾಡಿದಾಗ ಹಣಕಾಸು ಪೂರೈಸುವ ಸಂಸ್ಥೆಗೆ ಅಥವಾ ಸಾಲ ಕೊಟ್ಟ ಸಂಸ್ಥೆಯ ವಿವರಣೆ ಪಡೆಯುವುದು ಅಭಿಪ್ರಾಯ ಪಡೆಯುವುದು ಕಡ್ಡಾಯವಲ್ಲ. ಐಎಲ್‌ಆರ್ 1973 ಕರ್ನಾಟಕ 1170.

79. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಹಣಕಾಸು ಪೂರೈಸುವ ಸಂಸ್ಥೆ ಅಭಿಪ್ರಾಯ ಕೇಳುವುದು ಅವಶ್ಯಕ. 1976 ಸಿಎಲ್‌ಜೆ 130 ಎಂಪಿ.

80. ಸರ್ಕಾರ ಕಲಂ 54 ಮತ್ತು 104ನ್ನು ಉಪಯೋಗಿಸಿ ಒಂದು ಸಹಕಾರ ಬ್ಯಾಂಕನ್ನು ಆಡಳಿತ ಮಂಡಳಿ ರದ್ದುಪಡಿಸಿದ್ದು ಮತ್ತು ಇದಕ್ಕೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿರಲಿಲ್ಲ. ಇದನ್ನು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ ಮತ್ತು ಕಾನೂನುಬಾಹಿರ ಎಂದು ತೀರ್ಪಿತ್ತಿತ್ತು. ಎಐಆರ್ 1924 ಎಸ್‌ಸಿ 1863.

81. ಸರ್ಕಾರ ಒಂದು ಪ್ರಾಥಮಿಕ ಭೂ ಬ್ಯಾಂಕನ್ನು ಆಡಳಿತ ಮಂಡಳಿಯ ಅಧಿಕಾರವನ್ನು ವಹಿಸಿಕೊಳ್ಳಬಾರದು ಮತ್ತು ಆ ಅವಧಿಯನ್ನು ಎರಡು ವರ್ಷಕ್ಕೆ ಮೀರಿದ ನಂತರ ಮಹಾಸಭೆ ಒಪ್ಪಿಗೆ ಪಡೆದು ಒಂದು ವರ್ಷಕ್ಕೆ ವಿಸ್ತರಿಸಬಹುದು. ಈ ಆದೇಶವನ್ನು ಮನಸೋ ಇಚ್ಛೆ ನಿರ್ವಹಿಸಲು ಪ್ರಾಧಿಕಾರಕ್ಕೆ ಅಧಿಕಾರವಿಲ್ಲ. ಐಎಲ್‌ಆರ್ 1981(1) ಕರ್ನಾಟಕ 18.

82. ಎರಡು ವರ್ಷದ ಅವಧಿಗೆ ಒಂದು ಆಡಳಿತ ಮಂಡಳಿಯನ್ನು ರದ್ದು ಮಾಡಿದ್ದರೆ ಅಂತಹ ಸಮಯದಲ್ಲಿ ನಿಬಂಧಕರು ಮಹಾಸಭೆಯನ್ನು ಕರೆದು ಅಭಿಪ್ರಾಯ ಪಡೆಯುವುದು ಕಡ್ಡಾಯ. 1973(1) ಮೈಸೂರು ಎಲ್‌ಜೆ ಎಸ್ ಎನ್ 21.

83. ಮಹಾಸಭೆಯು ಬೈಲಾದಲ್ಲಿರುವ ನೀತಿ ನಿಯಮಗಳನ್ನು ಅನುಸರಿಸಿ ಸದಸ್ಯರನ್ನು ಸೇರಿಸಿಕೊಳ್ಳಬೇಕು. ಆ. ಸದಸ್ಯರನ್ನು ಸೇರಿಸಿಕೊಳ್ಳುವುದು, ಬೈಲಾ ಅವಕಾಶವನ್ನು ಉಲ್ಲಂಘಿಸಿದಂತೆ ಮತ್ತು ಅಂತಹ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಲು ಅಧಿಕಾರ ಹೊಂದಿಲ್ಲ. ಪಿಎಲ್‌ಆರ್ 1994(2) ಕರ್ನಾಟಕ 1588.

84. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವ ಅಧಿಕಾರ ಮತ್ತು ಅಂತಹ ಸಂಘದ ತಪ್ಪುಗಳಿಂದ ಜವಾಬ್ದಾರಿ ರಹಿತ ಕಾರ್ಯನಿರ್ವಹಣೆ ಮಾಡಿದಾಗ ಇನ್‌ಚಾರ್ಜ್ ಉಪ ನಿಬಂಧಕರು ಅಧಿಕಾರ ಚಲಾಯಿಸತಕ್ಕದ್ದು. ಐಎಲ್‌ಆರ್ 1966 ಮೈಸೂರು 1168/1977(2) ಮೈಸೂರು ಎಲ್‌ಜೆ 325.

85. ಆರೋಪಪಟ್ಟಿ ರುಜುವಾತಾದ ನಂತರ ನಿಬಂಧಕರು ಆಡಳಿತ ಮಂಡಳಿಯನ್ನು ರದ್ದುಪಡಿಸಬಹುದು. ಒಂಬತ್ತು ಜನ ಆಡಳಿತ ಮಂಡಳಿ ಸದಸ್ಯರಲ್ಲಿ 5 ಜನ ನಿರ್ದೇಶಕರು ರಿಟ್ ಅರ್ಜಿ ಮುಖಾಂತರ ಆ ಆದೇಶವನ್ನು ಪ್ರಶ್ನಿಸಬಹುದು. 1976(2) ಕೆಎಲ್‌ಜೆ 123.

86. ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಆ ಅಧಿಕಾರ ಹೊಂದಿರುವ ವ್ಯಕ್ತಿ ತನ್ನ ಮನಸ್ಸನ್ನು ಮನಸ್ಸಿನಲ್ಲಿ ವಿಷಯ ಗ್ರಹಿಸಿ ದಾಖಲೆಗಳ ಮೇಲೆ ಆದೇಶಿಸಬೇಕು. ಆಡಳಿತ ಮಂಡಳಿಯನ್ನು ರದ್ದು ಮಾಡುವುದು ಸಂವಿಧಾನದ 19ಸಿಸಿ ಪರಿಚ್ಛೇದಕ್ಕೆ ವಿರುದ್ಧವಲ್ಲ. 1989 ಕೆಎಲ್‌ಜೆ 218.

87. ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಪಡೆದಂತಹ ಉತ್ತರಗಳನ್ನು ಆರೋಪಗಳೆಂದು ವಿಮರ್ಶಿಸಿ ತೀರ್ಮಾನ ತೆಗೆದುಕೊಳ್ಳತಕ್ಕದ್ದು. ಆರೋಪ ಪಟ್ಟಿಗೆ ಕೊಟ್ಟ ಉತ್ತರಗಳನ್ನು ಪರಿಶೀಲಿಸದೆ ಇದನ್ನು ಒಂದು ಸಾಮಾನ್ಯ ಅಂಶ ಎಂದು ಪರಿಗಣಿಸಿ ಆದೇಶಿಸುವುದು ತಪ್ಪು. ಸಾಮಾನ್ಯ ನ್ಯಾಯದ ಅನ್ವಯ ವಿವರಣೆಗಳನ್ನು ಪರಿಶೀಲಿಸಿ ಪರಾಮರ್ಶಿಸಿ ಸೂಕ್ತ ಅಸೂಕ್ತ ಎಂದು ಪರಿಗಣಿಸಿದ ನಂತರ ಆದೇಶಿಸಬೇಕು. ಇಲ್ಲದಿದ್ದರೆ ಅಂತಹ ಆದೇಶ ನ್ಯಾಯಸಮ್ಮತವಲ್ಲ.

1989(2) ಕೆಎಲ್‌ಜೆ 17.

88. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವ ಪೂರ್ವದಲ್ಲಿ ಕಾರಣ ಕೇಳುವ ನೋಟೀಸ್ ಕೊಟ್ಟು ವಿವರಣೆಯನ್ನು ಪಡೆದು ದಾಖಲೆಗಳನ್ನು ಮತ್ತು ಸಾಕ್ಷಿಗಳನ್ನು ಪರಿಶೀಲಿಸದೆ ಇದ್ದರೆ ಆ ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸಿರುವುದು ಮನಸ್ಸನ್ನು ಹೂಡಿ ಆದೇಶಿಸಿದ ಆದೇಶವಲ್ಲ ಎಂದು ಪರಿಗಣಿಸಬೇಕು. 1989(2) ಕೆಎಲ್‌ಜೆ 2.

89. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ತಕರಾರುಗಳು ಇದ್ದಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಿ ಆದೇಶಿಸಿದ್ದರೆ, ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾದ ಆದೇಶವಲ್ಲ. ವಿವರಣೆ ಸಲ್ಲಿಸಲು ಅವಕಾಶ ಕಲ್ಪಿಸುವುದು ಅವಶ್ಯಕವಲ್ಲ. ಐಎಲ್‌ಆರ್ 1978(1) ಕರ್ನಾಟಕ 475/ಐಎಲ್‌ಆರ್ 1978 ಕರ್ನಾಟಕ 127.

90. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆ ನೇಮಿಸಿದ ಸಂದರ್ಭದಲ್ಲಿ ಒಬ್ಬ ನಿರ್ದೇಶಕ ಆಡಳಿತ ಮಂಡಳಿಗೆ ರಾಜೀನಾಮೆ ಕೊಟ್ಟಿದ್ದರೆ ಆ ರಾಜೀನಾಮೆ ಆಧಾರದ ಮೇಲೆ ಕಲಂ 30(3)ರಡಿಯಲ್ಲಿ ಅನರ್ಹತೆಗೊಳಿಸಿದ್ದರೆ ಆ ಆದೇಶ ಕಲಂ 29(ಬಿ) ಗೆ ತಡೆಯೊಡ್ಡುತ್ತದೆ. ಐಎಲ್‌ಆರ್ 1984(4) ಕರ್ನಾಟಕ 3640 ಕೆಎಲ್‌ಜೆ 646.

91. ನಿಬಂಧಕರು ಆಡಳಿತ ಮಂಡಳಿಯನ್ನು ರದ್ದುಪಡಿಸುವ ಕಾರಣ ಕೇಳುವ ನೋಟೀಸ್ ಕೊಟ್ಟಾಗ ಕಲಂ 30(5) ಹಣಕಾಸು ಪೂರೈಸುವ ಸಂಸ್ಥೆ ತೀರ್ಮಾನ ಕೇಳುವುದು ಅವಶ್ಯಕ. ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ ಕೂಡಲೇ ಅದನ್ನು ಆದೇಶ ಎಂದು ಕಲಂ 30ರನ್ವಯ ಪರಿಗಣಿಸತಕ್ಕದಲ್ಲ. ನಿರ್ದೇಶಕರು ಕಲಂ 30(1)ರನ್ವಯ ಕಾರಣ ಕೇಳುವ ನೋಟೀಸ್ ಕೊಟ್ಟ ನಂತರ ಮತ್ತೆ ಅವಕಾಶದ ಅವಶ್ಯಕತೆ ಇಲ್ಲ. ಐಎಲ್‌ಆರ್ 1973 ಮೈಸೂರು 1170.

92. ಒಂದು ಸಹಕಾರ ಸಂಘದ ಆಡಳಿತ ಮಂಡಳಿ ರದ್ದುಪಡಿಸಿ ಆಡಳಿತಾಧಿಕಾರಿ ನೇಮಿಸಿದಾಗ ಆಡಳಿತಾಧಿಕಾರಿ ಅವಧಿಯಲ್ಲಿ ಆಡಳಿತಾಧಿಕಾರಿಯು ಸದಸ್ಯರನ್ನು ಸೇರಿಸಿಕೊಳ್ಳುವುದು ಅಧಿಕಾರದ ವ್ಯಾಪ್ತಿಗೆ ಮೀರಿದ್ದು ಮತ್ತು ಬೈಲಾ ಅವಕಾಶಕ್ಕೆ ವಿರೋಧ. ಅಂತಹ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸತಕ್ಕದಲ್ಲ.

93. ಆಡಳಿತ ಮಂಡಳಿ ರದ್ದುಪಡಿಸಿರುವುದು ಕಾನೂನು ಬಾಹಿರ ಎಂಬ ತೀರ್ಮಾನಕ್ಕೆ ಬಂದಾಗ ಯಾವ ಸ್ಥಿತಿಯಲ್ಲಿ ಚುನಾವಣೆ ನಿಲ್ಲಿಸಲಾಗಿತ್ತೋ ಆ ಸ್ಥಿತಿಯಿಂದ ಮುಂದುವರೆಸತಕ್ಕದ್ದು. ಆಡಳಿತಾಧಿಕಾರಿ ಅವಧಿಯಲ್ಲಿ ನೇಮಕಗೊಂಡ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸತಕ್ಕದಲ್ಲ. ಐಎಲ್‌ಆರ್ 1974 ಕರ್ನಾಟಕ 1588.

94. ಆಡಳಿತ ಮಂಡಳಿ ರದ್ದುಪಡಿಸುವ ಪೂರ್ವದಲ್ಲಿ ಅಂತಹ ನಿರ್ದೇಶಕರಿಗೆ ಅವಕಾಶವನ್ನು ಕಲ್ಪಿಸದೆ ಹಾಗೂ ತಕರಾರನ್ನು ಸಲ್ಲಿಸದೆ ಎರಡು ವರ್ಷದ ಅವಧಿಗೆ ಆಡಳಿತಾಧಿಕಾರಿ ನೇಮಿಸುವುದು ಸಮರ್ಪಕ ಆದೇಶ ಇಲ್ಲ. ನಿಬಂಧಕರು ಈ ಆದೇಶ ಹೊರಡಿಸುವ ಪೂರ್ವದಲ್ಲಿಯೇ ಅಂದರೆ ನೋಟೀಸ್ ಕೊಡುವ ಪೂರ್ವದಲ್ಲಿ ಆಡಳಿತ ಮಂಡಳಿ ರದ್ದುಪಡಿಸಬೇಕೆಂದು ತೀರ್ಮಾನಿಸಿದರೆ ಆ ತೀರ್ಮಾನದ

ಆಧಾರದ ಮೇಲೆ ಪ್ರಶ್ನಿಸುವಂತಿಲ್ಲ. ಏಕೆಂಧರೆ ಇದು ಕಾರ್ಯಾಂಗದ ಒಂದು ಕೆಲಸ. ಮೌಖಿಕ ವರದಿ ಸಲ್ಲಿಸಲು ಮತ್ತು ಸ್ವಾಭಾವಿಕ ನ್ಯಾಯದ ಅನ್ವಯ ತನ್ನ ನ್ಯಾಯಾಂಗ ಖಾತೆ ನಿರ್ವಹಿಸುವಾಗ ಅದು ನ್ಯಾಯಾಧೀಕರಣದ ಅಧಿಕಾರ ಮೊಟಕುಗೊಳಿಸಿರುತ್ತದೆ ಎಂದು ತೀರ್ಮಾನಿಸತಕ್ಕದಲ್ಲ. ಅಂದರೆ ಸ್ವಾಭಾವಿಕ ನ್ಯಾಯದ ಅನ್ವಯ ನ್ಯಾಯಾಧೀಕರಣದ ಅನುಸರಿಸಿಲ್ಲವೆಂದು ಮಧ್ಯಪ್ರವೇಶಿಸುವ ಅಧಿಕಾರ ಹೊಂದಿದೆ. 1969 ಜಬ್ಬಲ್‌ಪುರರ ಎಲ್‌ಜೆ 88.

95. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಸಮರ್ಪಕ ಕಾರಣಗಳು ಎಂದು ನಮೂದಿಸಿದಾಗ ಅದನ್ನು ಯಾವ ಸಮಯದಲ್ಲಿ ಅಸಮರ್ಪಕ ಕಾರಣಗಳು ಇದ್ದವೋ, ಅದರ ಹಿಂದಿನ ಅವಧಿಯಲ್ಲಿ ಎಂದು ವಿಮರ್ಶಿಸತಕ್ಕದ್ದು. ಎಐಆರ್ 1954 ಎಸ್‌ಸಿ 526.

96. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಆ ಸಹಕಾರ ಸಂಘ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಅಭಿಪ್ರಾಯಕ್ಕೆ ಬರಬೇಕು. ಇದು ಕಾನೂನು ಮತ್ತು ನಿಯಮಗಳಲ್ಲಿ ಅವಶ್ಯಕ. ನಿಬಂಧಕರ ಸಮಾಧಾನಕ್ಕೆ ಕೆಲಸ ನಿರ್ವಹಿಸುತ್ತಿಲ್ಲವೆಂದು ಅಥವಾ ದ್ಯೇಯೋದ್ದೇಶಗಳನ್ನು ಸಮರ್ಪಕವಾಗಿ ಜಾರಿಗೊಳಿಸುತ್ತಿಲ್ಲವೆಂದು ನಿಬಂಧಕರು ಬರುವ ತೀರ್ಮಾನಕ್ಕೆ ಸಂವಿಧಾನದ ಪರಿಚ್ಛೇದ 226ರಲ್ಲಿ ವಿಚಾರಣೆ ಮಾಡಿ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. 1971 ಸಿಎಲ್‌ಜೆ ಪೇಜ್ 1 ಎಪಿ.

97. ನಿಬಂಧಕರು ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ತನ್ನ ಸಮಾಧಾನಕರ ಅಭಿಪ್ರಾಯಕ್ಕೆ ಬರಬೇಕಾದಾಗ ಆ ಸಂಘ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ ಮತ್ತು ಆ ಸಂಘ ಉದ್ದೇಶಪೂರ್ವಕವಾಗಿ ಕಾಯಿದೆ, ನಿಯಮ ನಿರ್ದೇಶನಗಳನ್ನು ಧಿಕ್ಕರಿಸಿದಾಗ ಮಧ್ಯಪ್ರವೇಶ ಮಾಡಿ ಆಡಳಿತಾಧಿಕಾರಿ ನೇಮಿಸುವ ಅವಕಾಶ ಹೊಂದಿದ್ದಾನೆ. ಹಾಗೂ ಉಚ್ಚ ನ್ಯಾಯಾಲಯದ ಸಂವಿಧಾನದ ಪರಿಚ್ಛೇದ 226ರಡಿ ಮಧ್ಯಪ್ರವೇಶಿಸಲಾಗದು. 1971 ಸಿಎಲ್‌ಜೆ ಪೇಜ್ 5 ಎಪಿ.

98. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ನಿಬಂಧಕರು ಆರೋಪಗಳನ್ನು ಹುಡುಕುವಾಗ ತನ್ನ ಮನಸೋ ಇಚ್ಛೆ ದಂಡಿಸಬೇಕೆಂದು ವೈಯಕ್ತಿಕ ಸಮಾಧಾನದಿಂದ ನೋಟೀಸ್ ಜಾರಿ ಮಾಡಿದಾಗ ಅದನ್ನು ವೈಯಕ್ತಿಕ ಆಸ್ತಿಯಿಂದ ಆದೇಶಿಸಿದಾಗ ಅದು ವ್ಯಕ್ತಿಗತ ಸಂಧಾನ ಎಂದು ಪರಿಗಣಿಸಬೇಕು. ಆ ಕಾರಣದಿಂದ ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ದ ಹಾಗೂ ಆಧಾರರಹಿತ ಹಾಗೂ ಮೇಲ್ಮನವಿ ಪ್ರಾಧಿಕಾರಗಳು ಇಂತಹ ಆದೇಶ ಎತ್ತಿಹಿಡಿದರೂ ಅದು ಸಹ ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ. ನಿಬಂಧಕರಿಗೆ ಕೊಡಮಾಡುವ ಅಂಕಿಅಂಶಗಳು ಹಾಗೂ ದಾಖಲೆಗಳನ್ನು ಆದ ರೀತಿ ಕ್ರಮ ಜರುಗಿಸಬೇಕು. ಹಿಂದಿನ ಆಡಳಿತ ಮಂಡಳಿ ಮಾಡಿದ ನ್ಯೂನತೆ ಮತ್ತು ತಪ್ಪುಗಳಿಗೆ ಹಾಲಿ ಇರುವ ಆಡಳಿತ ಮಂಡಳಿಗೆ ನೋಟೀಸ್ ಕೊಟ್ಟು ಕ್ರಮ ಜರುಗಿಸಿದಾಗ ಅಂತಹ ಕ್ರಮ ಸೂಕ್ತವಲ್ಲ. ಸಿಎಲ್‌ಜೆ 1971 ಪೇಜ್ 67 ಮದ್ರಾಸ್.

99. ಆಡಳಿತ ಮಂಡಳಿಯ ರದ್ಧತಿ ಆದೇಶ ಮಾಡಿದಾಗ ನಿಬಂಧಕರು ತನ್ನ ಮನಸ್ಸನ್ನು ಸಮರ್ಪಕವಾಗಿ

ಬಳಸಿ ಆದೇಶಿಸಬೇಕು ಎಂಬುದಕ್ಕೆ ಒಂದು ಪಟ್ಟಿಯನ್ನು ಮಾಡಿ ಪರಿಶೀಲಿಸತಕ್ಕದಲ್ಲ. ಮೇಲ್ಮನವಿ ಪ್ರಾಧಿಕಾರ ಪ್ರತಿಯೊಂದು ವಿಷಯದ ಬಗ್ಗೆಯೂ ಕಾರಣ ಕೊಟ್ಟು ಒಪ್ಪುವುದು ಹಾಗೂ ಸಹಾಯಕ ನಿಬಂಧಕರ ಅಭಿಪ್ರಾಯ ಸಮರ್ಥಿಸುವುದು ನ್ಯಾಯ ಸಮ್ಮತವಲ್ಲ ಮತ್ತು ಸಂವಿಧಾನದ ಪರಿಚ್ಛೇದ 19ಕ್ಕೆ ವಿರೋಧ ಎಂದು ಪರಿಗಣಿಸತಕ್ಕದಲ್ಲ. 1989(1) ಕೆಎಲ್‌ಜೆ 290.

100 ಆಡಳಿತ ಮಂಡಳಿಯ ನಿರ್ದೇಶಕರ ಮೇಲೆ ಹಲವಾರು ಆರೋಪಗಳಿದ್ದು ಉತ್ತರ ಪಡೆದ ನಂತರ ಆ ಆರೋಪಗಳ ಮೇಲೆ ತೀರ್ಮಾನಕ್ಕೆ ಬಂದಾಗ ಮತ್ತಾವುದೇ ವಿಷಯದ ಆಧಾರದ ಮೇಲೆ ಅವಕಾಶವನ್ನು ಕಲ್ಪಿಸದೆ ಹೆಚ್ಚುವರಿ ಆರೋಪ ಮಾಡಿ ಆಡಳಿತ ಮಂಡಳಿ ರದ್ದುಪಡಿಸಿದ್ದರೆ ಅದನ್ನು ಎತ್ತಿ ಹಿಡಿಯಲಾಗದು. 1976(2) ಕೆಎಲ್‌ಜೆ 123 ಡಿಬಿ.

101 ಕಾಯಿದೆ ಕಲಂ 106ರಲ್ಲಿ ಕೊಟ್ಟಿರುವ ಮೇಲ್ಮನವಿ ಅವಕಾಶ. ಒಂದು ಆಡಳಿತ ಮಂಡಳಿ ರದ್ದುಪಡಿಸಿದಾಗ ಮೇಲ್ಮನವಿ ಸಲ್ಲಿಸಲು ಸಮರ್ಪಕ ಅವಕಾಶ. ಇದನ್ನು ಸಂವಿಧಾನ ಪರಿಚ್ಛೇದ 226ರಲ್ಲಿ ಪ್ರಶ್ನಿಸಲಾಗದು. 1981 ಕೆಎಲ್‌ಜೆ 39.

102 ನಿಬಂಧಕರ ಅಧಿಕಾರವನ್ನು ಸರ್ಕಾರ ಉಪ ನಿಬಂಧಕರಿಗೆ ಕೊಡಮಾಡಿದ್ದರೆ ಅಂತಹ ಉಪ ನಿಬಂಧಕರು ಒಂದು ಸಂಘದ ಆಡಳಿತ ಮಂಡಳಿ ರದ್ದುಪಡಿಸಿ ಆದೇಶಿಸಿದ್ದರೆ ಅದರ ನಿಯಮಗಳಡಿ ಕಲಂ 106(2)(ಡಿ) ಸಂಯುಕ್ತ ನಿಬಂಧಕರಿಗೆ ಇರತಕ್ಕದ್ದು ಹಾಗೂ ಅದು ರಾಜ್ಯ ಸರ್ಕಾರಕ್ಕೆ ಅಲ್ಲ. 1970(1) ಮೈಸೂರು ಎಲ್‌ಜೆ ಡಿಬಿ 530.

103 ನಿಬಂಧಕರು ಒಂದು ಆಡಳಿತ ಮಂಡಳಿ ರದ್ದುಪಡಿಸುವಾಗ ಪ್ರತಿಯೊಂದು ಆರೋಪದ ಬಗ್ಗೆ ಪಡೆದ ವಿವರಣೆಯನ್ನು ತಿರಸ್ಕರಿಸುವಾಗ ಎಲ್ಲಾ ಉತ್ತರಗಳನ್ನು ಪರಿಶೀಲಿಸಲಾಗಿದೆ ಹಾಗೂ ಆರೋಪಗಳು ರುಜುವಾತಾಗಿದೆ ಎಂದು ಒಂದೇ ವಾಕ್ಯದಲ್ಲಿ ಆಡಳಿತ ಮಂಡಳಿ ರದ್ದುಪಡಿಸಿದ್ದರೆ ಅದು ಸಮರ್ಪಕ ಆದೇಶವಲ್ಲ. (ಸ್ಪೀಕಿಂಗ್ ಆರ್ಡರ್ 1989(2) ಕೆಎಲ್‌ಜೆ 79)

104 ಆಡಳಿತಾಧಿಕಾರಿ ಅಥವಾ ವಿಶೇಷಾಧಿಕಾರಿಯನ್ನು ಸಂಘವನ್ನು ನಿಯಂತ್ರಿಸಲು ಮತ್ತು ಸಮರ್ಪಕವಾಗಿ ಕೆಲಸ ನಿರ್ವಹಿಸಲು ನೇಮಿಸಿದಾಗ ಅಂತಹ ಅಧಿಕಾರಿ ಸಂಘದ ವ್ಯವಸ್ಥಿತ ಕಾರ್ಯ ನಿರ್ವಹಣೆಗೆ ಕ್ರಮ ಕೈಗೊಳ್ಳುವುದು. ಆಡಳಿತ ಮಂಡಳಿ ಚುನಾವಣೆಯನ್ನು ನಡೆಸುವುದು. ಆದರೆ ಈ ಅರ್ಥದಲ್ಲಿ ಆಡಳಿತಾಧಿಕಾರಿ ಮತ್ತು ವಿಶೇಷಾಧಿಕಾರಿ ಹಿಡಿದು ಕಟ್ಟುವ ಅಧಿಕಾರ ಇಲ್ಲ. ಎಐಆರ್ 1997 ಎಸ್‌ಸಿ 295.

105. ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಕಾರಣಗಳು ಕ್ಷುಲ್ಲಕವಾಗಿದ್ದು ಅದು ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟಿದ್ದು, ಆದರೆ ಅಂತಹ ಆರೋಪಗಳನ್ನು ಹೊರಿಸುವಾಗ ಆ ಆರೋಪಗಳು ಗುರುತವಾಗಿರಬೇಕು, ಬೇಜವಾಬ್ದಾರಿತನದ್ದಾಗಿರಬೇಕು ಹಾಗೂ ತಪ್ಪುಗಳನ್ನು ಸತತವಾಗಿ ಮಾಡುತ್ತಿರಬೇಕು. ಅಂತಹ ಸಂದರ್ಭದಲ್ಲಿ ಅಂತಿಮ ಕ್ರಮವಾಗಿ ಆ. ನೇಮಿಸಬೇಕು. 2003(3) ಕೆಸಿಸಿಆರ್‌ಎನ್‌ಎನ್ 82 2841/2000(4) ಕರ್ನಾಟಕ ಎಲ್‌ಜೆ 364.

106. ಆಡಳಿತಾಧಿಕಾರಿ ನೇಮಿಸಿದಾಗ ಅಂತಹ ವ್ಯಕ್ತಿ ಆಡಳಿತ ಮಂಡಳಿ ಅಧಿಕಾರ ಚಲಾಯಿಸಬಹುದು.

ಆದರೆ ಮಹಾಸಭೆ ಅಧಿಕಾರ ಚಲಾಯಿಸಲಾಗದು. 1974(2) ಕೆಎಲ್‌ಜೆ ಎಸ್‌ಎನ್ 12.

107. ಆಡಳಿತಾಧಿಕಾರಿಯು ರದ್ದುಪಡಿಸಲಾದ ಆಡಳಿತ ಮಂಡಳಿಯ ತೀರ್ಮಾನದಂತೆ ಚುನಾವಣೆಯನ್ನು ದಿನಾಂಕ: 31–5–1999ಕ್ಕೆ ಪೂರ್ವದಲ್ಲಿ ನಡೆಸಬೇಕೆಂದಿರುವುದನ್ನು ಪಾಲಿಸಬೇಕೆಂದಿರುವುದನ್ನು ಪಾಲಿಸಬೇಕಾಗಿಲ್ಲ. ಆಡಳಿತಾಧಿಕಾರಿಗೆ ಅವನನ್ನು ನೇಮಿಸಿದ 6 ತಿಂಗಳೊಳಗೆ ಚುನಾವಣೆ ನಡೆಸಬೇಕು. ಮಹಾಸಭೆಯನ್ನು ಮತ್ತು ಚುನಾವಣೆಯನ್ನು ಆದಷ್ಟು ಶೀಘ್ರವಾಗಿ ಆ. ಅವಧಿ ಮುಗಿಯುವ ಪೂರ್ವದಲ್ಲಿ ನಡೆಸಬೇಕು ಎಂಬುದರ ಜೊತೆಗೆ ಆ.ಯು ಆ ಸಂಘದ ಆಡಳಿತ ನಿರ್ವಹನೆ ಸರಿಯಲ್ಲವೆಂದು ರದ್ದುಪಡಿಸಿದಾಗ ಅದನ್ನು ಸರಿಪಡಿಸುವುದು ಆಡಳಿತಾಧಿಕಾರಿ ಕೆಲಸ. 1999(4) ಕೆಸಿಸಿಆರ್ ಎಸ್‌ಎನ್ 222.

## ವಿಶೇಷಾಧಿಕಾರಿ ನೇಮಕ :

1. ಸಹಕಾರ ಸಂಘಗಳ ಕಾಯಿದೆ ಕಲಂ 30ಎ, ಕಲಂ 30ಕ್ಕಿಂತಲೂ ವಿಭಿನ್ನ ಹಾಗೂ ಕಲಂ 30, 30ಎ ಅನ್ನು ನಿಯಂತ್ರಿಸುವುದಿಲ್ಲ. ಕಲಂ 31ಎ ಅನ್ನು ಚಲಾಯಿಸುವಾಗ ವಿಶೇಷ ಮತ್ತು ಅತಿ ತುರ್ತು ಸಮಯದಲ್ಲಿ ಮತ್ತು 30ರಲ್ಲಿರುವ ದಾಖಲೆಗಳು ಮತ್ತು ಸಾಕ್ಷಿಗಳ ಪರಿಶೀಲನೆ ಮಟ್ಟದಲ್ಲಿ ಪರಿಶೀಲಿಸಿದ ನಂತರವೇ ಆದೇಶಿಸಬೇಕೆಂದಿಲ್ಲ. ಏಕೆಂದರೆ ಕಲಂ 30ರಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದ ನಂತರವೇ ಆಡಳಿತಾಧಿಕಾರಿಯನ್ನು ನೇಮಿಸಬೇಕು. ಐಎಲ್‌ಆರ್ 1892 ಕರ್ನಾಟಕ 71 ಕೆಎಲ್‌ಜೆ 291.
2. ಕಲಂ 30ಎ ಅನ್ನು ಉಪಯೋಗಿಸುವಾಗ ಒಂದು ಸಹಕಾರ ಸಂಘ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಕಾರಣಕ್ಕೆ ವಿಶೇಷಾಧಿಕಾರಿ ನೇಮಿಸಬಹುದು 1984(1) ಕೆಎಲ್‌ಜೆ 260.
3. ಸರ್ಕಾರವು ವಿಶೇಷಾಧಿಕಾರಿ ನೇಮಿಸುವಾಗ ಅತಿ ವಿರಳವಾಗಿ ಹಾಗೂ ತುರ್ತು ಹಾಗೂ ಅತಿ ಅವಶ್ಯಕ ಕ್ರಮವೆಂದು ಹಾಗೂ ಕಲಂ 30ರನ್ವಯ ಕ್ರಮ ಜರುಗಿಸಲು ಆಗದೇ ಇದ್ದಾಗ ವಿಶೇಷಾಧಿಕಾರಿ ನೇಮಿಸಬೇಕು. ಕಲಂ 30ಎ ಒಂದು ಸ್ವತಂತ್ರ ಕಲಂ. ಅದನ್ನು 30ರ ವಿಸ್ತರಣೆ ಎಂದು ತಿಳಿಯತಕ್ಕದ್ದಲ್ಲ. 1989(8) ಡಿಬಿ.
4. ಕಲಂ 30ಎ ಅನ್ವಯ ಕಲಂ 30ಕ್ಕಿಂತ ಹೆಚ್ಚು ವಿಸ್ತಾರವುಳ್ಳದ್ದು. ಆದರೆ ಅದು ಒಂದು ವಿಶೇಷ ಅಧಿಕಾರ. ಅದು ವಿಶೇಷ ಸಂದರ್ಭ ಹಾಗೂ ತುರ್ತು ಸಂದರ್ಭದಲ್ಲಿ ಕ್ರಮ ಜರುಗಿಸಬೇಕು. ಇದಕ್ಕೆ ಹೆಚ್ಚು ಗಮನಾರ್ಹ ಕಾರಣಗಳು ಹಾಗೂ ದಾಖಲೆಗಳು ಬೇಕು. ಅಂದರೆ ಕಲಂ 30ಕ್ಕಿಂತ ಹೆಚ್ಚು ಗುರುತರವಾದ ಅವಶ್ಯಕವಾದ ತುರ್ತಾದ ಕ್ರಮ ಜರುಗಿಸಬೇಕು ಉಪಯೋಗಿಸಬೇಕು. ಐಎಲ್‌ಆರ್ 1989(2) ಕೆಎಲ್‌ಜೆ 295.

**ಲೆಕ್ಕತಪಾಸಣೆ :**

1. ಸಾರ್ವಜನಿಕ ಹಿತದೃಷ್ಟಿಯಿಂದ ಲೆಕ್ಕಪತ್ರಗಳನ್ನು ಎರಡನೇ ಬಾರಿ ಪರಿಶೀಲಿಸುವುದು ತಪ್ಪಲ್ಲ. ಖಾಸಗಿ ಆಸಕ್ತಿ ಮತ್ತು ಸಾರ್ವಜನಿಕ ಆಸಕ್ತಿ ಮಧ್ಯೆಪ್ರವೇಶಿಸಿದಾಗ ಸಾರ್ವಜನಿಕ ಆಸಕ್ತಿಯೇ ಪ್ರಮುಖವಾಗತಕ್ಕದ್ದು. ಮರು ಲೆಕ್ಕಪರಿಶೋಧನೆ, ಆಗಿರುವ ತಪ್ಪನ್ನು ಸರಿಪಡಿಸುವ ಒಂದು ಕ್ರಮ. ಈ ಕ್ರಮಕ್ಕೆ ನ್ಯಾಯಾಲಯ ಮಧ್ಯಪ್ರವೇಶಿಸತಕ್ಕದ್ದಲ್ಲ. ಆದ್ದರಿಂದ ಮರು ಲೆಕ್ಕಪರಿಶೋಧನೆಯ ಆದೇಶವನ್ನು ಕಿತ್ತುಹಾಕಲಾಗದು. 2009(4) ಕೆಸಿಸಿಆರ್ ಎಸ್‌ಎನ್ 264/ಎಐಆರ್ 2009 (ಎನ್‌ಒಸಿ) 2826 (ಕೆಎಆರ್)

2. ವ್ಯವಸಾಯ ಸಹಕಾರ ಸಂಘಗಳಿಗೆ ಲೆಕ್ಕಪರಿಶೋಧನಾ ಶುಲ್ಕದಲ್ಲಿ ಶೇ.50ರಷ್ಟು ಆಕರಣೆ ಮಾಡುವುದು ವ್ಯವಹಾರಿಕ ವ್ಯತ್ಯಾಸವೇನೂ ಅಲ್ಲ. ಇದು ಸಂವಿಧಾನದ ಪರಿಚ್ಛೇದ 14ಕ್ಕೆ ವಿರುದ್ಧವಾಗಿಲ್ಲ. ವ್ಯವಸಾಯ ಸಹಕಾರ ಸಂಘಗಳಿಗೆ ವಿನಾಯಿತಿ ಕೊಡುವುದರಲ್ಲಿ ವಿಧಾನ ಮಂಡಲ ತೀರ್ಮಾನ ತೆಗೆದುಕೊಂಡಿದ್ದು ಇದು ಅಸಿಂಧುವಾಗುವುದಿಲ್ಲ. 2005(3) ಕೆಸಿಸಿಆರ್ 1930/ಐಎಲ್‌ಆರ್ 2005(2) ಕೆಎಆರ್ 2559/2005(4) ಕೆಎಲ್‌ಜೆ 5/ಎಐಆರ್ 2005 ಕೆಎಎನ್‌ಟಿ 307(ಡಿಬಿ)

3. ಒಂದು ಸಂಘದ ಲೆಕ್ಕತಪಾಸಣೆ ಮಾಡುವ ಸಂದರ್ಭದಲ್ಲಿ ಸಂಘದ ಅವ್ಯವಹಾರದ ಬಗ್ಗೆ ವಿಚಾರಣೆ ಮಾಡಿ ಜವಾಬ್ದಾರಿಯನ್ನು ನಿಗಧಿಪಡಿಸಲಾಗಿದೆ. ಈ ವಿಚಾರಣೆ ಸಮರ್ಪಕವಾಗಿಲ್ಲವೆಂಬ ಆಧಾರದ ಮೇಲೆ ಮತ್ತೊಂದು ವಿಚಾರಣೆಯನ್ನು ಮಾಡುವ ಅವಶ್ಯಕತೆ ಇಲ್ಲ 2003(3) ಕೆಸಿಸಿಆರ್ 1579 (ಡಿಬಿ)

4. ಒಂದು ಸಹಕಾರ ಸಂಘವು ಸ್ವಸಹಾಯ ಮತ್ತು ಸಹಕಾರದ ಆಧಾರದ ಮೇಲೆ ರಚಿತವಾಗಿದ್ದು, ವೈಯಕ್ತಿಕ ಲಾಭಕ್ಕಾಗಿ ಮತ್ತು ಸಂಘಕ್ಕೆ ಮತ್ತು ಸಂಘದ ಆಸ್ತಿಗೆ ನಷ್ಟವನ್ನುಂಟು ಮಾಡತಕ್ಕದ್ದಲ್ಲ. ಈ ಉದ್ದೇಶಕ್ಕಾಗಿಯೇ ಲೆಕ್ಕತಪಾಸಣೆ ನಡೆಸಿ, ವಿಚಾರಣೆ ಮಾಡಿ, ಪರಿವೀಕ್ಷಣೆ ಮಾಡಿ ನಷ್ಟವನ್ನು ತುಂಬಿಕೊಡಲು ಅಧಿಭಾರ ಅರ್ಜಿಯನ್ನು ದಾಖಲಿಸಬಹುದಾಗಿದೆ. 1984(1) ಕೆಎಲ್‌ಜೆ 360.

5. ಕಲಂ 63ರಿಂದ 69ರವರೆವಿಗೆ ಸಹಕಾರ ಸಂಘಗಳನ್ನು ನಿಯಂತ್ರಿಸಲು ನಿಬಂಧಕರಿಗೆ ದೊಡ್ಡ ಪ್ರಮಾಣದ ಅಧಿಕಾರವನ್ನು ಕೊಟ್ಟಿದೆ. ಈ ಅಧಿಕಾರವನ್ನು ಸಹಕಾರ ಸಂಘದ ನ್ಯೂನತೆಗಳನ್ನು ಸರಿಪಡಿಸಲು ಮತ್ತು ಅನಿಯಂತ್ರಿತ, ನಿಷ್ಕ್ರಿಯ ಸಹಕಾರ ಸಂಘಗಳನ್ನು ನಿಯಂತ್ರಿಸಬಹುದಾಗಿದೆ. ಈ ರೀತಿ ನಿಯಂತ್ರಣ ಮಾಡದೇ ಇದ್ದರೆ ಅದು ನಿಬಂಧಕರ ಬೇಜವಾಬ್ದಾರಿ. 1980(2) ಕೆಎಲ್‌ಜೆ 257/ಐಎಲ್‌ಆರ್ 1980(2) ಕೆಎಆರ್ 1402.

**ವಿಚಾರಣೆ :**

1. ವಿಚಾರಣಾ ಅವಧಿಯನ್ನು ನಿಗಧಿಪಡಿಸಿ ಆ ಅವಧಿಯೊಳಗೆ ವರದಿಯನ್ನು ಸಲ್ಲಿಸದೇ ಇದ್ದಾಗ ಅಂತಹ ವರದಿಯು ಅಸಿಂಧುವಾಗತಕ್ಕದ್ದಲ್ಲ. ಆದರೆ ಅಂತಹ ಅಸಿಂಧುವಾಗುವ ಸಂದರ್ಭ ಸೃಷ್ಟಿಯಾಗುವುದು ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಯಾವುದೇ ವ್ಯಕ್ತಿಯನ್ನು ಶಿಕ್ಷಿಸುವ ಉದ್ದೇಶದಿಂದಲೇ ವಿಚಾರಣೆ ಮಾಡುತ್ತಿದ್ದರೆ ಮಧ್ಯಪ್ರವೇಶ ಮಾಡಬಹುದು. ಅಂತಹ ಆರೋಪವನ್ನು ಸಾಬೀತುಪಡಿಸದಿದ್ದರೆ ಸಂವಿಧಾನ ಪರಿಚ್ಛೇದ 227ರಲ್ಲಿ ವಿಚಾರಣೆ ಆದೇಶವನ್ನು ಕಿತ್ತುಹಾಕತಕ್ಕದ್ದಲ್ಲ. 2010(1) ಕೆಸಿಸಿಆರ್ 58/ಐಎಲ್ಆರ್ 2009(3) ಕೆಎಆರ್ 3361/2009(4) ಕೆಎಲ್‌ಜೆ 343/ಎಐಆರ್ 2009 ಎನ್‌ಒಸಿ 2323(ಕೆಎಆರ್)

2. ಕಲಂ 64ರ ವಿಚಾರಣೆಯು ವಸ್ತುಸ್ಥಿತಿಯನ್ನು ಕಂಡುಹಿಡಿಯಲು ಆದೇಶಿಸಲಾಗಿದ್ದು, ಆ ವಿಚಾರಣೆ ಮಾಡುವ ಸಂದರ್ಭದಲ್ಲಿ ವಕೀಲರ ಸಹಾಯ ಪಡೆಯುವ ಅಧಿಕಾರವಿಲ್ಲ. 2006(1) ಕೆಸಿಸಿಆರ್ 665/ಐಎಲ್ಆರ್ 2006(2) ಕೆಎಆರ್ 1502/2006(2) ಕೆಎಲ್‌ಜೆ 303.

3. ಲೋಕಾಯುಕ್ತರು ಸಲ್ಲಿಸಿದ ಮಾಹಿತಿಯ ಆಧಾರದ ಮೇಲೆ ಉಪನಿಬಂಧಕರು ಸ್ವಇಚ್ಛೆಯಿಂದ ವಿಚಾರಣೆ ಅವಶ್ಯಕತೆ ಇದೆಯೆಂದು ತೀರ್ಮಾನಕ್ಕೆ ಬಂದು ವಿಚಾರಣೆಗೆ ಆದೇಶಿಸಿದ್ದರೆ ಇದು ಕಲಂ 64(1)ರನ್ವಯ ಇರುತ್ತದೆ. 2006(1) ಕೆಸಿಸಿಆರ್ 77(ಡಿಬಿ)

4. ಯಾವುದೇ ವಿಚಾರಣೆಗೆ ನಿಬಂಧಕರು ಆದೇಶಿಸಿದಾಗ, ಆ ಆದೇಶ ಮಾಡುವ ಪೂರ್ವದಲ್ಲಿ ಒಬ್ಬ ಸದಸ್ಯರಿಂದ ಬಂದ ಆರೋಪದ ಮೇಲೆ ಆದೇಶಿಸಿದ್ದರೆ ಅದು ಕಲಂ 64(1)ರನ್ವಯ ಅಧಿಕಾರ ಚಲಾಯಿಸಿದಂತೆ. ಆ ಆದೇಶವು ಕಲಂ 64(2)ನ್ನು ಮುರಿದಂತಾಗುವುದಿಲ್ಲ. ಈ ಹಿಂದೆ 1980(1) ಕೆಎಲ್‌ಜೆ 327 ನಲ್ಲಿ ಕೊಟ್ಟ ತೀರ್ಮಾನಕ್ಕೆ ಸಹಮತವಿಲ್ಲವೆಂದು ತನ್ನ ಅಭಿಪ್ರಾಯ ದಾಖಲಿಸಿದೆ. ಈ ತೀರ್ಪು ಕೊಡುವಾಗ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಆ ವ್ಯತ್ಯಾಸದಲ್ಲಿ ಲಿಖಿತ ಮಾಹಿತಿಯ ಮೇಲೆ ಸ್ವಇಚ್ಛೆಯಿಂದ ಆದೇಶ ಮಾಡುವುದು ಅಥವಾ ಸದಸ್ಯರಿಂದ ಲಿಖಿತ ಆರೋಪ ಆಧರಿಸಿ ಆದೇಶಿಸುವುದು. ಅಥವಾ ಆಡಳಿತ ಮಂಡಳಿಯ ಮನವಿಯ ಮೇಲೆ ಆದೇಶಿಸುವುದು ಅಥವಾ ಸದಸ್ಯರ ಮನವಿಯಂತೆ 64(2)ರಂತೆ ಆದೇಶಿಸುವುದು ಎಂಬುದರ ಬಗ್ಗೆ ವ್ಯಾಖ್ಯಾನಿಸಿ ಕಲಂ 64(2)ರಲ್ಲಿ ನಿಬಂಧಕರು ಆದೇಶಿಸಲೇಬೇಕು. ಆದರೆ ಕಲಂ 64(1) ರಲ್ಲಿ ಸ್ವಇಚ್ಛೆಯಿಂದ ಆದೇಶಿಸಲು ಅಧಿಕಾರ ಹೊಂದಿರುತ್ತಾರೆ. ಐಎಲ್ಆರ್ 1990(4) ಕೆಎಆರ್ 3705/1990(2) ಕೆಎಲ್‌ಜೆ 311/3ಐಆರ್ 1991 ಕೆಎಎನ್‌ಟಿ 243(ಡಿಬಿ)

5. ಕಲಂ 64ರ ವಿಚಾರಣೆ ಮಾಡುವ ಸಂದರ್ಭದಲ್ಲಿ ಸ್ವಾಭಾವಿಕ ನ್ಯಾಯದನ್ವಯ ದುರುಪಯೋಗದ ಆರೋಪವನ್ನು ಹೊರಿಸಲಾಗದೇ, ವರದಿ ನೀಡಿದ್ದ ಸಂದರ್ಭದಲ್ಲಿ ಉಪನಿಬಂಧಕರಿಗೆ ಮೇಲ್ಮನವಿ ಸಲ್ಲಿಸುವುದು ಸಾಧು. ಐಎಲ್ಆರ್ 1999(4) ಕೆಎಆರ್ 4683

6. ಕಲಂ 69ರಡಿ ಅಧಿಭಾರ ಅರ್ಜಿ ಮತ್ತು ಕಲಂ 64ರಲ್ಲಿ ವಿಚಾರಣೆ, ಎರಡೂ ಪ್ರತ್ಯೇಕ ಕಲಂಗಳು. 64ರ ವರದಿಯನ್ನಾಧರಿಸಿ ಜವಾಬ್ದಾರಿ ಹೊರಿಸಿದಾಗ, 69ರಲ್ಲಿ ನಿಗಧಿಪಡಿಸಿದ ನಿಯಮಗಳನ್ನು ಪಾಲಿಸುವುದು ಅವಶ್ಯಕತೆಯಿಲ್ಲವೆಂದು ಮತ್ತು ಅಧಿಬಾರ ಅರ್ಜಿಯನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಸ್ವತಂತ್ರ ತೀರ್ಮಾನಕ್ಕೆ ಬರುವುದು ಅವಶ್ಯಕವಿಲ್ಲವೆಂದು ತೀರ್ಮಾನಕ್ಕೆ ಬರುವುದು ಸರಿಯಲ್ಲ. 1991(2) ಕೆಎಲ್‌ಜೆ 2416

7. ಕಲಂ 64(1)ರ ವಿಚಾರಣಾ ಆದೇಶ ಅಧಿಕಾರಿಗಳಿಗೆ ಕೊಟ್ಟ ನಿಯಂತ್ರಣವಿಲ್ಲದ ಅಧಿಕಾರವಲ್ಲ. ಇದು ಸಂವಿಧಾನದ ಪರಿಚ್ಛೇದ 14ಕ್ಕೆ ವಿರುದ್ಧವಲ್ಲ. ಹಾಗೂ ವಿಚಾರಣೆ ಆದೇಶ ಮಾಡುವಾಗ ಸಮರ್ಪಕ ನಿಯಂತ್ರಣವನ್ನೂ ಸೇರಿಸಲಾಗಿದೆ. 1984(1) ಕೆಎಲ್‌ಜೆ 360

8. ಆಡಳಿತ ಮಂಡಳಿಯ ಬಹುಮತದ ಸದಸ್ಯರು ಪದಾಧಿಕಾರಿಗಳ ಮೇಲೆ ಆರೋಪಗಳನ್ನು ಹೊರಿಸಿ ಮನವಿ ಸಲ್ಲಿಸಿದಾಗ ವಿಚಾರಣೆ ಆದೇಶಿಸುವುದು ನಿಬಂಧಕರ ಜವಾಬ್ದಾರಿ, ವಿಚಾರಣೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಗೆ ಸಾಕ್ಷಿಗಳನ್ನು ಪರಿಶೀಲನೆ ಮಾಡಲು ಅವಕಾಶಗಳನ್ನು ಕೊಟ್ಟು ಅವರ ಆರೋಪಗಳನ್ನು ರುಜುವಾತುಪಡಿಸಲು ಕಲ್ಪಿಸಬೇಕು. 1979(1) ಕೆಎಲ್‌ಜೆ ಎಸ್‌ಎನ್ 40.

9. ಸ್ವಇಚ್ಛೆಯಿಂದ ಎಂಬ ಪದವನ್ನು ಅರ್ಥೈಸುವಾಗ ನಿಬಂಧಕರು ನ್ಯೂನತೆಗಳಿದೆ ಎಂಬ ಅಂಶವನ್ನು ಮನದಟ್ಟು ಮಾಡಿಕೊಳ್ಳಬೇಕು. ಮತ್ತು ಆನಂತರ ವಿಚಾರಣೆ ಆದೇಶ ಮಾಡಬೇಕು ಎಂಬ ಅಭಿಪ್ರಾಯಕ್ಕೆ ಬರಬೇಕು. ಈ ಅಭಿಪ್ರಾಯಕ್ಕೆ ಬಂದ ನಂತರ ಸ್ಪಷ್ಟ ಕಾರಣಗಳನ್ನು ನಮೂದಿಸಿ ವಿಚಾರಣೆಗೆ ಆದೇಶ ಮಾಡಬೇಕು. ಆ ವಿಚಾರಣಾ ವರದಿಯನ್ನು ಆಧರಿಸಿ ಕಲಂ 68ರನ್ವಯ ಸೂಕ್ತ ಅನುಪಾಲನೆಗೆ ಸಂಘದ ಅಧಿಕಾರಿಗಳು ಮತ್ತು ನಿರ್ದೇಶಕರಿಗೆ ಅವಶ್ಯಕತೆ ಇದ್ದರೆ ಸೂಚಿಸಬೇಕು. ಈ ನಿರ್ದೇಶನ ಕೊಡುವ ಅಧಿಕಾರ ಇಲ್ಲವೆಂಬ ಅಥವಾ ಅಧಿಕಾರಿ ತನ್ನ ಅಧಿಕಾರ ಮೀರಿ ನಿರ್ದೇಶನ ಕೊಟ್ಟಿದ್ದಾರೆ ಎಂಬ ತೀರ್ಮಾನಕ್ಕೆ ಬರತಕ್ಕದ್ದಲ್ಲ. 1983(2) ಕೆಎಲ್‌ಜೆ 263.

10. ಸ್ವಇಚ್ಛೆಯಿಂದ ಎಂಬ ಪದಕ್ಕೆ ಅರ್ಥೈಸುವಾಗ ಉಪನಿಬಂಧಕರ ವರದಿಯನ್ನಾಧರಿಸಿ ವಿಚಾರಣೆಗೆ ಆದೇಶ ಮಾಡಿರುವುದು ಸರಿ. 1984(1) ಕೆಎಲ್‌ಜೆ ಎಸ್‌ಎನ್ 14

11. ಕಲಂ 30ರಲ್ಲಿ ಆಡಳಿತ ಮಂಡಳಿಯನ್ನು ರದ್ದುಪಡಿಸಲು ಹೊರಡಿಸಿದ ನೋಟೀಸನ್ನು ವಾಪಸ್ಸು ಪಡೆದರೆ ಆ ಆದೇಶದಿಂದ ಕಲಂ 64(1)ರ ವಿಚಾರಣೆ ಮಾಡತಕ್ಕದ್ದಲ್ಲ ಎಂದು ತಿಳಿಯತಕ್ಕದ್ದಲ್ಲ. ಇದು ಒಂದು ಆಡಳಿತಾತ್ಮಕ ವಿಷಯವಾದ್ದರಿಂದ ಇದು (( )) ತತ್ವಕ್ಕೆ ವಿರುದ್ಧವಾಗುವುದಿಲ್ಲ. 1989(1) ಕೆಎಲ್‌ಜೆ 143

12. ಯಾವ ವಿಚಾರಣೆಯಲ್ಲಿ ಯಾರು ಅವ್ಯವಹಾರಗಳನ್ನು ಮಾಡಿದ್ದಾರೆಂದು ಗುರುತಿಸಬೇಕಾದರೆ 18 ತಿಂಗಳ ಅವಧಿಯೊಳಗೆ ಮುಕ್ತಾಯಗೊಳಿಸಬೇಕೆಂಬ ಷರತ್ತಿನೊಳಗೆ ವರದಿ ಕೊಡಲಾಗದಿದ್ದರೆ, ಅಂತಹ ವಿಚಾರಣೆ ತಪ್ಪು ಎಂಬುದು ಸರಿಯಲ್ಲ. ಅವಧಿಯೊಳಗೆ ಮುಕ್ತಾಯ ಮಾಡಿಲ್ಲವೆಂಬ ನ್ಯೂನತೆಯ ಉಪಯೋಗವನ್ನು ಆರೋಪಿಗಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳತಕ್ಕದ್ದಲ್ಲ. ಯಾರು ಜವಾಬ್ದಾರರು ಎಂದು ತಿಳಿಯುವುದೇ ವಿಚಾರಣೆಯ ಉದ್ದೇಶ. 2010(1) ಕೆಸಿಸಿಆರ್

58/ಐಎಲ್‌ಆರ್ 2009(3) ಕೆಎಆರ್ 3361/2009(4) ಕೆಎಲ್‌ಜೆ 343/ಎಐಆರ್ 2009 ಎನ್‌ಒಸಿ 2323(ಕೆಎಆರ್)

13. ವಿಚಾರಣೆಯ ಸಮಯದಲ್ಲಿ ಸಮನ್ಸ್ ಜಾರಿ ಮಾಡದೇ, ಪ್ರಮಾಣದ ಮುಖಾಂತರ ಹೇಳಿಕೆ ಪಡೆಯಲಾಗದೇ, ಅಧಿಭಾರ ಅರ್ಜಿಯನ್ನು ದಾಖಲಿಸಿ, ಆನಕಂತರ ವಿಚಾರಣೆ ಮಾಡುವುದು ಕಾನೂನಿಗೆ ವಿರುದ್ಧ 1991(2) ಕೆಎಲ್‌ಜೆ 23.

14. ವಿಚಾರಣಾ ವರದಿ ನ್ಯಾಯಾಲಯದ ರಿಟ್ ಅರ್ಜಿ ಹೂಡಲು ಬರುವುದಿಲ್ಲ. ಎಐಆರ್ 1959 ಎಸ್‌ಸಿ 107. ವರದಿ ಮುಖ್ಯಾಂಶವನ್ನು ಸಂಘಕ್ಕೆ ಲಿಖಿತವಾಗಿ ತಿಳಿಸುವುದು ನಿಬಂಧಕರ ಕಾನೂನುಬದ್ಧ ಕರ್ತವ್ಯ ಮತ್ತು ನ್ಯೂನತೆಗಳ ಮೇಲೆ ಕ್ರಮ ಜರುಗಿಸಲು ಸೂಚಿಸಿ ಕಲಂ 68ರನ್ವಯ ಆದೇಶಿಸಬೇಕು. ವರದಿ ಮುಖ್ಯಾಂಶವನ್ನು ಸಂಘಕ್ಕೆ ತಿಳಿಸುವುದು ನಿಬಂಧಕರ ಕಾನೂನುಬದ್ಧ ಕರ್ತವ್ಯ ಮತ್ತು ನ್ಯೂನತೆಗಳ ಮೇಲೆ ಕ್ರಮ ಜರುಗಿಸಬೇಕೆಂದರೆ, ಸಾರಾಂಶವನ್ನು ತಿಳಿಸಲೇಬೇಕು. 1959 ಎಸ್‌ಸಿ 107.

15. ಕಲಂ 63, 64, 65 ಮತ್ತು 72ರನ್ವಯ ವಿಚಾರಣೆ ಮಾಡುವಾಗ, ಯಾವ ವ್ಯಕ್ತಿಯ ಮೇಲೆ ಸಂಘದ ಆಸ್ತಿಯಲ್ಲಿ ಕೊರತೆ ಉಂಟು ಮಾಡುತ್ತಾರೋ, ಅಂತಹ ವ್ಯಕ್ತಿಗೆ ವಿಚಾರಣಾ ಸಮಯದಲ್ಲಿಯೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಲಿಖಿತ ಉತ್ತರ ಪಡೆದು, ದಾಖಲೆ ಪರಿಶೀಲಿಸಿ, ಆನಂತರ ಆರೋಪ ರುಜುವಾತಾಗಿದೆ ಎಂದು ವಸೂಲಾತಿಗೆ ಇಟ್ಟಾಗ, ಅಂತಹ ಪ್ರಕರಣಗಳಲ್ಲಿ ಕಲಂ 69ರನ್ವಯ ಅಧಿಭಾರ ಅರ್ಜಿ ದಾಖಲಿಸಿದಾಗ, ಆರೋಪ ಪಟ್ಟಿ ಹೊರಿಸಿ ಲಿಖಿತ ಹೇಳಿಕೆಯನ್ನು ಪಡೆದರೂ ಸಾಕು. ಏಕೆಂದರೆ ಸ್ವಾಭಾವಿಕ ನ್ಯಾಯದ ತತ್ವದಡಿ ಜವಾಬ್ದಾರಿ ನಿಗಧಿಪಡಿಸುವ ಪೂರ್ವದಲ್ಲಿ ಒಮ್ಮೆ ಕಾರಣ ಕೇಳುವ ನೋಟೀಸ್ ಕೊಟ್ಟು, ಅವರು ಕೊಟ್ಟ ಉತ್ತರದ ಆಧಾರದ ಮೇಲೆ, ವಸೂಲಾತಿ ಮೇಲೆ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ ಎಂದು ತಿಳಿಯತಕ್ಕದ್ದು. ಅಂತಹ ಸಮಯದಲ್ಲಿ, ಕಲಂ 69ರನ್ವಯ ಕರಣ ಕೇಳುವ ನೋಟೀಸ್ ಜಾರಿ ಮಾಡಿದಾಗ, ಹಿಂದೆ ಅವಕಾಶ ಕೊಡಲಾಗಿದೆ ಎಂದು ಪ್ರಾಧಿಕಾರಕ್ಕೆ ಮನದಟ್ಟು ಆದಾಗ ಲಿಖಿತ ಹೇಳಿಕೆ ಆಧಾರದ ಮೇಲೆ ಪ್ರಕರಣ ತೀರ್ಮಾನ ಮಾಡಲು ಪ್ರಾಧಿಕಾರಕ್ಕೆ ಅಧಿಕಾರ ಇದೆ. ಕೆಎಲ್‌ಜೆ 1983(2) 313/ಎಂಎಲ್‌ಜೆ 1972(2) ಎಸ್‌ಎನ್ 29/1972(2) ಎಂಎಲ್‌ಜೆ 112/ 1978 ಕೆಎಲ್‌ಜೆ 421/1979(2) ಕೆಎಲ್‌ಜೆ 127.

16. ಸ್ವಇಚ್ಚೆಯಿಂದ ವಿಚಾರಣೆ ಮಾಡಲೇಬೇಕೆಂದು ಕಾನೂನು ಬಾದ್ಯತೆ ಇಲ್ಲ. ಆದರೆ ಕಲಂ 64(2) ರನ್ವಯ ಲಿಖಿತ ಆರೋಪ ಒಬ್ಬ ಸದಸ್ಯನಿಂದ ಬಂದರೆ ನಿಬಂಧಕರು ಅಥವಾ ಅವನಿಂದ ಅಧಿಕಾರ ಹೊಂದಿದ ವ್ಯಕ್ತಿ ವಿಚಾರಣೆ ನಡೆಸಬಹುದು. (ಐಎಲ್‌ಆರ್ 1990(4) ಕೆಎಆರ್ 3705; 1990(2) ಕೆಎಲ್‌ಟಿ 311;ಎಐಆರ್ 1991 ಕೆಎಎನ್‌ಟಿ 243)

17. ಸ್ವಇಚ್ಚೆಯಿಂದ ನಿಬಂಧಕರು ವಿಚಾರಣೆ ಮಾಡಬಹುದು ಎಂದರೆ ಅವರೇ ಎಂದು ಅರ್ಥವಲ್ಲ. ಉಪನಿಬಂಧಕರ ವರದಿಯನ್ನಾಧರಿಸಿ ನಿಬಂಧಕರು ವಿಚಾರಣೆ ಆದೇಶಿಸಬಹುದು. (1984(1) ಕೆಎಲ್‌ಜೆ 360)

18. ಕಲಂ 64ರ ವಿಚಾರಣೆ ಸಂವಿಧಾನಾತ್ಮಕವಾಗಿ ಸಿಂಧು, ತಪಾಸಣೆಯಿಂದ ನಿಬಂಧಕರು ನಿರ್ಬಂಧರಹಿತ ಅಥವಾ ಸ್ವೇಚ್ಛಾಚಾರದಿಂದ ಅಧಿಕಾರ ಎಂದು ಅರ್ಥೈಸಬಾರದು. ಕಲಂ 63ರಿಂದ ಕಲಂ 75ರವರೆಗೆ ಸಹಕಾರ ಆಂದೋಲನ ತನ್ನ ಕಾಲ ಮೇಲೆ ನಿಂತು, ಸ್ವಾರ್ಥ ಸಾಧಕರ ಮತ್ತು ಅಧಿಕಾರ ದುರುಪಯೋಗ ಮಾಡುವವರ ಕೈಯಿಂದ ಸಂಘಕ್ಕೆಕ ನಷ್ಟ ಉಂಟು ಮಾಡಲಿಲ್ಲ ಎಂದು ತಿಳಿಯತಕ್ಕದ್ದು. (1984(1)ಕೆಎಲ್‌ಜೆ 360)

19. ತಾಲ್ಲೂಕಿಗಿಂತ ಹೆಚ್ಚಿರುವ ಕಾರ್ಯವ್ಯಾಪ್ತಿ ಇರುವ ಸಹಕಾರ ಸಂಘದ ವಿಚಾರಣೆ ನಡೆಸಬಹುದು. ಉಪನಿಬಂಧಕರು ಅಥವಾ ಅವನಿಂದ ಅಧಿಕಾರ ಪಡೆದ ವ್ಯಕ್ತಿ ವಿಚಾರಣೆ ಮಾಡಲು ಅಧಿಕಾರ ಹೊಂದಿದ್ದಾನೆ. (ಎಐಆರ್ 1991 ಕೆಎಎನ್‌ಟಿ 243)

20. ಆಡಳಿತ ಮಂಡಳಿಯ ಮೇಲೆ ಆರೋಪ ಮಾಡಿದ ಸದಸ್ಯರ ಮನವಿ ಸ್ವೀಕರಿಸಿ, ನಿಬಂಧಕರು ವಿಚಾರಣೆ ಆದೇಶ ಹೊರಡಿಸಬಹುದು: ಆದರೆ ಹೊರಡಿಸಿದವರಿಗೆ ತಮ್ಮ ಆರೋಪ ಹೊರಿಸಿದವರು ಅವರು ಆರೋಪ ರುಜುವಾತು ಮಾಡಲು ಅವಕಾಶ ಕೊಟ್ಟು, ಸಾಕ್ಷಿಗಳ ಮುಖಾಂತರ ರುಜುವಾತು ಮಾಡಲು ಅವಕಾಶ ಕಲ್ಪಿಸುವುದು. (1979(1)ಕೆಎಲ್‌ಜೆ ಎಸ್‌ಎನ್ 40)

21. ನಿಬಂಧಕರು ತಾವೇ ಸಂಘದಲ್ಲಿ ನಡೆದಿರುವ ಅವ್ಯವಹಾರ ಕಂಡು ಹಿಡಿಯಬೇಕಾಗಿಲ್ಲ. ನಿಬಂಧಕರು ಒಬ್ಬ ವ್ಯಕ್ತಿಗೆ ವಿಚಾರಣೆ ಮಾಡಲು ಆದೇಶಿಸಿ, ಸಂಘದ ಆಡಳಿತ, ರಚನೆ ಮತ್ತೆ ಹಣಕಾಸು ವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಆದೇಶಿಸಬಹುದು. (ಐಎಲ್‌ಆರ್ 1983 ಕೆಎಎನ್ ಎಸ್‌ಎನ್ 20;1983(2) ಕೆಎಲ್‌ಜೆ 263)

22. ಸಹಕಾರ ಸಂಘಗಳ ಉಪನಿಬಂಧಕರು ಕಲಂ 64(3)(ಸಿ)(1)ರಲ್ಲಿ ಮಹಾಸಭೆ ಕರೆಯಲು ಆದೇಶಿಸಬಹುದು. (1973(1)ಎಂವೈಎಸ್ ಎಲ್‌ಜೆ ಎಸ್‌ಎನ್ 78)

23. ವಿಚಾರಣೆ ಸಮಯದಲ್ಲಿ ಹೊರಿಸುವ ಆರೋಪಗಳು ಸ್ಪಷ್ಟವಾಗಿರಬೇಕು ಮತ್ತೆ ಸರಳವಾಗಿರಬೇಕು. ನೋಟೀಸ್ ಹೊರಡಿಸಿ ಹಾಜರಾಗಲು ತಿಳಿಸುವ ವ್ಯಕ್ತಿ ತಿಳಿಯುವಂತಿರಬೇಕು. ಇಲ್ಲದಿದ್ದರೆ ವಿಚಾರಣೆ ಸಿಂಧುವಾಗುವುದಿಲ್ಲ. (1991(2) ಕೆಎಲ್‌ಟಿ 23)

24. ಒಂದು ಸಹಕಾರ ಸಂಘ ಸಹಕಾರ ಕಾಯಿದೆ ಅಡಿಯಲ್ಲಿ ರಚನೆಯಾದ ಒಂದು ಸಂಸ್ಥೆ, ನಿಬಂಧಕರಿಗೆ ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ಅದರಲ್ಲಿ ಸಂಘದ ವ್ಯವಹಾರದ ಬಗ್ಗೆ ಆದೇಶಿಸುವುದು ಒಂದು. ಆದರೆ ವಿಚಾರಣೆ ಆದೇಶ ಮಾಡುವ ಮೊದಲು ಆ ಸಂಘದಲ್ಲಿ ಕಾರ್ಯ ನಿರ್ವಹಣೆ ಸಮಯದಲ್ಲಿ ತಪ್ಪುಗಳು, ನ್ಯೂನತೆಗಳೇನಾದರೂ ಇದ್ದರೆ ಮತ್ತು ಪಾಲುಬಂಡವಾಳ ಹೂಡಿದವರ ಹಿತ ಕಾಪಾಡುವುದು ಮತ್ತು ಸಂಘದ ಜೊತೆ ವ್ಯವಹರಿಸುವ ವ್ಯಕ್ತಿಗಳ ಹಿತ ಕಾಪಾಡುವುದು ಸೇರಿ ನಡೆಸಬೇಕು. ವಿಚಾರಣೆ ಆದೇಶಿಸುವುದು ನಿಬಂಧಕರ ವಿವೇಚನೆಗೆ ಬಿಟ್ಟಿದ್ದು. ನಿಬಂಧಕರಿಗೆ ಲಭ್ಯವಾದ ಮಾಹಿತಿಯನ್ನು ಆಧರಿಸಿ ವಿಚಾರಣೆ ಆದೇಶಿಸಬಹುದು. ನಿಬಂಧಕರ ವಿವೇಚನೆ ಆಧರಿಸಿ ಆದೇಶಿಸಬಹುದು. ಇದು ನ್ಯಾಯಾಲಯಯಾಂಗ ನಿಯಂತ್ರಣಕ್ಕೆ ಒಳಪಡುವುದಿಲ್ಲ. (ಎಐಆರ್ 1959 ಎಸ್‌ಸಿ 107)

25. ಸಹಕಾರ ಸಂಘದ ವ್ಯವಹಾರದ ಬಗ್ಗೆ ವಿಚಾರಣಾ ಆದೇಶ ಮಾಡಿ, ವರದಿ ಪಡೆದು, ವರದಿಯ ಸಾರಾಂಶವನ್ನು ತಿಳಿಸದೆ, ವರದಿಯಾಧರಿಸಿ ಕ್ರಮ ಜರುಗಿಸಿದರೆ ಅದು ನ್ಯಾಯಬದ್ಧವಲ್ಲ. ಸಾರಾಂಶವನ್ನು ಸಂಘಕ್ಕೆ ತಿಳಿಸುವುದು ಕಾನೂನುಬದ್ದ ಕರ್ತವ್ಯ. (ಎಐಆರ್ 1959 ಎಸ್‌ಸಿ 107)

26. ವಿಚಾರಣೆ ಎಂಬ ವಿವರಣೆ ಕೊಡುವಾಗ, ಸಂಬಂಧಪಟ್ಟ ವ್ಯಕ್ತಿಗಳಿಗೆ ತಮ್ಮ ಹೇಳಿಕೆ ಕೊಡಲು ಅವಕಾಶ ಕೊಡುವುದು ಎಂದರೆ ಅದು ನಂಬಿಕಾರ್ಹ, ನ್ಯಾಯಸಮ್ಮತ, ಸತ್ಯ ಮತ್ತು ಕಾನೂನು ಬದ್ದವಾಗಿರಬೇಕು. ಅವಕಾಶ ಒಂದು ಕಾಟಾಚಾರಕ್ಕೆ ಇರಬಾರದು. ಆರೋಪ ಮಾಡಿದ ವ್ಯಕ್ತಿಗಳಿಗೆ ಆರೋಪ ರುಜುವಾತು ಮಾಡಲು ಅವಕಾಶ ಕಲ್ಪಿಸಿ, ಅದೇ ಅವಕಾಶವನ್ನು ಆರೋಪ ಪಡೆದ ವ್ಯಕ್ತಿಗಳು ತಮ್ಮ ಹೇಳಿಕೆ ಸಲ್ಲಿಸಿ ಆರೋಪ ಮುಕ್ತರಾಗಲು ಅದೇ ಅವಕಾಶ ಆರೋಪಗಳಿಗೂ ಕೊಡತಕ್ಕದ್ದು. ಇಲ್ಲದಿದ್ದರೆ ಅದು ಸಾಮಾಣ್ಯ ನ್ಯಾಯ ತತ್ವಗಳ ವಿರುದ್ಧವಾಗುತ್ತದೆ. (1971 ಸಿಎಲ್‌ಜೆ ಪಿ.5.ಎಪಿ)

27. ವಿಚಾರಣಾ ವಿಧಿವಿಧಾನಗಳನ್ನು ನಿಯಮಗಳಲ್ಲಿ ರೂಪಿಸಿಲ್ಲವಾದ್ದರಿಂದ, ಆರೋಪ ಮಾಡಿದವರು ಮತ್ತು ಆರೋಪಕ್ಕೊಳಗಾದವರು, ಪಾಟಿ ಸವಾಲು ಮಾಡಲು ಅವಕಾಶ ಕಲ್ಪಿಸುವ ಅವಕಾಶ ಕೊಡಲೇಬೇಕೆಂದಿಲ್ಲ. ಆದರೆ ವಿಚಾರಣಾಧಿಕಾರಿ ವರದಿ ಅಂತಿಮಗೊಳಿಸಿ ವರದಿ ಕೊಡುವ ಮೊದಲು ವಾಸ್ತವ ದಾಖಲೆ ಹೇಳಿಕೆ ಆಧರಿಸಿ ವರದಿಸಬೇಕು. (ಮಹಾರಾಷ್ಟ್ರ ಕಾಯಿದೆ) (1969 ಎಂಸಿಟಿಡಿ ಪಿ 33)

## ಅಧಿಭಾರ ನಡವಳಿಕೆಗಳು :

1. ಒಂದು ಸಹಕಾರ ಸಂಘದ ಕಾರ್ಯದರ್ಶಿಯು ಸಂಬಳ ಹೆಚ್ಚಿಸಿಕೊಳ್ಳಲು ಆಡಳಿತ ಮಂಡಳಿಯ ಒಪ್ಪಿಗೆಯನ್ನು ನಡವಳಿಕೆಗಳ ಮೂಲಕ ಪಡೆದಿದ್ದರೂ, ಅಂತಹ ತೀರ್ಮಾನವನ್ನು ಸಂಬಂಧಪಟ್ಟ ಅಧಿಕಾರಿಗೆ ಕಳುಹಿಸಿಲ್ಲ ಅಥವಾ ಅವರ ಒಪ್ಪಿಗೆಯನ್ನು ಪಡೆದಿಲ್ಲವೆಂದರೆ, ಅದು ಅಧಿಭಾರ ಅರ್ಜಿಯಲ್ಲಿ ವಸೂಲು ಮಾಡಿಕೊಳ್ಳುವ ಅಧಿಕಾರ ಇರತಕ್ಕದ್ದು. ಈ ಅಧಿಭಾರ ಅರ್ಜಿಯನ್ನು ಹೆಚ್ಚುವರಿಯಾಗಿ ಪಡೆದ ಹಣ ವಸೂಲಾತಿಗೆ ಸಲ್ಲಿಸಿರುವ ಅರ್ಜಿ ಸೂಕ್ತ. 2007(4) ಕೆಸಿಸಿಆರ್ ಎಸ್‌ಎನ್ 356/ಐಎಲ್‌ಆರ್ 2007(4) ಕೆಎಆರ್ 5003/

2. ಅಧಿಭಾರ ಅರ್ಜಿಯನ್ನು ದಾಖಲಿಸುವ ಸಂದರ್ಭದಲ್ಲಿ ಕಲಂ 64ರ ವರದಿಯನ್ನಾಧರಿಸಿ ಸಲ್ಲಿಸಲಾಗಿದೆಯೇ ಎನ್ನುವುದನ್ನು ಗಮನಿಸಬೇಕು. ಅಧಿಭಾರ ಅರ್ಜಿಯನ್ನು ದಾಖಲಿಸಿದ ನಂತರ ಆರೋಪಿಗಳಿಗೆ ಅವಕಾಶಗಳನ್ನು ಕೊಡುವುದರ ಬಗ್ಗೆ ಮತ್ತು ಆರೋಪ ಪಟ್ಟಿಯನ್ನು ಕೊಡುವುದರ ಬಗ್ಗೆ ವಿಚಾರಣೆ ಮಾಡಬೇಕು. 2006(1) ಕೆಸಿಸಿಆರ್ 665/ಐಎಲ್‌ಆರ್ 2006(2) ಕೆಎಆರ್ 1502/2006(2) ಕೆಎಲ್‌ಜೆ 303

3. ಒಂದು ಅಧಿಭಾರ ಅರ್ಜಿಯನ್ನು ಸಹಾಯಕ ನಿಬಂಧಕರು ಮೌಖಿಕ ಮತ್ತು ದಾಖಲೆಗಳ ಆಧಾರದ ಮೇಲೆ ಮತ್ತು ಸಂಘದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ಆದೇಶ ಮಾಡಿದ್ದರ

ಮೇಲೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರವು ಅದನ್ನು ದೃಢೀಕರಿಸಿದೆ. ಈ ದೃಢೀಕರಣದ ನಂತರ ಯಾವ ದಾಖಲೆ ಮತ್ತು ಸಾಕ್ಷಿಗಳನ್ನು ಆಧಾರವಾಗಿಟ್ಟು ತೀರ್ಪು ಕೊಡಲಾಗಿದೆ ಎಂಬುದರ ಬಗ್ಗೆ ರಿಟ್ ಅರ್ಜಿ ಮುಖಾಂತರ ಪ್ರಶ್ನಿಸತಕ್ಕದ್ದಲ್ಲ. 2003(4) ಕೆಸಿಸಿಆರ್ ಎಸ್‌ಎನ್ 302/ ಐಎಲ್‌ಆರ್ 2004(2) ಕೆಎಆರ್ 2181

4. ಒಂದು ಸಹಕಾರ ಸಂಘದ ನೌಕರ ಅಥವಾ ಪದಾಧಿಕಾರಿ ಹಣದುರುಪಯೋಗ ಮಾಡಿಕೊಂಡಿದ್ದ ಸಂದರ್ಭದಲ್ಲಿ ಕಲಂ 69 ಅಥವಾ ಕಲಂ 70ರನ್ವಯ ಕ್ರಮ ಜರುಗಿಸಬೇಕು. ಹಾಗೂ

5. ಕಲಂ 69ರಲ್ಲಿ ಅಧಿಭಾರ ಅರ್ಜಿಯನ್ನು ದಾಖಲಿಸುವಾಗ ಆಡಿಟ್ ವರದಿ, ವಿಚಾರಣಾ ವರದಿ ಮತ್ತು ಪರಿವೀಕ್ಷಣ ವರದಿ ಅಥವಾ ಸಮಾಪನಾಧಿಕಾರಿಗಳ ವರದಿ ಆಧಾರದ ಮೇಲೆಯೇ ದಾಖಲಿಸತಕ್ಕದ್ದು. 1979(1) ಕೆಎಲ್‌ಜೆ 185/ಎಎಲ್‌ಆರ್ 1979(1) ಕೆಎಆರ್ 739(ಡಿಬಿ)

6. ನೌಕರರ ನಿರ್ಲಕ್ಷ್ಯತನದಿಂದ ಸಂಘಕ್ಕೆ ಕೊರತೆಯುಂಟಾಗಿದ್ದರೆ ಅದನ್ನು ವಿಶೇಷವಾಗಿ ಸೃಷ್ಟಿ ಮಾಡಿರುವ ಕಲಂ 69ರಲ್ಲಿ ದಾಖಲಿಸಬೇಕು. 1976(1) ಕೆಎಲ್‌ಜೆ ಎಸ್ ಎನ್ 55

7. ಕಲಂ 69ರಡಿ ಅಧಿಭಾರ ಅರ್ಜಿಯನ್ನು ದಾಖಲಿಸುವಾಗ ಆ ಸಂಬಂಧಪಟ್ಟ ಸಂಘಕ್ಕೆ ಅದರ ಆಸ್ತಿಯಲ್ಲಿ ಕೊರತೆಯುಂಟಾದದ್ದನ್ನು ಆಡಿಟ್, ವಿಚಾರಣೆ, ಪರಿವೀಕ್ಷಣೆ ಮತ್ತು ಸಮಾಪನಾಧಿಕಾರಿ ಆದೇಶದ ಆಧಾರದ ಮೇಲೆಯೇ ದಾಖಲಿಸಬೇಕು 1975(2) ಕೆಎಲ್‌ಜೆ 118/ಐಎಲ್‌ಆರ್ 1977 ಕೆಎಆರ್ 1202

8. ಸಂಘದ ಆಸ್ತಿಯಲ್ಲಿ ಕೊರತೆಯನ್ನು ದಿನನಿತ್ಯದ ವ್ಯವಹಾರವನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಕಂಡುಹಿಡಿದಿದ್ದರೆ ಅಂತಹ ಪ್ರಕರಣದಲ್ಲಿ ವಸೂಲಾತಿ ಕ್ರಮ ಕಲಂ 69ರಡಿ ಇರತಕ್ಕದ್ದಲ್ಲ. 1976(2) ಕೆಎಲ್‌ಜೆ 62/ಎಐಆರ್ 1977 ಕೆಎಎನ್‌ಟಿ 87/ಐಎಲ್‌ಆರ್ 1976 ಕೆಎಆರ್ 1384.

9. ಆಂತರಿಕ ಲೆಕ್ಕತಪಾಸಣ ವರದಿಯನ್ನಾಧರಿಸಿ ಕೊರತೆಯಾದ ಹಣಕ್ಕೆ ಕಲಂ 69ರಡಿ ಕ್ರಮ ಜರುಗಿಸತಕ್ಕದ್ದಲ್ಲ. ಐಎಲ್‌ಆರ್ 1986(4) ಕೆಎಆರ್ 3731

10. ಪ್ರಕರಣವನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ನಡವಳಿಕೆಗಳ ಆದೇಶ ಪ್ರತಿಯನ್ನು ಕೇಳಿದಾಗ ಅದನ್ನು ಕೊಡದೇ ಇರುವುದು ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ ಪುನರ್ ವಿಮರ್ಶಾ ಅರ್ಜಿ ದಾಖಲಿಸಬಹುದಾಗಿದೆ. ಐಎಲ್‌ಆರ್ 1987 ಕೆಎಆರ್ 825/1987(1) ಕೆಎಲ್‌ಜೆ 24

11. ಅಧಿಭಾರ ಅರ್ಜಿಯನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಕಾನೂನು ವಾರಸುದಾರರು ಮೃತಪಟ್ಟ ವ್ಯಕ್ತಿಯ ಆಸ್ತಿಯನ್ನು ಪಡೆದಿದ್ದಾನೆಂದು ದೃಢೀಕರಿಸಿಕೊಳ್ಳದೇ ಕೊರತೆಗೆ ಜವಾಬ್ದಾರಿಯೆಂದು ನಿಗಧಿಪಡಿಸತಕ್ಕದ್ದಲ್ಲ. ಸ್ಪಷ್ಟವಾಗಿ ಮೃತಪಟ್ಟ ವ್ಯಕ್ತಿಯ ಆಸ್ತಿಯನ್ನು ಅನುಭವಿಸುತ್ತಿದ್ದಾರೆಂದು ತೀರ್ಮಾನಕ್ಕೆ ಬಂದ ನಂತರವೇ ಅಧಿಭಾರ ಅರ್ಜಿಯಲ್ಲಿ ಆದೇಶಿಸತಕ್ಕದ್ದು. 1988(2) ಕೆಎಲ್‌ಜೆ 384.

12. ಪ್ರಕರಣ ಒಂದು ಸಂಘದ ಕಾರ್ಯದರ್ಶಿಯ ಮೇಲೆ ಅವನ ಕೆಲಸ ನಿರ್ವಹಣೆಯಲ್ಲಿ ನಿರ್ಲಕ್ಷ್ಯತನದಿಂದ ಮೊದಲನೇ ಸಾರಿ ನಷ್ಟವುಂಟು ಮಾಡಿದ್ದರೆ ಅದನ್ನು ಅವ್ಯವಹಾರಿಕ ಎಂದು ತಿಳಿಯತಕ್ಕದ್ದಲ್ಲ. 1983(1) ಕೆಎಲ್‌ಜೆ 400

13. ಕಲಂ 69, 70ಕ್ಕೆ ತಿದ್ದುಪಡಿ ಆದ ನಂತರ ಯಾವುದೇ ಪ್ರಕರಣವನ್ನು ಕಲಂ 69ರಲ್ಲಿ ದಾಖಲಿಸಬೇಕಾಗಿತ್ತೋ ಆ ಪ್ರಕರಣವನ್ನು ಕಲಂ 70ರಲ್ಲಲಿಯೂ ದಾಖಲಿಸಿ ವಸೂಲಾತಿ ಕ್ರಮ ಜರುಗಿಸಬಹುದು. 1986(2) ಐಎಲ್‌ಆರ್ ಕೆಎಆರ್ 1045/1987(1) ಕೆಎಲ್‌ಜೆ ಎಸ್‌ಎನ್ 108/1986(1) ಬಿಎಲ್‌ಜೆ 249 (ಡಿಬಿ) ಈ ತೀರ್ಪಿಗೆ ಸಂಬಂಧಪಟ್ಟಂತೆ ವಿಭಾಗೀಯ ಪೀಠವು ಈ ಹಿಂದೆ ಕೊಟ್ಟ 1980(2) ಕೆಎಲ್‌ಜೆ 106 ತೀರ್ಪನ್ನು ಎತ್ತಿ ಹಿಡಿದಿದೆ.

14. ಸಾಲ ಮಂಜೂರಿ ಮಾಡುವಾಗ ಉಪನಿಯಮ ಮತ್ತು ಸಾಲ ನೀತಿಗೆ ವಿರುದ್ಧವಾಗಿ ಮಂಜೂರಿ ಮಾಡಿದ್ದರೆ ಅಂತಹ ಪ್ರಕರಣವನ್ನು ಕಲಂ 70ರನ್ವಯ ದಾಖಲಿಸತಕ್ಕದ್ದು. 1979(1) ಕೆಎಲ್‌ಜೆ 185/ಐಎಲ್‌ಆರ್ 1979(1) ಕೆಎಆರ್ 739 (ಡಿಬಿ)

15. ಅಧಿಭಾರ ಅರ್ಜಿಯಲ್ಲಿ ಪ್ರತಿಯೊಬ್ಬ ಆರೋಪಿಗೂ ಸ್ಪಷ್ಟ ಆರೋಪ ಪಟ್ಟಿಯನ್ನು ವ್ಯಕ್ತಿಗತವಾಗಿ ತಯಾರಿಸಿ ಹೊರಡಿಸದೇ ಇದ್ದರೆ ಅಂತಹ ವಿಚಾರಣೆಯು ಕಲಂ 69ರನ್ವಯ ಇರುವುದಿಲ್ಲ. ಹಾಗೂ 64ರ ವಿಚಾರಣೆ ಮಾಡುವ ಸಂಬಂಧದಲ್ಲಿ ಯಾವ ವ್ಯಕ್ತಿಯ ಮೇಲೆ ವಸೂಲಾತಿ ಇಡಲಾಗಿದೆಯೇ, ಅಂತಹ ವ್ಯಕ್ತಿಗೆ 6ಯ4ರ ವಿಚಾರಣೆಯ ವಿಷಯವೇ ತಿಳಿಯದೇ ಇದ್ದಾಗ, ಅದು ಸ್ವಾಭಾವಿಕ ನ್ಯಾಯದನ್ವಯ ಅವಕಾಶ ಕಲ್ಪಿಸಿದಂತಾಗುವುದಿಲ್ಲ. ವಿಚಾರಣೆಯೇ ತಪ್ಪಾಗುತ್ತದೆ. 1991(2) ಕೆಎಲ್‌ಜೆ 23.

16. ಕಲಂ 69ರಡಿಯಲ್ಲಿ ನಿಗಧಿಪಡಿಸಿರುವ ನೀತಿನಿಯಮಗಳನ್ನು ಅನುಸರಿಸದೇ ಆದೇಶ ಮಾಡಿದರೆ ಅದು ನಿಯಮಬಾಹಿರ ಅಂತಹ ಪ್ರಸಂಗದಲ್ಲಿ ರಿಟ್ ಮೂಲಕ ಪರಿಹಾರ ಕೇಳಬಹುದು. ವ್ಯಕ್ತಿಗತವಾಗಿ ಆರೋಪ ಪಟ್ಟಿಯನ್ನು ಹೊರಡಿಸದೇ, ಲೆಕ್ಕತಪಾಸಣಾಧಿಕಾರಿಗಳು ರೂಪಿಸಿದ ಆರೋಪಗಳ ಆಧಾರವನ್ನೇ ಆರೋಪ ಪಟ್ಟಿಯೆಂದು ತಿಳಿದು ನೋಟೀಸ್ ಜಾರಿ ಮಾಡಿದ್ದರೆ ಅದು ನಿಯಮಬಾಹಿರ. 1989(2) ಕೆಎಲ್‌ಜೆ 291

17. ಯಾವನೇ ಒಬ್ಬ ವ್ಯಕ್ತಿ 69ರ ವಿಚಾರಣೆ ಸಂದರ್ಭದಲ್ಲಿ ಗೈರುಹಾಜರಾಗಿ ಅವನನ್ನು ಎಕ್ಸ್‌ಪಾರ್ಟಿ ಎಂದು ತೀರ್ಮಾನಿಸಿದ್ದರೆ, ಅಂತಹ ವ್ಯಕ್ತಿಯು ಲೆಕ್ಕತಪಾಸಣೆ ಮಾಡುವ ಸಮಯದಲ್ಲಿ ಪಾಟಿ ಸವಾಲು ಮಾಡಲಿಲ್ಲವೆಂಬ ಅಥವಾ ಲೆಕ್ಕತಪಾಸಣಾಧಿಕಾರಿಯನ್ನು ವಿಚಾರಣೆ ಮಾಡಿಲ್ಲವೆಂಬ ಕಾರಣಕ್ಕೆ ಪರಿಹಾರ ಕೇಳತಕ್ಕದ್ದಲ್ಲ. 1989(2) ಕೆಎಲ್‌ಜೆ 285

18. ಆಡಳಿತ ಮಂಡಳಿಯ ಸದಸ್ಯರಿಂದ ವಸೂಲಾತಿ ಮಾಡಬೇಕಾದ ಪ್ರಸಂಗದಲ್ಲಿ ದಾವಾ ಪ್ರಕರಣವನ್ನೂ ದಾಖಲಿಸಬಹುದು ಅಥವಾ ಅಧಿಭಾರ ಅರ್ಜಿಯನ್ನೂ ದಾಖಲಿಸಬಹುದು. 1989(2) ಕೆಎಲ್‌ಜೆ 361.

19. ನಿರ್ದೇಶಕರುಗಳಿಗೆ ಕೊಟ್ಟ ಕಲಂ 70ರಲ್ಲಿ ವಸೂಲಿ ಮಾಡಬೇಕೆ ಹೊರತು ಕಲಂ 69 ಅಂತಹ ನಿರ್ದೇಶಕರಿಗೆ ಅನ್ವಯವಾಗತಕ್ಕದ್ದಲ್ಲ. ಕಲಂ 69ರಲ್ಲಿ ಸಾಲಕ್ಕೆ ಸಂಬಂಧಪಟ್ಟ ಅವಕಾಶವಲ್ಲ. ಅದು ಜವಾಬ್ದಾರಿಯನ್ನು ನಿರ್ವಹಿಸಲು ತಪ್ಪಿದಾಗ ಜರುಗಿಸಬಹುದಾದ ಕ್ರಮ. ಖಐಖ 1974 ಏಂಖ 258/1974(1) KLJ 449.

20. ಅಧಿಭಾರ ಅರ್ಜಿಯನ್ನು ದಾಖಲಿಸುವಾಗ ಆ ಸಂಘದ ವ್ಯವಹಾರವನ್ನು ನಡೆಸುತ್ತಿದ್ದು ಆ ಸಂಘದ ಆಸ್ತಿಯಲ್ಲಿ ಕಡಿತಗೊಂಡಾಗ ಮತ್ತು ಆ ಕಡಿತಗೊಂಡಿದೆ ಎಂಬ ಆಡಿಟ್ ವರದಿಯಲ್ಲಿ/ ವಿಚಾರಣಾ ವರದಿಯಲ್ಲಿ/ತಪಾಸಣೆಯಲ್ಲಿ ಮತ್ತು ಸಮಾಪನೆಗೊಂಡ ವರದಿಯನ್ನು ಆಧರಿಸಿ ವಸೂಲಾತಿ ಕ್ರಮ ಜರುಗಿಸಬೇಕು. ILR 1975(2) KAR 1202.

21. ಕಲಂ 69ರಡಿ ಆಡಿಟ್ ವರದಿಯ ಆಧಾರವಲ್ಲದೆ ಬೇರೆ ವಸೂಲಾತಿಗೆ ಸಂಬಂಧಪಡತಕ್ಕದ್ದಲ್ಲ. ಆಡಿಟ್ ವರದಿಯಲ್ಲಿ ನಮೂದಾಗಿರುವ ಹಣಕಾಸಿನ ವಸೂಲಾತಿಗಳಿಗೆ ಸಂಬಂಧಪಟ್ಟಿರಬೇಕು. ಇಲ್ಲವಾದರೆ ಮಧ್ಯಪ್ರವೇಶಿಲಾಗದು. ILR 1976(2) KAR 1384/AIR 1970(77) KAR 87/1976(2) KLJ 682.

22. ಕಲಂ 69 ಒಂದು ವಿಶೇಷ ಅವಕಾಶವನ್ನು ಕಲ್ಪಿಇಸಿದ್ದು ಅದು ಕಲಂ 70ಕ್ಕಿಂತ ಮೇಲ್ಪಟ್ಟದ ಕಲಂ ಆಗಿರುತ್ತದೆ. (ILR 1974 KAR 258/1977(2) KLG 449)

23. ಕಲಂ 69 ಹಣ ದುರುಪಯೋಗ ಮಾಡಿಕೊಂಡಾಗ, ಸದುಪಯೋಗವಾಗದೆ ಇದ್ದಾಗ ಕ್ರಮ ಜರುಗಿಸತಕ್ಕದ್ದು. ಈ ಕ್ರಮ ಜರುಗಿಸುವ ಪೂರ್ವದಲ್ಲಿ ಆಡಳಿತಮಂಡಳಿ ನಿರ್ದೇಶಕರಿಂದ, ಅವರ ಮೇಲೆ ಕ್ರಮ ಜರುಗಿಸಿ ನಂತರ ಅಧಿಭಾರ ಅರ್ಜಿ ದಾಖಲಿಸಬೇಕು ಎಂದಾಗುವುದಿಲ್ಲ. (ILR 1979(1) KAR 739/1979(1) KLJ 185 DB)

24. ಕಲಂ 69ರಲ್ಲಿ ವಸೂಲಾತಿಗೆ ಜರುಗಿಸುವ ಕ್ರಮ ಕಲಂ 70ರನ್ವಯವೂ ಜರುಗಿಸಬಹುದು. (ILR 1989(2) KAR SN 2/1989(2) KAR 106)

25. ಆಂತರಿಕ ಲೆಕ್ಕಪರಿಶೋಧಕರು ಕೊಟ್ಟ ವರದಿಯನ್ನು ಆಧರಿಸಿ ಕಲಂ 69ರನ್ವಯ ಕ್ರಮ ಜರುಗಿಸಲಾಗದು. ಸರಕು ಕೊರತೆ ಆಂತರಿಕ ಲೆಕ್ಕಪರಿಶೋಧಕರಿಂದ ಗುರುತಿಸಲಾಗಿದ್ದು ಆ ವರದಿಯನ್ನು ಆಧರಿಸಿ ನೋಟೀಸ್ ಜಾರಿಯಾಗಿದ್ದರೆ ಆ ನೋಟೀಸಿನ ಆಧಾರದ ಮೇಲೆ ಕಲಂ 70ರಂತೆ ಕ್ರಮ ಜರುಗಿಸಬೇಕು. (ILR 1986(4) KAR 3731)

26. ಕಲಂ 69ರನ್ವಯ ಲಿಖಿತ ಹೇಳಿಕೆಯನ್ನು ಪಡೆದು ಜವಾಬ್ದಾರಿಯನ್ನು ನಿಗಧಿಗೊಳಿಸಬಹುದು. ಆ ಜವಾಬ್ದರಿಯನ್ನು ನಿಗಧಿಗೊಳಿಸುವಾಗ ಸಂಘದ ದಾಖಲೆಗಳನ್ನು ಪರಿಶೀಲಿಸಿ ಹಾಗೂ ನಿಬಂಧಕರಿಗೆ ಮಾಹಿತಿ ಸಲ್ಲಿಸಿ ವಸೂಲಾತಿ ಆದೇಶ ಪಡೆಯಬಹುದು. (1987(1) KLJ 141)

27. ಕಾನೂನು ವಾರಸುದಾದಾರದ ಮೇಲೆ ವಸೂಲಾತಿ ಆದೇಶ ಹೊರಡಿಸುವ ಪೂರ್ವದಲ್ಲಿ ಸತ್ತ ವ್ಯಕ್ತಿ ಚರ ಮತ್ತು ಸ್ಥಿರ ಆಸ್ತಿಯನ್ನು ಕಾನೂನು ವಾರಸುದಾರರಿಗೆ ಬಿಟ್ಟುಹೋಗಿದ್ದಾನೆ ಎಂದು ದಾಖಲೆಗಳನ್ನು ನೋಡಿ ಆದೇಶಿಸಬೇಕು. ತಂದೆ ಮಗ ಎಂಬ ಒಂದೇ ಸಂಬಂಧದ

ಆಧಾರದ ಮೇಲೆ ಕಾನೂನು ವಾರಸುದಾರನು ಎಂದು ಜವಾಬ್ದಾರಿ ನಿಗಧಿಪಡಿಸತಕ್ಕದ್ದಲ್ಲ. (1988(2) KLJ 384)

28. ಅಧಿಭಾರ ಅರ್ಜಿಯನ್ನು ಹೂಡಿದಾಗ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಜವಾಬ್ದಾರರಾಗಿದ್ದರೆ ಅಂತಹ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ವೈಯಕ್ತಿಕ ಆರೋಪ ಹೊರಿಸಬೇಕು. ಲೆಕ್ಕತಪಾಸಣೆ ಮಾಡಿದ ಅಧಿಕಾರಿ ತಯಾರಿಸಿದ ಆರೋಪಗಳನ್ನು ಆಧಾರವಾಗಿಟ್ಟು ಕ್ರಮ ಜರುಗಿಸಿದ್ದರೆ ಅಂತಹ ಆರೋಪಗಳು ಜಂಟಿ ನಿಬಂಧಕರು ಹೊರಿಸಿದ ಆರೋಪಗಳಲ್ಲ. ಮತ್ತು ಆಡಿಟರ್ ತಯಾರಿಸಿದ ಆರೋಪ ಆದ್ದರಿಂದ ಅಂತಹ ಕ್ರಮವನ್ನು ಎತ್ತಿಹಿಡಿಯತಕ್ಕದ್ದಲ್ಲ. 1989(2) KLJ 281.

29. ಯಾವ ವ್ಯಕ್ತಿ ವಿಚಾರಣೆ ಸಮಯದಲ್ಲಿ ಗೈರು ಹಾಜರಾಗಿ ಎಕ್ಸ್‌ಪಾರ್ಟಿ ಎಂದು ತೀರ್ಮಾನವಾಗಿದ್ದರೆ, ಅಂತಹ ವ್ಯಕ್ತಿ ವಿಚಾರಣೆ ಸಮಯದಲ್ಲಿ ತನಗೆ ಪಾಟಿ ಸವಾಲು ಮಾಡಲು ಅವಕಾಶವಿಲ್ಲವೆಂದು ಮತ್ತು ಲೆಕ್ಕ ತಪಾಸಣಾ ಅಧಿಕಾರಿಯನ್ನು ಪಾಟಿ ಸವಾಲು ಮಾಡಲು ಅವಕಾಶವಿಲ್ಲವೆಂದು ಮತ್ತು ಲೆಕ್ಕ ತಪಸಣಾ ಅಧಿಕಾರಿಯನ್ನು ಪಾಟಿ ಸವಾಲು ಮಾಡಲಿಲ್ಲವೆಂದು ಆ ಕಕ್ಷಿದಾರ ವಾದಿಸತಕ್ಕದ್ದಲ್ಲ. 1989(2) KLJ 285

30. ಆಡಳಿತ ಮಂಡಳಿ ನಿರ್ದೇಶಕರಿಂದ ಬರಬೇಕಾದ ಹಣವನ್ನು ಕಲಂ 70 ಅಥವಾ 69ರನ್ವಯ ಜರುಗಿಸಬಹುದು. ಕಲಂ 70ರನ್ವಯ ದಾವೆ ಹೂಡಿದರೆ ಅದು ಸಿಂಧು. 1989(2) KLJ 361

31. ಪ್ರಕರಣವನ್ನು ವಿಚಾರಣೆ ಮಾಡುತ್ತಿರುವ ಪ್ರಾಧಿಕಾರ ಪ್ರಕರಣ ನಡೆಸುತ್ತಿರುವ ದಿನನಿತ್ಯ ನಡವಳಿಗಳ ಪ್ರತಿಯನ್ನು ಕೇಳಿದಾಗ ಕೊಡಬೇಕು. ಕೊಡದೆ ಇದ್ದ ಸಂದರ್ಭದಲ್ಲಿ ಆ ಆದೇಶದ ತೀರ್ಮಾನದ ಮೇಲೆ ಪುನರ್ ವಿಮರ್ಶಾ ಅರ್ಜಿಯನ್ನು ದಾಖಲಿಸಲು ಇದೆ. (ಆರ್ಡರ್ ಶೀಟ್) 1989(7) KLJ 241

32. ಅರ್ಜಿದಾರನು ಒಟ್ಟಾರೆ ಹಣದ ಬೇಡಿಕೆಗೆ ಪ್ರಕರಣ ವಿಚಾರಣೆಯಲ್ಲಿದ್ದಾಗ ಒಪ್ಪಿಗೆ ಕೊಟ್ಟು, ಆ ನಂತರ ರಿಟ್ ಅರ್ಜಿಯಲ್ಲಿ ವಸೂಲಾತಿಯನ್ನು ಬೇರ್ಪಡಿಸಬೇಕು. ಅದನ್ನು ಅಧಿಭಾರ ಅರ್ಜಿ ಅಥವಾ ಮತ್ತಾವುದೇ ರೀತಿ ವಸೂಲಾತಿ ಮಾಡಬೇಕೆಂದು ಕೇಳತಕ್ಕದಲ್ಲ. 1979(8) 1979(8) KLJ 87

33. ಸಿವಿಲ್ ದಾವೆ ಹೂಡಬೇಕಾದ ಎಲ್ಲ ಅಧಿಕಾರಗಳನ್ನು ನಿಬಂಧಕರು ಅಥವಾ ಅವರಿಂದ ಅಧಿಕಾರ ಪಡೆದ ವ್ಯಕ್ತಿಗೆ, ಈ ಕಲಂ ಅನ್ವಯ ಅಧಿಕಾರ ಪ್ರಾಪ್ತವಾಗುತ್ತದೆ. ಸಂಘದ ವ್ಯವಹಾರದಲ್ಲಿ ಆಡಳಿತದಲ್ಲಿ ಹಾಲಿ ಸದಸ್ಯರು, ಮಾಜಿ ಸದಸ್ಯರುದ ಅಥವಾ ಪದಾಧಿಕಾರಿಗಳು, ಸಂಘದ ಆಸ್ತಿಯಲ್ಲಿ ಮೊಟಕುಗೊಳಿಸಿದಾಗ ವಸೂಲಾತಿ ಕ್ರಮ ಜರುಗಿಸಬಹುದು. ಈ ಕಲಂ ಅನ್ವಯ ಕ್ರಮ ಜರುಗಿಸಬೇಕಾದರೆ ಕರ್ತವ್ಯಚ್ಯುತಿ, ಹಣದುರುಪಯೋಗ, ಅಶಿಸ್ತು, ದುರುಪಯೋಗ ಮತ್ತಿತರೆ ಪ್ರಸಂಗದಲ್ಲಿ ವಸೂಲಾತಿ ಕ್ರಮ ಜರುಗಿಸಬಹುದು. AIR 1991 SC 2137

34. ಹಣಕಾಸು ಪೂರೈಸುವ ಸಂಸ್ಥೆ ಬರಬೇಕಾದ ಹಣಕ್ಕೆ ಬಡ್ಡಿಸಹಿತ ವಸೂಲಿ ಮಾಡಿಕೊಳ್ಳಲು ದಾವಾ ದಾಖಲಿಸಬಹುದು. ಈ ದಾವಾ ಪ್ರಕರಣದಲ್ಲಿ ಸಾಲ ಪಡೆದ ಸಹಕಾರ ಸಂಘ ಅದರ

ಪದಾಧಿಕಾರಿ ಹಾಗೂ ಕಾರ್ಯದರ್ಶಿಗಳ ಮೇಲೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ದಾವಾ ದಾಖಲಿಸಲು ಇದು ಸರಿಯಾದ ಕ್ರಮವೆಂದು ಹಾಗೂ ಉಚ್ಚ ನ್ಯಾಯಾಲಯ ಆ ಕ್ರಮವನ್ನು ಕಿತ್ತುಹಾಕಿದ್ದನ್ನು ಭಾರತೀಯ ಶ್ರೇಷ್ಠ ನ್ಯಾಯಾಲಯ ನಯಗಾರ್ ಕೋ ಆಪರೇಟಿವ್ ಬ್ಯಾಂಕಿನ ಪ್ರಕರಣದಲ್ಲಿ ತೀರ್ಪು ಇತ್ತಿದೆ. AIR 1975 SC 1895/(2) SCC 445

35. ಒಬ್ಬ ಅಧ್ಯಕ್ಷಮತ್ತು ಸಹಕಾರ ಸಂಘದ ಮಧ್ಯೆ ಒಪ್ಪಂದಕ್ಕೆ ಬಂದು, ಆ ವ್ಯವಹಾರದಲ್ಲಿ ಹಣ ಪಡೆದ ಅಧ್ಯಕ್ಷ ಲೆಕ್ಕಪತ್ರಗಳನ್ನು ಆ ಸಂಘಕ್ಕೆ ಕೊಡುವುದು ಅವನ ಕರ್ತವ್ಯ. ಅಧ್ಯಕ್ಷರು ಸಹಕಾರ ಸಂಘದ ಜೊತೆ ಮಾಡಿಕೊಂಡ ಒಪ್ಪಂದ ಕಾನೂನುಬಾಹಿರ ಎಂದಾದರೂ, ಸಹಕಾರ ಸಂಘ ಆ ಹಣವನ್ನು ವಸೂಲಿ ಮಾಡಿಕೊಳ್ಳಲು ಮತ್ತು ಆ ಸಂಘಕ್ಕೆ ಬರಬೇಕಾದ ಹಣವನ್ನು ವಸೂಲಿ ಮಾಡಿಕೊಳ್ಳುವ ಅಧಿಕಾರ ಇದೆ. AIR 1965 SC 621

36. ದುರುದ್ದೇಶದಿಂದ ಸಂಘದ ಹಣವನ್ನು ಎತ್ತಿ ಹಾಕಿದಾಗ ಹಾಗೂ ಆ ವರದಿ ಲೆಕ್ಕ ತಪಾಸಣೆಗೆ ವಿಚಾರಣೆ, ತಪಾಸಣೆ ಹಾಗೂ ಸಮಾಪನೆ ವರದಿಯಾಗಿದ್ದರೆ ಸಾಕು. ಸಂಘವು ಪ್ರತ್ಯೇಕವಾಗಿ ವಿಚಾರಣೆ ನಡೆಸಿದೆ ಎಂಬ ಆಧಾರದ ಮೇಲೆ ಅದಕ್ಕೆ ಅಧಿಕಾರವಿಲ್ಲ ಎಂದು ತೀರ್ಮಾನಿಸತಕ್ಕದಲ್ಲ. AIR 1995 SC 621.

37. ಒಂದು ಸಹಕಾರಿ ಬ್ಯಾಂಕಿನ ಹಣದುರುಪಯೋಗಕ್ಕೆ ಸಂಬಂಧಪಟ್ಟಂತೆ ಒಂದು ಸಂಘದ ಪಾಲು ಬಂಡವಾಳ ಹೊಂದಿದ ಸದಸ್ಯ, ಆಡಳಿತ ಮಂಡಳಿ ಮೇಲೆ ವಸೂಲಾತಿ ಕ್ರಮಕ್ಕೆ ನಿಬಂಧಕರು, ಮಧ್ಯಸ್ಥರಾಗಿ ದಾವಾ ಪ್ರಕರಣ ಸ್ವೀಕರಿಸಿದಾಗ, ಅಂತಹ ಪ್ರಕರಣದಲ್ಲಿ ಅರ್ಜಿದಾರರು, ರಿಜಿಸ್ಟ್ರಾರ್ ರವರು ಈ ಪ್ರಕರಣವನ್ನು ಅಧೀಕೃತವಾಗಿ ಸಂಘದ ಪರವಾಗಿದ್ದರೆ ಎಂದು (ಅಫಿಷಿಯಲ್ ಬಯಾಸ್) ಮತ್ತು ಅವರ ಕಾರಣ ಕೇಳುವ ನೋಟೀಸು ಆಡಳಿತ ಮಂಡಳಿ ನಿರ್ದೇಶಕರನ್ನು ತೆಗೆದುಹಾಕುವ ಬಗ್ಗೆ ಇದ್ದು ಅಂತಹ ನಿಬಂಧಕರು ವಸೂಲಾತಿ ಕ್ರಮಗಳಲ್ಲಿ ವೈಯಕ್ತಿಕವಾಗಿ ನಿರ್ದೇಶಕರನ್ನು ಜವಾಬ್ದಾರರನ್ನಾಗಿ ಮಾಡುವುದು ಸರಿಯಲ್ಲ. ಹಗೂ ನಿಬಂಧಕರು ಈ ಪ್ರಕರಣವನ್ನು ನ್ಯಾಯಾಲಯದ ಅಧಿಕಾರಿಯಾಗಿ ತೀರ್ಮಾನಿಸತಕ್ಕದಲ್ಲ ಎಂಬ ವಾದವನ್ನು ಸರಿಯಲ್ಲವೆಂದು ತೀರ್ಮಾನಿಸಿದೆ. AIR 1961 SC 1743.

38. ನಿಬಂಧಕರು ಕಲಂ 69ರಲ್ಲಿ ಜವಾಬ್ದಾರಿಯನ್ನು ನಿಗಧಿಪಡಿಸುವಾಗ ಆರೋಪ ಪಟ್ಟಿಯನ್ನು ಕಾರಣ ಕೇಳುವ ನೋಟೀಸ್ ಮುಖಾಂತರ ತಮ್ಮ ಹೇಳಿಕೆ ಸಲ್ಲಿಸಲು ಅವಕಾಶ ಕಲ್ಪಿಸಬೇಕು. ಆ ಹೇಳಿಕೆ ಆಧಾರದ ಮೇಲೆ ಸಂಘವು ಹೊರಿಸಿದ ಆರೋಪಗಳನ್ನು ಯಾವ ದಾಖಲೆಗಳ ಆಧಾರದ ಮೇಲೆ ಪ್ರಾಧಿಕಾರ ವಿವರಣೆ ಪಡೆದು ತೀರ್ಪು ಕೊಡಬಹುದು. 1989(7) KLJ 141.

39. ಕಲಂ 69ರಲ್ಲಿ ನಡೆಯುವ ನಡವಳಿಕೆಗಳು ಪ್ರತ್ಯೇಕ ಮತ್ತು ಸ್ವತಂತ್ರ, ಅವುಗಳನ್ನು ಕಲಂ 64ರಲ್ಲಿ ನಡೆದ ವಿಚಾರಣೆ ನಡವಳಿಕೆಗಳಿಗಿಂತ ಪ್ರತ್ಯೇಕ. 1991(2) KLJ 416.

40. ಒಂದು ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರು ಸಾಲ ಮಂಜೂರಿ ಮಾಡಿ ಬೈಲಾಗೆ ವಿರುದ್ದವಾಗಿ ಆ ಹಣವನ್ನು ವಸೂಲಿ ಮಾಡಲು ಕಾನೂನಿನಲ್ಲಿ ಇರುವ ಬೇರೆ ಕಲಂಗಳಲ್ಲಿ

ವಸೂಲಾತಿ ಕ್ರಮ ಜರುಗಿಸಬಹುದು. ಅಂದರೆ ಸಾಲಗಾರ ಮತ್ತು ಜಾಮೀನುದಾರರ ಮೇಲೆ, ಆನಂತರ ಆಡಳಿತ ಮಂಡಳಿ ನಿರ್ದೇಶಕರ ಮೇಲೆ ಹಣ ದುರುಪಯೋಗ ಕ್ರಮ ನಡೆಸಬೇಕೆಂಬುದು ಸರಿಯಲ್ಲ. ILR 1979 KAR 739/KLJ 1973 KAR 185.

41. ಕಲಂ 69ರನ್ವಯ ಪ್ರಥಮ ಬಾರಿಗೆ ಡಿಕ್ರಿ ಪಡೆದಾಗ ಅದನ್ನು ಅವ್ಯವಹಾರಿಕ ಎಂದು ತೀರ್ಮಾನಿಸತಕ್ಕದಲ್ಲ. ಒಬ್ಬ ಮೃತ ಸದಸ್ಯನ ಮಗ ಸಿವಿಲ್ ದಾವೆಯನ್ನು ಹೂಡಿ ಕಲಂ 69ರಲ್ಲಿ ಪಡೆದ ವಸೂಲಾತಿ ಆದೇಶ ಅವ್ಯವಹಾರಿಕ ಎಂದು ತೀರ್ಮಾನಿಸಬೇಕೆಂಬ ಅರ್ಜಿ ಸಲ್ಲಿಸಲು ಅರ್ಹವಲ್ಲ. ಅದನ್ನು ಪ್ರತ್ಯೇಕವಾಗಿ ಮತ್ತು ಸ್ವತಂತ್ರವಾಗಿ, ಅವ್ಯವಹಾರಿಕ ವ್ಯವಹಾರ ಎಂದು ತೀರ್ಮಾನಿಸಲು ಆಗ್ರಹಿಸಬೇಕು. ಒಂದು ಸಹಕಾರಿ ಸಂಘದ ನೌಕರ ತನ್ನ ಅಶಿಸ್ತಿನಿಂದ ಕರ್ತವ್ಯ ಚ್ಯುತಿ ಮಾಡಿದ ಹಣ ದುರುಪಯೋಗಕ್ಕೆ ಕಲಂ 70ರನ್ವಯ ತೀರ್ಮಾನಿಸುವ ಅಂಶವಾಗಲಾರದು. ILR 1975(2) KAR 102/1975(2) KLJ SN 55.

42. ಒಂದು ಸಹಕಾರ ಸಂಘದ ಆಸ್ತಿಯಲ್ಲಿ ಕೊರತೆಯುಂಟಾದಾಗ ಅ ಕೊರತೆಯು ಆಡಿಟ್ ವರದಿ ವಿಚಾರಣಾ ವರದಿ, ತಪಾಸಣಾ ವರದಿ ಮತ್ತು ಸಮಾಪನಾ ವರದಿ ಆಧರಿಸಿದರೆ ಮಾತ್ರ ಸಿಂಧು. ಈ ವರದಿಗಳಲ್ಲಿ ಕೊರತೆ ಕಂಡು ಹಿಡಿಯದಿದ್ದರೆ ಆಡಳಿತ ಮಂಡಳಿ. ಗೊಬ್ಬರದ ಕೊರತೆ ಇದೆ ಎಂದು, ಅದಕ್ಕೆ ಲೆಕ್ಕ ಸಮರ್ಪಕವಾಗಿ ಇಟ್ಟಿಲ್ಲವೆಂದು ವಸೂಲಾತಿಗೆ ಕಲಂ 70ರನ್ವಯ ದಾವಾ ದಾಖಲಿಸುವ ಅಧಿಕಾರವನ್ನು ತೆಗೆದುಹಾಕಿದಂತಲ್ಲ. ILR 1975 KAR 1020/1975(2) KLJ 118/1975(2) KLJ SN 103/1976(1) KLJ SN 55.

43. ಕಲಂ 69ರನ್ವಯ ವಸೂಲಾತಿ ಕ್ರಮ ಇಡುವ ಪೂರ್ವದಲ್ಲಿ ಆಡಿಟ್, ವಿಚಾರಣೆ, ತಪಾಸಣೆ ಮತ್ತು ಸಮಾಪನೆ ಸಮಯದಲ್ಲಿ ಸಂಘದ ಆಡಳಿತ ವ್ಯವಹಾರದಲ್ಲಿ ಹಣವನ್ನು ದುರುಪಯೋಗ ಮಾಡಿದಾಗ, ದುರ್ವ್ಯವಹಾರ ಮಾಡಿದಾಗ ವಸೂಲಾತಿ ಕ್ರಮ ಜರುಗಿಸಬಹುದು. 1979(1) KLJ 185/ILR 1979(1) KAR 739 DB.

44. ನೌಕರರು ಹಣದುರುಪಯೋಗ ಮಾಡಿಕೊಂಡಾಗ ಆ ಹಣದ ವಸೂಲಾತಿಗೆ ಕಲಂ 69ರಲ್ಲಿ ಕ್ರಮವಿಡಬೇಕು. ಮತ್ತು ಕಲಂ 70ರಲ್ಲಿ ಅಲ್ಲ. 1979(2) KLJ 103.

45. ಕಲಂ 69ರನ್ವಯ ಕ್ರಮ ಜರುಗಿಸುವಾಗ ಕೊರತೆಯು ಅಧಿಕೃತ ವ್ಯಾಪಾರಿ ಕೊರತೆ ಎಂದು ಕಂಡುಬಂದಾಗ ಅನ್ವಯವಾಗಲಾರದು. 1976(2) KLJ 62/AIR 1972 1976 KAR 1384.

46. ಕರ್ನಾಟಕ ಕಾಯಿದೆ 19/1976ರಲ್ಲಿ ಕಲಂ 69 ಮತ್ತು ಕಲಂ 70ಕ್ಕೆ ಆದ ತಿದ್ದುಪಡಿಗಳನ್ನು ಗಮನಿಸಿ ಯಾವ ವಿಷಯ ಕಲಂ 69ರಲ್ಲಿ ಕ್ರಮ ಜರುಗಿಸಬೇಕಾಗಿತ್ತು ಅಂತಹ ಕ್ರಮವನ್ನು ಕಲಂ 70ರನ್ವಯ ನಡೆಸಬಹುದು. 1986(2) ILR KAR 1875/KLJ SN 108 1986(1)/ DLJ 241 DB.

47. ಕಲಂ 69ರಲ್ಲಿ ರೂಪಿಸಿರುವ ನೀತಿ ನಿಯಮಗಳನ್ನು ಜರುಗಿಸಬೇಕಾದ ಕ್ರಮವನ್ನು ಉಲ್ಲಂಘಿಸಿದಾಗ, ಅಂತಹ ಆದೇಶ ವ್ಯಾಪ್ತಿಗೆ ಮೀರಿದ್ದು ಮತ್ತು ಕಾನೂನು ಬದ್ದವಲ್ಲ. ಅಂತಹ

ಸಂದರ್ಭದಲ್ಲಿ ಸಂವಿದಾನದ ಪರಿಚ್ಛೇದ 226 ಮತ್ತು 227ರನ್ವಯ ಮಧ್ಯಪ್ರವೇಶಿಸಬಹುದು.

48. ವ್ಯಕ್ತಿಗತ ಆರೋಪವನ್ನು ಮಾಡಬೇಕಿದ್ದ ಸಂದರ್ಭದಲ್ಲಿ ಮತ್ತು ಲೆಕ್ಕಾಧಿಕಾರಿಗಳು, ವಿಚಾರಣಾಧಿಕಾರಿಯು ಮಾಡಿದ ಆರೋಪಗಳನ್ನೇ ಆಧಾರವಾಗಿಟ್ಟುಕೊಂಡರೆ ಅದು ಸಿಂಧುವಲ್ಲ. 1989(2) ಕೆಎಲ್‌ಜೆ 281.

49. ಕಲಂ 63, 64, 65 ಮತ್ತು 72ರನ್ವಯ ವಿಚಾರಣೆ ಮಾಡುವಗ, ಯಾವ ವ್ಯಕ್ತಿಯ ಮೇಲೆ ಸಂಘದ ಆಸ್ತಿಯಲ್ಲಿ ಕೊರತೆ ಉಂಟು ಮಾಡುತ್ತಾರೋ, ಅಂತಹ ವ್ಯಕ್ತಿಗೆ ವಿಚಾರಣಾ ಸಮಯದಲ್ಲಿಯೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಲಿಖಿತ ಉತ್ತರ ಪಡೆದು, ದಾಖಲೆ ಪರಿಶೀಲಿಸಿ, ಆನಂತರ ಆರೋಪ ರುಜುವಾಗಿದೆ ಎಂದು ವಸೂಲಾತಿಗೆ ಇಟ್ಟಾಗ, ಅಂತಹ ಪ್ರಕರಣಗಳಲ್ಲಿ ಕಲಂ 69ರನ್ವಯ ಅಧಿಭಾರ ಅರ್ಜಿ ದಾಖಲಿಸಿದಾಗ, ಆರೋಪ ಪಟ್ಟಿ ಹೊರಿಸಿ ಲಿಖಿತ ಹೇಳಿಕೆಯನ್ನು ಪಡೆದರೂ ಸಾಕು. ಏಕೆಂದರೆ ಸ್ವಾಭಾವಿಕ ನ್ಯಾಯದ ತತ್ವದಡಿ ಜವಾಬ್ದಾರಿ ನಿಗಧಿಪಡಿಸುವ ಪೂರ್ವದಲ್ಲಿ ಒಮ್ಮೆ ಕಾರಣ ಕೇಳುವ ನೋಟೀಸ್ ಕೊಟ್ಟು, ಅವರು ಕೊಟ್ಟ ಉತ್ತರದ ಆಧಾರದ ಮೇಲೆ, ವಸೂಲಾತಿ ಮೇಲೆ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ ಎಂದು ತಿಳಿಯತಕ್ಕದ್ದು. ಅಂತಹ ಸಮಯದಲ್ಲಿ, ಕಲಂ 69ರನ್ವಯ ಆರೋಪ ಪಟ್ಟಿ ಜಾರಿ ಮಾಡಿದಾಗ, ಹಿಂದೆ ಅವಕಾಶ ಕೊಡಲಾಗಿದೆ ಎಂದು ಪ್ರಾಧಿಕಾರಕ್ಕೆ ಮನದಟ್ಟು ಆದಾಗ ಲಿಖಿತ ಹೇಳಿಕೆ ಆಧಾರದ ಮೇಲೆ ಪ್ರಕರಣ ತೀರ್ಮಾನ ಮಾಡಲು ಪ್ರಾಧಿಕಾರಕ್ಕೆ ಅಧಿಕಾರ ಇದೆ. ಕೆಎಲ್‌ಜೆ 1983(2) 313–ಎಂಎಲ್‌ಜೆ 1972(2) ಎಸ್‌ಎನ್ 29–1972(2) ಎಂಎಲ್‌ಜೆ 112–1978 ಕೆಎಲ್‌ಜೆ 421–1979(2) ಕೆಎಲ್‌ಜೆ 127.

## ದಾವಾ ಪ್ರಕರಣಗಳು :

1. ಸಹಕಾರಿ ಕಾಯಿದೆಯನ್ವಯ ವಿವಾದಗಳನ್ನು ಇತ್ಯರ್ಥಪಡಿಸಲು ಸಮರ್ಥ ಅವಕಾಶ ಇರುವುದರಿಂದ ರಿಟ್ ಅರ್ಜಿಯನ್ನು ದಾಖಲಿಸುವ ಬಗ್ಗೆ ವಿಮರ್ಶಿಸುತ್ತಾ ಕಾಯಿದೆಯಲ್ಲಿಯೇ ವಿವಾದಗಳನ್ನು ಸಮರ್ಥವಾಗಿ ನಿರ್ವಹಿಸಲು ಅವಕಾಶ ಇರುವುದರಿಂದ ರಿಟ್ ಪ್ರಕರಣ ದಾಖಲಿಸುವುದು ಸೂಕ್ತವಲ್ಲ. ಸಾಮಾನ್ಯವಾಗಿ ಉಚ್ಛ ನ್ಯಾಯಾಲಯ ಸಂವಿಧಾನದ ಪರಿಚ್ಛೇದ 226ರಲ್ಲಿ ರಿಟ್ ಅರ್ಜಿಯನ್ನು ಇಂತಹ ಪ್ರಕರಣಗಳಲ್ಲಿ ದಾಖಲಿಸಿಕೊಳ್ಳುವುದಿಲ್ಲ. ಇದಕ್ಕೆ ಪೂರಕವಾಗಿ ಸಾಕ್ಷಿಗಳನ್ನು ವಿಚಾರಣೆ ಮಾಡುವಾಗ ಉದ್ಭವಿಸುವ ಪ್ರಶ್ನೆಗಳನ್ನು ನಿರ್ಧರಿಸುವುದು ಉಚ್ಛ ನ್ಯಾಯಾಲಯವಲ್ಲ. ಉಚ್ಛ ನ್ಯಾಯಾಲಯವು ಮೇಲ್ಮನವಿ ಪ್ರಾಧಿಕಾರವೆಂದು ಮತ್ತು ನ್ಯಾಯಾಧೀಕರಣದ ತಪ್ಪುಗಳನ್ನು ತಿದ್ದುವುದು ಉದ್ದೇಶವಲ್ಲ. ಎಲ್ಲಿ ವಿವಾದಗಳನ್ನು ಇತ್ಯರ್ಥಪಡಿಸಲು ಅಧಿಕಾರ ಕೊಡಲಾಗಿದೆಯೇ ಅಂತಹ ಪ್ರಸಂಗಗಳಲ್ಲಿ ಉಚ್ಛನ್ಯಾಯಾಲಯ ರಿಟ್ ಅರ್ಜಿಯನ್ನು ಸಂವಿಧಾನದ ಪರಿಚ್ಛೇದ 226ರಲ್ಲಿ ದಾಖಲಿಸಿಕೊಳ್ಳುವುದಿಲ್ಲ. 2010(2) ಕೆಸಿಸಿಆರ್ 995(ಡಿಬಿ)

2. ರಿಟ್ ಅರ್ಜಿ ದಾಖಲಿಸಿ, ಅದರೊಟ್ಟಿಗೆ ಆಂತರಿಕ ಅರ್ಜಿಯ ಆಧಾರದ ಮೇಲೆ ನಾಮಪತ್ರ ಸಲ್ಲಿಸಲು ಒಪ್ಪಿಗೆ ಪಡೆದು ಆನಂತರ ಚುನಾವಣೆ ಆಗಿದ್ದು ಹಾಗೂ ಆ ಚುನಾವಣೆಯಲ್ಲಿ ಅರ್ಜಿದಾರರು ಸೋತ ನಂತರ ಆ ರಿಟ್ ಅರ್ಜಿಯನ್ನು ಮುಂದುವರೆಸುತ್ತಾ 4 ಮತ್ತು 5ನೇ ಎದುರು ಅರ್ಜಿದಾರರು ಅರ್ಹ ಅಭ್ಯರ್ಥಿಗಳು ಎಂದು ಪರಿಗಣಿಸಲಾಗತಕ್ಕದ್ದಲ್ಲ ಎಂದು ಪ್ರಶ್ನಿಸಿದಾಗ, ಈ ವಿಚಾರವನ್ನು ದಾವಾ ಪ್ರಕರಣ ದಾಖಲಿಸಬೇಕೇ ಹೊರತು ರಿಟ್ ಅರ್ಜಿಯಲ್ಲಿ ಪರಿಹಾರ ಕೇಳತಕ್ಕದ್ದಲ್ಲ. 2010(1) ಕೆಸಿಸಿಆರ್ 78/2009(5) ಕೆಎಲ್‌ಜೆ 595.

3. ರಿಟ್ ಅರ್ಜಿಯನ್ನು ಸಹಕಾರಿ ಕಾಯಿದೆಯಲ್ಲಿಯೇ ದಾವ ತೀರ್ಮಾನ ಮಾಡುವ ಸಮರ್ಥ ಅವಕಾಶ ಇರುವುದರಿಂದ ವಜಾ ಮಾಡಲಾಗಿತ್ತು. ಆ ಪ್ರಕರಣದಲ್ಲಿ ಸಂಬಂಧಪಟ್ಟ ಸಂಸ್ಥೆ ನೌಕರನ ಮೇಲೆ ಹೊರಿಸಿದ್ದ ಆರೋಪಗಳು ರುಜುವಾತಾಗಿಲ್ಲವೆಂದು ಮತ್ತು ಅವನಿಗೆ ಎಲ್ಲ ನಿವೃತ್ತಿ ಸೌಲಭ್ಯವನ್ನು ಕೊಡಲಾಗುವುದಿಲ್ಲವೆಂದು ತಿಳಿಸಿದ ನಂತರವೂ ಮತ್ತೊಮ್ಮೆ ವಿಭಾಗೀಯ ಪೀಠ ಪುನರ್ ವಿಮರ್ಶಿಸುವ ಅವಶ್ಯಕತೆ ಇಲ್ಲ ಎಂದು ಪ್ರಕರಣವನ್ನು ವಜಾ ಮಾಡಲಾಯಿತು. 2009(5) ಕೆಎಲ್‌ಜೆ 441 (ಡಿಬಿ)

4. ಸಾಲಗಾರನ ಆಸ್ತಿಯನ್ನು ಹರಾಜು ಹಾಕಿದಾಗ ನಿಯಮ 38(5)(ಎ) ಅಡಿ ಒಂದು ಅರ್ಜಿಯನ್ನು ಸಾಲಗಾರನು ಸಲ್ಲಿಸಿದಾಗ, ಆ ಅರ್ಜಿಯನ್ನು ವಿಚಾರಣೆ ಮಾಡಿ ಆದೇಶ ಹೊರಡಿಸಬೇಕು. ವಿಚಾರಣೆ ಮಾಡುವ ಸಂದರ್ಭದಲ್ಲಿ ಆ ಆಸ್ತಿಯನ್ನು ಖರೀದಿ ಮಾಡಿದವನ ಹಿತಾಸಕ್ತಿಗೆ ಪೂರಕವಾಗಿ ಮತ್ತು ಸಾಲಗಾರನ ಹಿತಕ್ಕೆ ವಿರುದ್ಧವಾಗಿ ಉಪಯೋಗಿಸಿಕೊಳ್ಳತಕ್ಕದ್ದಲ್ಲ. ಅರ್ಜಿಯಲ್ಲಿ ಮಾರಾಟವನ್ನು ಕಿತ್ತುಹಾಕಬೇಕೆಂದು ಮನವಿ ಸಲ್ಲಿಸಿದಾಗ ಸಾಲಗಾರನ ಹೇಳಿಕೆಯನ್ನು ಪಡೆದು ತೀರ್ಮಾನಿಸಬೇಕಾಗಿತ್ತು. ದಾಖಲೆಗಳ ನ್ಯೂನತೆಗಳ ಆಧಾರದ ಮೇಲೆ ಮಾರಾಟವನ್ನು ರದ್ದುಗೊಳಿಸಿ ಆದೇಶಿಸಲಾಗಿದೆ. 2009(2) ಕೆಸಿಸಿಅರ್ ಎಸ್‌ಎನ್ 61/2009(4) ಕೆಎಲ್‌ಜೆ 419/ಎಐಆರ್ 2009 (ಎನ್‌ಒಸಿ) 1221(ಕೆಎಆರ್)

5. ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯಡಿಯಲ್ಲಿ "ಬ್ಯಾಂಕ್" ಎಂಬ ಪದಕ್ಕೆ ಅರ್ಥ ವಿವರಣೆ ಕೊಡುವಾಗ ಸಹಕಾರಿ ಬ್ಯಾಂಕನ್ನು ಅದರಲ್ಲಿ ಸೇರಿಸಿಲ್ಲ. ಆದ್ದರಿಂದ ಸೆಕ್ಯೂರಟೈಸೇಷನ್ ಕಾಯಿದೆ ಸಹಕಾರ ಸಂಘಗಳು ಸಾಲ ವಸೂಲು ಮಾಡಲು ಉಪಯೋಗಿಸತಕ್ಕದ್ದಲ್ಲ. ಮತ್ತು ಇಂತಹ ಪ್ರಕರಣದಲ್ಲಿ ಕಲಂ 70ರಲ್ಲಿ ದಾವಾ ದಾಖಲಿಸಬೇಕು 2008(1) ಕೆಸಿಸಿಆರ್ 67/ಐಎಲ್‌ಆರ್ 2007(4) ಕೆಎಆರ್ 4740/2008(3) ಕೆಎಲ್‌ಜೆ 343.

6. ಒಂದು ದಾವಾ ಪ್ರಕರಣವನ್ನು ಒಬ್ಬ ಸಂಘದ ಏಜೆಂಟ್ ಮತ್ತು ಸಹಕಾರ ಸಂಘದ ಆಡಳಿತ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಸಲ್ಲಿಸಿದರೆ ಅಂತಹ ಇತ್ಯರ್ಥ ಮಾಡುವ ಅಧಿಕಾರ ಸಿವಿಲ್ ನ್ಯಾಯಾಲಯಕ್ಕೆ ಇಲ್ಲ. ಇದು ನಿಬಂಧಕರು ನಿರ್ಧರಿಸುವ ದಾವಾ ಪ್ರಕರಣ 2008(2) ಕೆಸಿಸಿಆರ್ 1185/ಐಎಲ್‌ಆರ್ 2008(3) ಕೆಎಆರ್ 3243/2008(6) ಕೆಎಲ್‌ಜೆ 530.

7. ಮಧ್ಯಸ್ಥದಾರರು ಒಂದು ಪ್ರಕರಣವನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಅವಕಾಶವನ್ನು

ಕೊಡಲಾರದೇ ಇದ್ದಾಗ, ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ 2007(4) ಕೆಸಿಸಿಆರ್ ಎಸ್ಎನ್ 343.

8. ಸಿವಿಲ್ ನ್ಯಾಯಾಲಯದಲ್ಲಿ ನಷ್ಟಕ್ಕಾಗಿ ಹೂಡಿದ ಒಂದು ಪ್ರಕರಣ, ಎದುರು ಅರ್ಜಿದಾರರ ವೈಯಕ್ತಿಕ ಮಟ್ಟದಲ್ಲಿ ಕೇಳಿದ ಪರಿಹಾರವಾಗಿದ್ದು, ಅದನ್ನು ಸಹಕಾರ ಸಂಘದ ವ್ಯವಹಾರದ ಜೊತೆಗೆ ಕೂಡಿಸತಕ್ಕದ್ದಲ್ಲ. ಕಲಂ 70ರನ್ವಯ ಪ್ರಕರಣ ದಾಖಲಿಸಲಾಗದಂತೆ ಅವಕಾಶ ಇರುವುದಿಲ್ಲ. ಅಂದರೆ ಇಂತಹ ಪ್ರಕರಣ ಸಿವಿಲ್ ನ್ಯಾಯಾಲಯದಲ್ಲಿಯೇ ತೀರ್ಮಾನವಾಗಬೇಕು. 2007(4) ಕೆಸಿಸಿಆರ್ 2756/ಐಎಲ್ಆರ್ 2007(4) ಕೆಎಆರ್ 4720

9. ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಒಬ್ಬ ಅಭ್ಯರ್ಥಿಯನ್ನು ಸ್ಪರ್ಧಿಸಲು ಅನರ್ಹ ಎಂದು ತೀರ್ಮಾನಿಸಿದ ನಂತರ ಉಪನಿಬಂಧಕರು ಆ ವ್ಯಕ್ತಿ ಅಭ್ಯರ್ಥಿ ಆಗಿದ್ದಾನೆಂದು ಕೊಟ್ಟ ತೀರ್ಪು ತೆಗೆದುಹಾಕಿದಂತಾಗುತ್ತದೆ. ಕರ್ನಾಟಕ ಮೇಲ್ಮನವಿ ಪ್ರಾಧಿಕರಣದ ಆದೇಶವು ಸಮರ್ಪಕವಾಗಿದ್ದು, ಹೊಸದಾಗಿ ಚುನಾವಣೆ ನಡೆಯಬೇಕೆಂದು ಆದೇಶಿಸಲಾಗಿದೆ. 2006(4) ಕೆಸಿಸಿಆರ್ 2377(ಡಿಬಿ)

10. ಕಾರ್ಮಿಕ ನ್ಯಾಯಾಲಯವು ಒಂದು ಕಾರ್ಖಾನೆಯಲ್ಲಿ ಲೇ ಆಫ್ ಮಾಡಿದಾಗ, ಪ್ರಕರಣ ವಿಚಾರಣೆ ಮಾಡುವ ಅಧಿಕಾರ ಹೊಂದಿದ್ದು, ಕಲಂ 70ರನ್ವಯ ವಿಚಾರಣೆ ಮಾಡಬಾರದೆಂದು ಯಾವುದೇ ನಿರ್ಭಂಧವಿಲ್ಲ. 2006(1) ಕೆಸಿಸಿಆರ್ 156.

11. ಮಧ್ಯಸ್ಥಗಾರರು ಒಂದು ಪ್ರಕರಣವನ್ನು ತೀರ್ಮಾನ ಮಾಡುವ ಸಂದರ್ಭದಲ್ಲಿ ಮೌಖಿಕ ಹೇಳಿಕೆಯಲ್ಲಿ ಸಾಲ ಪಡೆದಿದ್ದು ನಿಜ ಮತ್ತು ಆ ಸಾಲವನ್ನು ಮರುಪಾವತಿಸಲು ಬದ್ಧರೆಂದು ಒಪ್ಪಿಗೆ ಕೊಟ್ಟ ನಂತರ ದಾಖಲೆಗಳನ್ನು ಪರಿಶೀಲಿಸಿ, ಆದೇಶವನ್ನು ಹೊರಡಿಸಿದ ನಂತರ, ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಆ ದಾಖಲೆಗಳನ್ನು ಪರಿಶೀಲಿಸಿ ಮಧ್ಯಸ್ಥಗಾರರು ಹೊರಡಿಸಿದ ಆ ಆದೇಶ ಸಮರ್ಪಕವಾಗಿದೆ ಎಂದು ತೀರ್ಮಾನಿಸಿರುವುದು ಸರಿಯಾದ ಕ್ರಮ. 2006(3) ಕೆಸಿಸಿಆರ್ ಎಸ್ಎನ್ 146/2006(2) ಕೆಎಲ್‌ಜೆ 227

12. ಒಂದು ದಾವಾ ಪ್ರಕರಣದಲ್ಲಿ ಸಲ್ಲಿಸಲಾದ ದಾಖಲೆಗಳನ್ನು ಸಮರ್ಪಕವಾಗಿ ರುಜುವಾತು ಪಡಿಸದೇ ಮತ್ತು ಅರ್ಜಿದಾರರಿಗೆ ಅವಕಾಶವನ್ನು ಕೊಡಲಾರದೇ ತನ್ನ ದಾಖಲೆಗಳನ್ನು ಸಮರ್ಥಿಸಲು ಅವಕಾಶ ಕೊಡದೇ ತೀರ್ಮಾನಿಸಿರುವುದು ನ್ಯಾಯಸಮ್ಮತವಲ್ಲದ ಆದೇಶ (ಪರ್ವರ್ಸ್ ಅಂಡ್ ಆರ್ಬಿಟ್ರರಿ) 2006(2) ಕೆಸಿಸಿಆರ್ 1017/ಐಎಲ್ಆರ್ 2006(2) ಕೆಎಆರ್ 2174/2006(3) ಕೆಎಲ್‌ಜೆ 209

13. ಒಂದು ದಾವಾ ಪ್ರಕರಣದಲ್ಲಿ ಎದುರು ಅರ್ಜಿದಾರರು ಸಂಘದ ಸದಸ್ಯರಲ್ಲದಿದ್ದರೆ ಆ ಪ್ರಕರಣವನ್ನು ಸದಸ್ಯರ ಮಧ್ಯದ ವಿವಾದ ಎಂದು ತೀರ್ಮಾನಿಸಲಾಗದು, ಆದ್ದರಿಂದ ದಾವಾ ಪ್ರಕರಣ ದಾಖಲು ಮಾಡಿರುವುದು ತಪ್ಪು. ಅದನ್ನು ತಿರಸ್ಕರಿಸಬೇಕು. 2006(1) ಕೆಸಿಸಿಆರ್ ಎಸ್ಎನ್ 63/ಐಎಲ್ಆರ್ 2006(2) ಕೆಎಆರ್ 2108/2006(2) ಕೆಎಲ್‌ಜೆ 267

14. ದಾವಾ ಪ್ರಕರಣ ದಾಖಲು ಮಾಡಲು ಕೊನೆಯ ದಿನಾಂಕ ಭಾನುವಾರವಾಗಿದ್ದು, ಅಂತಹ ಪ್ರಸಂಗಗಳಲ್ಲಿ ಕರ್ನಾಟಕ ಜನರಲ್ ಕ್ಲಾಸಸ್ ಕಾಯಿದೆ ಅನ್ವಯ ಮುಂದಿನ ದಿನದಂದು ದಾಖಲಿಸಬಹುದು. ಏಕೆಂದರೆ ಅದನ್ನು ಅನುಸರಿಸಬಾರದೆಂದು ಸಹಕಾರಿ ಕಾಯಿದೆಯಲ್ಲಿ ಪ್ರತಿರೋಧ ಇರುವುದಿಲ್ಲ. 2008(5) ಕೆಸಿಸಿಆರ್ 3228/2009(1) ಕೆಎಲ್‌ಜೆ 458/ಎಐಆರ್ 2009(ಎನ್‌ಒಸಿ) 113 (ಕೆಎಆರ್)

15. ಒಬ್ಬ ಸಾಲಗಾರ ಸಹ ಸಂಘದಿಂದ ಪಡೆದು ಮರುಪಾವತಿ ಮಾಡದೇ ಇದ್ದ ಪ್ರಸಂಗದಲ್ಲಿ ಸಂಘದ ಸದಸ್ಯರ ಹಿತದೃಷ್ಟಿಯಿಂದ ದಾವಾ ದಾಖಲಿಸಿ ವಸೂಲಾತಿ ಆದೇಶ ಪಡೆದ ನಂತರ ಮತ್ತು ಆ ಆದೇಶವನ್ನು ಮೇಲ್ಪಟ್ಟದ ಪ್ರಾಧಿಕಾರ ದೃಢೀಕರಿಸಿದಾಗ ಉಚ್ಚ ನ್ಯಾಯಾಲಯವು ನ್ಯಾಯದ ಸಹಾಯ ಹಸ್ತ ನೀಡಬೇಕೆಂಬ ಭಾವನೆಯಿಂದ ಸಂಘಕ್ಕೆ ಬರಬೇಕಾದ ಹಣಕ್ಕೆ ಕೊರತೆಯುಂಟುಮಾಡಬಾರದು. ಸಾಲದ ಬಾಕಿಯನ್ನು ಲೆಕ್ಕ ಹಾಕುವಾಗ ವ್ಯತ್ಯಾಸಗಳಿದ್ದರೆ ಅದನ್ನು ವಸೂಲಾತಿ ಪ್ರಾಧಿಕಾರ ಪರಿಶೀಲಿಸಿ ಪರಿಹಾರ ಕೊಡಬಹುದು 2006(1)ಕೆಸಿಸಿಆರ್ ಎಸ್‌ಎನ್ 23/ಐಎಲ್‌ಆರ್ 2006(1) ಕೆಎಆರ್ 120(ಡಿಬಿ)

16. ಒಂದು ಸಹಕಾರ ಸಂಘವು ವ್ಯವಸಾಯ ಭೂಮಿಯನ್ನು ಖರೀದಿ ಮಾಡುವ ಸಂಬಂಧದಲ್ಲಿ ಅರ್ಜಿದಾರರಿಗೆ ಅಧಿಕಾರ ಕೊಟ್ಟು, ಆ ಭೂಮಿಯನ್ನು ವ್ಯವಸಾಯೇತರ ಭೂಮಿಯಾಗಿ ವರ್ಗಾಯಿಸಿದ ನಂತರ ಸಂಘದ ಹೆಸರಿಗೆ ವರ್ಗಾಯಿಸಲು ಉದ್ದೇಶ ಹೊಂದಿದ್ದು, ಆ ವರ್ಗಾವಣೆ ಮಾಡುವುದು ಕಲಂ 70ರನ್ವಯ ಊರ್ಜಿತವಾಗತಕ್ಕದ್ದು. ಇದನ್ನು ಬೇನಾಮಿ ವ್ಯವಹಾರ ನಿರ್ಬಂಧ ಕಾಯಿದೆ ವಿರುದ್ಧವಾಗಿದೆ ಎಂಬ ತೀರ್ಮಾನಕ್ಕೆ ಬರಲಾಗದು ಮತ್ತು ಈ ವಿಷಯವನ್ನು ಇತ್ಯರ್ಥಪಡಿಸಲು ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ಇಲ್ಲ. 2006(1) ಕೆಸಿಸಿಆರ್ ಎಸ್‌ಎನ್ 55/2006(4) ಕೆಎಲ್‌ಜೆ 655

17. ಒಂದು ಗೃಹ ನಿರ್ಮಾಣ ಸಹಕಾರ ಸಂಘ ಒಬ್ಬ ಸದಸ್ಯನಿಂದ ಒಂದು ನಿವೇಶನಕ್ಕೆ ಬೇಕಾದ ಪೂರ್ಣ ಹಣವನ್ನು ಸ್ವೀಕರಿಸಿ, ನಿವೇಶನವನ್ನು ಕೊಡದೇ ಇದ್ದಾಗ ಹಣ ಮರುಪಾವತಿ ಮಾಡಲು ಕೆಳ ನ್ಯಾಯಾಲಯದಲ್ಲಿ ಶೇ.21ರ ಬಡ್ಡಿದರದಂತೆ ಆದೇಶಿಸಲಾಗಿತ್ತು. ಕರ್ನಾಟಕ ಮೇಲ್ಮನವಿ ಪ್ರಾಧಿಕರಣವು ಆ ಬಡ್ಡಿದರವನ್ನು ಮಾರ್ಪಡಿಸಿ ಶೇ 12ರ ಬಡ್ಡಿದರವನ್ನು ನಿಗ್ಧಪಡಿಸಿತ್ತು. ಇದನ್ನು ನ್ಯಾಯಸಮ್ಮತವೆಂದು ಆದೇಶಿಲಾಗಿದ್ದು, ಈ ಆದೇಶದಲ್ಲಿ ಯಾವುದೇ ಕಾನೂನಿನ ನ್ಯೂನತೆ ಇಲ್ಲವೆಂದು ಮೇಲ್ಮನವಿ ಪ್ರಕರಣದ ಆದೇಶವನ್ನು ಎತ್ತಿಹಿಡಿಲಾಯಿತು. 2004(4) ಕೆಸಿಸಿಆರ್ ಎಸ್‌ಎನ್ 513/2005(1) ಕೆಎಲ್‌ಜೆ 245.

18. ಮಧ್ಯಸ್ಥಗಾರರು ಎದುರು ಅರ್ಜಿದಾರರಿಗೆ ಅವಕಾಶವನ್ನು ಕೊಟ್ಟು ಒಂದು ಪ್ರಕರಣವನ್ನು ತೀರ್ಮಾನಿಸಿದಾಗ ಆ ತೀರ್ಮಾನವನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣವು, ಸಾಕ್ಷಿಗಳನ್ನು, ದಾಖಲೆಗಳನ್ನು ಪುನರ್ ಪರಿಶೀಲಿಸಿ ದೃಢೀಕರಿಸಿದ ನಂತರ ಉಚ್ಚ ನ್ಯಾಯಾಲಯವು ಮಧ್ಯಪ್ರವೇಶ ಮಾಡುವುದಿಲ್ಲ. ಉಚ್ಚ ನ್ಯಾಯಾಲವನ್ನು ಮೇಲ್ಮನವಿ ನ್ಯಾಯಾಲಯ ಎಂದು ಪರಿಗಣಿಸಲಾಗುವುದಿಲ್ಲ. ಆದೇಶಗಳು ಮೇಲ್ನೋಟಕ್ಕೆ ತಪ್ಪು ಎಂದು ಕಂಡುಬಂದಾಗ ಮಾತ್ರ

ಮಧ್ಯಪ್ರವೇಶಮಾಡಬಹುದು. ಈ ಹಿಂದ ಎಐಆಋ 2001 ಎಸ್‌ಸಿ 3295 ತೀರ್ಪನ್ನು ಈ ತೀರ್ಪಿಗೆ ಅನ್ವಯಿಸಲಾಗಿದೆ. 2005(3) ಕೆಸಿಸಿಆರ್ 2171/ಐಎಲ್‌ಆರ್ 2005(3) ಕೆಎಆಋ 3505/2005 (5) ಕೆಎಲ್‌ಜೆ 42

19. ಕಲಂ 118ರಲ್ಲಿ "ಯಾವುದೇ ನ್ಯಾಯಾಲಯ" ಎಂಬ ಪದಕ್ಕೆ "ಯಾವುದೇ ನ್ಯಾಯಾಲಯ ಎಂಬಲ್ಲಿ ಕಾರ್ಮಿಕ ಅಥವಾ ಕಂದಾಯ ಅಥವಾ ಕೈಗಾರಿಕಾ ನ್ಯಾಯಾಲಯ" ಎಂದು ಸೇರಿಸಿರುವುದರಿಂದ ಈ ನ್ಯಾಯಾಲಯಗಳ ಕಾರ್ಯವ್ಯಾಪ್ತಿ ಸಹಕಾರ ಸಂಘಗಳ ಆಡಳಿತ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಇರುವುದಿಲ್ಲ. 2005(2) ಕೆಸಿಸಿಆರ್ 804/ಐಎಲ್‌ಆರ್ 2005(1) ಕೆಎಆರ್ 1349/2005(3) ಕೆಎಲ್‌ಜೆ 300

20. ಕಲಂ 70(2)(ಡಿ) ಅನ್ವಯ ಕಾರ್ಮಿಕ ನ್ಯಾಯಾಲಯ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅಧಿಕಾರ ಹೊಂದಿಲ್ಲ 2005(3) ಕೆಸಿಸಿಆರ್ 2212/ಐಎಲ್‌ಆರ್ 2005(3) ಕೆಎಆರ್ 3882

21. ಕಲಂ 70(3) ಅನ್ವಯ ನಿಬಂಧಕರ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವುದು ನಿಬಂಧಕರೇ, ಅದನ್ನು ಪ್ರಶ್ನಿಸುವುದು ಕಲಂ 70ರನ್ವಯವೇ ಮತ್ತು ರಿಟ್ ಮುಖಾಂತರವಲ್ಲ 2005(3) ಕೆಸಿಸಿಆರ್ 1863

22. ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ವಾರ್ಷಿಕ ಶೇ 17ರ ಬಡ್ಡಿದರವನ್ನು ಮಧ್ಯಸ್ಥಗಾರರು ಆದೇಶಿಸಿದ್ದನ್ನು ದೃಢೀಕರಿಸಿದಾಗ, ಆ ದರವನ್ನು ಪ್ರಶ್ನೆ ಮಾಡಲು ಅರ್ಜಿಯನ್ನು ಸಲ್ಲಿಸಿ, ಆ ಅರ್ಜಿಯನ್ನಾಧರಿಸಿ ಭಾರತೀಯ ರಿಜವ ಬ್ಯಾಂಕ್‌ನ ನೀತಿಗೆ ಅನ್ವಯವಾಗಿದೆಯೇ ಅಲ್ಲವೇ ಎಂಬುದನ್ನು ಕೇಳಬೇಕು. 2004(3) ಕೆಸಿಸಿಆರ್ 1513/ಐಎಲ್‌ಆರ್ 2004(3) ಕೆಎಆರ್ 3400/2004(4) ಕೆಎಲ್‌ಜೆ 589

23. ಮಧ್ಯಸ್ಥದಾರರು ಮತ್ತು ಕರ್ನಾಟಕ ಮೇಲ್ಮನವಿ ಪ್ರಾಧಿಕರಣವು ಅರ್ಜಿದಾರರು ಬಡ್ಡಿ ಸಹಿತ ಸಾಲ ಮರುಪಾವತಿ ಮಾಡಲು ಬದ್ದರು ಎಂದು ತೀರ್ಮಾನ ಕೊಟ್ಟ ನಂತರ, ಅದನ್ನು ರಿಟ್ ಮೂಲಕ ಪ್ರಶ್ನಿಸಲು ಅಧಿಕಾರ ಇರತಕ್ಕದ್ದಲ್ಲ. ಉಚ್ಚ ನ್ಯಾಯಾಲಯವು ಮೇಲ್ನೋಟಕ್ಕೆ ಕಾನೂನುಬದ್ಧ ತಪ್ಪುಗಳಿದ್ದರೆ ಮಾತ್ರ ವ್ಮರ್ಧಯಪ್ರವೇಶಿಸುವುದು. 2004(1) ಕೆಸಿಸಿಆರ್ ಎಸ್‌ಎನ್ 65.

24. ಸಹಕಾರಿ ಕಾಯಿದೆಯಲ್ಲಿ ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಯನ್ನು ತಡೆದಿದ್ದರೂ ಮುಖ್ಯ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಪ್ರಕರಣವನ್ನು ವಿಚಾರಣೆಗೆ ಸ್ವೀಕರಿಸಿ, ಈ ಪ್ರಕರಣವನ್ನು ವಿಚಾರಣೆ ಮಾಡುವ ಅಧಿಕಾರವಿಲ್ಲವೆಂದು ಸಮರ್ಥವಾಗಿ ಗಮನಕ್ಕೆ ತಂದರೂ, ಅಂತಹ ಪ್ರಕರಣವನ್ನು ಮುಂದುವರಿಸಿ ಮಧ್ಯಂತರ ಆದೇಶ ಕೊಡಲು ಅಧಿಕಾರ ಇಲ್ಲದೇ ಇದ್ದರೂ, ಚುನಾವಣೆ ನಡೆಯುವುದನ್ನು ನಿಲ್ಲಿಸಲಾಗಿದ್ದು, ಇದು ಸಹಕಾರಿ ಕಾಯಿದೆಯ ಕಲಂ 39ಎ(ಅಧ್ಯಾಯ 5ಎ) ವಿರುದ್ಧವಾಗಿದೆ. ಈ ಆದೇಶದಿಂದ ಸಹಕಾರಿ ಸಂಘದ ಹಿತಾಸಕ್ತಿಗೆ ತೊಡಕುಂಟಾಗಿದೆ. ಈ ತೀರ್ಪು ಕೊಡುವಾಗ ಯಾವ ಕಾರಣಕ್ಕಾಗಿ ಮಧ್ಯಪ್ರವೇಶ

ಮಾಡಲಾಗಿದೆಯೋ ಆ ನ್ಯಾಯಾಧೀಶರಿಗೆ ಮಾತ್ರ ಗೊತ್ತು. 2004(3) ಕೆಸಿಸಿಆರ್ ಎಸ್ಎನ್ 226.ಐಎಲ್ಆರ್ 2004(3) ಕೆಎಆರ್ 2853/2004(4) ಕೆಎಲ್ಜೆ 311.

25. ಕೈಗಾರಿಕಾ ವಿವಾದ ಕಾಯಿದೆ, ಸಹಕಾರ ಸಂಘ ಕಾಯಿದೆ ಕಲಂ 70ರಲ್ಲಿರುವ ವಿಷಯಗಳ ಬಗ್ಗೆ ವ್ಯಾಪ್ತಿಯನ್ನು ತೆಗೆದುಹಾಕಲಾಗಿದೆ. ಈ ವ್ಯಾಪ್ತಿಯಿಂದ ಹೊರಗೆ ಇದ್ದ ವಿಷಯಗಳ್ಲಿ ಮಾತ್ರ ಕೈಗಾರಿಕಾ ನ್ಯಾಯಾಲಯ ವ್ಯಾಪ್ತಿ ಹೊಂದತಕ್ಕದ್ದು. 2003(4) ಕೆಸಿಸಿಆರ್ 3117/ಐಎಲ್ಆರ್ 2003(3) ಕೆಎಆರ್ 2531/2003(4) ಕೆಎಲ್ಜೆ 453(ಎಫ್‌ಬಿ)

26. ಒಬ್ಬ ನಿರ್ದೇಶಕ ಹಣದುರುಪಯೋಗ ಮಾಡಿಕೊಂಡಾಗ ಲೆಕ್ಕಪತ್ರಗಳ ನಿರ್ವಹಣೆ ಮಾಡುವ ಸಂದರ್ಭದಲ್ಲಿ ಆಡಿಟ್ ಮಾಡುವ ಸಮಯದಲ್ಲಿ ಗುರುತಿಸಿದ ನಂತರ, ಸಹಾಯಕ ನಿಬಂಧಕರು ಕಾರ್ಯದರ್ಶಿ ಮತ್ತು ನಿರ್ದೇಶಕರಿಂದ ವಸೂಲಿ ಮಾಡಬೇಕು ಎಂದು ಸಲ್ಲಿಸಿದ ಅರ್ಜಿಯನ್ನು ಸಿವಿಲ್ ನ್ಯಾಯಾಲಯ ಪುರಸ್ಕರಿಸತಕ್ಕದ್ದಲ್ಲ. ಇದು ಸೆಕ್ಷನ್ 70ರನ್ವಯ ದಾಖಲಿಸಬೇಕಾದ ಪ್ರಕರಣ.2003(4) ಕೆಸಿಸಿಆರ್ 2990

27. ಒಬ್ಬ ಸಾಲಗಾರನ ಮೇಲೆ ವಸೂಲಾತಿ ಆದೇಶವನ್ನು ಬ್ಯಾಂಕು ಪಡೆದಾಗ, ಭಾಗಶಃ ಹಣ ಪಾವತಿ ಮಾಡಿ, ಮತ್ತು ಅಂತಹ ಸಂದರ್ಭದಲಿ ರಿಟ್ ಅರ್ಜಿ ಮುಖಾಂತರ ಏಕಕಾಲಿಕ ತೀರುವಳಿ ಅನ್ವಯಿಸಬಹುದೆಂದು ಮನವಿಯನ್ನು ತಿರಸ್ಕರಿಸಿ, ಮರುಪಾವತಿಯನ್ನು ಕಂತುಗಳಲ್ಲಿ ಮಾಡಲು ಅವಕಾಶ ಕಲ್ಪಿಸಿತು. 2003(4) ಕೆಸಿಸಿಆರ್ ಎಸ್ಎನ್ 234/ಐಎಲ್ಆರ್ 2003(3) ಕೆಎಆರ್ 3729

28. ಸಾಲ ಕೊಟ್ಟ ಸಹಕಾರಿ ಬ್ಯಾಂಕು, ಕೈಗಾರಿಕೆಗಾಗಿ ಕೊಟ್ಟ ಸಾಲದ ವಸೂಲಾತಿಗಾಗಿ ಅದರ ಆಸ್ತಿಯನ್ನು ಮಾರಾಟ ಮಾಡಿದಾಗ, ಅಡಮಾನ ಮಾಡಿದ ಯಂತ್ರೋಪಕರಣಗಳಿಂದ ವಸೂಲಿ ಮಾಡಿಕೊಂಡು, ನೌಕರರ ಸಂಬಳ ಕೊಡಬಹುದಾಗಿದ್ದು, ಆ ಕೈಗಾರಿಕೆಯಲ್ಲಿ ತಯಾರಿಸಿದ ವಸ್ತುಗಳ ಮೇಲೆ ಬ್ಯಾಂಕಿನ ಅಧಿಕಾರ ಇರತಕ್ಕದ್ದಲ್ಲ. 2003(2) ಕೆಸಿಸಿಆರ್ 1340/ಐಎಲ್ಆರ್ 2003(2) ಕೆಎಆರ್ 1846/2003(6) ಕೆಎಲ್ಜೆ 15(ಡಿಬಿ)

29. ಕಲಂ 103ರಲ್ಲಿ ಆದೇಶಕ್ಕೆ ಮೊದಲು ಜಪ್ತಿ ಮಾಡುವ ಪ್ರಕರಣದಲ್ಲಿ ಅರ್ಜಿದಾರನ ಅನುಮಾನದ ಆಧಾರದ ಮೇಲೆ ಜಪ್ತಿ ಆದೇಶ ಹೊರಡಿಸತಕ್ಕದ್ದಲ್ಲ. ಈ ರೀತಿ ಹೊರಡಿಸಿದ ಆದೇಶಕ್ಕೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಸಂಯುಕ್ತ ನಿಬಂಧಕರ ಆದೇಶವನ್ನು ಕಿತ್ತುಹಾಕಿತ್ತು. ಈ ಆದೇಶವನ್ನು ರಿಟ್ ಅರ್ಜಿಯಲ್ಲಿ ದೃಢೀಕರಿಸಿ ಪ್ರಕರಣವನ್ನು ಮತ್ತೆ ಸಂಯುಕ್ತ ನಿಬಂಧಕರಿಗೆ ವರ್ಗಾಯಿಸಿ, ಸಂಬಂಧಪಟ್ಟ ವ್ಯಕ್ತಿಗೆ ಆಸ್ತಿಯನ್ನು ದಾವಾ ಪ್ರಕರಣ ತೀರ್ಮಾನ ಮಾಡುವತನಕ ಆಸ್ತಿಯನ್ನು ಪರಭಾರೆ ಮಾಡಬಾರದೆಂದು ನಿರ್ದೇಶನ ನೀಡಲಾಯಿತು 2003(3) ಕೆಸಿಸಿಆರ್ ಎಸ್ಎನ್ 196

30. ಒಬ್ಬ ಸದಸ್ಯ ತಾನು ಹೂಡಿದ ಠೇವಣಿಯನ್ನು ಮರುಪಾವತಿ ಮಾಡಲು ಕೇಳಿದಾಗ ಅದು ಕಲಂ 70ರನ್ವಯ ಪ್ರಕರಣವಾಗುತ್ತದೆ 1963(2) ಎಂಎಲ್ಜೆ 294 (ಡಿಬಿ)/ಐಎಲ್ಆರ್ 1967 ಎಂಎಲ್ಜೆ 427 (ಡಿಬಿ)

31. ಒಬ್ಬ ಆಡಳಿತ ಮಂಡಳಿಯ ಸದಸ್ಯನನ್ನು ಸಭೆಗೆ ಹಾಜರಾಗಿಲ್ಲವೆಂದು ತೆಗೆದುಹಾಕಿದಾಗ ಅದು ಕಲಂ 70ರನ್ವಯ ದಾವಾ ಪ್ರಕರಣವಾಗುತ್ತದೆ. ಐಎಲ್‌ಆರ್ 1987(1) ಕೆಎಆರ್ 702/1985(1) ಕೆಎಲ್‌ಜೆ 326

32. ಒಂದು ಸಂಘದ ಉಪನಿಯಮಗಳ ತಿದ್ದುಪಡಿಗೆ ಸಂಬಂಧಪಟ್ಟಂತೆ ಕಲಂ 70ರಲ್ಲಿ ದಾವಾ ದಾಖಲಿಸಲಾಗದು. ಸಹಕಾರ ಸಂಘ ಮತ್ತು ನಿಬಂಧಕರ ಮಧ್ಯೆ ದಾವಾ ಪ್ರಕರಣ ದಾಖಲಿಸಲಾಗದು. 1966(1) ಎಂಎಲ್‌ಜೆ 215 (ಡಿಬಿ)

33. ಬಾಡಿಗೆ ಪಾವತಿ ಮಾಡಿಲ್ಲವೆಂದು ಕಲಂ 70ರನ್ವಯ ದಾವಾ ದಾಖಲು ಮಾಡತಕ್ಕದ್ದಲ್ಲ ಐಎಲ್‌ಆರ್ 1958 ಎಂವೈಎಸ್ 582.

34. ಒಬ್ಬ ಸದಸ್ಯನ ನಾಮಪತ್ರವನ್ನು ತಿರಸ್ಕರಿಸಿದಾಗ ಅದನ್ನು ಪ್ರಶ್ನಿಸಲು ಕಲಮ 70ರನ್ವಯ ದಾವಾ ದಾಖಲಿಸಬೇಕು ರಿಟ್ ಅರ್ಜಿಯನ್ನಲ್ಲ. 1981(2) ಕೆಎಲ್‌ಜೆ 214/ಎಐಆರ್ 1982 ಕೆಎಎನ್‌ಟಿ 220. 1979(2) ಕೆಎಲ್‌ಜೆ ಎಸ್‌ಎನ್ 32/1984(2) ಕೆಎಲ್‌ಜೆ 216/ಎಐಆರ್ 1985 ಎನ್‌ಒಸಿ 66.

35. ಪದಾಧಿಕಾರಿಗಳ ಆಯ್ಕೆಗೆ ಸಂಬಂಧಿಸಿದಂತೆ ದಾವಾ ಪ್ರಕರಣ ದಾಖಲಿಸಬೇಕು. ಅದು ಒಂದು ಸಮರ್ಪಕ ಅವಕಾಶ, ರಿಟ್ ಅರ್ಜಿ ಮುಖಾಂತರವಲ್ಲ 1963(1) ಎಂಎಲ್‌ಜೆ 204 (ಡಿಬಿ)

36. ಒಂದು ಸಂಘದ ಕಾರ್ಯದರ್ಶಿಯು ಪದಾಧಿಕಾರಿಗಳ ಆಯ್ಕೆಗಾಗಿ ಸಭೆ ಕರೆಯುವುದು ಮತ್ತು ಆ ಸಂಘದ ಸಭೆಯನ್ನು ಕಲಂ 29(2)ರನ್ವಯ ಚುನಾವಣೆ ನಡೆಯಬೇಕಾಗಿದ್ದಾಗ ಕಲಂ 70ರ ಪ್ರಕರಣವನ್ನು ಉಲ್ಲೇಖಿಸಿ ರಿಟ್ ಅರ್ಜಿಯನ್ನು ತಿರಸ್ಕರಿಸತಕ್ಕದದಲ್ಲ. 1981(1) ಕೆಎಲ್‌ಜೆ ಎಸ್‌ಎನ್ 72 (ಡಿಬಿ)

37. ಒಬ್ಬ ಸದಸ್ಯನನ್ನು ಸದಸ್ಯತ್ವದಿಂದ ತೆಗೆದುಹಾಕುವಾಗ, ಎಲ್ಲ ಸದಸ್ಯರಿಗೂ ನೋಟೀಸ್ ಜಾರಿ ಮಾಡದೇ ಇದ್ದಾಗ ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ, ಅಂತಹ ಪ್ರಕರಣಗಳಲ್ಲಿ ರಿಟ್ ಅರ್ಜಿಯನ್ನು ಪುರಸ್ಕರಿಬಹುದು. 1969(2) ಎಂಎಲ್‌ಜೆ 336 (ಡಿಬಿ)

38. ನಿಬಂಧಕರು ಕಲಂ 70(3)ರನ್ವಯ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಇದು ಒಂದು ಪೂರ್ವಭಾವಿ ಪ್ರಶ್ನೆ. ಎಐಆರ್ 1979 ಎಸ್‌ಸಿ 1203/

39. ನಿಬಂಧಕರ ಕಲಂ 70(3)ರ ತೀರ್ಮಾನವನ್ನು ಪುನರ್ ವಿಮರ್ಶಾ ಅರ್ಜಿಯೆಂದು ಕಲಂ 107ರಲ್ಲಿ ಪ್ರಶ್ನಿಸತಕ್ಕದ್ದಲ್ಲ. 1975(2) ಕೆಎಲ್‌ಜೆ 390(ಡಿಬಿ) ಈ ತೀರ್ಪನ್ನು ಉಚ್ಚ ನ್ಯಾಯಾಲಯವು 1975(2) ಕೆಎಲ್‌ಜೆ ಎಸ್‌ಎನ್ 104 ನಲ್ಲಿ ವಿಭಾಗೀಯ ಪೀಠ ದೃಢೀಕರಿಸಿದೆ.

40. ಒಂದು ಪ್ರಕರಣವನ್ನು ತೀರ್ಮಾನ ಮಾಡುವಾಗ ಶೇಕಡ 7.5 ದರದಲ್ಲಿ ವಾರ್ಷಿಕ ಒಪ್ಪಂದ ದರವೆಂದು ಆದೇಶಿಸಿದಾಗ ಶೇಕಡ ವಾರ್ಷಿಕ 10.5 ದರದಲ್ಲಿ ದಂಡಬಡ್ಡಿ ಸೇರಿಸಿ ಆದೇಶಿಸಿದರೆ ಅದು ಸಮರ್ಥನೀಯ. 1989(1) ಕೆಎಲ್‌ಜೆ 134

**ವಿಳಂಬ ವಿನಾಯಿತಿ ಅರ್ಜಿ :**

1. ಎಲ್ಲ ದಾವಾ ಪ್ರಕರಣಗಳನ್ನು ವ್ಯವಹಾರ ದಿನದಿಂದ 6 ವರ್ಷದೊಳಗಾಗಿ ದಾಖಲಿಸಬೇಕು. ಇದು ಪೂರ್ವಾನ್ವಯವಾಗಿ ಜಾರಿಯಾಗತಕ್ಕದ್ದು. 1976(2) ಕೆಎಲ್‌ಜೆ 62.
2. ಯಾವ ಪ್ರಕರಣದಲ್ಲಿ ಒಂದು ಫರ್ಮನ್ನು ಗ್ಯಾರಂಟಾರ್ ಎಂದು ಇದ್ದ ಸಂದರ್ಭದಲ್ಲಿ, ಆ ಫರ್ಮಿನ ಎಲ್ಲ ಪಾಲುದಾರರನ್ನು 6 ವರ್ಷದೊಳಗಾಗಿ ಕಕ್ಷಿದಾರರೆಂದು ಸೇರಿಸಬೇಕು. 1987(1) ಕೆಎಲ್‌ಜೆ 291.
3. ಕಂತುಗಳ ಮರುಪಾವತಿಗೆ ಸುಸ್ತಿದಾರರಾದರೆ ತುರ್ತಾಗಿ ದಾವಾ ದಾಖಲಿಸಬಹುದು ಅಥವಾ ಸಾಲದ ಅವಧಿಯವರೆವಿಗೆ ಕಾಯಬಹುದು. 1990(3) ಕೆಎಲ್‌ಜೆ 152
4. ವಿಳಂಬ ವಿನಾಯಿತಿ ಅರ್ಜಿಯನ್ನು ಸಕಾರಣಗಳಿದ್ದರೆ ವಿನಾಯಿತಿ ನೀಡಬಹುದು. ಇಂತಹ ವಿನಾಯಿತಿ ಚುನಾವಣೆಗೆ ಸಂಬಂಧಪಟ್ಟ ದಾವಾ ಪ್ರಕರಣವೂ ಸೇರತಕ್ಕದ್ದು. ಐಎಲ್‌ಆರ್ 1994(2) ಕೆಎಆರ್ 1029 (ಡಿಬಿ)

**ವಿವಾದಗಳ ಇತ್ಯರ್ಥ :**

1. ಒಂದು ಸಹಕಾರ ಸಂಘವು ತನ್ನ ಕಾರ್ಯವ್ಯಾಪ್ತಿಯ ಹೊರಗೆ ಅಥವಾ ಬೇರೆ ರಾಜ್ಯದಲ್ಲಿ ಶಾಖೆಯನ್ನು ಸ್ಥಾಪಿಸಿದ್ದು, ಆ ಬೇರೆ ರಾಜ್ಯದ ಶಾಖೆಯ ವ್ಯವಹಾರದ ಬಗ್ಗೆ ದಾವಾ ಪ್ರಕರಣ ದಾಖಲಿಸಲು ನೊಂದಾಯಿತ ರಾಜ್ಯದ ನಿಬಂಧಕರಿಗೆ ಸ್ವೀಕರಿಸಲು ಅಧಿಕಾರವಿರತಕ್ಕದ್ದಲ್ಲ. ಎಐಆರ್ 1972 ಎಸ್‌ಸಿ 1248.
2. ಯಾವುದೇ ಒಂದು ಪ್ರಕರಣವನ್ನು ಇತ್ಯರ್ಥಪಡಿಸುವಾಗ ಪೀಠಾಧಿಕಾರಿಗಳ ಮೇಲೆ ಆರೋಪ ಹೊರಿಸಿ ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಪತ್ರಗಳನ್ನು ಸಲ್ಲಿಸದಿದ್ದರೆ, ಅಂತಹ ಪ್ರಕರಣದಲ್ಲಿ ಮಧ್ಯಪ್ರವೇಶಿಸುವ ಅವಶ್ಯಕತೆ ಇಲ್ಲ. 1988(2) ಕೆಎಲ್‌ಜೆ 194.
3. ಪ್ರಥಮ ಬಾರಿಗೆ ಒಬ್ಬ ನೌಕರನ ಮೇಲೆ ನಿರ್ಲಕ್ಷ್ಯತನಕ್ಕೆ ಆದೇಶ ಹೊರಡಿಸಿದ್ದರೆ, ಅದೇ ಹಣವನ್ನು ವಸೂಲಾತಿಗೆ ಅವನ ಮಗನು ಅವ್ಯವಹಾರಿಕ ಎಂಬ ಕಾರಣಕ್ಕೆ ಪುರಸ್ಕರಿಸತಕ್ಕದ್ದಲ್ಲ. 1983(1) ಕೆಎಲ್‌ಜೆ 400.
4. ನಿಬಂಧಕರು ಚುನಾವಣೆ ತಕರಾರು ಅರ್ಜಿಯನ್ನು ನಿರ್ಧರಿಸುವಾಗ ನ್ಯಾಯ, ಸಮತೆ ಮತ್ತು ವಿವೇಚನೆಗನುಸಾರವಾಗಿ ತೀರ್ಮಾನ ಮಾಡತಕ್ಕದ್ದು. ಸಹಕಾರಿ ಕಾಯಿದೆಯಲ್ಲಿ ಈ ಬಗ್ಗೆ ಸ್ಪಷ್ಟ ನಿಯಮಗಳಿಲ್ಲದೇ ಇದ್ದರೂ ಸಾರ್ವತ್ರಿಕ ಚುನಾವಣೆಗೆ ಸಂಬಂಧಪಟ್ಟ ಕಾಯಿದೆ ಕಲಂ 100 ಮತ್ತು 101ರನ್ವಯ ನೀತಿ ನಿಯಮಗಳನ್ನು ಪಾಲಿಸಿ ಚುನಾವಣೆಯನ್ನು ರದ್ದುಗೊಳಿಸಬಹುದು. (ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್ 1951) 1975(2) ಕೆಎಲ್‌ಜೆ 235/ಐಎಲ್‌ಆರ್ 1975 ಕೆಎಆರ್ 1682.

ಟಿಪ್ಪಣಿ: ಅವಧಿ ಮುಗಿದ ಆಡಳಿತ ಮಂಡಳಿಯ ಸದಸ್ಯರು ಹೊಸ ಚುನಾಯಿತ ನಿರ್ದೇಶಕರು ಬರುವತನಕ ಮುಂದುವರಿಯುತ್ತಾರೆಂದು ಇದ್ದ ಅವಕಾಶವನ್ನು ಕೈಬಿಡಲಾಗಿದೆ. ಈ ತೀರ್ಪು ಕೈಬಿಡುವ ಪೂರ್ವದಲ್ಲಿ ಕೊಟ್ಟ ತೀರ್ಪಾಗಿರುತ್ತದೆ – ದಿನಾಂಕ: 27–3–1999 ರಿಂದ ಕೈಬಿಡಲಾಗಿದೆ. (ಸಿಎಂಡಬ್ಲ್ಯೂ 159 ಸಿಎಲ್‌ಎಂ 98)

5. ಸಹಾಯಕ ನಿಬಂಧಕರು ಒಂದು ಸಹಕಾರ ಸಂಘದ ಆಡಳಿತ ಮಂಡಳಿಯ ಸಭೆಗೆ ಅವಧಿ ಮುಗಿದ ನಿರ್ದೇಶಕರನ್ನು ಕರೆಯಬೇಕೇ ಬೇಡವೇ ಎಂಬುದರ ಬಗ್ಗೆ ವಿಚಾರಣೆ ಮಾಡಲು ಅಧಿಕಾರ ಹೊಂದಿರುವುದಿಲ್ಲ. ಇಂತಹ ಆದೇಶವು ಅಧಿಕಾರ ಮೀರಿ ಚಲಾಯಿಸಿದ ಅಧಿಕಾರ. 1974(2) ಕೆಎಲ್‌ಜೆ 191.

   ಟಿಪ್ಪಣಿ: ಅವಧಿ ಮುಗಿದ ಆಡಳಿತ ಮಂಡಳಿಯ ಸದಸ್ಯರು ಹೊಸ ಚುನಾಯಿತ ನಿರ್ದೇಶಕರು ಬರುವತನಕ ಮುಂದುವರಿಯುತ್ತಾರೆಂದು ಇದ್ದ ಅವಕಾಶವನ್ನು ಕೈಬಿಡಲಾಗಿದೆ. ಈ ತೀರ್ಪು ಕೈಬಿಡುವ ಪೂರ್ವದಲ್ಲಿ ಕೊಟ್ಟ ತೀರ್ಪಾಗಿರುತ್ತದೆ – ದಿನಾಂಕ: 27–3–1999 ರಿಂದ ಕೈಬಿಡಲಾಗಿದೆ. (ಸಿಎಂಡಬ್ಲ್ಯೂ 159 ಸಿಎಲ್‌ಎಂ 98)

6. ಸಹಾಯಕ ನಿಬಂಧಕರು ದಾವಾ ಪ್ರಕರಣ ಇತ್ಯರ್ಥಪಡಿಸುವಾಗ ಅರ್ಹತೆಯ ಆಧಾರದ ಮೇಲೆ ಅಥವಾ ಗೈರುಹಾಜರಿಯಲ್ಲಿ, ಅಂದರೆ ಎಕ್ಸಾಪಾರ್ಟೆ, ತೀರ್ಮಾನಿಸಬಹುದು. ಎಕ್ಸ್‌ಪಾರ್ಟೆ ಆದೇಶವನ್ನು ಅರ್ಜಿ ಮುಖಾಂತರ ಪುರಸ್ಕರಿಸಬಹುದು. ಸಹಾಯಕ ನಿಬಂಧಕರು ಈ ಅರ್ಜಿಯನ್ನು ಇತ್ಯರ್ಥಪಡಿಸಬೇಕಾದುದು ಕಲಂ 71(1)(ಬಿ) ಅನ್ವಯ ಇರುತ್ತದೆ. 1970(2) ಎಂಎಲ್‌ಜೆ 283(ಡಿಬಿ)

7. ಮಧ್ಯಸ್ಥಗಾರರು ಯಾವುದೇ ವಸೂಲಾತಿ ಆದೇಶ ಮಾಡುವಾಗ ಅವನ ಮುಂದೆ ಇಲ್ಲದೆ ಅಥವಾ ಪಕ್ಷಗಾರನಲ್ಲದ ವ್ಯಕ್ತಿಯ ಮೇಲೆ ವಸೂಲಾತಿ ಆದೇಶ ಹೊರಡಿಸತಕ್ಕದ್ದಲ್ಲ. 1983(2) ಎಐಎಲ್‌ಎಲ್‌ಆರ್ 90.

8. ಯಾವುದೇ ಒಂದು ಪ್ರಕರಣವನ್ನು ತೀರ್ಮಾನ ಮಾಡುವಾಗ ಬಡ್ಡಿದರವನ್ನು ನಿಗಧಿಪಡಿಸುವಾಗ, ಸಿಪಿಸಿ ಕಲಂ 34ನ್ನು ತಾತ್ವಿಕವಾಗಿ ಪರಿಗಣಿಸಬಹುದು. ಬಡ್ಡಿದರವನ್ನು ಒಪ್ಪಂದದ ದರದಲ್ಲಿ ನಿಗಧಿಪಡಿಸಬಹುದು. ಆ ರೀತಿ ನಿಗಧಿಯಾಗದೇ ಇದ್ದರೆ ಸಾಮಾನ್ಯ ತತ್ವಗಳನ್ವಯ ಅನ್ವಯಿಸುವ ಬಡ್ಡಿದರವನ್ನು ನಿಗಧಿಪಡಿಸಬಹುದು. ಐಎಲ್‌ಆರ್ 1987(1) ಕೆಎಆರ್ 220/1987(2) ಕೆಎಲ್‌ಜೆ ಎಸ್‌ಎನ್ 306.

9. ಪ್ರಾಧಿಕಾರವನ್ನು ಪಕ್ಷಪಾತಿ ಎಂದು ಆರೋಪಿಸಿದರೆ ಅದಕ್ಕೆ ಪೂರಕವಾಗಿ ದಾಖಲಾತಿಗಳನ್ನು ತೋರಿಸಬೇಕು 1982(2) ಕೆಎಲ್‌ಜೆ 184.

10. ಮಧ್ಯಸ್ಥದಾರನು ಒಂದು ಸಹಕಾರ ಸಂಘವನ್ನು ಪರಿಶೀಲನೆಗಾಗಿ ಸಂಘದ ಆಡಳಿತ ಮಂಡಳಿಯ ಠರಾವು ಪುಸ್ತಕ, ಲೆಕ್ಕಪತ್ರಗಳ ಪುಸ್ತಕ ಇವುಗಳನ್ನು ದಾಖಲಿಸಲು ಅಥವಾ ತೋರಿಸಲು ನಿರ್ದೇಶನ ಕೊಡುವ ಅಧಿಕಾರ ಇದೆ. 1988(2) ಕೆಎಲ್‌ಜೆ 217.

11. ಒಂದು ಪ್ರಾಧಿಕಾರದ ಅಧಿಕಾರವನ್ನು ಸರ್ಕಾರವು ನಿಬಂಧಕರ ಅಧಿಕಾರವನ್ನು ವರ್ಗಾಯಿಸಿದಾಗ ಆ ಅಧಿಕಾರ ವ್ಯಾಪ್ತಿ ಮತ್ತೊಂದು ನಿರ್ದೇಶನದಿಂದ ಬೇರೊಂದು ಪ್ರಾಧಿಕಾರಕ್ಕೆ ವರ್ಗ ಹೊಂದಿದ್ದರೆ ಅಂತಹ ಸಂದರ್ಭದಲ್ಲಿ ಯಾವ ಅಧಿಕಾರಿಯ ಅಧಿಕಾರ ಮೊಟಕುಗೊಳಿಸಲಾಗಿದೆಯೋ ಅಂತಹ ವ್ಯಕ್ತಿ, ದಾವಾ ಪ್ರಕರಣವನ್ನು ಮಧ್ಯಸ್ಥದಾರರಿಗೆ ವರ್ಗಾಯಿಸಲಾಗದು. 1988 (2) ಕೆಎಲ್‌ಜೆ 184.

12. ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ಒಂದು ಸಹಕಾರ ಸಂಘದ ಚುನಾವಣೆಯನ್ನು ಕಿತ್ತುಹಾಕಿದಾಗ ಅಂತಹ ಸಹಕಾರ ಸಂಘ ಹೊಸ ಚುನಾವಣೆಯನ್ನು ಆಗಿಂದಾಗ್ಗೆ ಚುನಾವಣೆ ನಡೆಸಬೇಕೆಂದು ಮತ್ತು ಅಂತಹ ಕಿತ್ತುಹಾಕಿದ ಚುನಾವಣೆ ಸಂದರ್ಭದಲ್ಲಿ ಆಡಳಿತಾಧಿಕಾರಿಯನ್ನು ಅಥವಾ ವಿಶೇಷಾಧಿಕಾರಿಯನ್ನು ನೇಮಿಸುವ ಅಧಿಕಾರ ಹೊಂದಿಲ್ಲ. 1988(2) ಬಿಎಲ್‌ಜೆ 85.

13. ಗೌರವ ಮಧ್ಯಸ್ಥದಾರರು ತನ್ನ ತೀರ್ಮಾನವನ್ನು ಕೊಡುವಾಗ ಬಡ್ಡಿದರವನ್ನು ಇಳಿಸುವ ಅಧಿಕಾರ ಹೊಂದಿಲ್ಲ. ಅಂದರೆ ಯಾವ ಬಡ್ಡಿದರದಲ್ಲಿ ಸಾಲ ಪಡೆಯುವಾಗ ಒಪ್ಪಂದವಾಗಿದೆಯೋ ಅದಕ್ಕಿಂತ ಕಡಿಮೆ ಮಾಡತಕ್ಕದ್ದಲ್ಲ. 1988(2) ಕೆಎಲ್‌ಜೆ 400.

14. ಎಲ್ಲಿ ಸಾಲಗಾರ ತನ್ನ ಸ್ವಯಂ ಸ್ಫೂರ್ತಿಯಿಂದ ಮತ್ತು ತಾನು ಕೊಟ್ಟ ಲಿಖಿತ ಒಪ್ಪಂದದನ್ವಯ, ಅಂದರೆ ಒಪ್ಪಂದದ ಬಡ್ಡಿ ಮಂಜೂರಿ ಮಾಡಬಹುದು. 1989(1) ಕೆಎಲ್‌ಜೆ 134.

15. ಸಹಕಾರ ಸಂಘಗಳ ಕಾಯಿದೆಯಡಿ ಚುನಾವಣೆಗೆ ಸಂಬಂಧಪಟ್ಟ ಯಾವುದೇ ನ್ಯೂನತೆಯನ್ನು ಪರಿಹರಿಸಲು ಅವಕಾಶ ಕಲ್ಪಿಸಿದ್ದರೂ ವಿಶೇಷ ಸಂದರ್ಭದಲ್ಲಿ ಸಂವಿಧಾನದ ಪರಿಚ್ಛೇದ 226 ರನ್ವಯ ಮಧ್ಯಪ್ರವೇಶಿಸಲು ಅಧಿಕಾರ ಇದೆ. 1989(1) ಕೆಎಲ್‌ಜೆ 130.

16. ವಜಾಗೊಂಡ ಒಬ್ಬ ಕಾರ್ಯದರ್ಶಿ ಮತ್ತು ಸಹಕಾರ ಸಂಘ ಸಾವಾ ಪ್ರಕರಣ ದಾಖಲೆ ಮಾಡಿದಾಗ ಹೊಸದಾಗಿ ನೇಮಕಗೊಂಡ ಕಾರ್ಯದರ್ಶಿ ಅವಶ್ಯ ಪಾರ್ಟಿ ಅಲ್ಲ. 1989(3) ಕೆಎಲ್‌ಜೆ 250–ಎಐಆರ್ ಎನ್‌ಒಸಿ 135.

17. ಆಡಳಿತ ಮಂಡಳಿಯ ನಿರ್ದೇಶಕರ ಮೇಲೆ ಹಣ ವಸೂಲಾತಿಗಾಗಿ ದಾವಾ ಪ್ರಕರಣ ದಾಖಲಿಸಬಹುದು. 1989 (2) ಕೆಎಲ್‌ಜೆ 361.

18. ಒಂದು ಸಹಕಾರ ಸಂಘದ ಬೈಲಾದಲ್ಲಿ ತಿದ್ದುಪಡಿ ಮಾಡಿ ತನ್ನ ಕಾರ್ಯವ್ಯಾಪ್ತಿಯನ್ನು ತಾಲ್ಲೂಕಿಗಿಂತ ಹೆಚ್ಚಿನ ಕಾರ್ಯವ್ಯಾಪ್ತಿಗೆ ವಿಸ್ತರಿಸಿದಾಗ ತಿದ್ದುಪಡಿಗೆ ಪೂರ್ವದಲ್ಲಿ ಇದ್ದ ಅಧಿಕಾರಿಗೆ, ಅಂದರೆ ಸಹಾಯಕ ನಿಬಂಧಕರಿಗೆ, ತಿದ್ದುಪಡಿಗೆ ಪೂರ್ವದಲ್ಲಿ ದಾಖಲಿಸಿದ್ದ ದಾವಾ ಪ್ರಕರಣವನ್ನು ವಿಚಾರಣೆ ಮಾಡಿ ತೀರ್ಮಾನಿಸಲು ಅಧಿಕಾರ ಇರತಕ್ಕದ್ದು. 1989(2) ಕೆಎಲ್‌ಜೆ 507–ಎಂಐಆರ್ ಎನ್‌ಒಸಿ(2).

19. ಯಾವ ಒಂದು ಸಹಕಾರ ಬ್ಯಾಂಕ್ ಒಂದು ಮೋಟಾರು ವಾಹನವನ್ನು ಖರೀದಿಗಾಗಿ ಸಾಲ ಕೊಟ್ಟಿದ್ದರೆ ಮತ್ತು ಆ ಸಾಲ ಮಂಜೂರು ಮಾಡಿದಾಗ ಸುಸ್ತಿಯಾದ ಸಂದರ್ಭದಲ್ಲಿ ಬ್ಯಾಂಕಿನವರು ವಾಹನವನ್ನು ಮುಟ್ಟುಗೋಲು ಹಾಕಿಕೊಂಡು ವಸೂಲಿ ಕ್ರಮ ಜರುಗಿಸಬಹುದೆಂದು

ಒಪ್ಪಂದವಿದ್ದರೆ, ಅಂತಹ ಸಂದರ್ಭದಲ್ಲಿ ಕಾನೂನಿನನ್ವಯ ದಾವಾ ದಾಖಲಿಸದೆ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಬ್ಯಾಂಕಿಗೆ ಇದೆ. ಎಐಆರ್ 1984 ಕರ್ನಾಟಕ 4226–1991(4) ಕೆಎಲ್‌ಜೆ 274(ಡಿಬಿ)

20. ಚುನಾವಣೆ ತಕರಾರು ಅರ್ಜಿಯಲ್ಲಿ ಸಹಕಾರ ಸಂಘಗಳ ಕಾಯಿದೆಯನ್ವಯವೇ ಪರಿಹಾರ ಕಂಡುಕೊಳ್ಳಬೇಕು. ಆದರೆ ವಿಶೇಷ ಸಂದರ್ಭದಲ್ಲಿ ಪರಿಹಾರ ಸಿಗುವುದು ಸಾಮಾನ್ಯವಾಗಿ ಸಾಧ್ಯವಿಲ್ಲವೆಂದು ಪರಿಗಣಿಸಿದಾಗ ರಿಟ್ ದಾಖಲಿಸಿ ಪರಿಹಾರ ಪಡೆಯಬಹುದು. ಐಎಲ್‌ಆರ್ 1992(2) ಕರ್ನಾಟಕ 262 ಕರ್ನಾಟಕ ಎಫ್‌ಬಿ.

21. ಒಂದು ಸಹಕಾರ ಸಂಘ ತನ್ನ ನೌಕರರ ಮೇಲೆ ಕ್ರಮ ಜರುಗಿಸಲು ಕಾಯಿದೆ ಕಲಂ 70ರನ್ವಯ ಅಧಿಕಾರ ಹೊಂದಿದೆ. ಏಕೆಂದರೆ ಸಹಕಾರ ಸಂಘ "ರಾಜ್ಯ" ಎಂದು ಸಂವಿಧಾನದ ಪರಿಚ್ಛೇದ 12ರನ್ವಯ ಹಾಗೂ ಪರಿಚ್ಛೇದ 266ರನ್ವಯ ನೇರವಾಗಿ ಪರಿಹಾರ ಕೇಳಲು ಬರುವುದಿಲ್ಲ. 1985(1) ಕೆಎಲ್‌ಜೆ ಎಸ್‌ಎನ್ 11.

22. ಒಂದು ಹಣಕಾಸು ಪೂರೈಸುವ ಸಂಸ್ಥೆ ಒಂದು ಸಹಕಾರ ಸಂಘದ ಮೇಲೆ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕೇಳತಕ್ಕದ್ದಲ್ಲ. 1990(2) ಕೆಎಲ್‌ಜೆ 475 ಡಿಬಿ.

23. ಒಂದು ಸಹಕಾರ ಸಂಘದ ಚುನಾವಣೆ ಬಗ್ಗೆ ಪದಾಧಿಕಾರಿಗಳು ಮತ್ತು ಸಮಿತಿಯ ಸದಸ್ಯರ ಮಧ್ಯೆ ಕಲಂ 70ರನ್ವಯ ಪರಿಹಾರ ಪಡೆಯಬೇಕು. ಎಐಆರ್ 1985 ಎನ್‌ಒಸಿ 66.

24. ಮಾಲು ಕೊರತೆಯನ್ನು ಒಂದು ಸಹಕಾರ ಸಂಘದಲ್ಲಿ ಆಂತರಿಕ ಲೆಕ್ಕಪರಿಶೋಧಕರ ವರದಿಯನ್ನು ಆಧರಿಸಿ ಕಲಂ 70ರನ್ವಯ ಪರಿಹಾರ ಪಡೆಯಬೇಕು. 1986(4) ಕರ್ನಾಟಕ 3631.

25. ಸಹಕಾರ ಸಂಘಗಳ ಕಾಯಿದೆ ಕಲಂ 70ರನ್ವಯ ಚುನಾವಣೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪರಿಹಾರ ಕೇಳಿ ಅವಕಾಶವಿದ್ದರೂ ಮತದಾರ ಪಟ್ಟಿಯಲ್ಲಿ ನಿಯಮ 14ರನ್ವಯ ತಯಾರಿಸದೆ ಇದ್ದ ಸಂದರ್ಭದಲಿ ಸಂವಿಧಾನದ ಪರಿಚ್ಛೇದ 226ರನ್ವಯ ಉಚ್ಚ ನ್ಯಾಯಾಲಯ ಮಧ್ಯಪ್ರವೇಶ ಮಾಡಬಹುದು. 1989(2) ಬಿಎಲ್‌ಜೆ ಎಸ್‌ಎನ್ 48.

26. ಒಂದು ವಾಹನ ಖರೀದಿಗೆ ವಾಹನವನ್ನು ಸಹಕಾರ ಸಂಘಕ್ಕೆ ಪರಬಾರೆ ಮಾಡಿದ್ದರೆ ಅಂತಹ ಸಾಲವನ್ನು ವಸೂಲಿ ಮಾಡಲು ದಾವಾ ದಾಖಲಿಸದೆ ಒಪ್ಪಂದದ ಆಧಾರದ ಮೇಲೆ ವಸೂಲಿ ಮಾಡಲಾಗದು. ಅಂತಹ ಸಂದರ್ಭದಲ್ಲಿ ಕಲಂ 70ರನ್ವಯ ದಾವಾ ದಾಖಲಿಸಿ ವಾಹನವನ್ನು ಜಪ್ತಿ ಮಾಡಲು ಅವಕಾಶ ಕಲ್ಪಿಸಬೇಕು. 1980(1) ಕೆಎಲ್‌ಜೆ 48.

27. ಒಂದು ಸಹಕಾರ ಸಂಘದ ಚುನಾವಣೆ ಮತ್ತು ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ಸಂಬಂಧಪಟ್ಟಂತೆ ಮತ್ತು ಪದಾಧಿಕಾರಿಗಳಿಗೆ ಸಂಬಂಧಪಟ್ಟಂತೆ ದಾವಾ ದಾಖಲಿಸಬೇಕು. ಆದರೆ ಮಾರಾಟ ಸಹಕಾರ ಸಂಘಗಳನ್ನು ಮತದಾರರ ಪಟ್ಟಿಯಿಂದ ಬಿಟ್ಟಿದ್ದರೆ ಅಂತಹ ವಿಷಯವನ್ನು ದಾವಾ ಪ್ರಕರಣ ದಾಖಲಿಸಿ ತೀರ್ಮಾನಿಸಬೇಕು. ಹಾಗೂ ಸಂವಿಧಾನದ ಪರಿಚ್ಛೇದ 226ರನ್ವಯ ರಿಟ್ ದಾಖಲಿಸಲಾಗದು.

28. ನಿಬಂಧಕರು ಅಥವಾ ಮಧ್ಯಸ್ಥದಾರರು ಒಬ್ಬ ನಿವೃತ್ತ ನೌಕರರನ್ನು ದಾವಾ ತೀರ್ಮಾನಿಸುವಾಗ ನಿವೃತ್ತಿ ಹೊಂದಿದ ನೌಕರನ ಹುಟ್ಟಿದ ದಿನಾಂಕವನ್ನು ದೃಢೀಕರಿಸುವುದು ಅವರ ಅಧಿಕಾರ ವ್ಯಾಪ್ತಿಯಲ್ಲಿದೆ. ಮತ್ತು ಇದು ದಾವಾ ಪ್ರಕರಣ ದಾಖಲಿಸುವಾಗ ವಯಸ್ಸಿನ ದಿನಾಂಕ ಗಮನಿಸುವುದು ಅವಶ್ಯಕ. 1989(2) ಕೆಎಲ್‌ಜೆ 25.

29. ಕಲಂ 70ನ್ನು ಸಹಕಾರಿ ಕಾಯಿದೆಯಲ್ಲಿ ಸೇರಿಸುವ ಅಧಿಕಾರ ಸಂವಿಧಾನದ 2ನೇ ಪಟ್ಟಿ ಹಾಗೂ ಉಲ್ಲೇಖ 32ರನ್ವಯ ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿದೆ. ಆದರೆ ಇದು ಕಾರ್ಮಿಕ ಕಾಯಿದೆ 1947ರ ಕೈಗಾರಿಕಾ ಪ್ರಾಧಿಕಾರಕ್ಕೆ ಇರುವ ಅಧಿಕಾರಕ್ಕೆ ಚ್ಯುತಿ ಬರುವುದಿಲ್ಲ. ಐಎಲ್‌ಆರ್ 1985 ಕರ್ನಾಟಕ 15 ಡಿಬಿ.

**ಸೂಚನೆ :** 1998ರ ತಿದ್ದುಪಡಿಯಲ್ಲಿ ಕಾರ್ಮಿಕ, ಕೈಗಾರಿಕಾ, ಕಂದಾಯ ಮತ್ತಿತರೆ ಪ್ರಾಧಿಕರಣಕ್ಕೆ ಇದ್ದ ಅಧಿಕಾರವನ್ನು ಮೊಟಕುಗೊಳಿಸಿ ಸಹಕಾರ ಕಾಯಿದೆಗೆ ತಿದ್ದುಪಡಿ ತಂದಿರುವುದರಿಂದ ಈ ತೀರ್ಮಾನ ಅನ್ವಯವಾಗುವುದಿಲ್ಲ. ಹಾಗೂ ಇದಕ್ಕೆ ಪೂರಕವಾಗಿ ಉಚ್ಚ ನ್ಯಾಯಾಲಯ ತೀರ್ಮಾನ ಕೊಟ್ಟಿದೆ.

30. ಒಬ್ಬ ನೌಕರ ಪರಿಹಾರ ಕೇಳುವ ಸಹಕಾರಿ ಕಾಯಿದೆಯನ್ನು ಅಥವಾ ಕಾರ್ಮಿಕ ಕಾಯಿದೆಯನ್ನು ಆಯ್ಕೆ ಮಾಡುವ ಅಧಿಕಾರ ನೌಕರನಿಗೆ ಸೇರಿದೆ. ಐಎಲ್‌ಆರ್ 1985(4) ಕರ್ನಾಟಕ 3696 187(1) ಕೆಎಲ್‌ಜೆ ಎಸ್‌ಎನ 139.

**ಸೂಚನೆ :** ಮೇಲೆ ತಿಳಿಸಿರುವ ಸೂಚನೆಯನ್ವಯ ಈಗ ಕಾರ್ಮಿಕ ನ್ಯಾಯಾಲಯಗಳಿಗೆ ಅಧಿಕಾರ ಇಲ್ಲ.

31. ಒಂದು ದಾವಾ ಪ್ರಕರಣ ದಾಖಲಿಸುವಾಗ ಕಲಂ 70(3)ರನ್ವಯ ನಿಬಂಧಕರು ತೆಗೆದುಕೊಂಡ ತೀರ್ಮಾನವೆ ಅಂತಿಮ. ಅದಕ್ಕೆ ಪುನರ್ ವಿಮರ್ಶೆ ಅಥವಾ ಮೇಲ್ಮನವಿ ಇಲ್ಲ. ಐಎಲ್‌ಆರ್ 1985(2) ಕೆಎಲ್‌ಆರ್–1975 ಕೆಎಲ್‌ಜೆ 390(ಡಿಬಿ)

32. ಕಲಂ 70(3)ರಲ್ಲಿ ನಿಬಂಧಕರ ತೀರ್ಮಾನ ಅಂತಿಮ ಎಂದಿರುವುದು ಸಿವಿಲ್ ನ್ಯಾಯಾಲಯಗಳು ಅಥವಾ ಮತ್ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನಿಬಂಧಕರ ತೀರ್ಮಾನ ಅಂತಿಮ ಎಂದು ತಿಳಿಯಬೇಕು. ಈ ಅಂತಿಮ ತೀರ್ಮಾನದಂತೆ ಬೇರೆ ನ್ಯಾಯಾಲಯಗಳು ಆ ವಿಷಯದ ಬಗ್ಗೆ ಕೇಳಲು ಮತ್ತು ಪರಿಹಾರ ಕೊಡಲು ಬರುವುದಿಲ್ಲ. ಆದರೆ ಜಮೀನಿಗೆ ಸಂಬಂಧಪಟ್ಟಂತೆ ಅದರ ಹಕ್ಕು ಬಾದ್ಯತೆಯನ್ನು ಸಿವಿಲ್ ನ್ಯಾಯಾಲಯದಲ್ಲಿಯೇ ತೀರ್ಮಾನಿಸಬೇಕು. ಮತ್ತು ಅಂತಹ ತೀರ್ಮಾನ ನಿಬಂಧಕರ ವ್ಯಾಪ್ತಿಗೆ ಬರುವುದಿಲ್ಲ. ಐಎಲ್‌ಆರ್ 1995 ಕರ್ನಾಟಕ 518.

33. ಚುನಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರಣಕ್ಕೂ ದಾವಾ ಪ್ರಕರಣ ಸ್ವೀಕರಿಸಿದ ನಂತರ ಆಂತರಿಕ ಆಜ್ಞೆಯ ಮುಖಾಂತರ, ಚುನಾವಣೆಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. ತಡೆಯಾಜ್ಞೆ ನೀಡುವುದು ಸೂಕ್ತವಲ್ಲ. ಇದಕ್ಕೆ ಪೂರಕವಾಗಿ ಎಐಆರ್ 1954 ಎಸ್‌ಸಿ 210 ಮತ್ತು ಎಐಆರ್ 1967 ಎಸ್‌ಸಿ 249 ತೀರ್ಪುಗಳಲ್ಲಿ ಸೂಚಿಸಿದ ನೀತಿ ನಿಯಮಗಳನ್ನು ಪಾಲಿಸದೇ ಮಧ್ಯಂತೆ ಆದೇಶಗಳ ಮುಖಾಂತರ ಚುನಾಯಿತ ಪ್ರತಿನಿಧಿಗಳ

ಪದಗ್ರಹಣಕ್ಕೆ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. 1972 ಎಂಸಿಎಟಿಡಿ ಅಪೀಲ್ 103/1971.

34. ಚುನಾಯಿತ ನಿರ್ದೇಶಕರು ಆಯ್ಕೆಯಾದ ಸಹಕಾರ ಸಂಘದ ನಿರ್ದೇಶಕರಾಗಿ ಪದಗ್ರಹಣ ಮಾಡಲು ಯಾವುದೇ ರೀತಿಯ ಮಧ್ಯಪ್ರವೇಶ ಮಾಡತಕ್ಕದ್ದಲ್ಲ ಎಂಬ ತೀರ್ಪು ಎಐಆರ್ 1954 ಎಸ್‌ಸಿ 710ರಲ್ಲಿ ನಿರ್ದೇಶನವಿದ್ದರೂ, ಅಂತಹ ತಡೆಯಾಜ್ಞೆಯನ್ನು ಉಪ ನಿಬಂಧಕರು ಭಾರತೀಯ ಶ್ರೇಷ್ಠ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ಆದೇಶಿಸಿದ್ದರೆ, ಅಂತಹ ನಿರ್ದೇಶನಕ್ಕೆ ಪುನರ್ ವಿಮರ್ಶೆ ಅರ್ಜಿಯನ್ನು ದಾಖಲಿಸಿ ಪರಿಹಾರ ಪಡೆಯಬಹುದು. ಮೇಲ್ಕಂಡ ತೀರ್ಪಿನಲ್ಲಿ ಆಯ್ಕೆಯಾದ ನಿರ್ದೇಶಕರು ತಮ್ಮ ಸ್ಥಾನವನ್ನು ಅಲಂಕರಿಸಲು ಅಥವಾ ಪದಗ್ರಹಣ ಮಾಡಲು ಉಪ ನಿಬಂಧಕರಾಗಲೀ, ಸಹಾಯಕ ನಿಬಂಧಕರಾಗಲೀ ಮಧ್ಯಂತರ ಆದೇಶ ನೀಡತಕ್ಕದ್ದಲ್ಲ. 1972 ಎಂಸಿಎಟಿಡಿ ರಿವಿಷನ್ ಪಿಟಿಷನ್ 34/1972.

35. ಒಂದು ಚುನಾವಣೆಯನ್ನು ರಿಟ್ ಅರ್ಜಿ ಮುಖಾಂತರ ಪ್ರಶ್ನಿಸಿದಾಗ ಹಿಂದೆ ಹೊರಡಿಸಲಾಗಿದ್ದ ಚುನಾವಣಾ ವೇಳಾಪಟ್ಟಿ ಅನ್ವಯವೇ ನಡೆಯಬೇಕು. ಸಹಕಾರಿ ಕಾಯಿದೆಯಲ್ಲಿ ಪರಿಹಾರ ಪಡೆಯಬೇಕೆಂದು ನಿರ್ದೇಶನ ಕೊಡುವುದು ಸೂಕ್ತವಲ್ಲ. ಐಎಲ್‌ಆರ್ 1991(1) ಕರ್ನಾಟಕ /1991(4) ಕೆಎಲ್‌ಜೆ 356 ಡಿಬಿ.

36. ಮಹಾರಾಷ್ಟ್ರ ಕಾಯಿದೆಯನ್ವಯ ನಿಬಂಧಕರ ಅಧಿಕಾರವನ್ನು ಚಲಾಯಿಸಲು ಕೊಟ್ಟ ಅಧಿಕಾರ ಕಾನೂನಿನಲ್ಲಿ ಕೊಟ್ಟ ಅಧಿಕಾರವಲ್ಲ. ನಿಬಂಧಕರಿಗೆ ಕೊಟ್ಟ ಅಧಿಕಾರದ ವರ್ಗಾವಣೆಯಾಗಿರುತ್ತದೆ. ಈ ಅಧಿಕಾರವನ್ನು ವಾಪಸ್ಸು ಪಡೆಯಬಹುದು ಅಥವಾ ಕಿತ್ತುಹಾಕಬಹುದು. ಅಂತಹ ಸಂದರ್ಭದಲ್ಲಿ ಅಧಿಕಾರ ಪ್ರಾಪ್ತವಾದ ವ್ಯಾಪ್ತಿ ವ್ಯಕ್ತಿ ಒಬ್ಬ ಮಧ್ಯಸ್ಥಗಾರನಾಗಿ ಪ್ರಕರಣ ತೀರ್ಮಾನಿಸಬೇಕು. ನ್ಯಾಯಾಂಗ ಅಧಿಕಾರ ಪಡೆದಿರುವುದಿಲ್ಲ. ಮಹಾರಾಷ್ಟ್ರ ಕಾಯಿದೆ ಕಲಂ 96.

37. ಬಾಡಿಗೆ ಕೊಡದೇ ಇರುವುದಕ್ಕೆ ಪರಿಹಾರ ಸೆಕ್ಷನ್ 70ರನ್ವಯ ಅಲ್ಲ. ಐಎಲ್‌ಆರ್ 1968 ಮೈಸೂರು 582.

38. ಕರ್ನಾಟಕ ಸಹಕಾರಿ ಕಾಯಿದೆ ಒಂದು ಪ್ರಾಂತೀಯ ಕಾಯಿದೆ. ಇದು ವಿಶೇಷ ಕಾಯಿದೆಯಲ್ಲ. ಕಾರ್ಮಿಕ ಕಾಯಿದೆ ಒಂದು ವಿಶೇಷ ಕಾಯಿಕದೆ ಮತ್ತು ಕಾರ್ಮಿಕ ನ್ಯಾಯಾಲಯಗಳು ಕೈಗಾರಿಕಾ ಪ್ರಾಧಿಕಾರಿಗಳು, ಸಿವಿಲ್ ನ್ಯಾಯಾಲಯಗಳು ಸಹಕಾರಿ ಕಾಯಿದೆ ಕಲಂ 118ರನ್ವಯ ಅಧಿಕಾರ ಕಿತ್ತುಕೊಳ್ಳುತ್ತವೆ ಎಂದು ಅರ್ಥವಲ್ಲ. ಸಹಕಾರಿ ಸಂಘದ ನೌಕರ "ಕಾರ್ಮಿಕ" ಎಂದು ಕೈಗಾರಿಕಾ ಕಾಯಿದೆ ಕಲಂ (2)(5)ರನ್ವಯ ತನ್ನ ಸೇವೆಗೆ ಸಂಬಂಧಪಟ್ಟ ವಿಷಯಗಳನ್ನು ಪರಿಹಾರ ಕೇಳಲು ಅಧಿಕಾರ ಇದೆ. ಕಲಂ 70ರನ್ವಯ ಮತ್ತು 118ರನ್ವಯ ಕಾರ್ಮಿಕ ನ್ಯಾಯಾಲಯವನ್ನು ತೆಗೆದುಹಾಕಿದಂತೆ ಆಗುವುದಿಲ್ಲ. 1981(1) ಕೆಎಲ್‌ಜೆ 136.

**ಸೂಚನೆ :** 1998ರ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ಕೈಗಾರಿಕಾ ಕಾರ್ಮಿಕ ಕಂದಾಯ ಮತ್ತಿತರೆ ಯಾವುದೇ ಪ್ರಾಧಿಕರಣಕ್ಕೆ ಸಹಕಾರ ಸಂಘಗಳ ನೌಕರರ ಬಗ್ಗೆ ಪರಿಹಾರ ಕೇಳಲಾಗದು ಎಂದು ಸೇರಿಸಿರುವುದರಿಂದ ಮೇಲ್ಕಂಡ ನಿಯಮ ಅನ್ವಯವಾಗುವುದಿಲ್ಲ. ಇದಕ್ಕೆ ಪೂರಕವಾಗಿ

ಕರ್ನಾಟಕ ಉಚ್ಚ ನ್ಯಾಯಾಲಯ ತೀರ್ಮಾನ ಕೊಟ್ಟಿದೆ.

39. ಒಂದು ಸಂಘದ ವ್ಯಾಪಾರ ಎಂದರೆ, ಅದು ನೌಕರರಿಗೂ ಸಂಬಂಧಪಡುತ್ತದೆ. ಒಂದು ಸಹಕಾರ ಸಂಘ ಮತ್ತು ಅದರ ನೌಕರರು ಅದರಲ್ಲಿಯೂ ಬೆಲೆ ನಿಗಧಿಪಡಿಸುವ(ಅಪ್ರೈಸರ್) ನೌಕರನು ಸೇರುತ್ತಾನೆ. ಅಂತಹ ವ್ಯಕ್ತಿಯನ್ನು ಸೇವೆಯಿಂದ ವಜಾಗೊಳಿಸಿದಾಗ, ಅದು ಕಲಂ 70ರನ್ವಯ ದಾವಾ ಪ್ರಕರಣ ದಾಖಲಿಸಿ ಪರಿಹರಿಸಿಕೊಳ್ಳಬೇಕು. 1967(7) ಎಂಎಲ್‌ಜೆ 503.

40. ಒಂದು ಸಂಘದ ಪದಾಧಿಕಾರಿ ಹಳೇ ಬಾಕಿಯನ್ನು ವಸೂಲಿ ಮಾಡಿಕೊಳ್ಳುವ ಸಂದರ್ಭದಲ್ಲಿ, ವ್ಯಾಪಾರ ಮತ್ತು ವ್ಯವಹಾರಕ್ಕೆ ಸಂಬಂಧಪಟ್ಟದ್ದು ಎಂದು ನಿರ್ಧರಿಸಬೇಕು. 1972(2) ಮದ್ರಾಸ್ ಎಲ್‌ಜೆ 134.

41. ಒಂದು ಸಹಕಾರ ಸಂಘದ ಕಾರ್ಯದರ್ಶಿ ಸಂಘದಿಂದ ಸಾಲ ಪಡೆದಾಗ ಅದು ಸಂಘದ ವ್ಯವಹಾರ ಮತ್ತು ಅದನ್ನು ಸಾಲ ಮತ್ತು ಅದೇ ರೀತಿ ಅದನ್ನು ವಸೂಲಿ ಮಾಡಬಹುದು. 1971 ಕೆಎಲ್‌ಜೆ 80 ಡಿಬಿ.

42. ಸದಸ್ಯತ್ವದ ಬಗ್ಗೆ ನಾನು ಸದಸ್ಯನಲ್ಲವೆಂದು ಎಲ್ಲಿ ಹೇಳುವುದಿಲ್ಲವೋ, ಅಂತಹ ಸಂದರ್ಭದಲ್ಲಿ ಆ ಪ್ರಕರಣವನ್ನು ದಾವಾ ಎಂದು ಪುರಸ್ಕರಿಸಬಹುದು ಮತ್ತು ಕಲಂ 70ರನ್ವಯ ಕ್ರಮ ಜರುಗಿಸಬಹುದು. 1986(2) ಕೆಎಲ್‌ಜೆ 104/1986(2) ಡಿಎಲ್‌ಜೆ 135.

43. ಒಂದು ಸಹಕಾರ ಸಂಘದ ಸದಸ್ಯ ಒಂದು ಸಂಘದಲ್ಲಿ ಠೇವಣಿ ಇಟ್ಟಾಗ, ಆ ಠೇವಣಿ ವಸೂಲಾತಿಗಾಗಿ ಕಲಂ 70ರನ್ವಯ ಪರಿಹಾರ ಕೇಳಬಹುದು. 1963(2) ಎಂಎಲ್‌ಜೆ 294 ಡಿಬಿ.

44. ಒಂದು ಸಹಕಾರ ಸಂಘದ ಸದಸ್ಯ, ತಾನು ಹೂಡಿದ ಠೇವಣಿ ವಾಪಸ್ಸು ಕೇಳಲು ಕಲಂ 70ನ್ನು ಆಶ್ರಯಿಸಬೇಕು. ಐಎಲ್‌ಆರ್ 1967 ಮೈಸೂರು 427 ಡಿಬಿ.

45. ಒಂದು ಸಹಕಾರಿ ಬ್ಯಾಂಕು ಒಂದು ಸಹಕಾರ ಸಂಘಕ್ಕೆ ಸಾಲ ಕೊಟ್ಟಾಗ, ಆ ಸಹಕಾರ ಸಂಘ ನಷ್ಟದ ಆರೋಪಕ್ಕೆ ಸಂಬಂಧಪಟ್ಟ ವಿಷಯ ವ್ಯಾಪಾರಕ್ಕೆ ಸಂಬಂಧಪಟ್ಟದ್ದು, ಇದಕ್ಕೆ ಕಲಂ 70ರನ್ವಯ ದಾವಾ ದಾಖಲಿಸಬಹುದು. 1985 ಎಸ್‌ಸಿ.

46. ಒಂದು ಸಹಕಾರ ಸಂಘ ಮನೆ ಕಟ್ಟಿಕೊಳ್ಳು ನಿವೇಶನ ಹಂಚಿದಾಗ, ಸದಸ್ಯ ಕಲಂ 70ರನ್ವಯ ಪರಿಹಾರ ಕೇಳಬಹುದು. 1979(1) ಎಂಎಲ್‌ಜೆ 196 ಡಿಬಿ.

47. ಒಂದು ಸಹಕಾರ ಸಂಘ ಮತ್ತು ಅದರ ಸದಸ್ಯ ಒಪ್ಪಂದಕ್ಕೆ ಬಂದು ಕಮಿಷನ್ ವಸೂಲಾತಿಗಾಗಿ, ಅ ಸಂಘದ ಸದಸ್ಯರು ಪೂರ್ಣ ಹಣವನ್ನು ಸಹಕಾರ ಸಂಘಕ್ಕೆ ಜಮಾ ಮಾಡಿಲ್ಲವೆಂದು ಸಂಘದ ವ್ಯಾಪಾರ ಅಲ್ಲ. ಎಐಆರ್ 1965 ಎಸ್‌ಸಿ 621.

48. ಒಂದು ಸಹಕಾರ ಸಂಘ ಸರ್ಕಾರದಿಂದ ಒಂದು ಖಾಲಿ ನಿವೇಶನ ಪಡೆದು, ಆ ನಿವೇಶನದಲ್ಲಿ ಕಟ್ಟಡ ನಿರ್ಮಿಸಿ, ಒಪ್ಪಂದದ ಮೇಲೆ ಬಾಡಿಗೆದಾರನೆಂದು ನಿರ್ಧರಿಸಿ, ಅಂತಹ ಬಾಡಿಗೆದಾರ ಬಾಡಿಗೆ ಪಾವತಿ ಮಾಡದೆ ಇದ್ದ ಸಂದರ್ಭದಲ್ಲಿ, ಅದು ಬಾಡಿಗೆ ನಿಯಂತ್ರಣ ಕಾಯಿದೆಯಲ್ಲಿ

ಮಾಲೀಕ ಮತ್ತು ಬಾಡಿಗೆದಾರ ಎಂಬ ಅರ್ಥದಲ್ಲಿ ಬರುವುದಿಲ್ಲ. ಇದನ್ನು ಸಹಕಾರ ಕಾಯಿದೆಯಡಿ ಮಧ್ಯಸ್ಥದಾರರು ನಿರ್ಧಾರ ಮಾಡುವುದು ಕ್ರಮ. ಎಐಆರ್ 1987 ಎಸ್‌ಸಿ 369.

49. ಒಂದು ಸಹಕಾರ ಸಂಘ ಸದಸ್ಯರಿಗೆ ವಾಸದ ಮನೆಗಳನ್ನು ನಿರ್ಮಿಸಿಕೊಡುವ ಉದ್ದೇಶದಿಂದ ಪ್ರಾರಂಭಿಸಿದ್ದು, ಆ ಸಂಘದಲ್ಲಿ ವಾಸ ಮಾಡುವ ವ್ಯಕ್ತಿಯನ್ನು ಹೊರಹಾಕುವ ಸಂದರ್ಭದಲ್ಲಿ ಅಂತಹ ವ್ಯಕ್ತಿ ನಾಮ ಮಾತ್ರ ಸದಸ್ಯನಾಗಿದ್ದರೆ, ಆ ಮನೆಯಿಂದ ಹೊರಹಾಕುವ ಅಧಿಕಾರ ಮತ್ತು ಅದರ ವ್ಯಾಪ್ತಿ ಸಹಕರ ಕಾಯಿದೆಯಲ್ಲಿ ಬರುತ್ತದೆ. ಎಐಆರ್ 1982 ಎಸ್‌ಸಿ 1097.

50. ಒಂದು ಸಹಕಾರ ಸಂಘದ ಸದಸ್ಯರ ತನ್ನ ಅವ್ಯವಹಾರದಲ್ಲಿ, ಸದಸ್ಯನೆಂದು ನಡೆಸಿದಾಗ ಆ ಸದಸ್ಯನ ಹೆಸರಿನಲ್ಲಿ ಬರುವ ಪ್ರತಿಯೊಬ್ಬ ವ್ಯಕ್ತಿಯು ಅಧಿಕಾರದಲ್ಲಿ ಇದ್ದಾಗ, ಅಂತಹ ವ್ಯಕ್ತಿ ಸಹಕಾರಿ ಕಾಯಿದೆಯಡಿ ಬರುತ್ತಾನೆ. ಎಐಆರ್ 1969 ಎಸ್‌ಸಿ 1330.

51. ಒಂದು ಸಹಕಾರ ಸಂಘದ ಸದಸ್ಯ ನಾನು ಆಡಳಿತ ಮಂಡಳಿಯ ಸಭೆಗಳಿಗೆ ಹಾಜರಾಗಿಲ್ಲವೆಂದು, ತೆಗೆದುಹಾಕಿದಾಗ, ಅದು ಕಲಂ 70ರಡಿ ಬರುತ್ತದೆ. ಎಎಲ್‌ಆರ್ 1982(2) 1985 ಕೆಎಲ್‌ಜೆ 326.

52. ಒಂದೇ ಸಹಕಾರ ಸಂಘದ ಎರಡು ಗುಂಪುಗಳು ಚುನಾವಣೆಗೆ ಸಂಬಂಧಪಟ್ಟಂತೆ ದಾಖಲಿಸುವ ದಾವಾ ಸಂಘದ ಆಡಳಿತಕ್ಕೆ ಸಂಬಂಧಪಟ್ಟ ವಿಷಯ. ಅದನ್ನು 70ರನ್ವಯ ಪರಿಹರಿಸಿಕೊಳ್ಳಬೇಕು. 1986(1) ಡಿಎಲ್‌ಜೆ 91.

53. ಒಬ್ಬ ನಾಮನಿರ್ದೇಶನ ಮಾಡಿದ ವ್ಯಕ್ತಿ, ಸಿವಿಲ್ ನ್ಯಾಯಾಲಯದಲ್ಲಿ, ಆಡಳಿತ ಮಂಡಳಿಯನ್ನು ರದ್ದುಪಡಿಸಿದ್ದು, ಕಾನೂನು ಬಾಹಿರ ಎಂದು ಪ್ರಶ್ನಿಸಿದಾಗ, ಅದನ್ನು ಕಲಂ 70ರನ್ವಯವೇ ಪರಿಹರಿಸಿಕೊಳ್ಳಬೇಕು. ಐಎಲ್‌ಆರ್ 1981(1) ಕೆಎಲ್‌ಜೆ ಎಸ್‌ಎನ್ (3)

54. ಒಂದು ಸಹಕಾರ ಸಂಘ ತನ್ನ ಆಸ್ತಿಯನ್ನು ಪರಬಾರೆ ಮಾಡಿದ್ದರೆ, ಅಂತಹ ಆಸ್ತಿಯನ್ನು ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆ ಅನ್ವಯ ಪರಿಹರಿಸಿಕೊಳ್ಳಬೇಕು. ಗೌರವ ಮಧ್ಯಸ್ಥಗಾರ ಒಬ್ಬ ಬಾಡಿಗೆದಾರರನ್ನು ಹೊರಹಾಕುವ ಅಧಿಕಾರ ಹೊಂದಿಲ್ಲ. 1986(2) ಕೆಎಲ್‌ಜೆ 474.

55. ಒಂದು ಸಹಕರ ಬ್ಯಾಂಕು ತನ್ನ ಆಸ್ತಿಯನ್ನು ಬಾಡಿಗೆಗೆ ಕೊಟ್ಟಾಗ, ಅದು ಬ್ಯಾಂಕಿಗೆ ಸಂಬಂಧಪಟ್ಟ ವ್ಯವಹಾರ ಎಂದು ಭಾವಿಸತಕ್ಕದ್ದು. ಈ ವ್ಯವಹಾರ ಒಬ್ಬ ಬಾಡಿಗೆದಾರ ಹಾಗೂ ಬ್ಯಾಂಕಿಗೆ ಒಬ್ಬ ಸದಸ್ಯ ಇದ್ದು, ಆನಂತರ ಆ ಆಸ್ತಿಯನ್ನು ಬ್ಯಾಂಕಿನವರು ಖರೀದಿಸಿದಾಗ, ಅಂತಹ ಸಂದರ್ಭ ಬ್ಯಾಂಕಿನ ವ್ಯಾಪಾರಕ್ಕೆ ಸಂಬಂಧಪಟ್ಟದಲ್ಲ.. ಇದು ಮಾಲೀಕ ಮತ್ತು ಬಾಡಿಗೆದಾರ ಎಂದಾಗುತ್ತದೆ. ಮತ್ತು ಇದನ್ನು ಬಾಡಿಗೆ ನಿಯಂತ್ರಣ ಕಾಯಿದೆಯಡಿ ಪರಿಹರಿಸಿಕೊಳ್ಳಬೇಕು. 1986(2) ಕೆಎಲ್‌ಜೆ 472.

56. ಒಂದು ಸಹಕಾರ ಸಂಘದ ಬೈಲಾ ತಿದ್ದುಪಡಿ ಮಾಡುವ ವಿಷಯ ಕಲಂ 70ರಲ್ಲಿ ಬರುವುದಿಲ್ಲ. 1966(1) ಎಂಎಲ್‌ಜೆ 215 ಡಿಬಿ.

57. ಒಂದು ಸಹಕಾರ ಸಂಘದ ನೌಕರನಿಗೆ ಗ್ರ್ಯಾಚುಟಿ ಪಾವತಿ ಮಾಡುವ ವಿಷಯ, ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಿದ್ದಲ್ಲ. ಅದು ಕಾರ್ಮಿಕ ನ್ಯಾಯಾಲಯಕ್ಕೆ ಸಂಬಂಧಪಟ್ಟಿದ್ದು. ಎಲ್ಲಿ

ಒಬ್ಬ ನೌಕರ ನಿವೃತ್ತಿ ಹೊಂದುವ ಸಮಯದಲ್ಲಿ ಅವನ ಖಾತೆಯಲ್ಲಿರುವ ಎರಡು ತಿಂಗಳ ಸಂಬಳವನ್ನು ಕೊಡಲು ನಿರಾಕರಿಸಲಾಯಿತು. ಅಂತಹ ಸಂದರ್ಭ ಅವನು 2 ತಿಂಗಳ ಸಂಬಳಕ್ಕೆ ಅರ್ಹ. 1976(1) ಕೆಎಲ್‌ಜೆ 102 ಐಎಲ್‌ಆರ್ 1976 111.

**ಸೂಚನೆ:** ಈ ನಿರ್ಣಯ, 1998ರ ತಿದ್ದುಪಡಿಯ ನಂತರ ಅನ್ವಯವಾಗುವುದಿಲ್ಲ.

58. ಸರ್ಕಾರ ಸಹಕಾರ ಸಂಘಗಳ ಕಾಯಿದೆ 53ಎ ರಲ್ಲಿ ಕ್ರಮ ಜರುಗಿಸಿದಾಗ, ಆ ಸಂಘದ ಕಾರ್ಯದರ್ಶಿ ಪ್ರಥಮ ಮಹಾಸಭೆಯನ್ನು ಕಲಂ 27ರನ್ವಯ ಕರೆದಿದ್ದು, ಮುಂದೂಡಿದ್ದನ್ನು ಕಲಂ 70ರನ್ವಯ ಪರಿಹರಿಸಿಕೊಳ್ಳತಕ್ಕದ್ದಲ್ಲ. ಅದನ್ನು 70ರನ್ವಯ ಬರುವ ದಾವಾ ಎಂದು ತಿಳಿಯತಕ್ಕದಲ್ಲ. 1979(2) ಕೆಎಲ್‌ಜೆ ಎಸ್‌ಎನ್ 51 ಡಿಬಿ.

59. ಒಂದು ಸಹಕಾರ ಸಂಘ ಮತ್ತು ಸದಸ್ಯನಲ್ಲದ ವ್ಯಕ್ತಿಯ ಮಧ್ಯೆ ಇರುವ ವ್ಯವಹಾರವನ್ನು ಸಹಕಾರ ಸಂಘದ ಅನ್ವಯ ಪರಿಹರಿಸಿಕೊಳ್ಳತಕ್ಕದಲ್ಲ. ಎಐಆರ್ 1967 ಎಸ್‌ಸಿ 289.

60. ಒಂದು ಸಹಕಾರ ಸಂಘ ಹಣಕಾಸು ಪೂರೈಸುವ ಸಂಸ್ಥೆ ಮತ್ತು ಸದಸ್ಯನಲ್ಲದ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ಪರಿಹಾರವನ್ನು ಸಹಕಾರಿ ಕಾಯಿದೆಯಡಿ ಪರಿಹರಿಸಿಕೊಳ್ಳತಕ್ಕದ್ದಲ್ಲ. ಇದು ಸಿವಿಲ್ ನ್ಯಾಯಾಲಯಕ್ಕೆ ಸಂಬಂಧಪಟ್ಟಿದ್ದು. 1962 ಎಸ್‌ಸಿ 1962.

61. ಸಹಕಾರಿ ಕಾಯಿದೆಯಲ್ಲಿ ಸದಸ್ಯತ್ವವೇ ಪ್ರಾಮುಖ್ಯ. ಯಾವುದೇ ಪ್ರಾಧಿಕಾರ ಸದಸ್ಯನಲ್ಲದ ವ್ಯಕ್ತಿಯ ವ್ಯವಹಾರವನ್ನು ಪರಿಹಾರ ಮಾಡತಕ್ಕದಲ್ಲ. ಎಲ್ಲಿ ಸದಸ್ಯರ ಹಕ್ಕು ಬಾಧ್ಯತೆ ಪಡೆದಂತಹ ವ್ಯಕ್ತಿ ಪರಿಹಾರ ಕೇಳಿದಾಗತ ತುರ್ತಾಗಿ, ತೀರ್ಮಾನ ಕೈಗೊಳ್ಳಬೇಕು. ಸದಸ್ಯನಲ್ಲದ ಯಾವುದೆ ವ್ಯಕ್ತಿ ಸಹಕರ ಕಾಯಿದೆಯಡಿ ಪರಿಹರ ಕೇಳತಕ್ಕದ್ದಲ್ಲ. 1970 ಎಂಎಲ್‌ಜೆ 344 ಡಿಬಿ.

62. ಒಂದು ಸಹಕಾರ ಸಂಘ ಸದಸ್ಯನಲ್ಲದ ಒಬ್ಬ ಜಾಮೀನುದಾರರ ಮೇಲೆ, ಕಲಂ 70ರನ್ವಯ ಕ್ರಮ ಜರುಗಿಸತಕ್ಕದಲ್ಲ. ಐಎಲ್‌ಆರ್ 1973 ಕರ್ನಾಟಕ 684.

63. ಸಹಕಾರ ಸಂಘಗಳು ಸಂವಿಧಾನದ ಪರಿಚ್ಛೇದ 12ರನ್ವಯ ಬರುವುದಿಲ್ಲ. ಆದ್ದರಿಂದ ಸಹಕಾರ ಸಂಘ ಮತ್ತು ಅದರ ನೌಕರರಿಗೆ ಸಂಬಂಧಪಟ್ಟಂತೆ ಮಧ್ಯಸ್ಥಗಾರರ ಮುಖಾಂತರ ಕಲಂ 70ನ್ನು ಆಶ್ರಯಿಸಬೇಕು. ಸಂವಿಧಾನದ ಪರಿಚ್ಛೇದ 226ರನ್ವಯ ರಿಟ್ ಮುಖಾಂತರ ಅಲ್ಲ. 1985(1) ಕೆಎಲ್‌ಜೆ ಎಸ್‌ಎನ್ 11.

64. ಒಂದು ಸಹಕಾರ ಸಂಘದ ಚುನಾವಣೆಯಲ್ಲಿ ಒಬ್ಬ ಅಬ್ಯರ್ಥಿಯ ನಾಮಪತ್ರ ತಿರಸ್ಕರಿಸಿದಾಗ ಅದಕ್ಕೆ ಪರಿಹಾರ ಸಹಕಾರಿ ಕಾಯಿದೆ ಕಲಂ 70 ಸಂವಿಧಾನದ ಪರಿಚ್ಛೇದ 226ರಲ್ಲಿ ಪರಿಹಾರ ಸಿಗುವುದಿಲ್ಲ. ಎಐಆರ್ 1982 ಕರ್ನಾಟಕ 220.

65. ಕಲಂ 70ರನ್ವಯ ಹೂಡುವ ದಾವಾ ಪ್ರಕರಣ ನಾಮಪತ್ರ ತಿರಸ್ಕರಿಸಿದ ಸಂದರ್ಭದಲ್ಲಿ ಸೂಕ್ತ ಪರಿಹಾರ ಪಡೆಯಬೇಕು. ಹಾಗೂ ಚುನಾವಣೆ ನಡೆದ ಬಗ್ಗೆ ಪರಿಹಾರ ಪಡೆಯಬಹುದು. 1979(2) ಕೆಎಲ್‌ಜೆ ಎಸ್‌ಎನ್ 32.

66. ಚುನಾವಣೆಗೆ ಸಂಬಂಧಪಟ್ಟ ಯಾವುದೇ ವ್ಯವಹಾರವನ್ನು ಪದಾಧಿಕಾರಿಗಳಿಗೆ ಸಂಬಂಧಪಟ್ಟಂತೆ ಕಲಂ 70ರನ್ವಯ ಪರಿಹಾರ ಪಡೆಯತಕ್ಕದ್ದು. ಸಹಕಾರಿ ಕಾಯಿದೆಯ ಕಲಂ 70 ಒಂದು ಸಮರ್ಪಕ ಪರಿಹಾರ ಕೊಡುವ ಒಂದು ವ್ಯವಸ್ಥೆ, ಸಂವಿಧಾನದ ಪರಿಚ್ಛೇದ 226ರನ್ವಯ ಅಲ್ಲ. 1963(1) ಎಂಎಲ್‌ಜೆ 204 ಡಿಬಿ.

67. ಸುಸ್ತಿದಾರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವ ಬಗ್ಗೆ ಪರಿಹಾರ ಕಲಂ 70ರಲ್ಲಿ ಪಡೆಯಬೇಕು. ರಿಟ್ ಅರ್ಜಿ ಮುಖಾಂತರ ಅಲ್ಲ. 1984(1) ಎಸ್‌ಎನ್ 43.

68. ಒಂದು ಸಹಕಾರ ಸಂಘದ ಕಾರ್ಯದರ್ಶಿ ಪದಾಧಿಕಾರಿ ಆಯ್ಕೆಗೆ ಕಲಂ 29ಹೆಚ್ ರನ್ವಯ ನೋಟೀಸ್ ಕಳುಹಿಸುವಾಗ ಪೂರ್ವಬಾವಿ ಆದೇಶ (ಪ್ರಿ ಮೆಚ್ಯೂರ್ಡ್) ಅನೂರ್ಜಿತ. ಅಂತಹ ಸಮಯದಲ್ಲಿ ಪರಿಹಾರವನ್ನು ಕಲಂ 70ರನ್ವಯ ಪಡೆಯಬೇಕೆಂದು ತಿಳಿಸುವುದು ಸೂಕ್ತವಲ್ಲ. 1991(1) ಕೆಎಲ್‌ಜೆ 1872 ಡಿಬಿ.

69. ಸಂಘದ ಎಲ್ಲಾ ಸದಸ್ಯರು ನೋಟೀಸ್ ಜಾರಿ ಮಾಡದೆ ಅರ್ಜಿದಾರನು ಸದಸ್ಯತ್ವದಿಂದ ತೆಗೆದುಹಾಕುವ ಒಂದು ಠರಾವಿಗೆ ಅದನ್ನು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ ಎಂದು ಪರಿಗಣಿಸಬೇಕು. ಅಂತಹ ಸಂದರ್ಭದಲ್ಲಿ ಸಂವಿಧಾನ ಪರಿಚ್ಛೇದ 226ರನ್ವಯ ಪರಿಹಾರ ಕೊಡಬಹುದು. 1969(2) ಎಂಎಲ್‌ಜೆ 336 ಡಿಬಿ.

70. ನಾಮಪತ್ರವನ್ನು ಕಾನೂನುಬದ್ದವಾಗಿ ತಿರಸ್ಕರಿಸಲಾಗದಿದ್ದರೂ, ತಿರಸ್ಕರಿಸಿದಾಗ ಕಲಂ 70ರನ್ವಯ ಪರಿಹಾರ ಕೊಡಲು ಅವಶ್ಯಕತೆ ಇದೆ. ಸಂವಿಧಾನ ಪರಿಚ್ಛೇದ 226ರಲ್ಲಿ ಪರಿಹಾರ ಕೊಡಲಾಗದು ಎಂದು ತಿಳಿಯತಕ್ಕದ್ದಲ್ಲ. 1961 ಎಂಎಲ್‌ಜೆ 942 ಡಿಬಿ.

71. ಕಲಂ 70ರನ್ವಯ ಸಿವಿಲ್ ನ್ಯಾಯಾಲಯದ ವ್ಯಾಪ್ತಿಯನ್ನು ತೆಗೆದುಹಾಕಲಾಗಿದೆ. ಆದರೆ ಒಂದು ದಾವಾ ಪ್ರಕರಣದಲ್ಲಿ ಒಬ್ಬ ಸದಸ್ಯನಲ್ಲದ ವ್ಯಕ್ತಿಯ ಮೇಲೆ ಪ್ರಕರಣ ಮುಂದುವರಿಸಿದರೆ, ಅದು ವ್ಯಾಪ್ತಿಗೆ ಮೀರಿದ್ದು. 1972(1) ಎಂಎಲ್‌ಜೆ 365.

72. ಒಂದು ಸಹಕಾರ ಸಂಘದ ಸದಸ್ಯ, ಆ ಸಂಘದಲ್ಲಿ ಹೂಡಿದ್ದ ಠೇವಣಿ ವಸೂಲಾತಿಗಾಗಿ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕೇಳಿದರೆ ಅದು ಸಿಂಧುವಲ್ಲ. 1963(2) ಎಂಎಲ್‌ಜೆ 294 ಡಿಬಿ.

73. ಬಾಡಿಗೆ ವಸೂಲಾತಿಗಾಗಿ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ಒಂದು ದಾವೆ ಸಹಕಾರ ಸಂಘದ ವ್ಯಾಪಾರ ಆಗುವುದಿಲ್ಲ. ಎಎಲ್‌ಆರ್ 1975 ಕರ್ನಾಟಕ 235.

74. ನಿಬಂಧಕರು ಒಂದು ದಾವಾ ಪ್ರಕರಣವನ್ನು ಸ್ವೀಕರಿಸುವಾಗ, ಪ್ರಥಮ ವಿಷಯವಾಗಿ ದಾವಾ ಹೌದೋ, ಅಲ್ಲವೋ ಎಂದು ತೀರ್ಮಾನಿಸಬೇಕು. ಎಐಆರ್ 1979 ಎಸ್‌ಸಿ 1203.

75. ನಿಬಂಧಕರು ಕಲಂ 70(3)ರಲ್ಲಿ ತೀರ್ಮಾನ ತೆಗೆದುಕೊಂಡಿದ್ದು ಅಂತಿಮ ಹಾಗೂ ಇದು ಕಲಂ 107ರಲ್ಲಿ ಪುನರ್ ವಿಮರ್ಶೆಗೆ ಅರ್ಹವಲ್ಲ. 1975(2) ಕೆಎಲ್‌ಜೆ 372 ಡಿಬಿ ಈ ತೀರ್ಮಾನವನ್ನು ವಿಭಾಗೀಯ ಪೀಠ 1975(2) ಕೆಎಲ್‌ಜೆ ಎಸ್‌ಎನ್ 104ರಡಿಯಲ್ಲಿ ಎತ್ತಿಹಿಡಿದಿದೆ.

76. ಕಲಂ 70ರನ್ವಯ ಯಾವುದೇ ಪಕ್ಷ ದಾವಾ ದಾಖಲಿಸಬಹುದು. ಸಹಕಾರ ಸಂಘವೇ ದಾಖಲಿಸಬೇಕೆಂಬ ನಿಯಮವಿಲ್ಲ. 1963(1) ಕೆಎಲ್‌ಜೆ 204 ಡಿಬಿ.

77. ಎಲ್ಲಿ ಒಂದು ದಾವಾ ಮೀನುಗಾರರ ಸಹಕಾರ ಸಂಘ ಮತ್ತು ಅದರ ಸದಸ್ಯರ ನಡುವೆ ಅಥವಾ ಎರಡು ಮೀನುಗಾರರ ಸಹಕಾರ ಸಂಘದ ನಡುವೆ ಅಲ್ಲವೋ, ಅಂತಹ ಪ್ರಕರಣವನ್ನು ಜಂಟಿ ರಿಜಿಸ್ಟ್ರಾರರವರು ಗೌರವ ಮಧ್ಯಸ್ಥದಾರರಿಗೆ ಕಳುಹಿಸತಕ್ಕದ್ದಲ್ಲ. 1988(1) ಕೆಎಲ್‌ಜೆ 194.

78. ಒಂದು ಸಹಕಾರ ಸಂಘದ ಪದಾಧಿಕಾರಿಗಳ ಚುನಾವಣೆಯಲ್ಲಿ ಉದ್ಭವಿಸುವ ಯಾವುದೇ ಅಥವಾ ಎಲ್ಲಾ ತರಹದ ಪ್ರಕರಣವನ್ನು ಕಲಂ 70ರನ್ವಯ ದಾಖಲಿಸಬೇಕು. ಆ ರೀತಿ ದಾಖಲಿಸುವಾಗ ಒಬ್ಬ ಕಕ್ಷಿದಾರ ದಾಖಲಿಸಬೇಕು. ಆದರೆ ಒಂದು ಸಹಕರ ಸಂಘ ಚುನಾವಣೆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಡೆದ, ನಡೆಯಬಹುದಾದ ಚುನಾವಣೆ ಬಗ್ಗೆ ಪ್ರತಿಕ್ರಿಯಿಸತಕ್ಕದಲ್ಲ. 1963 ಎಂಎಲ್‌ಜೆ 204.

79. ಒಂದು ಸಹಕಾರ ಸಂಘದ ವ್ಯವಹಾರದಲ್ಲಿ ಪ್ರತ್ಯೇಕ ಮತ್ತು ಪರೋಕ್ಷವಾಗಿ ಸಂಘದ ವ್ಯಾಪಾರಕ್ಕೆ ಸಂಬಂಧಪಟ್ಟಿದ್ದರೆ ಅಥವಾ ಅದಕ್ಕೆ ಪೂರಕವಾದ ಕೆಲಸಕ್ಕೆ ಸಂಬಂಧಪಟ್ಟಿದ್ದರೆ ಅದನ್ನು ಸಂಘದ ವ್ಯವಹಾರವೆಂದು ತೀರ್ಮಾನಿಸತಕ್ಕದ್ದು. ಇಂತಹ ವ್ಯವಹಾರವನ್ನು ಸಂಘದ ಆಡಳಿತ ವ್ಯವಹಾರದಲ್ಲಿ ಬರುತ್ತದೆ ಎಂದು ತೀರ್ಮಾನಿಸುವುದು ತಪ್ಪಲ್ಲ. 1967(2) ಎಂಎಲ್‌ಜೆ 503.

80. ಒಂದು ಸಹಕಾರ ಸಂಘದ ಆಡಳಿತ ವ್ಯವಹಾರ ಅಂದರೆ, ಅದು ಮಾಡುವ ವ್ಯಾಪಾರ, ಖರೀದಿ, ಮಾರಾಟ, ಬಾಡಿಗೆ ಪಡೆಯುವುದು, ಕೊಡುವುದು, ಬಾಡಿಗೆ ಪಾವತಿ ಮಾಡದೆ ಇದ್ದಾಗ, ಅಂತಹ ವ್ಯವಹಾರವನ್ನು ಮತ್ತು ಯಾವ ಸ್ಥಳವನ್ನು ಬಾಡಿಗೆಗೆ ಪಡೆಯಲಾಗಿದೆಯೇ ಮತ್ತು ಬಾಡಿಗೆಗೆ ಕೊಟ್ಟಾಗ ಇದು ಸಂಘದ ವ್ಯವಹಾರ ಆಗುವುದಿಲ್ಲ. ಐಎಲ್‌ಆರ್ 1974 ಕರ್ನಾಟಕ 1028.

81. ಬಾಡಿಗೆ ವಸೂಲಾತಿಗಾಗಿ ದಾವಾ ಹಾಕಿದಾಗ ಅದು ಒಂದು ಸಂಘದ ವ್ಯಾಪಾರ ಆಗುವುದಿಲ್ಲ. ಐಎಲ್‌ಆರ್ 1973 ಮೈಸೂರು 235.

82. ಒಂದು ಮಾರಾಟ ಅಥವಾ ಖರೀದಿ ಸಹಕಾರ ಸಂಘ ತನ್ನ ಹಿಂದಿನ ಕಾರ್ಯದರ್ಶಿ ಮೇಲೆ ಮಾರಾಟವಾದ ವಸ್ತುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎಂಬ ಆಧಾರದ ಮೇಲೆ ದಾವಾ ದಾಖಲಿಸಬಹುದು. 1975(2) ಕೆಎಲ್‌ಜೆ 118.

83. ಒಂದು ದಾವಾ, ಒಂದು ಸಹಕಾರ ಸಂಘದ ಮತ್ತು ಹಿಂದಿನ ನೌಕರರನ್ನು ವಜಾ ಮಾಡಿದ ಪ್ರಕರಣಕ್ಕೆ, ಅದು ಆ ಸಂಘದ ಆಡಳಿತ ವ್ಯವಹಾರ ಎಂದು ಪರಿಗಣಿಸಲಾಗದು. ಎಐಆರ್ 1973 ಮೈಸೂರು 1072(2) ಎಂಎಲ್‌ಜೆ 307. ಟಿಪ್ಪಣಿ: ಈ ತೀರ್ಪಿನ ನಂತರ ಕಲಂ 70(1)(ಇ) ಕ್ಕೆ ತಿದ್ದುಪಡಿ ತಂದು, ಇಂತಹ ಪ್ರಕರಣವನ್ನು ದಾಖಲಿಸಬಹುದು. ಅವಕಾಶ ಕಲ್ಪಿಸಲಾಗಿರುವುದರಿಂದ ಈ ತೀರ್ಮಾನ ಅನ್ವಯವಾಗುವುದಿಲ್ಲ.

84. ಒಂದು ಸಹಕಾರ ಸಂಘ ಒಂದು ನಿವೇಶನವನ್ನು ಕೊಟ್ಟಾಗ, ಅಂತಹ ನಿವೇಶನವನ್ನು ಕೊಡಲು ಬರುವುದಿಲ್ಲವೆಂದು, ಸಂಘದ ವ್ಯವಹಾರವೆಂದು ಪರಿಗಣಿಸಿ ದಾವಾ ದಾಖಲಿಸಬಹುದು.

1979(1) ಎಂಎಲ್‌ಜೆ

85. ಚುನಾವಣೆ ಪೂರ್ವದಲ್ಲಿ ಅನರ್ಹತೆಗೊಂಡಿದ್ದರೆ, ಅದು ಕಲಂ 70ರನ್ವಯ ದಾವಾ ಆಗುತ್ತದೆ. 1879 ಕೆಎಲ್‌ಜೆ 174.

86. ಒಂದು ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿ ಮಾಡುವುದು, ಒಂದು ಸಹಕಾರ ಸಂಘದ ಸದಸ್ಯರು ಮತ್ತು ನಿಬಂಧಕರ ಮಧ್ಯೆ ದಾವಾ ಪ್ರಕರಣವಾಗುವುದಿಲ್ಲ. ಎಐಆರ್ 1966 ಮೈಸೂರು 274–ಐಎಲ್‌ಆರ್ 1965 ಮೈಸೂರು 1168–1966(1) ಎಂಎಲ್‌ಜೆ 215.

87. ಒಂದು ಸಂಘ ತನ್ನ ಸದಸ್ಯರ ಮೇಲೆ ಅಥವಾ ಒಬ್ಬ ಸದಸ್ಯ ಒಂದು ಸಹಕಾರ ಸಂಘದ ಮೇಲೆ ಕ್ರಮ ಜರುಗಿಸಬೇಕೆಂದು ಪ್ರತಿರೋಧ ಒಡ್ಡಿದರೆ, ಅದು ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಿದ್ದು, ಅದನ್ನು ಕಲಂ 70ರನ್ವಯ ತೀರ್ಮಾನಿಸಬೇಕು. ಹಾಗೂ ಅಂತಹ ಪ್ರಕರಣ ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಗೆ ತಡೆಹಿಡಿಯಲಾಗಿದೆ. ಐಎಲ್‌ಆರ್ 1967 ಮೈಸೂರು 427 ಡಿಬಿ.

88. ಸಹಾಯಕ ನಿಬಂಧಕರು ಮಧ್ಯಂತರ ಆದೇಶವನ್ನು, ಅಂದರೆ ತಡೆಯಾಜ್ಞೆ ನೀಡಿದ ನಂತರ, ದಾವಾ ಪ್ರಕರಣವನ್ನು ಗೌರವ ಮಧ್ಯಸ್ಥದಾರರಿಗೆ ವರ್ಗಾಯಿಸಬಹುದು. 1958 ಕರ್ನಾಟಕ ಎಂಎಲ್‌ಜೆ 184 ಡಿಬಿ.

89. ಒಂದು ದಾವಾ ಪ್ರಕರಣದಲ್ಲಿ ಮತ ಚಲಾವಣೆ ಮಾಡಿದಾಗ ಮತ್ತು ಆಡಳಿತ ಮಂಡಳಿಯನ್ನು ರಚನೆ ಮಾಡಿದ ಸಂದರ್ಭದಲ್ಲಿ, ಅದನ್ನು ರಿಟ್ ಅರ್ಜಿ ಮುಖಾಂತರ ತೀರ್ಮಾನಿಸಲಾಗದು. ಮತ್ತು ಅದನ್ನು ಕಲಂ 70ರನ್ವಯ ತೀರ್ಮಾನಿಸಬೇಕು. (ಕಾಸ್ ಆಫ್ ಆಕ್ಷನ್) ಐಎಲ್‌ಆರ್ 1968 645–1968 ಎಂಎಲ್‌ಜೆ 313 ಡಿಬಿ.

90. ಒಂದು ಸಹಕಾರ ಸಂಘದ ಉದ್ದೇಶ ಮನೆಗಳನ್ನು ಕಟ್ಟಿಸಿ ಸದಸ್ಯರಿಗೆ ಹಂಚುವುದೇ ಉದ್ದೇಶವಾಗಿದ್ದಾಗ, ಮನೆಯನ್ನು ಸದಸ್ಯರಿಗೆ ಹಂಚುವುದು, ಸದಸ್ಯ ಮತ್ತು ಸಂಘದ ಮಧ್ಯೆ ಒಂದು ವ್ಯಾಪಾರಿ ವ್ಯವಹಾರವಾಗಿರುತ್ತದೆ. ಅದನ್ನು ಕಲಂ 70ರನ್ವಯ ತೀರ್ಮಾನಿಸಬೇಕು. ಐಎಲ್‌ಆರ್ 1969(1) ಮೈಸೂರು 1376–1969 ಎಂಎಲ್‌ಜೆ 186 ಡಿಬಿ.

91. ಒಂದು ಸಂಘ ಸದಸ್ಯರು ಸಂಘದಲ್ಲಿ ಇಟ್ಟ ವಸ್ತುಗಳ ಆಧಾರದ ಮೇಲೆ ಸಾಲ ಕೊಡಬಹುದು. ಇದು ಸಂಘದ ವ್ಯವಹಾರ. ಇದನ್ನು ಕಲಂ 70ರನ್ವಯ ಕ್ರಮ ಜರುಗಿಸಬೇಕು. ಬೈಲಾ ವಿರುದ್ಧವಾಗಿ ನಿರ್ದೇಶಕರಿಗೆ ಸಾಲ ಮಂಜೂರು ಮಾಡಿದ್ದರೂ. ಅದರ ವಸೂಲಾತಿಗೆ ಬಾಧಕವಲ್ಲ. ಐಎಲ್‌ಆರ್ 1974 ಕರ್ನಾಟಕ 574–ಐಎಲ್‌ಜೆ 1974 ಕರ್ನಾಟಕ 449.

92. ನಿಬಂಧಕರು ಆಡಳಿತ ಮಂಡಳಿ ಚುನಾವಣೆಗೆ ಸಂಬಂಧಪಟ್ಟಂತೆ ತೀರ್ಮಾನಿಸಲು ಅಧಿಕಾರ ಹೊಂದಿರುತ್ತಾರೆ. ನಿಬಂಧಕರು ಗೌರವ ಮಧ್ಯಸ್ಥದಾರರು ಅಥವಾ ಮತ್ಯಾವುದೇ ಅಧಿಕಾರಿ ದಾವಾ ತೀರ್ಮಾನಿಸುವಾಗ ಸಿವಿಲ್ ನ್ಯಾಯಾಲಯಗಳಿಗೆ ಇರುವ ಎಲ್ಲಾ ಅಧಿಕಾರ ಹೊಂದಿರುತ್ತಾರೆ. ಮತ್ತು ಅಂತಹ ಸಂದರ್ಭದಲ್ಲಿ ನ್ಯಾಯಾಲಯದ ತೀರ್ಮಾನವನ್ನು ಆಧಾರವಾಗಿಟ್ಟು ತೀರ್ಮಾನ ಕೊಡಬಹುದು. ಐಎಲ್‌ಆರ್ 1975(2) ಕರ್ನಾಟಕ 1672–1975(2) ಕೆಎಲ್‌ಜೆ 235.

93. ಚುನಾವಣೆಗೆ ಪೂರ್ವದಲ್ಲಿ ಗಳಿಸಿದ ಅನರ್ಹತೆಯನ್ನು ತೀರ್ಮಾನಿಸಲು ಉಪನಿಬಂಧಕರನ್ನು ಗೌರವ ಮಧ್ಯಸ್ಥದಾರರನ್ನಾಗಿ ಕಲಂ 70ರನ್ವಯ ನೇಮಕ ಮಾಡಬಹುದು. ಅಂತಹ ಪ್ರಕರಣಗಳಲ್ಲಿ ಉಪನಿಬಂಧಕರು ವಿಚಾರಣೆ ನಡೆಸಿ ಚುನಾವಣೆ ತಕರಾರು ಅರ್ಜಿ ತೀರ್ಮಾನಿಸಬಹುದು. ಐಎಲ್‌ಆರ್ 1979(1) ಕರ್ನಾಟಕ 124 ಡಿಬಿ.

94. ಒಂದು ಸಾಲವನ್ನು ಯಾವುದೇ ಆಸ್ತಿಯನ್ನು ಆಧಾರವಾಗಿಟ್ಟು ಒಬ್ಬ ಸದಸ್ಯನಿಗೆ ಸಾಲ ಕೊಟ್ಟಿದ್ದರೆ ಅಂತಹ ಪ್ರಕರಣದಲ್ಲಿ ಕಲಂ 70ರಲ್ಲಿ ದಾವಾ ಹೂಡುವ ಬದಲಾಗಿ ಕಲಂ 99ರನ್ವಯ ವಸೂಲಿ ಮಾಡಬಹುದು. ಐಎಲ್‌ಆರ್ 1979 ಕರ್ನಾಟಕ ಎಸ್‌ಎನ್ 37–1979 ಕರ್ನಾಟಕ ಕೆಎಲ್‌ಜೆ 355.

95. ಸಹಕಾರ ಸಂಘಗಳ ಕಾಯಿದೆ 1976ರ ತಿದ್ದುಪಡಿಗೆ ಪೂರ್ವದಲ್ಲಿ, ನೌಕರರು ಮತ್ತು ಸಂಘದ ಮಧ್ಯೆ ವ್ಯವಹಾರವನ್ನು ಕಾರ್ಮಿಕ ಕಾಯಿದೆಯಡಿಯಲ್ಲಿಯೂ ತೀರ್ಮಾನಿಸಬಹುದಾಗಿತ್ತು. (ಐಡಿ ಆಕ್ಟ್) ಐಎಲ್‌ಆರ್ 1979(2) ಎಸ್‌ಎನ್ 139.

96. ನೌಕರರು ಮತ್ತು ಸಹಕಾರ ಸಂಘದ ಮಧ್ಯೆ ಇರುವ ಪ್ರಕರಣವನ್ನು ಕಾರ್ಮಿಕ ನ್ಯಾಯಾಲಯದಲ್ಲಿಯೂ ನಡೆಸಬಹುದು. ಐಎಲ್‌ಆರ್ 1976(1) ಕರ್ನಾಟಕ 111–1976 ಕೆಎಲ್‌ಜೆ 102–ಐಎಲ್‌ಆರ್ 1989(2) 1388–1981(1) ಕೆಎಲ್‌ಜೆ 136.

**ಸೂಚನೆ :** ಈ ತೀರ್ಪಿನ ನಂತರ 1998ರ ಕಾಯಿದೆ ತಿದ್ದುಪಡಿಯಲ್ಲಿ ನೌಕರರು ಮತ್ತು ಸಂಘದ ಮಧ್ಯೆ ಇರುವ ಎಲ್ಲಾ ಪ್ರಕರಣಗಳನ್ನು ಸಹಕರಿ ನ್ಯಾಯಾಲಯ ಬಿಟ್ಟು ಬೇರೆ ನ್ಯಾಯಾಲಯಗಳ ವ್ಯಾಪ್ತಿಯಲ್ಲಿ ತೆಗೆದುಹಾಕಿದೆ. ಆದುದರಿಂದ ಈ ಮೇಲ್ಕಂಡ ತೀರ್ಮಾನಗಳು 1998ರ ತಿದ್ದುಪಡಿ ನಂತರ ಅನ್ವಯವಾಗುವುದಿಲ್ಲ.

97. ಕಲಂ 70ರನ್ವಯ ಹೂಡಬಹುದಾದ ಪ್ರಕರಣವನ್ನು ಕಲಂ 69ರಡಿಯೂ ದಾಖಲಿಸಬಹುದು. ಐಎಲ್‌ಆರ್ 1982 ಎಸ್‌ಎನ್ 49–1982 ಕೆಎಲ್‌ಜೆ ಎಸ್‌ಎನ್ 102.

98. ಒಂದು ಸಹಕಾರ ಸಂಘದ ಚುನಾವಣೆಯಲ್ಲಿ ನಾಮಪತ್ರ ತಿರಸ್ಕರಣೆಗೊಂಡಾಗ, ಅಂತಹ ಪ್ರಕರಣಗಳನ್ನು ಸಂವಿಧಾನದ ಪರಿಚ್ಛೇದ 226ರಲ್ಲಿ ಜರುಗಿಸಲಾಗದು. ಎಐಆರ್ 1982 ಕರ್ನಾಟಕ 220–1981 ಕೆಎಲ್‌ಜೆ 414.

99. ಚುನಾವಣೆ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಮತ್ತು ಸುಸ್ತಿದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಬಗ್ಗೆ, ದಾವಾ ಮುಖಾಂತರ ಪರಿಹರಿಸಿಕೊಳ್ಳಬೇಕು. ಹಾಗೂ ಅದನ್ನು ಸಂವಿಧಾನ ಪರಿಚ್ಛೇದ 226ರನ್ವಯ ಅಲ್ಲ. 1984(1) ಎಸ್‌ಎನ್ 43.

100. ಒಂದು ಸಹಕಾರ ಸಂಘ ತನ್ನ ವಶದಲ್ಲಿದ್ದ ಆಸ್ತಿಯನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ಅಥವಾ ಬಾಡಿಗೆ ಆಧಾರದ ಮೇಲೆ ಕೊಟ್ಟಾಗ ಅದು ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆಗೆ ಬರುತ್ತದೆಯೇ ಹೊರತು ದಾವಾ ಮುಖಾಂತರವಲ್ಲ. 1976(2) ಕೆಎಲ್‌ಜೆ 474.

101. ಸಂಘದ ಆಸ್ತಿಯಲ್ಲಿ ಕೊರತೆಯುಂಟುಮಾಡಿದ ಒಬ್ಬ ವ್ಯಕ್ತಿ ಸದಸ್ಯತ್ವದ ಬಗ್ಗೆ ತೀರ್ಮಾನವಾಗದೆ

ಇದ್ದರೂ, ಅಂತಹ ಪ್ರಕರಣವನ್ನು ದಾವಾ ಎಂದು ಪರಿಗಣಿಸಿ (ಡೀಮ್ಡ್ ಡಿಸ್‌ಪ್ಯೂಟ್) ಎಂದು ಕಲಂ 70ರನ್ವಯ ದಾವಾ ಹೂಡಬಹುದು. 1986 ಕೆಎಲ್‌ಜೆ 104.

102. ಒಂದು ಸಹಕಾರ ಸಂಘದಲ್ಲಿ ಎರಡು ಗುಂಪುಗಳಿದ್ದು, ಪ್ರತಿಯೊಂದು ಗುಂಪು ತನ್ನ ಗುಂಪೇ ಆಡಳಿತ ಮಂಡಳಿಗೆ ಆಯ್ಕೆ ಆಗಿದೆ ಎಂದು ಸಹಕಾರಿ ಸಂಘದ ಆಡಳಿತಕ್ಕೆ ಸಂಬಂಧಪಟ್ಟದ್ದು. ಐಎಲ್‌ಆರ್ 1986(3)–1987(1) ಕೆಎಲ್‌ಜೆ ಎಸ್‌ಎನ್ 72.

103. ದಾವಾ ಪ್ರಕರಣ ತೀರ್ಮಾನ ಮಾಡುವಾಗ, ಮಧ್ಯಸ್ಥದಾರರು ಒಪ್ಪಂದವಾದ ಬಡ್ಡಿದರವನ್ನು ಆದೇಶಿಸಬಹುದು ಅಥವಾ ಅಂತಹ ಒಪ್ಪಂದದ ಬಡ್ಡಿದರ ಇಲ್ಲದೆ ಇದ್ದಾಗ ಮತ್ತ್ಯಾವುದೇ ಕಾಯಿದೆಯಲ್ಲಿ ಇರುವ ಬಡ್ಡಿದರ ನಿರ್ಧರಿಸಬಹುದು. ಐಎಲ್‌ಆರ್ 1979 229.

104. ಒಂದು ಸಹಕಾರ ಸಂಘದ ವ್ಯವಹಾರದಲ್ಲಿ ಒಂದು ಪಾರ್ಟನರ್‌ಷಿಪ್ ಫರ್ಮ ಗ್ಯಾರೆಂಟಾರ್ ಆದಾಗ, ಅಂತಹ ಫರ್ಮಿನ ಪ್ರತಿಯೊಬ್ಬ ಜೊತೆಗಾರನು ಪ್ರಕರಣದಲ್ಲಿ ಕಕ್ಷಿದಾರನನ್ನಾಗಿ ಮಾಡಬೇಕು. ಮತ್ತು ಅವರನ್ನು 6 ವರ್ಷದೊಳಗಾಗಿ ದಾವಾ ದಾಖಲಿಸಲು ಅವಕಾಶ ಇದೆ. ಗ್ಯಾರಂಟಿ ಕೊಟ್ಟ ವ್ಯಕ್ತಿಗಳು ಸದಸ್ಯರು ಅಥವಾ ಅಲ್ಲವೋ ಎಂಬುದರ ಬಗ್ಗೆ ದಾವಾ ಪ್ರಕರಣದಲ್ಲಿ ದಾಖಲಿಸಬೇಕು. 1987(1) ಕೆಎಲ್‌ಜೆ 291.

105. ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ತಪ್ಪಿತಸ್ಥ ಎಂಬ ಒಂದೇ ಆಧಾರದ ಮೇಲೆ ದಾವಾ ಪ್ರಕರಣದಲ್ಲಿ ಡಿಕ್ರಿ ಪಡೆಯಲಾಗದು. ಡಿಕ್ರಿ ಪಡೆಯಬೇಕಾದರೆ ಪ್ರತ್ಯೇಕ ಸಾಕ್ಷಿ ಆಧಾರಗಳ ಮೇಲೆ ಪಡೆಯಬೇಕು. 1987 ಬಿಎಲ್‌ಜೆ ಎಸ್‌ಎನ್ 25.

106. ಎಲ್ಲಿ ಸ್ಪಷ್ಟ ಮತ್ತು ನೇರವಾದ ಆರೋಪ ಪಟ್ಟಿಗಳನ್ನು ತಯಾರಿಸದೆ, ಯಾರ ಮೇಲೆ ಕ್ರಮ ಜರುಗಿಸಲಾಗುತ್ತದೆಯೋ, ಅಂತಹ ವ್ಯಕ್ತಿ ಕಲಂ 64ರಲ್ಲಿ ಕೊಟ್ಟ ವರದಿ ಮತ್ತು ಅದರ ತೀರ್ಮಾನಗಳನ್ನು ಆರೋಪಿಗೆ ಅಥವಾ ಆರೋಪಿಗಳಿಗೆ ಕೊಡದೆ ಇದ್ದಾಗ, ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ ಹಾಗೂ ವಿಚಾರಣೆಯನ್ನು ನ್ಯಾಯಯುತವಾಗಿ ಮಾಡಲು ಸಾಧ್ಯವಾಗುವುದಿಲ್ಲ. 1991(2) ಕೆಎಲ್‌ಜೆ 302.

107. ಯಾವನೇ ಒಬ್ಬ ವ್ಯಕ್ತಿ ಚುನಾವಣೆಗೆ ಪೂರ್ವದ 12 ತಿಂಗಳ ಮೊದಲು ಸದಸ್ಯನಾಗಿದ್ದರೆ ಮಾತ್ರ ಮತ ಚಲಾಯಿಸುವ ಹಕ್ಕಿರತಕ್ಕದ್ದು. ಐಎಲ್‌ಆರ್ 2001 ಕೆಎಆರ್ 2524

108. ಎಲ್ಲಿ ಚುನಾವಣೆ ವೇಳಾಪಟ್ಟಿಯನ್ನು ಹೊರಡಿಸಲಾಗಿದೆಯೋ ಹಾಗೂ ಆ ಚುನಾವಣೆ ವೇಳಾಪಟ್ಟಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದವರಿಗೆ ಮತ್ತು ಇತರೆ ಹಿಂದುಳಿದ ವರ್ಗದವರಿಗೆ ಎಂದು ಸ್ಪಷ್ಟವಾಗಿ ನಮೂದಿಸದೇ ಇದ್ದರೆ ಅದು ಕಾನೂನಿಗೆ ವಿರುದ್ಧ, ಎಐಆರ್ 1984 ಎಸ್‌ಸಿ 102

109. ಚುನಾವಣಾಧಿಕಾರಿಯು ನಾಮಪತ್ರ ಸಲ್ಲಿಸುವ ದಿನಾಂಕದಂದೇ ನಾಮಪತ್ರವನ್ನು ವಾಪಸ್ ಪಡೆಯಬಹುದು. ಯಾವ ನಾಮಪತ್ರವನ್ನು ವಾಪಸ್ಸಾತಿ ಪಡೆಯಲಾಗಿದೆಯೋ ಆ ವಾಪಸ್ ಪಡೆಯುವಿಕೆ ವಾಪಸ್ ಪಡೆಯುವ ದಿನಾಂಕದಂದೇ ಪಡೆಯಬೇಕೆಂದಿಲ್ಲ. ಅಂತಹ ಪ್ರಸಂಗದಲ್ಲಿ ಚುನಾವಣಾಧಿಕಾರಿಯು ಅಂತಹ ನಾಮಪತ್ರ ಹಿಂಪಡೆದು ಚುನಾವಣೆಯಲ್ಲಿ ಸ್ಪರ್ದಿಸಲು

ಅವಕಾಶ ಕಲ್ಪಿಸತಕ್ಕದ್ದಲ್ಲ. 1975 ಕೆಎಲ್‌ಜೆ 66 ಎಸ್‌ಎನ್ 51.

110. ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಲ್ಲಿ ಪದಾಧಿಕಾರಿಗಳ ಆಯ್ಕೆಗೆ ಸ್ಪಷ್ಟವಾಗಿ ನೀತಿಯನ್ನು ರೂಪಿಸಿರುವುದರಿಂದ ಪ್ರತ್ಯೇಕವಾದ ಉಪವಿಧಿಗಳನ್ನು ರಚಿಸುವ ಅವಶ್ಯಕತೆ ಇಲ್ಲ. 1981 (1) ಕೆಎಲ;ಜೆ 88

111. ಚುನಾವಣಾಧಿಕಾರಿಯು ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಿದ ನಂತರ ಯಾವುದೇ ಕಾರಣಕ್ಕೂ ಚುನಾವಣೆಯನ್ನು ಮುಂದೂಡತಕ್ಕದ್ದಲ್ಲ. ಕೆಎಲ್‌ಜೆ 4114.

112. ನಾಮಪತ್ರ ಸಲ್ಲಿಸುವ ವ್ಯಕ್ತಿಯ ಹೆಸರಿನಲ್ಲಿ ವ್ಯತ್ಯಾಸವಿದ್ದರೆ ಅಂತಹ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ ಐಎಲ್‌ಆರ್ 1995 ಕೆಎಆರ್ 2187.

113. ಚುನಾವಣಾಧಿಕಾರಿಯು ಸಂಘದ ಕಾರ್ಯದರ್ಶಿಗೆ ನಾಮಪತ್ರ ಸ್ವೀಕರಿಸಲು ಅಧಿಕಾರ ಕೊಟ್ಟಿದ್ದರೂ ಚುನಾವಣಾಧಿಕಾರಿಯೇ ನಾಮಪತ್ರವನ್ನು ಸ್ವೀಕರಿಸಲು ಯಾವುದೇ ಅಡೆತಡೆಗಳಿರತಕ್ಕದ್ದಲ್ಲ. ಐಎಲ್‌ಆರ್ 1985(4) ಕೆಎಆರ್ 3685.

114. ಒಬ್ಬ ನಿರ್ದೇಶಕನನ್ನು ಕಲಂ 29ಸಿ ಅನ್ವಯ ಅನರ್ಹನೆಂದು ಘೋಷಿಸಿದಾಗ ಅಂತಹ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹನಲ್ಲ. 1979(1) ಕೆಎಲ್‌ಜೆ 431.

115. ಒಂದು ಚುನಾವಣೆ ತಕರಾರು ಅರ್ಜಿಯನ್ನು ಸಲ್ಲಿಸಿದಾಗ ಆ ಅರ್ಜಿಯು ಅವಧಿಯೊಳಗೆ ಇಲ್ಲದಿದ್ದರೆ ತಡೆಯಾಜ್ಞೆ ಕೊಡತಕ್ಕದ್ದಲ್ಲ. ತಡೆಯಾಜ್ಞೆ ಕೊಡಬೇಕಾದಲ್ಲಿ ವಿಳಂಬ ವಿನಾಯಿತಿ ಅರ್ಜಿಯನ್ನು ತೀರ್ಮಾನಿಸಿ ತಡೆಯಾಜ್ಞೆ ಕೊಡಬೇಕೋ ಇಲ್ಲವೋ ಎಂಬುದನ್ನು ನಿರ್ಧರಿಸತಕ್ಕದ್ದು. 1998 ಕೆಎಲ್‌ಜೆ 3765

116. ಚುನಾವಣಾ ಫಲಿತಾಂಶವನ್ನು ಪ್ರಕಟಿಸುವಾಗ ಯಾವ ಸ್ಥಾನದಿಂದ, ಯಾವ ವಿಭಾಗದಿಂದ ಚುನಾವಣೆಗೆ ಸ್ಪರ್ಧಿಸಿದ್ದಾರೋ, ಆ ಆಧಾರದ ಮೇಲೆಯೇ ಚುನಾವಣೆ ಫಲಿತಾಂಶ ಪ್ರಕಟಿಸತಕ್ಕದ್ದು. ಒಟ್ಟು ಮತ ಚಲಾವಣೆಯಾದ ಮತದಾನದ ಆಧಾರದ ಮೇಲೆ ಹೆಚ್ಚು ಮತಗಳಿಸಿದವನನ್ನು ಚುನಾಯಿತನಾದನೆಂದು ಪ್ರಕಟಿಸತಕ್ಕದ್ದಲ್ಲ. ಐಎಲ್‌ಆರ್ 2000 ಕೆಎಆರ್ 143.

117. ನಿರ್ದೇಶಕರು 3 ಸತತ ಆಡಳಿತ ಮಂಡಳಿ ಸಭೆಗೆ ಗೈರುಹಾಜರಾದಲ್ಲಿ ಅವರು ನಿರ್ದೇಶಕತನವನ್ನು ಕಳೆದುಕೊಳ್ಳುತ್ತಾರೆ. ಆದರೆ ಅಂತಹ ನಿರ್ದೇಶಕನು ಅನರ್ಹಗೊಳ್ಳುವುದಿಲ್ಲ. ತೊಡಕುಂಟಾದ ವ್ಯಕ್ತಿ ಕಾಯಿದೆ 70ರನ್ವಯ ಉಪ ನಿಬಂಧಕರ ಮುಂದೆ ಅರ್ಜಿ ಸಲ್ಲಿಸಿದಾಗ ಆ ತೀರ್ಮಾನ ಆದ ನಂತರವೇ ಅನರ್ಹಗೊಳ್ಳತಕ್ಕದ್ದು. 1985 ಕೆಎಲ್‌ಜೆ 326.

118. 9 ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಸಲಾಯಿತು. ಆ ಸಂದರ್ಭದಲ್ಲಿ 3 ಜನರನ್ನು ಹೊರತುಪಡಿಸಿ ಉಳಿದೆಲ್ಲಾ ಉಮೇದುವಾರರು ನಾಮಪತ್ರವನ್ನು ವಾಪಸ್ ಪಡೆದರು. ಅಂತಹ ಸಂದರ್ಭದಲ್ಲಿ ಮೂವರು ಮಾತ್ರ ಆಯ್ಕೆಯಾಗಿದ್ದಾರೆಂದು ಉಳಿದ 6 ಜನರ ಆಯ್ಕೆಗಾಗಿ ಹೊಸದಾಗಿ ಚುನಾವಣೆ ಮಾಡಿ ಆಯ್ಕೆ ಮಾಡತಕ್ಕದ್ದು. 1982(1) ಕೆಎಲ್‌ಜೆ ಎಸ್‌ಎನ್13 ಡಿಬಿ

119. ಒಂದು ಸಹಕಾರ ಸಂಘವು ಮತ್ತೊಂದು ಸಹಕಾರ ಸಂಘದ ಸದಸ್ಯರಾಗಿದ್ದರೆ ಅಂತಹ ಸಂಘಕ್ಕೆ ಪ್ರತಿನಿಧಿಯನ್ನು ಕಳುಹಿಸುವಾಗ ನಿರ್ದೇಶಕರಲ್ಲಿ ಒಬ್ಬರನ್ನು ಕಳುಹಿಸತಕ್ಕದ್ದು. ಆ ಪ್ರತಿನಿಧಿ ಮಾತ್ರ ಮತ್ತೊಂದು ಸಂಘದಲ್ಲಿ ಮತ ಚಲಾಯಿಸತಕ್ಕದ್ದು. ಐಎಲ್ಆರ್ 2000 ಕೆಎಆರ್ 1185.

120. ಕಲಂ 20ರನ್ವಯ ಸುಸ್ತಿದಾರನೆಂದು ಪರಿಗಣಿಸಬೇಕಾದರೆ ಸಾಲವನ್ನು ಪಡೆದ ದಿನಾಂಕವನ್ನು ಗಮನಿಸಬೇಕು. ಮತ್ತು ಅವನು ಕೊಟ್ಟ ಅರ್ಜಿಯ ದಿನಾಂಕ ಅಥವಾ ಮಂಜೂರಾದ ದಿನಾಂಕವನ್ನು ಪರಿಗಣಿಸತಕ್ಕದ್ದಲ್ಲ. ಐಎಲ್ಆರ್ 1986(3) ಕೆಎಆರ್ 2683.

121. ಪದಾಧಿಕಾರಿಗಳ ಆಯ್ಕೆಗೆ ಕೋರಂ ಅವಶ್ಯಕತೆ ಕಡ್ಡಾಯ. ಐಎಲ್ಆರ್ 2003(3) ಕೆಎಆರ್ 486 ಡಿಬಿ

122. ಪದಾಧಿಕಾರಿಗಳ ಅವಧಿ ಎರಡೂವರೆ ವರ್ಷ ಎಂದಿದ್ದಾಗ ವರ್ಷದ ಮಧ್ಯದಲ್ಲಿ ಚುನಾವಣೆ ನಡೆದಾಗ ವರ್ಷವನ್ನು ಮಾರ್ಚ 31ಕ್ಕೆ ಮುಕ್ತಾಯವಾಗತಕ್ಕದ್ದು. ಮತ್ತು ಮುಂದಿನ ವರ್ಷಕ್ಕೂ ಒಂದು ವರ್ಷವೆಂದು ತಿಳಿಯತಕ್ಕದ್ದು.. 2001(3) ಕೆಎಲ್‌ಜೆ 663 ಡಿಬಿ

123. ಪ್ರತಿಯೊಂದು ಸಹಕಾರ ಸಂಘವು ನಿಯಮ 13ಎ ಅನ್ವಯ ಗುರುತಿನ ಪತ್ರ ಕೊಡಬೇಕೆಂದಿದ್ದರೂ ಆ ಗುರುತಿನ ಪತ್ರವನ್ನು ಪಡೆಯುವುದು ಸದಸ್ಯರ ಜವಾಬ್ದಾರಿ. ಐಎಲ್ಆರ್ 2001 ಕೆಎಆರ್ 3837.

124. ಕಲಂ 29ರನ್ವಯ ಸರ್ಕಾರವು ನಾಮನಿರ್ದೇಶನ ಮಾಡಿದ ವ್ಯಕ್ತಿಯನ್ನು ತೆಗೆದುಹಾಕುವಾಗ ಕಾರಣ ಕೇಳುವ ನೋಟೀಸ್ ನೀಡಬೇಕಾಗಿಲ್ಲ. 2002(1) ಕೆಸಿಸಿಆರ್ 424

125. ಒಂದು ಸಹಕಾರ ಸಂಘದ ಪರವಾಗಿ ಕಮಿಷನ್ ಏಜೆಂಟ್ ಎಂದು ನೇಮಕ ಮಾಡಿದಾಗ ಅಂತಹ ವ್ಯಕ್ತಿ ಸಂಘದ ಪರವಾಗಿ ಠೇವಣಿ ಸಂಗ್ರಹಿಸುತ್ತಿದದು, ಅಂತಹ ವ್ಯಕ್ತಿಯು ಸಂಘ ಮಾಡುತ್ತಿರುವ ವ್ಯವಹಾರವನ್ನೇ ಮಾಡುತ್ತಿರುವುದರಿಂದ ಅಂತಹ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಿ ನಿರ್ದೇಶಕನಾಗಲು ಅನರ್ಹ 1989(2) ಕೆಎಲ್‌ಜೆ 272

126. ಸಹಕಾರ ಸಂಘದ ಚುನಾವಣೆ ನಡೆಸಲು ನಿಬಂಧಕರು ಚುನಾವಣಾಧಿಕಾರಿಯನ್ನು ನೇಮಿಸುತ್ತಾರೆ. ಚುನಾವಣಾಧಿಕಾರಿಯು ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿಲ್ಲ. 1983(2) ಕೆಎಲ್‌ಜೆ 479

127. ಕಲಂ 28ಎ(3)ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಮತ್ತು ಮಹಿಳೆಯರಿಗಾಗಿ ಚುನಾವಣೆಯನ್ನು ಪ್ರತ್ಯೇಕವಾಗಿ ನಡೆಸುವುದು ಸಂವಿಧಾನಬಾಹಿರವಲ್ಲ. 1996(5) ಕೆಎಲ್‌ಜೆ 227 ಡಿಬಿ

128. ನ್ಯಾಯಾಲಯವು ಚುನಾವಣೆ ಅಕ್ರಮವೆಂದು ತೀರ್ಮಾನಿಸಿ ತೀರ್ಪು ಕೊಟ್ಟಾಗ ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಒಬ್ಬ ಮಧ್ಯಸ್ಥಾದಾರರನ್ನು ಅಥವಾ ಚುನಾವಣಾಧಿಕಾರಿಯನ್ನು ಅಥವಾ ವಿಶೇಷಾಧಿಕಾರಿಯನ್ನು ಚುನಾವಣೆಯನ್ನು ನಡೆಸಲು ನೇಮಕ ಮಾಡತಕ್ಕದ್ದಲ್ಲ. 1998(2) ಡಿಎಲ್‌ಜೆ 85

## ಕಲಂ 117ಕ್ಕೆ ಸಂಬಂಧಪಟ್ಟ ತೀರ್ಪುಗಳು :

129. ಒಂದು ಪ್ರಕರಣವನ್ನು ಮಧ್ಯಸ್ಥಗಾರರು ವಿಚಾರಣೆ ಮಾಡುವಾಗ ಸಂಬಂಧಪಟ್ಟ ಸಂಘಕ್ಕೆ ನಡವಳಿಕೆ ಪುಸ್ತಕಗಳನ್ನು ಮತ್ತು ಲೆಕ್ಕಪತ್ರಗಳನ್ನು ಹಾಜರುಪಡಿಸುವಂತೆ ನಿರ್ದೇಶಿಸಿರುವುದು ಸರಿಯಾದ ಕ್ರಮ 1988(2) ಕೆಎಲ್‌ಜೆ 217.

130. ಕಲಂ 117 ಮತ್ತು ನಿಯಮ 55ನ್ನು ದಾವಾ ಪ್ರಕರಣ ವಿಚಾರಣೆ ಮಾಡುವ ಸಂದರ್ಭದಲ್ಲಿ ಮತ್ತು ಮೇಲ್ಮನವಿ ರೂಪದಲ್ಲಿ ನಿಬಂಧಕರಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸಿದಾಗ ಅನ್ವಯವಾಗುವ ನೀತಿ ನಿಯಮಗಳು. ಆದರೆ ಈ ಅವಕಾಶ ಸಹಕಾರ ಸಂಘವು ಶಿಸ್ತು ಕ್ರಮ ಜರುಗಿಸಿದಾಗ ಅನ್ವಯಿಸತಕ್ಕದ್ದಲ್ಲ. ಐಎಲ್‌ಆರ್ 1985(3) ಕೆಎಆರ್ 224.

131. ಒಂದು ಆಡಳಿತ ಮಂಡಳಿಯು ತನಗೆ ಇರುವ ಅಧಿಕಾರವನ್ನು ಕಾನೂನಿನಡಿಯಲ್ಲಿ ಒಬ್ಬ ನಿರ್ದೇಶಕರಿಗೆ ಕೊಡಬಹುದು. ಸಂಘವು ಒಬ್ಬ ವ್ಯಕ್ತಿಯನ್ನು ಪ್ರಕರಣದಲ್ಲಿ ಹಾಜರಾಗಿ ಸಂಘದ ಪರವಾಗಿ ವಾದಿಸಲು ಅಧಿಕಾರ ಇರತಕ್ಕದ್ದು. ಆದರೆ ವಕೀಲರನ್ನು ಮಧ್ಯಸ್ಥಗಾರರ ಮುಂದೆ ಹಾಜರಾಗುವಂತೆ ತೀರ್ಮಾನಿಸತಕ್ಕದ್ದಲ್ಲ. ಐಎಲ್‌ಆರ್ 1986(3) ಕೆಎಆರ್ 2329/1987(1) ಕೆಎಲ್‌ಜೆ ಎಸ್‌ಎನ್ 52.

132. ಒಬ್ಬ ಸಂಘದ ಕಾರ್ಯದರ್ಶಿಯು ಸಂಘವನ್ನು ಪ್ರತಿನಿಧಿಸಲು ಅಧಿಕಾರವನ್ನು ಹೊಂದಿರುತ್ತಾನೆ. ಆದರೆ ಕಾರ್ಯದರ್ಶಿಯೊಬ್ಬನೇ ಪ್ರತಿನಿಧಿಸಬೇಕೆಂಬ ಷರತ್ತಿಲ್ಲ. ಆಡಳಿತ ಮಂಡಳಿಯು ತನ್ನ ಒಬ್ಬ ನಿರ್ದೇಶಕನನ್ನು ಸಂಘದ ಪರವಾಗಿ ಹಾಜರಾಗಲು ಅಧಿಕಾರ ಕೊಡಬಹುದು. ಅಂತಹ ಪ್ರತಿನಿಧಿಯನ್ನು ಮೂರನೇ ವ್ಯಕ್ತಿಯೆಂದು ಭಾವಿಸತಕ್ಕದ್ದಲ್ಲ. ಅಂತಹ ಪ್ರತಿನಿಧಿಯನ್ನು ಮಾಡಬೇಕಾದ ಸಂದರ್ಭದಲ್ಲಿ ಅದನ್ನು ಪವರ್ ಆಫ್ ಅಟಾರ್ನಿ ಮೂಲಕವೇ ಮಾಡಬೇಕೆಂಬ ವಾದವನ್ನು ಸ್ವೀಕರಿಸತಕ್ಕದ್ದಲ್ಲ.

ಟಿಪ್ಪಣಿ: ಈ ಮೇಲ್ಕಂಡ ಎರಡೂ ತೀರ್ಮಾನಗಳಿಗೆ ಕಲಂ 29ಜಿ ಯನ್ನು 1998ರಲ್ಲಿ ಸೇರ್ಪಡೆ ಮಾಡಿ ಸಂಘದ ಕಾರ್ಯನಿರ್ವಾಹಕನೇ ಸಂಘದ ಪರವಾಗಿ, ಸಂಘದ ವಿರುದ್ಧವಾಗಿ ಎಲ್ಲ ಪ್ರಕರಣಗಳಲ್ಲೂ ಹಾಜರಾಗಲು ಅವಕಾಶ ಕಲ್ಪಿಸಿರುವುದರಿಂದ, ಈ ತೀರ್ಪು ನೇರವಾಗಿ ಅನ್ವಯಿಸುವುದಿಲ್ಲ ಎಂಬುದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು.

133. ನಿಬಂಧಕರು ಅಥವಾ ಅವನು ನೇಮಕ ಮಾಡಿದ ಮಧ್ಯಸ್ಥದಾರರು ಯಾವುದೇ ಕಕ್ಷಿದಾರರನ್ನು ಅವಶ್ಯಕವಿಲ್ಲವೆಂದು ತೆಗೆದುಹಾಕಬಹುದು ಅಥವಾ ಅವಶ್ಯಕತೆಯಿದೆ ಎಂದು ಸೇರಿಸಿಕೊಳ್ಳಬಹುದು. 1980(2) ಕೆಎಲ್‌ಜೆ 101/ಐಎಲ್‌ಆರ್ 1980(2) ಎಸ್‌ಎನ್ 55.

134. ಒಂದು ದಾವಾ ಪ್ರಕರಣದಲ್ಲಿ ಒಂದು ಫರ್ಮಿನ ಖಾತ್ರಿದಾರರೆಲ್ಲರೂ ಕಕ್ಷಿದಾರರಾಗಬೇಕು. ಮಾಡದೇ ಇದ್ದ ಸಂದರ್ಭದಲ್ಲಿ ಪ್ರಕರಣದ ಆರು ವರ್ಷದೊಳಗಾಗಿ ಕಕ್ಷಿದಾರರನ್ನಾಗಿ ಮಾಡಬೇಕು. ಒಂದು ಸಂಘದ ಸದಸ್ಯರಾಗಿದ್ದಾರೆಯೇ, ಮತ್ತು ಅವರು ಎಷ್ಟು ಹಣಕ್ಕೆ ಜವಾಬ್ದಾರರು ಎಂಬುದನ್ನು ನಿಗಧಿಪಡಿಸಬೇಕು. ಒಂದು ಫರ್ಮಿನ ಒಬ್ಬ ನಿರ್ದೇಶಕನ ಮೇಲೆ

ಆದೇಶ ಹೊರಡಿಸಿದರೆ ಆ ಆದೇಶ ಎಲ್ಲಾ ಭಾಗಿದಾರರಿಗೂ ಅನ್ವಯವಾಗುವುದರಿಂದ, ಆ ಫರ್ಮಿನ ಎಲ್ಲ ಭಾಗ್ಯಸ್ಥರೂ ಕಕ್ಷಿದಾರರಾಗಬೇಕು. 1987(1) ಕೆಎಲ್‌ಜೆ 291.

135. ಒಂದು ಸಕ್ಕರೆ ಕಾರ್ಖಾನೆಯು ಕೆಲವು ನಿರ್ದೇಶಕರುಗಳಿಗೆ ಸಕ್ಕರೆಯನ್ನು ಮಾರಾಟ ಮಾಡಿ ಹಣವನ್ನು ಸ್ವೀಕರಿಸಿದ ನಂತರ, ಆ ಸಂಘದ ಆಸ್ತಿಯಲ್ಲಿ ಭಾಗ್ಯಸ್ಥರಾಗುವುದಿಲ್ಲ. ಅಂತಹ ನಿರ್ದೇಶಕರು ಯಾವುದೇ ದಾವಾ ಪ್ರಕರಣದಲ್ಲಿ ಕಕ್ಷಿದಾರರಾಗಬೇಕಾಗಿಲ್ಲ. 1989(2) ಕೆಎಲ್‌ಜೆ 287.

136. ಒಂದು ದಾವಾ ಪ್ರಕರಣ ದಾಖಲು ಮಾಡುವಾಗ ಆಡಳಿತ ಮಂಡಳಿಯ ಸದಸ್ಯರಿದ್ದು, ಅಂತಹವರನ್ನು ಕಕ್ಷಿದಾರರನ್ನಾಗಿ ಮಾಡಿದಾಗ, ಆ ನಿರ್ದೇಶಕರು ಪ್ರಕರಣ ನಡೆಯುತ್ತಿರುವ ಸಂದರ್ಭದಲ್ಲಿ ನಿರ್ದೇಶಕತನವನ್ನು ಕಳೆದುಕೊಂಡರೆ, ಅಂತಹ ನಿರ್ದೇಶಕರು ಆ ಪ್ರಕರಣದಲ್ಲಿ ಕಕ್ಷಿದಾರರೆಂದು ಮುಂದುವರಿಯುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರ ಹೆಸರನ್ನು ತೆಗೆದುಹಾಕಬೇಕು ಮತ್ತು ಹೊಸದಾಗಿ ಕಕ್ಷಿದಾರರನ್ನು ಸೇರ್ಪಡೆ ಮಾಡಿಕೊಳ್ಳಬೇಕು. 1980(2) ಕೆಎಲ್‌ಜೆ 101/ಐಎಲ್‌ಆರ್ 1980(2) ಕೆಎಆರ್ ಎಸ್‌ಎನ್ 55.

137. ಒಂದು ದುರುಪಯೋಗ ಪ್ರಕರಣದಲ್ಲಿ ಒಬ್ಬ ನೌಕರ ದೇಶಾಂತರ ಹೋದರೆ, ಅವನ ಹೆಂಡತಿ, ಮಕ್ಕಳನ್ನು ಅವನ ಆಸ್ತಿಯಲ್ಲಿ ಭಾಗವಿದೆ ಎಂಬ ಕಾರಣಕ್ಕೆ ಕಕ್ಷಿದಾರರನ್ನಾಗಿ ಮಾಡಿದಾಗ, ಆ ಆಸ್ತಿ ದೇಶಾಂತರ ಹೋದ ವ್ಯಕ್ತಿಯ ಹೆಸರಿನಲ್ಲೇ ಇದ್ದರೆ, ಆ ಆಸ್ತಿಯ ಒಡೆತನ ಹೆಂಡತಿ, ಮಕ್ಕಳಿಗೆ ಸೇರುವುದಿಲ್ಲ. ಆದ್ದರಿಂದ ಅವರನ್ನು ಕಕ್ಷಿದಾರರನ್ನಾಗಿ ಮಾಡುವುದು ಸಮರ್ಪಕವಲ್ಲ. 1983(2) ಕೆಎಲ್‌ಜೆ 305.

## ಆದೇಶ ಮತ್ತು ತೀರ್ಪುಗಳನ್ನು ಜಾರಿ ಮಾಡುವ ವಿಧಾನ :

1. ಬಾಕಿದಾರನ ಚರಾಸ್ತಿಯನ್ನು ವಸೂಲಿ ಮಾಡುವಾಗ ಕೆಲವು ವಸ್ತುಗಳನ್ನು ಜಪ್ತಿ ಮಾಡಬಾರದೆಂದು ಸಿಪಿಸಿ ಕಲಂ 60ರನ್ವಯ ಸೂಚಿಸಿರುವುದು ದಿನನಿತ್ಯದ ಜೀವನ ಮಾಡಲು ಯಾವುದೇ ತೊಡಕಾಗದಿರಲೆಂಬ ಕಾರಣದಿಂದ. ಐಎಲ್‌ಆರ್ 1980(4) ಕೆಎಆರ್ 3410/1987(2) ಕೆಎಲ್‌ಜೆ ಎಸ್‌ಎನ್ 201.

2. ಆದೇಶವನ್ನು ಜಾರಿ ಮಾಡುವಲ್ಲಿ ಯಾವ ಸ್ಥಿರಾಸ್ತಿಯನ್ನು ಮೊದಲು ಜಪ್ತಿ ಮಾಡಬೇಕೋ ಅದನ್ನೇ ಮಾರಾಟ ಮಾಡಬೇಕು. ಮೊದಲು ಜಪ್ತಿ ಆದೇಶ ಹೊರಡಿಸಿ ಆನಂತರ ಮಾರಾಟ ಮಾಡಬೇಕು. ಎಐಆರ್ 1995 ಕೆಎಎನ್‌ಟಿ 35.

3. ಮಾರಾಟ ಮಾಡಿದಾಗ ಖರೀದಿದಾರರ ಶೇ.15ರಷ್ಟು ಮಾರಾಟದ ಹಣವನ್ನು ಮಾರಾಟವಾದ ಕೂಡಲೇ ಜಮಾ ಮಾಡುವುದು ಒಂದು ಬಾಧ್ಯತೆ. ಉಳಿಕೆ ಶೇ.85 ಹಣವನ್ನು 45 ದಿನದೊಳಗೆ ಪಾವತಿ ಮಾಡತಕ್ಕದ್ದು. ಈ ಅವಕಾಶವು ಕಾನೂನುಬದ್ಧವಾಗಿ ಎಲ್ಲರಿಗೂ ಅನ್ವಯವಾಗತಕ್ಕದ್ದು. 45 ದಿವಸದೊಳಗಾಗಿ ಹಣ ಪಾವತಿ ಮಾಡದಿದ್ದರೆ ಮಾರಾಟ ಅಸಿಂಧುವಾಗತಕ್ಕದ್ದು. ಮತ್ತು

ಖರೀದಿದಾರನು ಕಟ್ಟಿದ ಶೆ.15ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಹಾಗೂ ಮರು ಮಾರಾಟದ ಖರ್ಚನ್ನು ಮೂಲ ಖರೀದಿದಾರನೇ ಭರಿಸತಕ್ಕದ್ದು. ಮಾರಾಟವಾದ ಆಸ್ತಿಯನ್ನು 10 ತಿಂಗಳ ನಂತರ ಹಣ ಸ್ವೀಕರಿಸಿ ಮಾರಾಟ ಪ್ರಮಾಣ ಪತ್ರ ಕೊಟ್ಟಿರುವುದು ಕಾನೂನಿಗೆ ವಿರುದ್ಧ ಮತ್ತು ಆ ಮಾರಾಟವು ರದ್ದಾಗುತ್ತದೆ. 2009(1) ಕೆಎಲ್‌ಜೆ 493/ಎಐಆರ್ 2009 ಎನ್‌ಓಸಿ 115 (ಕೆಎಆರ್)

4. ನಿಯಮ 38(5)(ಎ) ಅನ್ವಯ ಅರ್ಜಿ ಸಲ್ಲಿಸಿದಾಗ ಆ ಅರ್ಜಿಯು ಹರಾಜಿನಲ್ಲಿ ಖರೀದಿ ಮಾಡಿದ ವ್ಯಕ್ತಿಯ ಹಿತಾಸಕ್ತಿಗೆ ಪೂರಕವಾಗಿ ವಿಚಾರಣೆ ಮಾಡಲಾಗಿದ್ದು, ಬಾಕಿದಾರನ ವಿಚಾರಣೆ ನಡೆಸಿಲ್ಲ. ಅದು ಕಾನೂನಿನಲ್ಲಿ ತಪ್ಪು ಮತ್ತು ಊರ್ಜಿತವಲ್ಲ. ವಿಚಾರಣೆ ಮಾಡುವಾಗ ಬಾಕಿದಾರನ ಹಿತಾಸಕ್ತಿಯನ್ನು ನೋಡಬೇಕೇ ಹೊರತು ಹರಾಜಿನಲ್ಲಿ ಖರೀದಿ ಮಾಡಿದ ವ್ಯಕ್ತಿಯ ಹಿತಾಸಕ್ತಿಯನ್ನಲ್ಲ. 2009(2) ಕೆಸಿಸಿಆರ್ ಎಸ್‌ಎನ್ 61/2009(4) ಕೆಎಲ್‌ಜೆ 419/ಎಐಆರ್ 2009 ಎನ್‌ಓಸಿ 1221 (ಕೆಎಆರ್)

5. ಮಾರಾಟವನ್ನು ಸ್ಥಿರೀಕರಿಸುವ ಪ್ರಾಧಿಕಾರ ನಡವಳಿಕೆಗಳಲ್ಲಿ ನ್ಯೂನತೆಗಳಿವೆ ಎಂಬ ಕಾರಣಕ್ಕೆ ಮಾರಾಟವನ್ನು ರದ್ದುಪಡಿಸುವ ಅಧಿಕಾರವನ್ನೂ ಹೊಂದಿರುತ್ತಾನೆ. 2003(3) ಕೆಸಿಸಿಆರ್ ಎಸ್‌ಎನ್ 173.

6. ಮಾರಾಟ ಪ್ರಕ್ರಿಯೆಯನ್ನು, ನಿಯಮಗಳನ್ನು ಪಾಲಿಸದೆ ಮೋಸ ಮಾಡುವ ಉದ್ದೇಶದಿಂದ ನಡೆದಿದ್ದರೆ ಅಂತಹ ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡಬಹುದು. 2002(1) ಕೆಸಿಸಿಆರ್ 75

7. ಯಾವುದೇ ಆಸ್ತಿಯನ್ನು ಮಾರಾಟ ಮಾಡುವಾಗ ಆ ಆಸ್ತಿಯ ಬೆಲೆಯನ್ನು ಮಾರಾಟದ ನೋಟೀಸಿನಲ್ಲಿ ನಿಗಧಿಪಡಿಸಬೇಕೆಂದು ನಿಯಮವಿಲ್ಲ. ಆದರೆ ಮಾರಾಟ ಮಾಡುವ ಸಂದರ್ಭದಲ್ಲಿ ಆ ಆಸ್ತಿಯ ಬೆಲೆಯು ಮಾರುಕಟ್ಟೆ ದರಕ್ಕೆ ಪೂರಕವಾಗಿರುವಂತೆ ನೋಡಿಕೊಳ್ಳತಕ್ಕದ್ದು. 1989(1) ಕೆಎಲ್‌ಜೆ 134.

8. ವಸೂಲಾಧಿಕಾರಿಯು ಒಂದು ಮಾರಾಟವಾದ ಆಸ್ತಿಯನ್ನು ಮರುಹರಾಜಿಗೆ ಇಡಬೇಕೆಂದು ಮಾರಾಟವನ್ನು ರದ್ದುಗೊಳಿಸಿದಾಗ ಹಾಗೂ ಆ ಮರುಮಾರಾಟವನ್ನು ಖರೀದಿದಾರ ಹಣ ಕಟ್ಟಿಲ್ಲವೆಂಬ ಕಾರಣಕ್ಕೆ ರದ್ದುಗೊಳಿಸಿದ್ದರೆ ಅದು ಸ್ಟಾಂಪ್ ಪೇಪರ್‌ಗೆ ಮಾತ್ರ ಅನ್ವಯವಾಗತಕ್ಕದ್ದು. ಐಎಲ್‌ಆರ್ 1987(1) ಕೆಎಆರ್ 35/1986(1) ಕೆಎಲ್‌ಜೆ 316.

9. ಮಾರಾಟಾಧಿಕಾರಿಯು ಜಪ್ತಿ ಮತ್ತು ಮಾರಾಟ ರದ್ದುಮಾಡಿದ ನಂತರ ಡಿಕ್ರಿ ಹೊಂದಿದಾತನೇ ಆ ಆಸ್ತಿಯನ್ನು ಖರೀದಿ ಮಾಡಿದಾಗ ಬಾಕಿದಾರನಿಗೂ ಮತ್ತು ಆದೇಶ ಪಡೆದ ವ್ಯಕ್ತಿಯ ಲೆಕ್ಕಪತ್ರಗಳಲ್ಲಿ ಹೊಂದಾಣಿಕೆ ಮಾಡಿಕೊಂಡರೆ ಮಾತ್ರ ಸಾಲದು. ಮಾರಾಟಧಿಕಾರಿಯ ಮುಂದಿನ ಕರ್ತವ್ಯ. ಆ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ವಾಪಸ್ ಮಾಡುವುದು ಮತ್ತು ಎನ್‌ಕಂಬರೆನ್ಸ್ ತೆಗೆದುಹಾಕುವುದು. ಅಂದರೆ ಆಸ್ತಿ ಖರೀದಿ ಪತ್ರವನ್ನು ವರ್ಗಾಯಿಸುವುದು. 2000(3) ಕೆಸಿಸಿಆರ್ 2039/ಐಎಲ್‌ಆರ್ 2000(3) ಕೆಎಆರ್ 3132/2000(5)

ಕೆಎಲ್‌ಜೆ 115.

10. ಒಬ್ಬ ವ್ಯಕ್ತಿಯು ಆಸ್ತಿಯನ್ನು ವಸೂಲಾತಿಗಾಗಿ ಜಪ್ತಿ ಮಾಡಿದಾಗ, ಅಂತಹ ಆಸ್ತಿಯ ಮಾರಾಟವನ್ನು ರದ್ದುಪಡಿಸಬೇಕಾದರೆ, ಅಂತಹ ಪ್ರಸಂಗದಲ್ಲಿ ಮಾರಾಟದ ಶೇ 5ರಷ್ಟು ಹಣ ಮತ್ತು ಬಾಕಿಯಿರುವ ಎಲ್ಲ ಹಣವನ್ನೂ ತುಂಬಿದ ನಂತರವೇ ಮಾರಾಟ ರದ್ದುಪಡಿಸಲು ವಿನಂತಿಸಬೇಕು. ಈ ಕ್ರಮ ಜರುಗಿಸದೇ ಇದ್ದರೆ ಮೇಲ್ಮನವಿ ರೂಪದಲ್ಲಿ ಮಾರಾಟವನ್ನು ರದ್ದುಪಡಿಸುವಂತೆ ಅರ್ಜಿ ಸ್ವೀಕರಿಸತಕ್ಕದ್ದಲ್ಲ. 2000(4) ಕೆಸಿಸಿಆರ್ 2943

11. ಒಂದು ರಿಟ್ ಅರ್ಜಿಯನ್ನು ಖರೀದಿದಾರನ ಹೆಸರಿಗೆ ಆದ ಮಾರಾಟವನ್ನು ದೃಢೀಕರಿಸದಂತೆ, ವಿಚಾರಣೆಯಲ್ಲಿದ್ದಾಗ ಏಕಸದಸ್ಯ ಪೀಠ ಒಬ್ಬ ಆಯುಕ್ತರನ್ನು ನೇಮಿಸಿ ಮಾರುಕಟ್ಟೆ ದರವನ್ನು ನಿಗಧಿಪಡಿಸುವಂತೆ ಆದೇಶಿಸಿದ್ದರೆ, ಅಂತಹ ಆದೇಶ ಸಿಂಧುವಲ್ಲ. 1999(2) ಕೆಸಿಸಿಆರ್ 1425 (ಡಿಬಿ)

12. ಹರಾಜಿನಲ್ಲಿ ಖರೀದಿ ಮಾಡಿದ ವ್ಯಕ್ತಿ ಅವನ ಹೆಸರಿಗೆ ಮಾರಾಟವನ್ನು ದೃಢೀಕರಿಸುವ ಅಧಿಕಾರವನ್ನು ಹೊಂದಿರುತ್ತಾನೆ. ಯಾವುದೇ ಕಾರಣಕ್ಕೆ ಆ ಮಾರಾಟವನ್ನು ರದ್ದುಗೊಳಿಸಬೇಕಾದರೆ ಅಂತಹ ಸಂದರ್ಭದಲ್ಲಿ ಆ ಖರೀದಿದಾರನಿಗೆ ಸೊಲೇಷಿಯಂ ಹಣ ಪಡೆಯಲು ಅರ್ಹ. ಮಾರಾಟಾಧಿಕಾರಿಯು ನಿಯಮಗಳನ್ವಯ ಮಾರಾಟವನ್ನು ದೃಢೀಕರಿಸಿದಾಗ, ಆ ದೃಢೀಕರಣವು ಪೂರ್ಣ ಹಕ್ಕನ್ನು ಕೊಡುವುದಿಲ್ಲ. ಅದು ಮೇಲ್ಮನವಿ ಮತ್ತು ಪುನರ್ ವಿಮರ್ಶಾ ಅರ್ಜಿಗೆ ಒಳಪಟ್ಟು ಎಂದಿರತಕ್ಕದ್ದು. 1989(1) ಬಿಎಲ್‌ಜೆ 30/1989(1) ಕೆಎಲ್‌ಜೆ 126.

13. ಯಾವ ಆಸ್ತಿಯನ್ನು ಮಾರಾಟಕ್ಕೆ ಇಟ್ಟಾಗ ಖರೀದಿದಾರನಿಲ್ಲವೆಂದು ಮಾರಾಟ ಮಾಡಲಾಗದೇ ಇದ್ದಾಗ, ನಿಯಮ 38(ಎ) ನೀತಿಯನ್ನು ಅನ್ವಯಿಸಬೇಕು. ಅಂದರೆ ಸಂಘವು ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸಿ ಖರೀದಿ ಮಾಡತಕ್ಕದ್ದಲ್ಲ. ಐಎಲ್‌ಆರ್ 1981(2) ಕೆಎಆರ್ 1477/ ಎಐಆರ್ 1982 ಕೆಎಎನ್‌ಟಿ 89.

14. ಒಂದು ಮಾರಾಟವನ್ನು ಸ್ಥಿರೀಕರಿಸಿದಾಗ, ಆ ಸ್ಥಿರೀಕರಣವು ಮೇಲ್ಮನವಿ ಮತ್ತು ಪುನರ್ ವಿಮರ್ಶಾ ಅರ್ಜಿಗೆ ತೀರ್ಮಾನಕ್ಕೆ ಒಳಪಟ್ಟಿರತಕ್ಕದ್ದು. ಸ್ಥಿರೀಕರಣ ಹಕ್ಕನ್ನು ವರ್ಗಾಯಿಸುವುದಲ್ಲ. ಖರೀದಿದಾರ ಸೊಲೇಷಿಯಂ ಹಣದ ಜೊತೆ, ಅವನು ಕಟ್ಟಿದ ಹಣವನ್ನು ವಾಪಸ್ ಪಡೆಯಲು ಮಾತ್ರ ಅರ್ಹ. 1989(1) ಕೆಎಲ್‌ಜೆ 126.

15. ಯಾವುದೇ ಒಂದು ಸಹಕಾರ ಸಂಘ, ಮಾರಾಟದ ಸಮಯದಲ್ಲಿ ಆಸ್ತಿಯನ್ನು ಖರೀದಿ ಮಾಡಿದಾಗ ಅಂತಹ ಆಸ್ತಿಯನ್ನು ಸಾಲಗಾರನಿಗೆ ಹಣವನ್ನು ವಸೂಲಿ ಮಾಡಿಕೊಂಡು ವಾಪಸ್ ಕೊಡಬೇಕು. 1990(2) ಕೆಎಲ್‌ಜೆ 173.

16. ಸದಸ್ಯನಲ್ಲದ ವ್ಯಕ್ತಿ ಒಂದು ಆಸ್ತಿಯನ್ನು ಜಪ್ತಿ ಮಾಡಿ ಮಾರಾಟ ಮಾಡಿದಾಗ, ಅದನ್ನು ಪುನಃ ನಿಯಮ 41ರನ್ವಯ ವಿಚಾರಣೆ ಮಾಡಲರ್ಹವಲ್ಲ. 1970(2) ಎಂಎಲ್‌ಜೆ 344 (ಡಿಬಿ)

17. ನಿಯಮ 41ರನ್ವಯ ತಕರಾರು ಎತ್ತಿದಾಗ ಅದನ್ನು ವಿಚಾರಣೆ ಮಾಡಿ ಆದೇಶಿಸುವುದು

ಮಾರಾಟಾಧಿಕಾರಿಯ ಜವಾಬ್ದಾರಿ. ಇದು ಒಂದು ಕಾನೂನುಬದ್ಧ ನಿರ್ದೇಶನ. ಮಾರಾಟಾಧಿಕಾರಿಯು ಇಂತಹ ವಿಚಾರಣೆಯನ್ನು ತಿರಸ್ಕರಿಸಿದಗ ಅಂತಹ ಪ್ರಸಂಗದಲ್ಲಿ ನಿಯಮ 41(3)ರನ್ವಯ ಪರಿಹಾರ ಕೇಳಬಹುದು. ಎಲ್ಲಿ ಸ್ಪಷ್ಟವಾಗಿ ಪರಿಹಾರ ಕೇಳುವ ಪ್ರಾಧಿಕಾರ ನಿಗಧಿಪಡಿಸಲಾಗಿದೆಯೋ, ಅಂತಹ ಪ್ರಸಂಗದಲ್ಲಿ ಸಂವಿಧಾನದ ಪರಿಚ್ಛೇದ 226 ಮತ್ತು 227ರಲ್ಲಿ ಪರಿಹಾರ ಕೊಡಲಾಗುವುದಿಲ್ಲ. ಆಸ್ತಿಯಲ್ಲಿ ಹಿತಾಸಕ್ತಿ ಹೊಂದಿದ ವ್ಯಕ್ತಿಯು ಅರ್ಜಿ ತಲುಪದಿದ್ದರೂ ಸಹ ಮಾರಾಟವನ್ನು ರದ್ದುಪಡಿಸುವ ವಿವೇಚನೆ ವಸೂಲಾಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಕ್ಕೆ ಅಧಿಕಾರ ಇರುತ್ತದೆ. 1974(1) ಕೆಎಲ್‌ಜೆ ಎಸ್‌ಎನ್ 63.

18. ಮಾರಾಟ ಮಾಡುವ ಅಥವಾ ದೃಢೀಕರಿಸುವ ಅಥವಾ ಮಾರಾಟವನ್ನು ರದ್ದುಪಡಿಸುವ ನಿಬಂಧನೆಗಳು ಸಿಪಿಸಿ ಕಲಂ 21 ಮತ್ತು ನಿಯಮ 92ರ ಅನುಸಾರವಾಗಿರಬೇಕು. ಖರೀದಿದಾರನು ಮಾರಾಟವನ್ನು ರದ್ದುಪಡಿಸುವ ಕ್ರಮದಲ್ಲಿ ಅವಶ್ಯಕ ಪಕ್ಷಗಾರನಾಗಿರುತ್ತಾನೆ. 1986(2) ಕೆಎಲ್‌ಜೆ 479.

19. ಮಾರಾಟವನ್ನು ರದ್ದುಪಡಿಸಲು ಅರ್ಜಿ ಸಲ್ಲಿಸಿದಾಗ ಅರ್ಜಿದಾರನಿಗೆ ಆಧಾರಗಳನ್ನು ಹಾಜರುಪಡಿಸಲು ಅನುಮತಿ ಕೊಡುವುದು ಕರ್ತವ್ಯ. ಸಂಬಂಧಪಟ್ಟವರಿಗೆ ನೋಟೀಸ್ ಜಾರಿ ಮಾಡಿ ವಿಚಾರಣೆ ಮಾಡಬೇಕು. ಅಂದರೆ ಖರೀದಿದಾರನಿಗೆ ಮತ್ತು ಸಹಕಾರ ಸಂಘಕ್ಕೆ ನೋಟೀಸ್ ಜಾರಿ ಮಾಡಬೇಕು. ಅರ್ಜಿಯನ್ನು ಸಮರ್ಪಕವಾಗಿ ವಿಚಾರಣೆ ಮಾಡದೇ, ದೃಢೀಕರಣ ಮಾಡಿದ ವಸೂಲಾಧಿಕಾರಿಯ ಆದೇಶವನ್ನು 106(1)ರಡಿ ಮೇಲ್ಮನವಿ ಇರುವುದಿಲ್ಲ. 1967(2) ಎಂಎಲ್‌ಜೆ 437 (ಡಿಬಿ)

20. ಮಾರಾಟದ ದಿನಾಂಕಕ್ಕೆ ಮುನ್ನ ತಕರಾರುಗಳು ಬಂದರೆ ಮಾರಾಟವನ್ನು ಮುಂದೂಡುವ ಬೇಡಿಕೆಯ ಕುರಿತು ತನಿಖೆ ಮಾಡತಕ್ಕದ್ದು. ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ವಿಧಾನಗಳಲ್ಲಿ ಪರಿಹಾರ ನೀಡತಕ್ಕದ್ದು. ಅರ್ಜಿದಾರನ ಬೇಡಿಕೆಯನ್ನು ಉಚ್ಛ ನ್ಯಾಯಾಲಯ ತನಿಖೆ ಮಾಡಲಾಗದು. ಏಕೆಂದರೆ ಅದಕ್ಕೆ ಪೂರಕವಾಗಿ ದಾವಾ ದಾಖಲು ಮಾಡಲು ಅಧಿಕಾರವಿರುತ್ತದೆ. ಐಎಲ್‌ಆರ್ 1990(2) ಕೆಎಆರ್ 1660/1989(2) ಕೆಎಲ್‌ಜೆ 534

21. ಸಿವಿಲ್ ನ್ಯಾಯಾಲಯದ ಕಾರ್ಯವ್ಯಾಪ್ತಿಯನ್ನು ಸದಸ್ಯನಲ್ಲದವನಿಗೆ ಅನ್ವಯಿಸತಕ್ಕದ್ದು. ಸದಸ್ಯನಲ್ಲದವನ ಬೇಡಿಕೆಯನ್ನು, ಆದೇಶವನ್ನು ಜಾರಿ ಮಾಡಿ ಜಪ್ತಿ ಮತ್ತು ಮಾರಾಟ ಮಾಡುವಾಗ ನಿಯಮ 41ರಡಿಯಲ್ಲಿ ಪರಿಶೀಲನೆ ಮಾಡಿ ಪರಿಹಾರ ಕೊಡತಕ್ಕದ್ದಲ್ಲ. 1970(2) ಎಂಎಲ್‌ಜೆ 344.

## ಕಲಂ 101ಕ್ಕೆ ಸಂಬಂಧಪಟ್ಟ ತೀರ್ಪುಗಳು :

22. ಒಬ್ಬ ಸಾಲಗಾರನ ಮೇಲೆ ವಸೂಲಾತಿ ಆದೇಶವನ್ನು ಪಡೆದ ನಂತರ, ಅದನ್ನು ಪ್ರಶ್ನಿಸದೇ ಇದ್ದ ಸಂದರ್ಭದಲ್ಲಿ ಅಂತಹ ಸಾಲಗಾರನು ತಾನು ವಾಸಿಸುತ್ತಿದ್ದ ಮನೆ ಅಥವಾ ಜೀವನಕ್ಕೆ ಬೇಕಾದ ಕೆಲಸ ನಿರ್ವಹಣೆ ಮಾಡುವಾಗ, ಅಂತಹ ಆಸ್ತಿಯನ್ನು ಜಪ್ತಿ ಮಾಡಿ ಮಾರಾಟ ಮಾಡುವುದು ಕೊನೆಯ ಅಸ್ತ್ರವಾಗಬೇಕು. ಅವನ ಜೀವನಕ್ಕೆ ತೊಡಕುಂಟಾಗದಂತೆ ವಸೂಲಿ ಮಾಡಬೇಕು. ವಾಸದ ಮನೆ ಜಪ್ತಿ ಮಾಡುವಾಗ, ಅದು ಕೊನೆಯ ಪ್ರಯತ್ನವೆಂದು ಮಾಡಬೇಕು. ಮೊದಲನೆಯ ಪ್ರಯತ್ನವಾಗಿ ಅಲ್ಲ. 2009(1) ಕೆಎಲ್‌ಜೆ 493/ಎಐಆರ್ 2009 (ಎನ್‌ಒಸಿ) 115 (ಕೆಎಆರ್)

23. ಒಬ್ಬ ಖರೀದಿದಾರ ಮಾರಾಟವಾದ ದಿನದಂದು ಶೇ.15ರಷ್ಟು ಹಣವನ್ನು ಮಾರಾಟವಾದಾಗಲೇ ಪಾವತಿಸಬೇಕು. ಉಳಿಕೆ ಹಣವನ್ನು 45 ದಿನದೊಳಗಾಗಿ ಬಾಕಿ ಹಣವನ್ನು ಪಾವತಿ ಮಾಡುವುದಿಲ್ಲವೋ, ಅಂತಹ ಸಂದರ್ಭದಲ್ಲಿ ಮಾರಾಟವನ್ನು ರದ್ದುಗೊಳಿಸಬೇಕು. ಮಾರಾಟ ದಿನದಂದು ತುಂಬಿದ ಶೇ.15ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಅಂತಹ ಖರೀದಿದಾರ ಮರು ಹರಾಜು ಹಾಕಿದಾಗ ಆಗುವ ಖರ್ಚಿಗೆ ಮತ್ತು ನಷ್ಟಕ್ಕೆ ಜವಾಬ್ದಾರನಾಗತಕ್ಕದ್ದು. ಖರೀದಿದಾರನಿಗೆ ಮಾರಾಟವಾದ ದಿನಾಂಕದಿಂದ 10 ತಿಂಗಳ ನಂತರ ಉಳಿಕೆ ಹಣವನ್ನು ವಸೂಲಿ ಮಾಡಿಕೊಂಡು, ಮಾರಾಟ ಪ್ರಮಾಣ ಪತ್ರವನ್ನು ಕೊಟ್ಟಿರುವುದು ಕಾನೂನುಬಾಹಿರ. ಅದನ್ನು ಕಿತ್ತುಹಾಕಬೇಕು. 2009(1)ಕೆಎಲ್‌ಜೆ 493/ಎಐಆರ್ 2009 ಎನ್‌ಒಸಿ 115 (ಕೆಎಆರ್)

24. ಸಾಲಗಾರನು ಪ್ರಕರಣ ವಿಚಾರಣೆ ಮಾಡುವ ಸಂದರ್ಭದಲ್ಲಿ ಅಥವಾ ಮೇಲ್ಮನವಿ ಸಲ್ಲಿಸಿದ್ದಾಗ, ತಾನು ಪಾವತಿಸಿದ್ದೇನೆಂದು ದಾಖಲೆಗಳನ್ನು ಸಲ್ಲಿಸಿದರೆ, ಅಂತಹ ದಾಖಲೆಗಳನ್ನು ಪರಿಶೀಲಿಸಿ ಆದೇಶ ಮಾಡುವುದು ನಿಬಂಧಕರ ಜವಾಬ್ದಾರಿ. ಐಎಲ್‌ಆರ್ 2006(1) ಕೆಎಆರ್ 120 (ಡಿಬಿ)

25. ಕಲಂ 101ರಲ್ಲಿ ವಸೂಲಾತಿ ವಿಧಾನಗಳನ್ನು ನಿಗಧಿಪಡಿಸಿದ್ದು, ಅದನ್ನು ಸಂಘದ ತೀರ್ಮಾನಕ್ಕೆ ಬಿಡಲಾಗಿದೆ. ವಸೂಲಾತಿ ಮಾಡುವಾಗ ಯಾವ ವಿಧಾನಗಳನ್ನು ಅನುಸರಿಸಬೇಕೆಂದು ನಿರ್ಧರಿಸುವುದು ಅರ್ಜಿದಾರ ಸಂಘ. ಸದಸ್ಯನಿಗೆ ಅನುಕೂಲವಾಗಿದೆ ಎಂಬ ಕಾರಣಕ್ಕೆ ಮತ್ತೊಬ್ಬ ಸದಸ್ಯನಲ್ಲದ ವ್ಯಕ್ತಿ ಸಂಘದ ಮೇಲೆ ಆರೋಪ ಹೊರಿಸತಕ್ಕದ್ದಲ್ಲ. ಮತ್ತು ಇದು ಸಂವಿಧಾನದ ಪರಿಚ್ಛೇದ 14ಕ್ಕೆ ವಿರುದ್ಧವಲ್ಲ. ಐಎಲ್‌ಆರ್ 1986(4) ಕೆಎಆರ್ 1477/ಎಂಐಆರ್ 1982 ಕೆಎಎನ್‌ಟಿ 89/1981(1) ಕೆಎಲ್‌ಜೆ 470.

26. ಒಂದು ಸಹಕಾರ ಸಂಘ ಹರಾಜಿಗಿಟ್ಟ ಆಸ್ತಿಯನ್ನು ಹರಾಜಿನಲ್ಲಿ ಖರೀದಿ ಮಾಡುವುದು ತಪ್ಪು. ಐಎಲ್‌ಆರ್ 1981(2) ಕೆಎಆರ್ 1477/ಎಐಆರ್ 1982 ಕೆಎಎನ್‌ಟಿ 89/1981(1) ಕೆಎಲ್‌ಜೆ 470.

27. ಮಾರಾಟ ಮಾಡುವ ಸಂದರ್ಭದಲ್ಲಿ ತಕರಾರುಗಳನ್ನು ಎತ್ತಿದಾಗ, ಅಂತಹ ತಕರಾರುಗಳನ್ನು ಪರಿಶೀಲಿಸಿ ಆದೇಶಿಸುವುದು ಜಾರಿ ಮಾಡುವ ಪ್ರಾಧಿಕಾರ. ಅದನ್ನು ಸಂವಿಧಾನದ ಪರಿಚ್ಛೇದ 226ರಲ್ಲಿ ಉಚ್ಛ ನ್ಯಾಯಾಲಯ ಮಧ್ಯಪ್ರವೇಶಿಸತಕ್ಕದ್ದಲ್ಲ. 1989(1) ಕೆಎಲ್‌ಜೆ 278/ಎಐಆರ್ 1989 ಎನ್‌ಒಸಿ 99.

28. ಕಾನೂನಿನಲ್ಲಿರುವ ಒಂದು ಕಲಂ ಅನ್ನು ತಪ್ಪಾಗಿ ನಮೂದಿಸಿದರೆ ಅಂದರೆ ಕಲಂ 101(1)(ಎ) ಬದಲಾಗಿ ಕಲಂ 101ಎ ಎಂದು ನಮೂದಿಸಿದ್ದರೆ ಅದನ್ನು ತಿರಸ್ಕರಿಸತಕ್ಕದ್ದಲ್ಲ. ನ್ಯಾಯಯುತವಾಗಿ ನ್ಯಾಯವನ್ನು ಸೋಲಿಸುವ ದೃಷ್ಟಿಯಿಂದ ಇದನ್ನು ತಿರಸ್ಕರಿಸತಕ್ಕದ್ದಲ್ಲ. 1990(3)ಕೆಎಲ್‌ಜೆ 244

29. ನಿಬಂಧಕರು ಹೊರಡಿಸಿದ ವಸೂಲಾತಿ ಆದೇಶದ ಮೇಲೆ ಕೊಟ್ಟ ಪ್ರಮಾಣ ಪತ್ರವು ಸಿವಿಲ್ ನ್ಯಾಯಾಲಯ ಕೊಟ್ಟ ಡಿಕ್ರಿಗೆ ಸಮಾನಾಂತರ. ನ್ಯಾಯಾಲಯವು ಅಂತಹ ವಸೂಲಾತಿ ಆದೇಶವನ್ನು ಸ್ವೀಕರಿಸುವುದಿಲ್ಲವೆಂದು ತೀರ್ಮಾನಿಸತಕ್ಕದ್ದಲ್ಲ. ಒಬ್ಬ ನೌಕರನನ್ನು ವಜಾಗೊಳಿಸಿದ್ದು, ಅವನನ್ನು ಪುನಃ ಸೇವೆಗೆ ತೆಗೆದುಕೊಳ್ಳಬೇಕೆಂಬ ಆದೇಶ ಹೊರಡಿಸಿದ್ದರೆ ಅದನ್ನು ಜಾರಿ ಮಾಡಬಹುದಾದ ಡಿಕ್ರಿಯೆಂದು ತೀರ್ಮಾನಿಸಿ ಜಾರಿ ಮಾಡತಕ್ಕದ್ದು. 1997(1) ಕೆಎಲ್‌ಜೆ 369.

30. ನಿಯಮ 38(2)(ಡಿ) ಅನ್ವಯ ಒಂದು ಸ್ಥಿರಾಸ್ತಿಯನ್ನು ಮಾರಾಟ ಮಾಡುವಾಗ, ಮಾರಾಟ ಪ್ರಕಟಣೆಯನ್ನು ಹೊರಡಿಸಬೇಕು. ಮತ್ತು ಅದನ್ನು ಪ್ರಚಾರ ಮಾಡಬೇಕು. ಮಾರಾಟಾಧಿಕಾರಿಯು ಮಾರಾಟದ ಆದೇಶವನ್ನು ನೋಟೀಸ್ ಬೋರ್ಡಿನಲ್ಲಿ, ವಸೂಲಾಧಿಕಾರಿಯ ನೋಟೀಸ್ ಬೋರ್ಡಿನಲ್ಲಿ ಅಥವಾ ತಾಲ್ಲೂಕು ಕಛೇರಿಯಲ್ಲಿ ಅಂಟಿಸದೇ ಮತ್ತು 2 ದಿವಸ ಸತತವಾಗಿ ಡಂಗುರ ಸಾರುವ ಮೂಲಕ ಜಾರಿ ಮಾಡುವುದಿಲ್ಲವೋ, ಅಂತಹ ಮಾರಾಟ ಪ್ರಕರಣ ಕಾನೂನನ್ನು ಮುರಿದಂತೆ. ಆದ್ದರಿಂದ ಅಂತಹ ಮಾರಾಟ ಸಿಂಧುವಲ್ಲ. ಇಂತಹ ಪ್ರಕರಣಗಳಲ್ಲಿ ರಿಟ್ ಅರ್ಜಿಯನ್ನು ಸ್ವೀಕರಿಸಬಾರದೆಂದು ಯಾವುದೇ ನಿರ್ಬಂಧ ಇರುವುದಿಲ್ಲ. ಐಎಲ್‌ಆರ್ 2006(3) ಕೆಎಆರ್ 3076 (ಡಿಬಿ)

## ಹಣದುರುಪಯೋಗ :

1. ಅಧ್ಯಕ್ಷ ಮತ್ತು ಕಾರ್ಯದರ್ಶಿಯವರ ಒಪ್ಪಂದ ಕಾನೂನುಬಾಹಿರವಲ್ಲ. ಅಧ್ಯಕ್ಷರು ತಮ್ಮ ಅಧೀಕೃತ ಹುದ್ದೆಯಲ್ಲಿ ಕಾನೂನುಬದ್ಧವಾಗಿ ಸಂಘದ ಪರವಾಗಿ ಹಣವನ್ನು ಸ್ವೀಕರಿಸುವುದು ಒಂದು ಜವಾಬ್ದಾರಿ. ಅಧ್ಯಕ್ಷರು ಒಪ್ಪಂದ ಮಾಡಿಕೊಂಡರೂ ಎಂಬ ಕಾರಣದಿಂದ ವ್ಯವಹಾರ ಕಾನುಬಾಹಿರವಾಗುವುದಿಲ್ಲ. ಎಐಆರ್ 1965 ಎಸ್‌ಸಿ 621

2. ಕಲಂ 69ರ ವಸೂಲಾತಿ ಕ್ರಮ ಸಾಲ/ಬಾಕಿ ಎಂದು ಗ್ರಹಿಸತಕ್ಕದ್ದಲ್ಲ. ಯಾವ ವ್ಯಕ್ತಿಯ ಮೇಲೆ 70ರ ವಸೂಲಾತಿ ಕ್ರಮ ಜರುಗಿಸಬಹುದಾಗಿದೆಯೋ ಅಂತಹ ವ್ಯಕ್ತಿಯ ಮೇಲೆ ಕಲಂ 69ರ ವಸೂಲಾಗಿ ಕ್ರಮ ಜರುಗಿಸಬಹುದಾಗಿದೆ. ಐಎಲ್‌ಆರ್ 1974 ಕೆಎಎನ್ 258:

3. ಯಾವ ಕಾನೂನಿನಲ್ಲಿಯೂ ಸಹಕಾರ ಸಂಘವು ವಸೂಲಾತಿ ಪ್ರಾಧಿಕಾರಗಳನ್ನು ಆದೇಶ ಪಡೆದ ನಂತರವೇ ಸಾಲಗಾರರ ಮೇಲೆ ಮತ್ತು ಜಾಮೀನುದಾರರ ಮೇಲೆ ಕ್ರಮ ಜರುಗಿಸಬೇಕೆಂದು ಮತ್ತು ಯಾವ ಸಮಿತಿಯ ಸದಸ್ಯರು ಉಪನಿಯಮಗಳ ವಿರುದ್ಧವಾಗಿ ಸಾಲ ಮಂಜೂರಿ ಮಡಿರುತ್ತಾರೆಯೋ ಅಂತಹ ವ್ಯಕ್ತಿ/ನಿರ್ದೇಶಕರು ಹಣದುರುಪಯೋಗ ಮಾಡಿಕೊಂಡಿದ್ದಾರೆಂದು ತೀರ್ಮಾನಕ್ಕೆ ಬರುವ ಪೂರ್ವದಲ್ಲಿಯೇ ಯಾರಿಂದ ಹಣ ಬರಬೇಕಾಗಿತ್ತೋ ಅವರಿಂದ ವಸೂಲಿ ಮಾಡತಕ್ಕದ್ದಲ್ಲವೆಂದು ತೀರ್ಮಾನಿಸತಕ್ಕದ್ದಲ್ಲ. ಐಎಲ್‌ಆರ್ 1979(1) ಕೆಎಎನ್ 739

4. ಯಾವ ಪ್ರಕರಣದಲ್ಲಿ ಒಂದು ಐತೀರ್ಪನ್ನು ಒಬ್ಬ ಮಗನು ದಾವಾ ದಾಖಲಿಸಿದ ನಂತರ ಸಾಲವೆಂದು ಐತೀರ್ಪು ಪಡೆಯುವ ಸಂದರ್ಭದಲ್ಲಿ, ಅವರ ತಂದೆ ಮಾಡಿದ ವ್ಯವಹಾರ ಅವ್ಯವಹಾರಿಕ ಎಂದು ಆರೋಪಿಸಿದರೆ, ಅಂತಹ ಸಂದರ್ಭದಲ್ಲಿ ವಿಚಾರಣೆ ಮಾಡುವಾಗ ನಿಬಂಧಕರು ಯಾವ ವ್ಯಕ್ತಿಯ ಮೇಲೆ ಕಾನೂನು ವಾರಸುದಾರರೆಂದು ತೀರ್ಮಾನ ತೆಗೆದುಕೊಳ್ಳುವಾಗ, ಅಂತಹ ಹಣದುರುಪಯೋಗ ಮಾಡಿಕೊಂಡ ವ್ಯಕ್ತಿ ತಾನು ದುರುಪಯೋಗಮಾಡಿಕೊಂಡ ಹಣವನ್ನು ಅವನು ಸತ್ತಾಗ ಬಿಟ್ಟುಹೋದ ಚರ ಮತ್ತು ಸ್ಥಿರ ಆಸ್ತಿಯನ್ನು ಮಗ ಅನುಭವಿಸುತ್ತಿದ್ದರೆ ಅಂತಹ ಪ್ರಸಂಗದಲ್ಲಿ ನಿಬಂಧಕರು ತನ್ನ ಕಾರ್ಯವ್ಯಾಪ್ತಿಯನ್ನು ಹೊಂದುತ್ತಾರೆ. 1983(1) ಕೆಎಲ್‌ಜೆ400–1988(2)ಕೆಎಲ್‌ಜೆ 381

5. ಹಣದುರುಪಯೋಗ ಪ್ರಸಂಗದಲ್ಲಿ ನಿಬಂಧಕರೇ ಸ್ವಯಂ ಸ್ಫೂರ್ತಿಯಿಂದ ಪ್ರಕರಣವನ್ನು ದಾಖಲಿಸಿಕೊಳ್ಳುವ ಪ್ರಸಂಗ ಬಂದಾಗ, ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಮಾಹಿತಿಯನ್ನು ಸಂಬಂಧಪಟ್ಟ ಸಂಘದಿಂದ ಪಡೆದು ಹಣದುರುಪಯೋಗ ಆಗಿದೆ ಮತ್ತು ಕೆಲಸ ನಿರ್ವಹಣೆಯಲ್ಲಿ ಚ್ಯುತಿಯಾಗಿದೆ ಎಂದು ಕಂಡುಬಂದಾಗ ಸಂಬಂಧಪಟ್ಟ ನೌಕರ/ಪದಾಧಿಕಾರಿಯ ಮೇಲೆ ಆರೋಪ ಪಟ್ಟಿ ತಯಾರಿಸಿ ಸಂಘಕ್ಕೆ ಉಂಟುಮಾಡಿದ ನಷ್ಟವನ್ನು, ಕರ್ತವ್ಯ ಚ್ಯುತಿಯಿಂದ ನಷ್ಟವುಂಟು ಮಾಡಿದ ವ್ಯಕ್ತಿಗಳಿಂದ ವಸೂಲಾತಿ ಮಾಡಿಕೊಳ್ಳಲು ಆದೇಶಿಸಬಹುದು. 1991(2) ಕೆಎಲ್‌ಜೆ23

**ಸಮಾಪನೆ :**

1. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಪೂರ್ವದಲ್ಲಿ ಆ ಸಂಘವು ಆರ್ಥಿಕವಾಗಿ ಸಬಲವಾಗಿ, ಸದಸ್ಯರ ಅನುಕೂಲಕ್ಕೆ ಮುಂದುವರಿಯಬೇಕೇ ಬೇಡವೇ ಎಂಬುದನ್ನು ತೀರ್ಮಾನಿಸುವಾಗ ಆ ಸಂಘದ ಕಾರ್ಯವ್ಯಾಪ್ತಿಯಲ್ಲಿ ಸದಸ್ಯರಿಗೆ ಅನುಕೂಲ ಕಲ್ಪಿಸಲು ಅಥವಾ ಮುಂದುವರಿಯಲು ಸಾಧ್ಯವೇ ಎಂದು ಪರಿಶೀಲಿಸಬೇಕು. ಆ ರೀತಿ ಮಾಡುವಾಗ ಆ ಸಂಘದ ಕಾರ್ಯವ್ಯಾಪ್ತಿಯಲ್ಲಿರುವ ಜಮೀನನ್ನು ಕೃಷಿಯೇತರ ಉದ್ದೇಶಗಳಿಗಾಗಿ ವರ್ಗಾವಣೆ ಮಾಡಿದ ನಂತರ, ವ್ಯವಸಾಯ ಮಾಡಲು ಯಾವುದೇ ಭೂಮಿ ಇಲ್ಲದೇ ಇದ್ದಾಗ, ಅಂತಹ ಸಂಘವನ್ನು ಕೃಷಿ ಪತ್ತಿನ ಸಹಕಾರ ಸಂಘವೆಂದು ಮುಂದುವರೆಸಲು ಅವಶ್ಯಕತೆ ಇಲ್ಲವೆಂಬ ವರದಿ ಆಧಾರದ ಮೇಲೆ ಸಮಾಪನೆಗೊಳಿಸಿರುವುದು ಸಮರ್ಪಕವಾಗಿದ್ದು, ಇದು ಸ್ವಾಭಾವಿಕ ನೀತಿ ನಿಯಮಗಳಿಗೆ ವಿರುದ್ದವಾಗಿರುವುದಿಲ್ಲ. 2004(4) ಕೆಸಿಸಿಆರ್ ಎಸ್ಎನ್ 511/ಐಎಲ್ಆರ್ 2005(1) ಕೆಎಅರ್ 128

2. ಯಾವುದೇ ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಸಂದರ್ಭದಲ್ಲಿ ಆ ಸಂಘದ ಸದಸ್ಯರಿಗೆ ಮತ್ತು ಆಡಳಿತ ಮಂಡಳಿಗೆ ನೋಟೀಸ್ ಸಾರಿ ಮಾಡದೇ ಆದೇಶ ಮಾಡುವುದು ನ್ಯಾಯಾಂಗ ಸಂಬಂಧಪಟ್ಟ ನೀತಿಯಲ್ಲ. ವಿಚಾರಣೆ ಮತ್ತು ಪರಿವೀಕ್ಷಣೆ ಮಾಡಲಾಗಿದೆ ಎಂಬ ಆಧಾರದ ಮೇಲೆ ಆ ವರದಿಯಲ್ಲಿ ಕಾಣಸಿರುವ ಅಂಶವನ್ನು ಸದಸ್ಯರಿಗೆ ತಿಳಿಸದೇ ಸಮಾಪನೆಮಾಡಿರುವುದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗಿದೆ. 1968 ಸಿಎಲ್ಜೆ ಎಪಿ 135.

3. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವಾಗ ಸಂಘದ ನೌಕರರನ್ನು ಕೇಳಿ ಸಮಾಪಾನಾ ಆದೇಶ ಹೊರಡಿಸಬೇಕೆಂಬ ನಿಯಮವಿಲ್ಲ. ಕಂಪನಿ ಕಾಯಿದೆ, ನೀತಿ, ನಿಯಮ ಸಹಕಾರ ಸಂಘಗಳಿಗೆ ಅನ್ವಯಿಸುವುದಿಲ್ಲವೆಂದು ಕಾಯಿದೆ ಕಲಂ 128ರಲ್ಲಿ ಸ್ಪಷ್ಟವಾಗಿ ನಮೂದಿಸಿರುವುದರಿಂದ ಸಹಕಾರ ಸಂಘಗಳನ್ನು ಸಮಾಪನೆ ಮಾಡುವಾಗ ಆ ಸಂಘದ ನೌಕರರನ್ನು ಕೇಳುವ ಅವಶ್ಯಕತೆ ಇಲ್ಲ. ಐಎಲ್ಆರ್ 1987(2)ಕೆಎಆರ್ 1788/1987(2) ಕೆಎಲ್ಜೆ ಎಸ್ಎನ್ 340/1987(1) ಬಿಎಲ್ಜೆ 312

4. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಸಂದರ್ಭದಲ್ಲಿ ಆ ಸಹಕಾರ ಸಂಘಕ್ಕೆ ಸ್ವಾಭಾವಿಕ ನ್ಯಾಯದನ್ವಯ ನೋಟೀಸ್ ಕೊಡುವುದು ಅವಶ್ಯಕ. ವಿಚಾರಣೆ ಮಾಡುವ ಸಂದರ್ಭದಲ್ಲಿ ಅವಕಾಶ ಕೊಡಲಾಗಿದೆ ಎಂಬ ಆಧಾರದ ಮೇಲೆ ಸಹಕಾರ ಸಂಘವನ್ನು ಸಮಾಪನೆ ಮಾಡುವಾಗ ಅವಕಾಶ ಕೊಡುವ ಅವಶ್ಯಕತೆ ಇಲ್ಲವೆಂದು ತೀರ್ಮಾನಕ್ಕೆ ಬರತಕ್ಕದ್ದಲ್ಲ. ಯಾವ ಸಂದರ್ಭದಲ್ಲಿ ಅವಕಾಶವನ್ನು ಕೊಟ್ಟಿಲ್ಲವೋ ಮೇಲ್ಮನವಿಯಲ್ಲಿ ಆ ಅವಕಾಶ ಕಲ್ಪಿಸಲಾಗಿದೆ ಎಂಬ ಆಧಾರದ ಮೇಲೆ ಆ ತಪ್ಪನ್ನು ಸರಿಪಡಿಸಲಾಗದು. ಅವಕಾಶ ಕೊಡದೇ ಸಮಾಪನೆ ಮಾಡಿರುವುದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ. 1974(1) ಕೆಎಲ್ಜೆ 355.

5. ಸ್ವಾಭಾವಿಕ ನ್ಯಾಯದನ್ವಯ ಒಂದು ಸಹಕಾರ ಸಂಘವನ್ನು ಸ್ವ ಇಚ್ಛೆಯಿಂದ ನಿಬಂಧಕರು

ಸಮಾಪನೆ ಮಾಡಬೇಕೆಂದು ಕಲಂ 64, 65ರ ವರದಿಯನ್ನಾಧರಿಸಿ ತೀರ್ಮಾನ ತೆಗೆದುಕೊಳ್ಳಬಹುದು. ಇದು ಕಲಂ 72(1)ರನ್ವಯ ಅವಕಾಶಕ್ಕೆ ಪ್ರತ್ಯೇಕವಾಗಿರತಕ್ಕದ್ದು. ಒಂದು ಸಹಕಾರ ಸಂಘದ ವ್ಯವಹಾರ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ನಿಬಂಧಕರು ತೀರ್ಮಾನಕ್ಕೆ ಬಂದಾಗ ಮತ್ತು ಭಾರತೀಯ ರಿಜವ ಬ್ಯಾಂಕ್ ಈ ಬ್ಯಾಂಕಿನ ವ್ಯವಹಾರ ಸಮರ್ಪಕವಾಗಿಲ್ಲವೆಂದು ವರದಿ ಕೊಡುತ್ತಿರುವ ಸಂದರ್ಭದಲ್ಲಿ ಸ್ವಪ್ರೇರಣೆಯಿಂದ ಸಮಾಪನೆ ಕ್ರಮಜರುಗಿಸಿರುವುದು ಸೂಕ್ತ ಹಾಗೂ ಕ್ರಮಬದ್ದ. 1990(3)ಕೆಎಲ್‌ಜೆ 16

6. ಒಂದು ಸಹಕಾರ ಸಂಘದ ಆಡಳಿತ ಮಂಡಳಿ, ಮಹಾಸಭೆಯ ಒಪ್ಪಿಗೆ ಪಡೆಯದೇ, ಸಂಘದ ಆಸ್ತಿಯನ್ನು ಮಾರಾಟ ಮತ್ತು ಬಾಡಿಗೆ ಕೊಡುವುದು ಸಮರ್ಥ ಕೆಲಸವಲ್ಲ. ಅಂತಹ ಅಧಿಕಾರವನ್ನು ಕಾನೂನುಬದ್ದ ಅಧಿಕಾರ ಚಲಾವಣೆ ಎಂದು ತಿಳಿಯತಕ್ಕದ್ದು. ಐಎಲ್‌ಆರ್ 1990(2) ಕೆಎಆರ್ 1785/ಎಐಆರ್ 1991 ಕೆಎಎನ್‌ಟಿ ಎನ್‌ಒಸಿ 15ಎ/

7. ರಿಜಿಸ್ಟ್ರಾರ್ ಎಂಬ ಪದಕ್ಕೆ ಅಪರ ನಿಬಂಧಕರು ಸೇರಿರುತ್ತಾರೆ. ಕೈಗಾರಿಕಾ ಇಲಾಖೆಯ ಅಪರ ನಿಬಂಧಕರು ಸಮಾಪನಾ ಆದೇಶವನ್ನು ಹೊರಡಿಸಿದಾಗ ಆ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಲು ಆ ಅಪರ ನಿಬಂಧಕರನ್ನು ಕಲಂ 2ಎ(5)ರಲ್ಲಿ ನಿಬಂಧಕರಿಗೆ ಕೊಟ್ಟ ಅಧಿಕಾರವನ್ನು ಕಲಂ 72, 73, 75ರಲ್ಲಿ ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಮೇಲ್ಮನವಿಯನ್ನು ನಿಬಂಧಕರ ಮುಂದೆ ಸಲ್ಲಿಸಿದಾಗ ಆ ಪ್ರಕರಣ ವಿಚಾರಣಾರ್ಹ. 1994(4) ಕೆಎಲ್‌ಜೆ 627/1994(3) ಕೆಎಆರ್ 2703 ಡಿಬಿ.

## ಸಹಕಾರಿ ಕಾಯಿದೆಯಲ್ಲಿನ ಕೆಲವು ತೀರ್ಪುಗಳು :

1. ಚುನಾವಣಾಧಿಕಾರಿಯು ನಾಮಪತ್ರ ಸಲ್ಲಿಸುವ ದಿನಾಂಕದಂದೇ ನಾಮಪತ್ರವನ್ನು ವಾಪಸ್ ಪಡೆಯಬಹುದು. ಯಾವ ನಾಮಪತ್ರವನ್ನು ವಾಪಸ್ಯಾತಿ ಪಡೆಯಲಾಗಿದೆಯೋ ಆ ವಾಪಸ್ ಪಡೆಯುವಿಕೆ ವಾಪಸ್ ಪಡೆಯುವ ದಿನಾಂಕದಂದೇ ಪಡೆಯಬೇಕೆಂದಿಲ್ಲ. ಅಂತಹ ಪ್ರಸಂಗದಲ್ಲಿ ಚುನಾವಣಾಧಿಕಾರಿಯು ಅಂತಹ ನಾಮಪತ್ರ ಹಿಂಪಡೆದು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸತಕ್ಕದ್ದಲ್ಲ. 1975 ಕೆಎಲ್‌ಜೆ 66 ಎಸ್‌ಎನ್ 51.

2. ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಲ್ಲಿ ಪದಾಧಿಕಾರಿಗಳ ಆಯ್ಕೆಗೆ ಸ್ಪಷ್ಟವಾಗಿ ನೀತಿಯನ್ನು ರೂಪಿಸಿರುವುದರಿಂದ ಪ್ರತ್ಯೇಕವಾದ ಉಪವಿಧಿಗಳನ್ನು ರಚಿಸುವ ಅವಶ್ಯಕತೆ ಇಲ್ಲ. 1981 (1) ಕೆಎಲ್‌ಜೆ 88

3. ಚುನಾವಣಾಧಿಕಾರಿಯು ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಿದ ನಂತರ ಯಾವುದೇ ಕಾರಣಕ್ಕೂ ಚುನಾವಣೆಯನ್ನು ಮುಂದೂಡತಕ್ಕದ್ದಲ್ಲ. ಕೆಎಲ್‌ಜೆ 4114.

4. ನಾಮಪತ್ರ ಸಲ್ಲಿಸುವ ವ್ಯಕ್ತಿಯ ಹೆಸರಿನಲ್ಲಿ ವ್ಯತ್ಯಾಸವಿದ್ದರೆ ಅಂತಹ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ ಐಎಲ್‌ಆರ್ 1995 ಕೆಎಆರ್ 2187.

5. ಚುನಾವಣಾಧಿಕಾರಿಯು ಸಂಘದ ಕಾರ್ಯದರ್ಶಿಗೆ ನಾಮಪತ್ರ ಸ್ವೀಕರಿಸಲು ಅಧಿಕಾರ ಕೊಟ್ಟಿದ್ದರೂ

ಚುನಾವಣಾಧಿಕಾರಿಯೇ ನಾಮಪತ್ರವನ್ನು ಸ್ವೀಕರಿಸಲು ಯಾವುದೇ ಅಡೆತಡೆಗಳಿರತಕ್ಕದ್ದಲ್ಲ. ಐಎಲ್‌ಆರ್ 1985(4) ಕೆಎಆರ್ 3685.

6. ಒಬ್ಬ ನಿರ್ದೇಶಕನನ್ನು ಕಲಂ 29ಸಿ ಅನ್ವಯ ಅನರ್ಹನೆಂದು ಘೋಷಿಸಿದಾಗ ಅಂತಹ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹನಲ್ಲ. 1979(1) ಕೆಎಲ್‌ಜೆ 431.

7. ಚುನಾವಣಾ ಫಲಿತಾಂಶವನ್ನು ಪ್ರಕಟಿಸುವಾಗ ಯಾವ ಸ್ಥಾನದಿಂದ ಯಾವ ವಿಭಾಗದಿಂದ ಚುನಾವಣೆಗೆ ಸ್ಪರ್ಧಿಸಿದ್ದಾರೋ ಆ ಆಧಾರದ ಮೇಲೆಯೇ ಚುನಾವಣೆ ಫಲಿತಾಂಶ ಪ್ರಕಟಿಸತಕ್ಕದ್ದು. ಒಟ್ಟು ಮತ ಚಲಾವಣೆಯಾದ ಮತದಾನದ ಆಧಾರದ ಮೇಲೆ ಹೆಚ್ಚು ಮತಗಳಿಸಿದವನನ್ನು ಚುನಾಯಿತನಾದನೆಂದು ಪ್ರಕಟಿಸತಕ್ಕದ್ದಲ್ಲ. ಐಎಲ್‌ಆರ್ 2000 ಕೆಎಆರ್ 143.

8. ನಿರ್ದೇಶಕರು 3 ಸತತ ಆಡಳಿತ ಮಂಡಳಿ ಸಭೆಗೆ ಗೈರುಹಾಜರಾದಲ್ಲಿ ಅವರು ನಿರ್ದೇಶಕತನವನ್ನು ಕಳೆದುಕೊಳ್ಳುತ್ತಾರೆ. ಆದರೆ ಅಂತಹ ನಿರ್ದೇಶಕನು ಅನರ್ಹಗೊಳ್ಳುವುದಿಲ್ಲ. ತೊಡಕುಂಟಾದ ವ್ಯಕ್ತಿ ಕಾಯಿದೆ 70ರನ್ವಯ ಉಪ ನಿಬಂಧಕರ ಮುಂದೆ ಅರ್ಜಿ ಸಲ್ಲಿಸಿದಾಗ ಆ ತೀರ್ಮಾನ ಆದ ನಂತರವೇ ಅನರ್ಹಗೊಳ್ಳತಕ್ಕದ್ದು. 1985 ಕೆಎಲ್‌ಜೆ 326.

9. 9 ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಸಲಾಯಿತು. ಆ ಸಂದರ್ಭದಲ್ಲಿ 3 ಜನರನ್ನು ಹೊರತುಪಡಿಸಿ ಉಳಿದೆಲ್ಲಾ ಉಮೇದುವಾರರು ನಾಮಪತ್ರವನ್ನು ವಾಪಸ್ ಪಡೆದರು. ಅಂತಹ ಸಂದರ್ಭದಲ್ಲಿ ಮೂವರು ಮಾತ್ರ ಆಯ್ಕೆಯಾಗಿದ್ದಾರೆಂದು ಉಳಿದ 6 ಜನರ ಆಯ್ಕೆಗಾಗಿ ಹೊಸದಾಗಿ ಚುನಾವಣೆ ಮಾಡಿ ಆಯ್ಕೆ ಮಾಡತಕ್ಕದ್ದು. 1982(1) ಕೆಎಲ್‌ಜೆ ಎಸ್‌ಎನ್13 ಡಿಬಿ

10. ಒಂದು ಸಹಕಾರ ಸಂಘವು ಮತ್ತೊಂದು ಸಹಕಾರ ಸಂಘದ ಸದಸ್ಯರಾಗಿದ್ದರೆ ಅಂತಹ ಸಂಘಕ್ಕೆ ಪ್ರತಿನಿಧಿಯನ್ನು ಕಳುಹಿಸುವಾಗ ನಿರ್ದೇಶಕರಲ್ಲಿ ಒಬ್ಬರನ್ನು ಕಳುಹಿಸತಕ್ಕದ್ದು. ಆ ಪ್ರತಿನಿಧಿ ಮಾತ್ರ ಮತ್ತೊಂದು ಸಂಘದಲ್ಲಿ ಮತ ಚಲಾಯಿಸತಕ್ಕದ್ದು. ಐಎಲ್‌ಆರ್ 2000 ಕೆಎಆರ್ 1185.

11. ಕಲಂ 20ರನ್ವಯ ಸುಸ್ತಿದಾರನೆಂದು ಪರಿಗಣಿಸಬೇಕಾದರೆ ಸಾಲವನ್ನು ಪಡೆದ ದಿನಾಂಕವನ್ನು ಗಮನಿಸಬೇಕು. ಮತ್ತು ಅವನು ಕೊಟ್ಟ ಅರ್ಜಿಯ ದಿನಾಂಕ ಅಥವಾ ಮಂಜೂರಾದ ದಿನಾಂಕವನ್ನು ಪರಿಗಣಿಸತಕ್ಕದ್ದಲ್ಲ. ಐಎಲ್‌ಆರ್ 1986(3) ಕೆಎಆರ್ 2683.

12. ಪದಾಧಿಕಾರಿಗಳ ಆಯ್ಕೆಗೆ ಕೋರಂ ಅವಶ್ಯಕತೆ ಕಡ್ಡಾಯ. ಐಎಲ್‌ಆರ್ 2003(3) ಕೆಎಆರ್ 486 ಡಿಬಿ

13. ಪದಾಧಿಕಾರಿಗಳ ಅವಧಿ ಎರಡೂವರೆ ವರ್ಷ ಎಂದಿದ್ದಾಗ ವರ್ಷದ ಮಧ್ಯದಲ್ಲಿ ಚುನಾವಣೆ ನಡೆದಾಗ ವರ್ಷವನ್ನು ಮಾಚ 31ಕ್ಕೆ ಮುಕ್ತಾಯವಾಗತಕ್ಕದ್ದು. ಮತ್ತು ಮುಂದಿನ ವರ್ಷಕ್ಕೂ ಒಂದು ವರ್ಷವೆಂದು ತಿಳಿಯತಕ್ಕದ್ದು. 2001(3) ಕೆಎಲ್‌ಜೆ 663 ಡಿಬಿ

14. ಪ್ರತಿಯೊಂದು ಸಹಕಾರ ಸಂಘವು ನಿಯಮ 13ಎ ಅನ್ವಯ ಗುರುತಿನ ಪತ್ರ ಕೊಡಬೇಕೆಂದಿದ್ದರೂ ಆ ಗುರುತಿನ ಪತ್ರವನ್ನು ಪಡೆಯುವುದು ಸದಸ್ಯರ ಜವಾಬ್ದಾರಿ.

ಐಎಲ್ಆರ್ 2001 ಕೆಎಆರ್ 3837.

15. ಒಂದು ಸಹಕಾರ ಸಂಘದ ಪರವಾಗಿ ಕಮಿಷನ್ ಏಜೆಂಟ್ ಎಂದು ನೇಮಕ ಮಾಡಿದಾಗ ಅಂತಹ ವ್ಯಕ್ತಿ ಸಂಘದ ಪರವಾಗಿ ಠೇವಣಿ ಸಂಗ್ರಹಿಸುತ್ತಿದ್ದು, ಅಂತಹ ವ್ಯಕ್ತಿಯು ಸಂಘ ಮಾಡುತ್ತಿರುವ ವ್ಯವಹಾರವನ್ನೇ ಮಾಡುತ್ತಿರುವುದರಿಂದ ಅಂತಹ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಿ ನಿರ್ದೇಶಕನಾಗಲು ಅನರ್ಹ 1989(2) ಕೆಎಲ್‌ಜೆ 272

16. ಸಹಕಾರ ಸಂಘದ ಚುನಾವಣೆ ನಡೆಸಲು ನಿಬಂಧಕರು ಚುನಾವಣಾಧಿಕಾರಿಯನ್ನು ನೇಮಿಸುತ್ತಾರೆ. ಚುನವಣಾಧಿಕಾರಿಯು ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿಲ್ಲ. 1983(2) ಕೆಎಲ್‌ಜೆ 479

17. ನ್ಯಾಯಾಲಯವು ಚುನಾವಣೆ ಅಕ್ರಮವೆಂದು ತೀರ್ಮಾನಿಸಿ ತೀರ್ಪು ಕೊಟ್ಟಾಗ ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಒಬ್ಬ ಮಧ್ಯಸ್ಥದಾರರನ್ನು ಅಥವಾ ಚುನಾವಣಾಧಿಕಾರಿಯನ್ನು ಅಥವಾ ವಿಶೇಷಾಧಿಕಾರಿಯನ್ನು ಚುನಾವಣೆಯನ್ನು ನಡೆಸಲು ನೇಮಕ ಮಾಡತಕ್ಕದ್ದಲ್ಲ. 1998(2) ಡಿಎಲ್‌ಜೆ 85

18. ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುವುದು. ಚುನಾವಣಾಧಿಕರಿ ದಿನ, ವೇಳೆ, ಸ್ಥಳ ನಿಗದಿಪಡಿಸಿ ಆದೇಶ ಹೊರಡಿಸಿದಾಗ(ಐಎಲ್ಆರ್ 1969 ಎಪಿ 910)

19. ಚುನಾವಣೆ ನಡವಳಿಕೆಗಳಲ್ಲಿ–ಚುನಾವಣೆ ಘೋಷಣೆಯಲ್ಲಿ ತಪ್ಪುಗಳಿವೆ ಎಂಬ ಕಾರಣಕ್ಕೆ ಚುನಾವಣೆ ಮುಗಿಯುವ ಪೂರ್ವದಲಿ ಪ್ರಶ್ನಿಸುವಂತಿಲ್ಲ. (1966(2) ಎಪಿಎಲ್‌ಜೆ (65).

20. ಚುನಾವಣೆ ಮುಗಿಯುವ ತನಕ ಚುನಾವಣೆ ಬಗ್ಗೆ ದಾವಾ ದಾಖಲಿಸಲು ಬರುವುದಿಲ್ಲ. ಮತ್ತು ಅದು ಸಿಂಧುವಾಗಬಾರದು. (ಪ್ರೀಮೆಚ್ಯೂರ್ಡ್) 1985 ಸಿಟಿಜೆ 280.

21. ಎಲ್ಲಿ ಕಾನೂನಿನ ತಿದ್ದುಪಡಿ ಮುಖಾಂತರ ಆಡಳಿತ ಮಂಡಳಿ ಅವಧಿ ವಿಸ್ತರಿಸಲಾಗಿದೆಯೋ ಅಂತಹ ಸಂದರ್ಭದಲ್ಲಿ ವಿಸ್ತರಿಸಿದ ಅವಧಿಗೆ ಮುನ್ನಾ ಹೊಸ ಆಡಳಿತ ಮಂಡಳಿ ಚುನಾವಣೆ ಮಾಡತಕ್ಕದ್ದಲ್ಲ.(ಎಐಆರ್ 1990 ಎನ್‌ಒಸಿ 65(ಎಂ.ಪಿ)

22. ತಿದ್ದುಪಡಿ ಮುಖಾಂತರ ವಿಸ್ತರಿಸಿದ ಅವಧಿಯೊಳಗೆ ಹೊಸ ಆಡಳಿತ ಮಂಡಳಿ ಚುನಾವಣೆ ಮುಖಾಂತರ ರಚನೆ ಆಗುವುದಿಲ್ಲವೋ ಅಂಥಹ ಸಮಯದಲ್ಲಿ ಹಳೆಯ ಆಡಳಿತ ಮಂಡಳಿ ತನ್ನ ಸ್ಥಾನ ಖಾಲಿ ಮಾಡಿದೆ ಎಂದು ಭಾವಿಸತಕ್ಕದ್ದು. 1983 ಎಂಪಿಡಬ್ಲ್ಯೂಎನ್ 467.

23. ನಿಬಂಧಕರು ಚುನಾವಣೆ ಮುಕ್ತಾಯವಾಗುವ ತನಕ, ಫಲಿತಾಂಶ ಘೋಷಿಸುವ ತನಕ ಯಾವುದೇ ಮಧ್ಯಂತರ ಆದೇಶ ಹೊರಡಿಸುವ ಅಧಿಕಾರ ಹೊಂದಿಲ್ಲ. ಎಐಆರ್ 1986 ಎಂಪಿ 29–ಎಆರ್ 1985 ಎಂಪಿ 80–1985 ಎಂಪಿಎಲ್‌ಜೆ 140.

24. ನಾಮಪತ್ರ ತಿರಸ್ಕರಿಸಿದ ಪ್ರತಿಯೊಂದು ಪ್ರಸಂಗದಲ್ಲಿಯೂ ದಾವಾ ಪ್ರಕರಣವನ್ನು ದಾಖಲಿಸಬಹುದು. ಎಐಆರ್ 1977 ಎಸ್‌ಸಿ 1703–ಎಆರ್ 1975 ಎಸ್‌ಸಿ 2140–1989 ಎಂಪಿಎಲ್‌ಜೆ 208.

25. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ಯಾವುದೇ ಕಾರಣಕ್ಕೂ ಅದನ್ನು ತಡೆಯುವ ಅಥವಾ ನಿಲ್ಲಿಸತಕ್ಕದ್ದಲ್ಲ. ಈ ತತ್ವ ಲೋಕಲ್ ಬಾಡೀಸ್ ಮತ್ತು ಸಹಕಾರ ಸಂಘಗಳಿಗೂ ಅನ್ವಯವಾಗುತ್ತದೆ 1982(2) ಎಸ್‌ಸಿಸಿ 218.

26. ನ್ಯಾಯಾಲಯಗಳ ಮಧ್ಯಪ್ರವೇಶದಿಂದ ವಿಧಾನ ಮಂಡಳದ ಚುನಾವಣೆ ನಿಧಾನವಾಗುವುದಾಗಲಿ, ಮುಂದೂಡುವುದಾಗಲಿ, ಮಧ್ಯಂತರದಲಿ ಪ್ರವೇಶ ಮಾಡಬಾರದು. ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳಿಸುವ ತನಕ ಇದು ಲೋಕಲ್ ಬಾಡೀಸ್ ಮತ್ತು ಸಹಕರ ಸಂಘಗಳಿಗೂ ಅನ್ವಯವಾಗುತ್ತದೆ.–ಎಐಆರ್ 1952 ಎಸ್‌ಸಿ 64.

27. ಮತ ಚಲಾಯಿಸಿದ ಒಂದು ಸಹಕಾರ ಸಂಘದ ಪ್ರತಿನಿಧಿ ಆ ಸಂಘದ ಸದಸ್ಯನೇ? ಅಲ್ಲವೇ? ಎಂದು ಕಲಂ 70ರಡಿ ಪ್ರಶ್ನಿಸತಕ್ಕದ್ದು, ರಿಟ್ ಅರ್ಜಿ ಮೂಲಕ ಅಲ್ಲ. 1968(2) ಮೈಸೂರು ಎಲ್‌ಜೆ 393 ಡಿಬಿ.

28. ಸುಸ್ತಿದಾರರ ಪಟ್ಟಿಯಲ್ಲಿ ಒಬ್ಬ ವ್ಯಕ್ತಿಯ ಹೆಸರಿನ ಸೇರ್ಪಡೆ ಪ್ರಶ್ನಿಸಲು ದಾವಾ ಪ್ರಕರಣ ದಾಖಲಿಸಬೇಕು. ರಿಟ್ ಅರ್ಜಿ ಅಲ್ಲ. 1984(1) ಕೆಎಲ್‌ಜೆ ಎಸ್‌ಎನ್ 43.

29. ಎಲ್ಲಿ ನ್ಯಾಯಾಧಿಕರಣ(ಟ್ರಿಬ್ಯೂನಲ್) ಚುನಾವಣೆಯನ್ನು ಕಿತ್ತುಹಾಕುತ್ತದೆಯೋ ಅಂತಹ ಪ್ರಸಂಗದಲ್ಲಿ ಹೊಸ ಚುನಾವಣೆ ನಡೆಸಲು ಆದೇಶಿಸತಕ್ಕದ್ದು. 1988(2) ಬಿಎಲ್‌ಜೆ 85.

30. ಒಬ್ಬ ಸದಸ್ಯನು ಸದಸ್ಯತ್ವದಿಂದ ಕಿತ್ತು ಹಾಕಲ್ಪಟ್ಟಾಗ ಅಥವಾ ಅಧಿಕಾರವನ್ನು ಕಿತ್ತುಕೊಂಡಾಗ ಅದನ್ನು ಪ್ರಶ್ನಿಸಲು ನೇರ ಪ್ರಾಧಿಕಾರ ಇದೆ ಎಂಬ ಕಾರಣಕ್ಕಾಗಿ ರಿಟ್ ಅರ್ಜಿಗೆ ಅರ್ಹನಲ್ಲ ಎಂಬ ತೀರ್ಮಾನಕ್ಕೆ ಬರಲಾಗದು–ಐಎಲ್‌ಆರ್ 1969(2) ಮೈಸೂರು ಎಲ್‌ಜೆ 336 ಡಿಬಿ.

31. ಆಡಳಿತ ಮಂಡಳಿ ಪದಾಧಿಕಾರಿ ಚುನಾವಣೇಗೆ ಸಂಬಂಧಪಟ್ಟ ಪ್ರಕರಣಗಳನ್ನು ಕಲಂ 20ರ ಬಗ್ಗೆ ದಾವಾ ದಾಖಲಿಸತಕ್ಕದ್ದು. ಎಐಆರ್ 1985 ಎನ್‌ಓಸಿ 66.

32. ಮತದಾರ ಪಟ್ಟಿ ಅನ್ವಯ 14(ಎ) ತಯಾರಿಸಿಲ್ಲವಾದರೆ ಉಚ್ಚ ನ್ಯಾಯಾಲಯ ಆರ್ಟಿಕಲ್ 226ರಲ್ಲಿ ರಿಟ್ ಮುಖಾಂತರ ಮಧ್ಯಪ್ರವೇಶ ಮಾಡಬಹುದು. ಕಲಂ 70ರಲ್ಲಿ ಅವಕಾಶವಿದೆ ಎಂದು ಇದನ್ನು ತಳ್ಳಿಹಾಕುವಂತಿಲ್ಲ. 1988(2) ಬಿಎಲ್‌ಜೆ ಎಸ್‌ಎನ್ 48.

33. ಹಳೆಯ ಚುನಾವಣಾ ವೇಳಾಪಟ್ಟಿಯಂತೆ ಚುನಾವಣೆ ನಡೆದರೆ, ರಿಟ್ ಅರ್ಜಿ ಮುಖಾಂತರ ಅಂತಹ ಪ್ರಕರಣದಲ್ಲಿ ಚುನಾವಣಾ ತಕರಾರು ಅರ್ಜಿ ಸಲ್ಲಿಸಬಹುದು; ಎಂಬ ಕಾರಣಕ್ಕೆ ಉಚ್ಚ ನ್ಯಾಯಾಲಯ ಮಧ್ಯ ಪ್ರವೇಶ ಮಾಡಬಹುದು ಎಂದು ಬರುವುದಿಲ್ಲ. ಐಎಲ್‌ಆರ್ 1991 (ಸಿ) ಕೆಎಲ್‌ಎನ್ 577–1991(4) ಕೆಎಲ್‌ಜೆ 256(ಡಿಬಿ).

34. ಚುನಾವಣೆಗೆ ಸಂಬಂಧಪಟ್ಟ ತಕರಾರು ಅರ್ಜಿ ಚುನಾವಣೆ ಪ್ರಕ್ರಿಯೆ ಪ್ರಾರಂಭವಾದಾಗ ಕಲಂ 70ರಡಿ ಮಧ್ಯ ಪ್ರವೇಶಿಸತಕ್ಕದಲ್ಲ. ಸಾಮಾನ್ಯವಾಗಿ ದಾವಾ ಮುಖಾಂತರ ಇತ್ಯರ್ಥ ಮಾಡತಕ್ಕದ್ದು. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ಮಧ್ಯಪ್ರವೇಶ ಮಾಡತಕ್ಕದಲ್ಲ.

ಐಎಲ್ಆರ್ 1995 ಕೆಎಆರ್.

35. ಒಂದು ಸಹಕಾರ ಸಂಘದ ಪ್ರತಿನಿಧಿ ಚುನಾವಣೆಗೆ ಸಂಬಂಧಪಟ್ಟ ತಕರಾರು ಅರ್ಜಿ ಸಲ್ಲಿಸಲು ಅರ್ಹ. 1978 ಎಯೆಲ್ಎಲ್ಆರ್41)

36. ಸಮರ್ಪಕ ಮತದಾರರ ಪಟ್ಟಿ ಇಲ್ಲದೆ ಚುನಾವಣೆ ನಡೆದರೆ ಅದು ಸರಿಯಾದ ಚುನಾವಣೆ ಅಲ್ಲ. ಚುನಾವಣೆ ರದ್ದುಗೊಳಿಸಿ ಹೊಸ ಚುನಾವಣೆ ನಡೆಸತಕ್ಕದ್ದು–1978 ಪಿಎಲ್‌ಜೆ 344

37. ಚುನಾವಣೆಯನ್ನು ಕಾನೂನು ನಿಯಮಗಳನ್ವಯ ನಡೆಸದೆ ಇದ್ದರೆ ನಿಬಂಧಕರು ಅಂತಹ ಚುನಾವಣೆ ತಿರಸ್ಕರಿಸಿ ಆಡಳಿತಾಧಿಕಾರಿಯನ್ನು ನೇಮಿಸಬಹುದು. 1975 ಪಿಎಲ್‌ಜೆ 481

38. ಸಹಾಯಕ ನಿಬಂಧಕರು ದಾವಾ ಪ್ರಕರಣ ಇಲ್ಲದಿದ್ದರೂ ನಡೆದ ಚುನಾವಣೆಗೆ ಕಿತ್ತುಹಾಕಲು ಅರ್ಹನಲ್ಲ. 1979 ಆರ್‌ಇವಿ ಎಲ್ಆರ್ 685 ಡಿಬಿ ಪಂಜಾಬ್ ಮತ್ತು ಹರಿಯಾಣ.

39. ಒಂದು ಸಹಕಾರ ಸಂಘದ ಪ್ರತಿನಿಧಿಯ ಅನರ್ಹತೆಯನ್ನು ಪರಿಗಣಿಸತಕ್ಕದ್ದಲ್ಲ. ಅದನ್ನು ಪ್ರತಿನಿಧಿಸುವ ಸಹಕಾರ ಸಂಘ ಅನರ್ಹತೆ ಹೊಂದಿದ್ದರೆ ಅದನ್ನು ಪರಿಗಣಿಸಬೇಕು. 1981 ಪಿಎಲ್‌ಜೆ 398.

40. ಸಮಿತಿಯ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಸದಸ್ಯರನ್ನು ಆಯ್ಕೆಯಾಗಿದ್ದಾರೆಂದು ಆಗಿಂದಾಗ್ಗೆ ಘೋಷಿಸತಕ್ಕದ್ದು. 1979 ಪಿಎಲ್ಆರ್ 45 ಎಸ್‌ಎನ್.

41. ಕೋರಂಗೆ ಸಂಬಂಧಪಟ್ಟ ನಿಯಮ, ಚುನಾವಣಾಧಿಕಾರಿ, ಆಡಳಿತ ಮಂಡಳಿ ಪದಾಧಿಕಾರಿ ಚುನಾವಣೆಗೆ ಅನ್ವಯಿಸುವುದಿಲ್ಲ–1972(8) ಕೋಆಪ್ ಎಲ್‌ಜೆ 128.

42. ಒಬ್ಬ ವ್ಯಕ್ತಿ ಚುನಾವಣೆ ಸಮಯದಲ್ಲಿ ಸ್ಪರ್ಧಿಸಲು ಅನರ್ಹಗೊಂಡಿದ್ದರೆ ಅಥವಾ ಅರ್ಹನಲ್ಲದಿದ್ದರೆ ಅಂತಹ ವಿಷಯವನ್ನು ದಾವಾ ದಾಖಲಿಸುವ ಮೂಲಕ ಪ್ರಶ್ನಿಸಬೇಕು– 1979 ಎಐಎಲ್ಎಲ್ಆರ್ 375.

43. ಚುನಾವಣೆಯನ್ನು ಮಧ್ಯದಲ್ಲೇ ನಿಲ್ಲಿಸಬೇಕಾದರೆ ನಡವಳಿಕೆ ದಾಖಲಿಸಲು ಸಾಧ್ಯವೇ ಇಲ್ಲವೆಂದು ಪರಿಗಣಿಸಿದಾಗ ಮಾತ್ರ. 1971(7) ಕೋಆಪ್ ಎಲ್‌ಜೆ 64.

44. ಚುನಾವಣೆಯನ್ನು ತಾಂತ್ರಿಕ ಕಾರಣದ ಆಧಾರದ ಮೇಲೆ ರದ್ದುಗೊಳಿಸತಕ್ಕದಲ್ಲ. ಅಂದರೆ ಅಧ್ಯಕ್ಷರು, ವ್ಯವಸ್ಥಾಪಕರು ಸೇರಿ ಚುನಾವಣೆ ಕಾರ್ಯಕ್ರಮ ರೂಪಿಸಿದ್ದರೆ, ವ್ಯವಸ್ಥಾಪಕರು ಹೊರಡಿಸಬೇಕಾದ ಸಂದರ್ಭದಲ್ಲಿ ಅಂತಹ ಚುನಾವಣೆ ರದ್ದುಗೊಳಿಸತಕ್ಕದಲ್ಲ. 1977 ಪಿಎಲ್‌ಜೆ 108

45. ಚುನಾವಣೆ ಎಂದರೆ ಹಲವಾರು ಹಂತಗಳಿರುತ್ತದೆ. ಬಹಳಷ್ಟು ಹಂತ ಎಂದರೆ ಚುನಾವಣೆ ಫಲಿತಾಂಶದ ಮೇಲೆ ಪ್ರಭಾವ ಬೀರುವ ಪ್ರತಿಯೊಂದು ಹಂತ–1960(2) ಎಂಎಡಿ ಎಲ್‌ಜೆ 392.

46. ಕಾನೂನು ಮತ್ತು ನಿಯಮಗಳ ವಿರುದ್ಧ, ಆದರೆ ಬೈಲಾ ಅನ್ವಯ ಚುನಾವಣೇ ನಡೆದಿದ್ದರೆ ಅಂಥಹ ಚುನಾವಣೆ ಸಿಂಧುವಲ್ಲ. 1970(40) ಕಟಕ್ ಎಲ್‌ಜೆ 441.

47. ಒಂದು ಸಹಕಾರ ಬ್ಯಾಂಕ್ ತನ್ನ ವಾರ್ಷಿಕ ಮಹಾಸಭೆಯನ್ನು, ಆಡಳಿತ ಮಂಡಳಿ ಪದಾಧಿಕಾರಿ ಚುನಾವಣೆಯನ್ನು ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇದ್ದಾಗಲೂ ತಿಳುವಳಿಕೆ ಇಲ್ಲದೆ ಅಥವಾ ಗಮನಕ್ಕೆ ತೆಗೆದುಕೊಳ್ಳದೆ ನಡೆಸಿದಾಗ ಅಂತಹ ಚುನಾವಣೆ ನಡೆದಿಲ್ಲ ಎಂದು ತಿಳಿಯತಕ್ಕದ್ದು. ಒಂದು ಪಕ್ಷ ಚುನಾವಣೆಗೆ ತಡೆಯಾಜ್ಞೆ ಸಂಬಂಧಿಸಿದವರಿಗೆ ತಿಳಿಸಿದಾಗ್ಯೂ ನ್ಯಾಯಾಲಯ ಚುನಾವಣೆ ರದ್ದು ಮಾಡತಕ್ಕದ್ದು. ತಡೆಯಾಜ್ಞೆ ನೀಡಿದ್ದ ಆದೇಶ ನಂತರ ತೆರವಾಗಿದೆ ಎಂಬ ಕಾರಣದಿಂದ ಯಾವುದೇ ವ್ಯತ್ಯಾಸ ಇರುವುದಿಲ್ಲ. ರಿಟ್ ಅರ್ಜಿ ವಿಚಾರಣೆಯಲ್ಲಿ ಇದ್ದಾಗ ಚುನಾವಣೆ ನಡೆದ ದಿನಾಂಕದಂದು ಬಾಕಿ ಉಳಿದಿದೆ ಎಂದು ಭಾವಿಸತಕ್ಕದ್ದು. ಎಐಆರ್ 1982 ಪಾಟ್ನಾ 8.

48. ಚುನಾವಣೆ ಫಲಿತಾಂಶ ಹೊರ ಬೀಳುವವರೆಗೆ ಯಾವುದೇ ರೀತಿಯ ನ್ಯೂನತೆ ಆಧಾರದ ಮೇಲೆ ಚುನಾವಣೆ ನಿಲ್ಲಿಸತಕ್ಕದಲ್ಲ. ಎಐಆರ್ 1972 ಬಾಂಬೆ 129.

49. ನಿಬಂಧಕರು ಅಥವಾ ಸರ್ಕಾರ ಚುನಾವಣೆ ಪ್ರಕ್ರಿಯೆಗೆ ಅಥವಾ ಚುನಾವಣೆ ಮುಂದೂಡಿಕೆ ಬಗ್ಗೆ ನಿರ್ದೇಶನ ಕೊಡಲು ಬರುವುದಿಲ್ಲ. ನಿಬಂಧಕರು ಅಥವಾ ಸರ್ಕಾರ ಚುನಾವಣೆ ನಡವಳಿಕೆ ಮಾರ್ಪಡಿಸಲು ಅವಶ್ಯಕ ಎಂಬ ಆಧಾರದ ಮೇಲೆ ಮಧ್ಯಪ್ರವೇಶಿಸಲಾಗದು. 1985(1) ಎಐಎಲ್‌ಎಲ್‌ಆರ್ 636.

50. ಎಲ್ಲಿ ದಾವಾ ದಾಖಲಾಗಿಲ್ಲವೋ ಅಥವಾ ತೀರ್ಮಾನವಾಗಿಲ್ಲವೋ ಅಥವಾ ಮೇಲ್ಮನವಿ ಸಲ್ಲಿಸಿಲ್ಲವೋ ಅಂತಹ ಪ್ರಸಂಗದಲ್ಲಿ ಸರ್ಕಾರ ದಾವಾ ದಾಖಲಿಸಲು ತನ್ನ ಪುರಸ್ಕರಣೆ (ರಿವಿಷನ್) ಅಧಿಕಾರ ಚಲಾಯಿಸಲು ಬರುವುದಿಲ್ಲ. ಎಐಆರ್ 1982 ಪಾಟ್ನಾ 114.

51. ಒಬ್ಬ ಸದಸ್ಯ ಒಂದು ಸಹಕಾರ ಸಂಘದ ವ್ಯವಹಾರದಲ್ಲಿ ಮೋಸ, ವಂಚನೆ ಮಾಡಿದ್ದಾನೆ ಎಂಬ ಆಧಾರದ ಮೇಲೆ ಚುನಾವಣೆ ತಕರಾರು ಅರ್ಜಿ ದಾಖಲಿಸಬಹುದು. 1968 ಕೆಇಆರ್ ಎಲ್‌ಜೆ 260.

52. ಯಾವುದೇ ಹೆಸರಿಸದ ಕಕ್ಷಿದಾರರಿಂದ ದಾವಾ ದಾಖಲಾಗಿದೆಯೋ–ಪದಾಧಿಕಾರಿ ಚುನಾವಣೆಯಲ್ಲಿ ಅಂತಹ ಪ್ರಸಂಗದಲ್ಲಿ ದಾವಾ ಪ್ರಕರಣ ತೀರ್ಮಾನಿಸಲು ಅಧಿಕಾರ ಹೊಂದಿಲ್ಲ. ಆದ್ದರಿಂದ ಚುನಾವಣೆ ಬಗ್ಗೆ ಹೊರಡಿಸಿದ ತೀರ್ಪು ಅಸಿಂಧು ಮತ್ತು ಕಾನೂನುಬಾಹಿರ. ಎಐಆರ್ 1978 ಗೋವಾ 34.

53. ಸರ್ಕಾರ ಕಲಂ 28ರನ್ವಯ ಆಡಳಿತ ಮಂಡಳಿ ಅವಧಿಯನ್ನು ವಿಸ್ತರಿಸಿದರೂ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಆ ಸಮಿತಿ ಅವಧಿ ಮುಗಿಯುವ ಅವಧಿಗೆ ಅನುಗುಣವಾಗಿ ನಡೆಯತಕ್ಕದ್ದು. ಐಎಲ್‌ಆರ್ 1991(1) ಕೆಎಎನ್ 24–1998(2) ಕೆಎಲ್‌ಜೆ 439 ಡಿಬಿ.

54. ಚುನಾವಣೆ ಪ್ರತಿನಿಧಿ ಅವಧಿ ಅವನು ಆಯ್ಕೆಯಾದ ದಿನದಿಂದ ಪ್ರಾರಂಭವಾಗುತ್ತದೆ. ಸಹಕಾರಿ ವರ್ಷ ಎಂಬ ಪದಕ್ಕೆ ಚುನಾಯಿತ ಆದನೆಂದು ಘೋಷಿಸಿದ ವರ್ಷದಿಂದ ಪರಿಗಣಿಸತಕ್ಕದ್ದು.

ಚುನಾವಣೆಗೆ ಸ್ಪರ್ಧಿಸಿದ ವರ್ಷ ಎಂದು ಪರಿಗಣಿಸತಕ್ಕದಲ್ಲ. ಎಐಆರ್ 1982 ಎಸ್‌ಸಿ 831.

55. ನಿಬಂಧಕರಿಗೆ ಚುನಾವಣೆಗೆ ಸಂಬಂಧಪಟ್ಟಂತೆ ನಿಯಮಗಳನ್ನು ವಿಮರ್ಶಿಸುವ (ಇಂಟರ್‌ಪ್ರಿಟಿ) ಮತ್ತು ಅಭಿಪ್ರಾಯ ತಿಳಿಸುವ ಅಧಿಕಾರ ಇರುವುದಿಲ್ಲ. ಮತ ಚಲಾವಣೆಗೆ ಸಂಬಂಧಪಟ್ಟಂತೆ ಒಂದಕ್ಕಿಂತ ಹೆಚ್ಚು ಆಡಳಿತ ಮಂಡಳಿ ಕೊಡುವ ಅಧಿಕಾರ ಇಲ್ಲ. ಎಐಆರ್ 1972 ಎಸ್‌ಸಿ 758.

56. ಹಳೆಯ ಚುನಾವಣೆ ತಕರಾರು ಅರ್ಜಿ ವಿಲೇವಾರಿ ಆಗಿಲ್ಲ ಎಂಬ ಕಾರಣಕ್ಕೆ ಹೊಸ ಚುನಾವಣೆ ಮುಂದೂಡಲು ಬರುವುದಿಲ್ಲ. 1982(2) ಕೆಎಲ್‌ಜೆ ಎಸ್‌ಎನ್–10.

57. ಆಡಳಿತ ಮಂಡಳಿ ಚುನಾವಣೆಗೆ ಚುನಾವಣೆ ಪ್ರಕಟಣೆ ಹೊರಡಿಸಿದಾಗ 2 ಸ್ಥಾನಗಳ ಮೀಸಲಾತಿ ಬಗ್ಗೆ ಪ್ರಕಟಿಸಿರದಿದ್ದರೆ–1 ಪರಿಶಿಷ್ಟ ಜಾತಿ;ವರ್ಗಕ್ಕೆ, 1 ಸ್ಥಾನ ಹಿಂದುಳಿದ ಜನಾಂಗಕ್ಕೆ, ಅಂತಹ ಚುನಾವಣೆ ಕಾನೂನು ಬಾಹಿರ, ಅನರ್ಹ, ಕಾನೂನಿಗೆ ವಿರುದ್ಧ. ಎಐಆರ್ 1984 ಎಸ್‌ಸಿ 192.

58. ಚುನಾವಣೆಗೆ ನೇಮಿಸಲ್ಪಟ್ಟ ಅಧಿಕಾರಿ ಗುರುತಿನ ಚೀಟಿ ತೋರಿಸಿದ ನಂತರ ಮತ ಪತ್ರ ಕೊಡತಕ್ಕದ್ದು. ಐಎಲ್‌ಆರ್ 1968 ಮೈಸೂರು 645–1968 ಮೈಸೂರು ಎಲ್‌ಜೆ 393 ಡಿಬಿ

59. ಮತಪಟ್ಟಿಯಲ್ಲಿ ಹೆಸರು ಸೇರಿಸಿಲ್ಲ ಎಂಬುದಕ್ಕೆ ದಾವಾ ಪ್ರಕರಣವನ್ನು ಮಧ್ಯಸ್ಥಗಾರರು ತೀರ್ಮಾನಿಸಬೇಕು. ರಿಟ್ ಅರ್ಜಿ ಮುಖಾಂತರ ಅಲ್ಲ. ಎಐಆರ್ 1985 ಎನ್‌ಒಸಿ 66.

60. ಚುನಾವಣಾಧಿಕಾರಿ ಒಂಸು ಸಂಘದ ಆಡಳಿತ ಮಂಡಳಿ ಮತ್ತು ಮಹಾಸಭೆಯ ಎಲ್ಲಾ ಅಧಿಕಾರ ಹೊಂದಿರುತ್ತಾನೆ. ಎಲ್ಲಿ ಚುನಾವಣೆ ನ್ಯಾಯಾಲಯದ ಆದೇಶದನ್ವಯ ನಿಂತು ಹೋಗಿರುತ್ತದೆಯೋ ತಡೆಯಾಜ್ಞೆ ತೆರವಾದಾಗ ಎಲ್ಲಿ ಚುನಾವಣೆ ನಿಂತುಹೋಗಿತ್ತೋ ಅಲ್ಲಿಂದ ಪುನರಾರಂಭಿಸತಕ್ಕದ್ದು. ಎಲ್ಲಿ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿಲ್ಲವೋ ಅಂತಹ ಸಂದರ್ಭದಲ್ಲಿ ಹೊಸ ಚುನಾವಣೆ ವೇಳಾಪಟ್ಟಿ ಪ್ರಾರಂಭಿಸುವುದು ಎಐಎಲ್‌ಎಲ್‌ಆರ್ 1986(3) ಕೆಎಎನ್ 2270.

61. ನಿಯಮ 14(2)ರನ್ವಯ ನೇಮಿಸಲ್ಪಟಟ ಚುನಾವಣಾಧಿಕಾರಿ ಚುನಾವಣೆ ಫಲಿತಾಂಶವನ್ನು ಪ್ರಕಟಿಸುವ ಅಧಿಕಾರ ಹೊಂದಿರುತ್ತಾರೆ. 1989(1) ಕೆಎಲ್‌ಜೆ 17.

62. ಸ್ಪರ್ಧಿಸಲು ಒಪ್ಪಿಗೆ ಕೊಟ್ಟಾಗ ನ್ಯೂನತೆ ಇದೆ ಎಂಬ ಆಧಾರದ ಮೇಲೆ ನಾಮಪತ್ರ ತಿರಸ್ಕರಿಸಿದರೆ ಅದು ನ್ಯಾಯಕ್ಕೆ ವಿರೋಧ–1989(1) ಕೆಎಲ್‌ಜೆ 130.

63. ಸುಸ್ತಿದಾರರಾದವನು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾಗಿದ್ದರೂ ಮತ ಚಲಾಯಿಸುವ ಹಕ್ಕು ಕಳೆದುಕೊಳ್ಳುವುದಿಲ್ಲ. 1984(1) ಕೆಎಲ್‌ಜ ಎಸ್‌ಎನ್ 43.

64. ನಿಯಮ ಪಾಲಿಸುವುದು ಕಡ್ಡಾಯ ವಾರ್ಷಿಕ ಮಹಾಸಭೆ ನಡೆಸಲು ಸಾಧ್ಯವಾಗದೆ ಹೋದಾಗ ಹೊಸ ದಿನಾಂಕ ನಿಗದಿಪಡಿಸಿದರೆ ಹೊಸ ಚುನಾವಣಾ ವೇಳಾಪಟ್ಟಿ ಹೊರಡಿಸುವ ಅವಶ್ಯಕತೆ ಇಲ್ಲ. ಎಲ್ಲಿ ನಿಂತಿರುತ್ತದೋ ಅಲ್ಲಿಂದ ಪ್ರಾರಂಭಿಸಬಹುದು. ಐಎಲ್‌ಆರ್ 1979(1) ಕೆಆರ್‌ಎನ್

ಎಸ್ಎನ್ 57–1979(1) ಕೆಎಲ್‌ಜೆ 371.

65. ಚುನಾವಣಾಧಿಕಾರಿ ಸಂಘದ ಕಾರ್ಯದರ್ಶಿಗೆ ನಾಮಪತ್ರ ಸ್ವೀಕರಿಸುವ ಅಧಿಕಾರ ಕೊಟ್ಟಿದ್ದರೂ ತಾನೇ ನಾಮಪತ್ರ ಸ್ವೀಕರಿಸುವ ಅಧಿಕಾರ ಕಳೆದುಕೊಳ್ಳುವುದಿಲ್ಲ. ಐಎಲ್‌ಆರ್ 1985(4) ಕೆಎಎನ್ 3685.

66. ಸಹಕಾರಿ ನಿಯಮಗಳಲ್ಲಿ ನಾಮಪತ್ರವನ್ನು ಸ್ವೀಕರಿಸುವ ಸಮಯ ನಿಗಧಿಪಡಿಸಲು ಚುನಾವಣಾಧಿಕಾರಿಗೆ ಅಧಿಕಾರ ಕೊಟ್ಟಿದೆ. ಅದರಲ್ಲಿ 6 ಅಥವಾ 7 ಸ್ಪಷ್ಟ ದಿವಸ ಎಂದು ನಮೂದಿಸಿದೆ. ಆದರೆ ಇದಕ್ಕಿಂತ ಹೆಚ್ಚು ಅವಧಿ (9 ಸ್ಪಷ್ಟ ದಿನಗಳು) ನಿಗದಿಪಡಿಸಿದ್ದರೆ ಅದು ಕಾನೂನುಬದ್ಧ ಹಾಗೂ ಸಿಂಧು. 1981(1) ಕೆಎಲ್‌ಜೆ 158.

67. ನಾಮಪತ್ರವನ್ನು ಕಾರ್ಯದರ್ಶಿಗೆ ಸಲ್ಲಿಸುವುದು ಬದ್ದತೆಯಲ್ಲ, ಅದು ಒಂದು ಸೂಚನೆ. ಎಲ್ಲಾ ನೌಕರರಿಗೆ ನಾಮಪತ್ರ ಸ್ವೀಕರಿಸಲು ಅಧಿಕಾರ ಇರತಕ್ಕದ್ದು. ಅದರಲ್ಲೂ ಕಾರ್ಯದರ್ಶಿ ಚುನಾಯಿತ ಪ್ರತಿನಿಧಿ ಇದ್ದು ನಾಮಪತ್ರ ಸ್ವೀಕರಿಸುವಾಗ ಹಾಜರಿರದಿದ್ದಲ್ಲಿ. 1963(1) ಮೈಸೂರು ಎಲ್‌ಜೆ 390.

68. ಚುನಾವಣಾಧಿಕಾರಿಗೆ ಚುನಾವಣೆ ಮುಂದೂಡುವ ಅಧಿಕಾರ ಇಲ್ಲ. ಎಐಆರ್ 1980 ಎಪಿ 98.

69. ಸಂಘದ ಕಾರ್ಯದರ್ಶಿಗೂ ಚುನಾವಣೆ ಮುಂದೂಡುವ ಅಧಿಕಾರ ಇಲ್ಲ. ಎಐಆರ್ 1979 ಕೆಎಆರ್ 4 ಐಎಲ್‌ಆರ್ 1979(1) ಕೆಎಎನ್ 293.

70. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ನಿಬಂಧಕರು ಅಥವಾ ಸಹಾಯಕ ನಿಬಂಧಕರು ಚುನಾವಣೆ ಪ್ರಕ್ರಿಯೆಯಲ್ಲಿ ಮಧ್ಯ ಪ್ರವೇಶಿಸಲು ಅಧಿಕಾರ ಇಲ್ಲ. ಚುನಾವಣೆ ಮುಗಿಯುವ ತನಕ ಸಹಾಯಕ ನಿಬಂಧಕರು ಚುನಾವಣೆ ಮುಂದೂಡುವ ಅಧಿಕಾರ ಹೊಂದಿಲ್ಲ. 1984(2) ಎಐಃಎಲ್‌ಎಲ್‌ಆರ್ 10 ಪಂಜಾಬ್

71. ಸರ್ಕಾರ ಚುನಾವಣೆ ಮುಂದೂಡುವ ಅಧಿಕಾರ ಹೊಂದಿಲ್ಲ. ಎಐಆರ್ 1978 ಎನ್‌ಒಸಿ 18 ಎಂಪಿ.

72. ವಾರ್ಷಿಕ ಮಹಾಸಭೆ ಮುಂದೂಡಿ ಹೊರಡಿಸಿದ ಆದೇಶ ವಾರ್ಷಿಕ ಮಹಾಸಭೆಗೆ ಮಾತ್ರ ಇರತಕ್ಕದ್ದು. ಎಐಆರ್ 1978 ಕೆಎಎನ್ 37.

73. ಚುನಾವಣೆ ಸಮಯದಲ್ಲಿ ನಿಬಂಧಕರವರು ಒಬ್ಬ ಮೇಲ್ವಿಚಾರಕರನ್ನು ಹಾಜರಾಗಲು ಹೊರಡಿಸಿದ ಆದೇಶ (ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಯಲ್ಲಿ) ಅಸಿಂಧು, ನ್ಯಾಯಸಮ್ಮತವಲ್ಲ. ಎಐಆರ್ 1984 ಗುಜರಾತ್ 36.

74. ಅಧ್ಯಕ್ಷರ ಆಯ್ಕೆ ಮತ್ತೊಮ್ಮೆ ಮಾಡಬೇಕೆಂದು ನೀಡಿದ ಆದೇಶ ಚುನಾವಣೆಯಲ್ಲಿ ಮಧ್ಯಪ್ರವೇಶ ಮಾಡಿದಂತಾಗುತ್ತದೆ. 1983 ಕೆಎಲ್‌ಟಿ 1065.

75. ಉಚ್ಛ ನ್ಯಾಯಾಲಯವು ಚುನಾವಣಾಧಿಕಾರಿಗೆ, ಚುನಾವಣೆಗೆ ತಡೆಯಾಜ್ಞೆ ನೀಡಿದ್ದರೂ ಮಹಾಸಭೆ ಚುನಾವಣೆ ಮುಂದುವರೆಸಿ ಆಯ್ಕೆ ಮಾಡಲು ಬರುವುದಿಲ್ಲ. 1968 ಸಿಎಲ್‌ಜೆ 76.

76. ನಿಬಂಧಕರು ನೇಮಿಸಿದ ಚುನಾವಣಾಧಿಕಾರಿ ಆಡಳಿತ ಮಂಡಳಿ ಮತ್ತು ಸಂಘದ ಆಡಳಿತವನ್ನು ವಹಿಸಿಕೊಳ್ಳುತ್ತಾನೆ–ಚುನಾವಣೆ ಮುಗಿಯುವ ತನಕ–1968(2) ಎಂಎಲ್‌ಜೆ 320 ಡಿಬಿ.

77. ಒಬ್ಬ ವ್ಯಕ್ತಿ ತನ್ನ ಹೆಸರನ್ನು ಸದಸ್ಯರ ಪಟ್ಟಿಯಿಂದ ತೆಗೆದುಹಾಕುವ ತನಕ, ಸದಸ್ಯನ ಅರ್ಹತೆ ಹೊಂದಿರುತ್ತಾನೆ. 1964 ಎಂಎಲ್‌ಜೆ ಸಪ್ಲಿಮೆಂಟ್ 41.

78. ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರವನ್ನು 3 ತಿಂಗಳು ಸಂರಕ್ಷಿಸಬೇಕೆಂದಾಗ ಚುನಾವಣೆ ತಕರಾರು ಅರ್ಜಿಯಲ್ಲಿ ದಾಖಲೆಗಳನ್ನು ನಾಶ ಅಥವಾ ಸುಟ್ಟು ಹಾಕಿದ್ದರ ಬಗ್ಗೆ ಆಕ್ಷೇಪಿಸಲಾಗದು. 1966(1) ಎಂಎಲ್‌ಜೆ 636 ಡಿಬಿ.

79. ನಿಬಂಧಕರು ಚುನಾವಣೆಗೆ ಆದೇಶಿಸಿದ ಬಗ್ಗೆ ರಾಜ್ಯಪತ್ರದಲ್ಲಿ (ಗೆಜೆಟ್) ಪ್ರಕಟಿಸುವ ಅವಶ್ಯಕತೆ ಇಲ್ಲ 1964 ಎಂಎಲ್‌ಜೆ ಸಪ್ಲಿಮೆಂಟ್ 41.

80. ಚುನಾವಣಾಧಿಕಾರಿಗೆ ಸದಸ್ಯರನ್ನು ಸೇರಿಸಿಕೊಳ್ಳಲು ಮತ್ತು ಮತಪಟ್ಟಿಯಲ್ಲಿ ಹೆಸರು ಸೇರಿಸಲು ಅಧಿಕಾರ ಹೊಂದಿಲ್ಲ. ಅವರ ಕರ್ತವ್ಯ ಚುನಾವಣೆ ನಡೆಸುವುದು ಮಾತ್ರ–ಎಐಆರ್ 1984 ಕೆಎಎನ್ 127.

81. ಒಂದು ಸಹಕಾರ ಸಂಘ ಚುನಾವಣೆ ನಿಯಮ ವಿರುದ್ಧ [14(ಎ)] ಬೈಲಾ ರಚನೆ ಮಾಡಲು ಅಧಿಕಾರ ಇಲ್ಲ. 1981(1) ಕೆಎಲ್‌ಜೆ 88.

82. ಚುನಾವಣೆ ಅರ್ಜಿ ವಿಚಾರಣೆ ಮಾಡುವಾಗ ನಿಬಂಧಕರು, ಮಧ್ಯಸ್ಥದಾರರು ನ್ಯಾಯಾಲಯದ ತೀರ್ಪು ಆಧರಿಸಿ ತೀರ್ಪು ಕೊಡಬಹುದು. ಆದರೆ ಇದರಲ್ಲಿ ನ್ಯಾಯ, ಸಮಾನತೆ, ಸಮಾನ ಪರಿಜ್ಞಾನ (ಜಸ್ಟಿಸ್, ಈಕ್ವಿಟಿ ಮತ್ತು ಗುಡ್ ಕನ್ಸ್‌ನ) ದಿಂಧ ನಿಷ್ಪಕ್ಷವಾಗಿ ತೀರ್ಮಾನಿಸತಕ್ಕದ್ದು. ಕಾನೂನು ಅಡಿ ನ್ಯಾಯಬದ್ಧವಾಗಿರಬೇಕು. 1975(2) ಕೆಎಲ್‌ಜೆ 235

83. ನಿಬಂಧಕರು ಚುನಾವಣೆ ತಕರಾರು ಅರ್ಜಿ ಸ್ವೀಕರಿಸಬಹುದ. ನಿಯಮ 31(4) ರಲ್ಲಿ ತೀರ್ಮಾನಿಸುವ ಅಧಿಕಾರ ಹೊಂದಿರುತ್ತಾರೆ. ಕಲಂ 70, 118 ಒಟ್ಟಾರೆ ಅರ್ಥ, ನಿಬಂಧಕರು, ಮಧ್ಯಸ್ಥದಾರರು ಅಥವಾ ದಾವಾ ತೀರ್ಮಾನಿಸುವ ಯಾವುದೇ ಅಧಿಕಾರಿ, ಸಿವಿಲ್ ನ್ಯಾಯಾಲಯ ಹೊಂದಿದ ಎಲ್ಲಾ ಅಧಿಕಾರ ಹೊಂದಿರುತ್ತಾನೆ. ಇದಕ್ಕೆ ಪೂರಕವಾಗಿ ನ್ಯಾಯಾಲಯಗಳ ಹಿಂದಿನ (ಪ್ರಿಸಿಡೆಂಟ್) ತೀರ್ಪುಗಳು ಆ ಅಧಿಕಾರ ವ್ಯಾಪ್ತಿಗೆ ಬರುತ್ತದೆ. ಐಎಲ್‌ಆರ್ 1975(2) ಕೆಎಎನ್ 1682–1975(2) ಕೆಎಲ್‌ಜೆ 235.

84. ಚುನಾವಣೆಯನ್ನು ಯಾವ ರೀತಿ ಮಾಡಬೇಕು ಎಂದು ನಿಗಧಿಪಡಿಸಿದ್ದರೆ, ಆ ನಿಯಮದಂತೆ ಚುನಾವಣೆ ನಡೆಯಬೇಕು. 1974 ಸಿಎಲ್‌ಜೆ 93.

85. ಒಂದು ಸಹಕಾರ ಸಂಘದ ಸದಸ್ಯರು ಒಟ್ಟುಗೂಡಿ ಚುನಾವಣೆ ನಡೆಸತಕ್ಕದ್ದು. ನಿಯಮದಡಿ ಚುನಾವಣೆ ನಡೆಯಬೇಕೆಂದು ಸೂಚಿಸಿದ್ದರೂ ಬೈಲಾ ನಿಯಮಗಳನ್ನು ಅನುಸರಿಸಿ ಚುನಾವಣೆ ನಡೆಯಬೇಕೆಂದು ನಿಗಧಿಪಡಿಸಬಹುದ. ಎಐಆರ್ 1968 ಪಂಜಾಬ್ 178.

86. ಮತಪಟ್ಟಿ ನ್ಯೂನತೆಗಳ ಬಗ್ಗೆ ಚುನಾವಣಾಧಿಕಾರಿ ಮುಂದೆ ಅವಧಿಗೆ ಅನುಗುಣವಾಗಿ ಸಲ್ಲಿಸತಕ್ಕದ್ದು. ನಿಬಂಧಕರು ಆರೋಪದ ಆಧಾರದ ಮೇಲೆ ಚುನಾವಣೇಯನ್ನು ಅನಿರ್ದಿಷ್ಟ ಕಾಲ ಮುಂದೂಡಲು ಅಧಿಕಾರ ಇಲ್ಲ. 1977 ಪಿಎಲ್‌ಜೆ 12.

87. ಆಡಳಿತ ಮಂಡಳಿ ತಯಾರಿಸಿದ ಸದಸ್ಯರ ಪಟ್ಟಿಯನ್ನು ಚುನಾವಣೆಯಲ್ಲಿ ಮತದಾರರ ಪಟ್ಟಿ ಎಂದು ಭಾವಿಸಲಾಗದು. ಜಿಲ್ಲಾ ಕೇಂದ್ರ ಸಹಕರ ಬ್ಯಾಂಕಿನ ವ್ಯವಸ್ಥಾಪಕರು ಹಾಲಿ ಇರುವ ಸಂಘಗಳ ಸ್ಪಷ್ಟ ಅರ್ಹ ಸದಸ್ಯರ ಸಂಘಗಳ ಮತ ಚಲಾಯಿಸುವ ಹಕ್ಕು ಹೊಂದಿರುವ ಸಂಘಗಳು, ಆಡಳಿತ ಮಂಡಳಿಯ ಸದಸ್ಯರ ಆಯ್ಕೆಯಲ್ಲಿ ಭಾಗವಹಿಸಲು ಅರ್ಹರಿರಬೇಕು. ಮತ್ತು ಅಂತಹ ಸದಸ್ಯರು ಮತ ಚಲಾಯಿಸುವ ಹಕ್ಕು ಪಡೆದಿರಬೇಕು. ಚುನಾವಣೆ ತಕರಾರು ಮೇಲ್ಮನವಿ ಸಲ್ಲಿಸಿದ್ದರೆ ತೀರ್ಪಿಗಾಗಿ ಚುನಾವಣಾಧಿಕಾರಿ ಕಾಯಬೇಕು. ನಾಮಪತ್ರ ಒಪ್ಪಿದ ಬಗ್ಗೆ/ತಿರಸ್ಕರಿಸಿದ ಬಗ್ಗೆ ಆಗಿಂದಾಗ್ಗೆ ತೀರ್ಮಾನಿಸಬೇಕು. ಉಪನಿಬಂಧಕರು ದಾವಾ ಅರ್ಜಿ ವಿಲೇವಾರಿ ಬಗ್ಗೆ ತಕರಾರು ದಾಖಲಿಸದೆ ರಿಟ್ ದಾಖಲಿಸುವಾಗ ಅವರಿಗೆ ಅನುಕೂಲ ಆದೇಶ ಬಂದಿಲ್ಲವೆಂದು ಉಪನಿಬಂಧಕರು ತೀರ್ಮಾನಿಸುವ ಅಧಿಕಾರದ ಬಗ್ಗೆ ರಿಟ್ ದಾಖಲಿಸುವ ಅವಕಾಶ ಇರತಕ್ಕದಲ್ಲ. ಐಎಲ'ಆರ್ 1968(1) ಪಂಜಾಬ್ 159.

88. ಮತಪಟ್ಟಿ ಬಗ್ಗೆ ತಕರಾರನ್ನು ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು ಎತ್ತಬೇಕು. ನಂತರವಲ್ಲ. 1978 ಪಿಎಲ್‌ಜೆ 120.

89. ಒಂದು ಸಹಕಾರ ಸಂಘದ ಪರವಾಗಿ ಮತ ಚಲಾಯಿಸಲು ಆ ಸಂಘದ ಅಂತಹ ವ್ಯಕ್ತಿಯನ್ನು ನೇಮಿಸಿಕೊಳ್ಳಬೇಕು. 1968(2) ಮೈಸೂರು ಎಲ್‌ಜೆ 528.

90. ಚುನಾವಣಾಧಿಕಾರಿ ನೇಮಿಸಿದ ನಂತರ ನಿಬಂಧಕರಿಗೆ ಚುನಾವಣೆ ಮುಂದೂಡಲು ಅಧಿಕಾರ ಇಲ್ಲ. ಎಐಆರ್ 1989 ಆರ್‌ಎಜೆ 32, 1987(2) ಆರ್‌ಎಲ್‌ಆರ್ 471.

91. ಚುನಾವಣೆಯಲ್ಲಿ ಭಾಗವಹಿಸಿದ್ದ ಅಭ್ಯರ್ಥಿ ಅಧಿಕಾರ ಗ್ರಹಣ ಹಗುರವಾಗಿ ಪರಿಗಣಿಸತಕ್ಕದ್ದಲ್ಲ. ಅದರಲ್ಲೂ ಪೂರ್ವಭಾವಿ ಹಂತದ ಆದೇಶದ ಮುಖಾಂತರ, ಎಂಸಿಟಿಡಿ–ಸಿಎಲ್‌ಜೆ 1965 ಪೇಜ್ 15.

92. ಮಧ್ಯಸ್ಥದಾರರು ಹೊರಡಿಸಿದ ತಡೆಯಾಜ್ಞೆಯಲ್ಲಿ ಜಯಶಾಲಿಯಾದ ವ್ಯಕ್ತಿಯ ಅವಧಿ ಅಧಿಕಾರ ಗ್ರಹಣ ತಪ್ಪಿಸುವುದು, ಆ ವ್ಯಕ್ತಿಯ ಅಧಿಕಾರ ಕಿತ್ತುಕೊಂಡಂತೆ. ಚುನಾವಣೆ ರದ್ದುಗೊಳಿಸುವ ತನಕ ಆಯ್ಕೆಯಾದ ವ್ಯಕ್ತಿ ಅಧಿಕಾರ ಗ್ರಹಣ ಮಾಡುವ ಅಧಿಕಾರ ಹೊಂದಿರುತ್ತಾರೆ. ಮೈಸೂರು ಸಿಎಟಿಡಿ ಆರ್‌ಪಿ 5/1966.

93. ಶ್ರೇಷ್ಠ ನ್ಯಾಯಾಲಯ ಒಂದಕ್ಕಿಂತ ಹೆಚ್ಚು ಪ್ರಕರಣದಲ್ಲಿ ಸ್ವಾಭಾವಿಕ ನ್ಯಾಯ ತತ್ವದಡಿ ಆಯ್ಕೆಯಾದ ವ್ಯಕ್ತಿ ಅಧಿಕಾರವನ್ನು ಹಗುರವಾಗಿ ಪರಿಗಣಿಸಿ ಅಧಿಕಾರ ಗ್ರಹಣದಲ್ಲಿ ಮಧ್ಯಪ್ರವೇಶ ಮಾಡಕೂಡದು. ಸ್ವಲ್ಪ ಸಮಯದ ಅವಧಿಗಾದರೂ ಜಯಶೀಲನಾದ ವ್ಯಕ್ತಿ ಅಧಿಕಾರ ಹೊಂದದಂತೆ ಸೂಚಿಸತಕ್ಕದ್ದಲ್ಲ. ಇಂತಹ ತೀರ್ಪುಗಳನ್ನು ಸ್ವಾಭಾವಿಕ ನ್ಯಾಯದಡಿ

ತಡೆಗಟ್ಟಬೇಕು. ಎಂಸಿಎಟಿಡಿ ವಾಲ್ಯೂಮ್ 1 ಪೇಜ್ 41.

94. ಸಾಮಾನ್ಯವಾಗಿ ದಾವಾ ದಾಖಲಿಸಿ ಮಧ್ಯಂತರ ಕೇಳಿದ ಪರಿಹಾರ ದಾವಾದಲ್ಲಿ ಕೇಳಿರುವ ಪರಿಹಾರ ಒಂದೆ ಆದರೆ, ಈ ಪ್ರಸಂಗದಲ್ಲಿ ಮಧ್ಯಂತರ ಆದೇಶದಲ್ಲಿ ಪರಿಹಾರ ಕೊಡತಕ್ಕದಲ್ಲ. 1964 ಸಿಟಿಡಿ ಆನೆಗುಂದಿ ಪುಸ್ತಕದ ಪುಟ 444.

95. ಮಧ್ಯಂತರ ಆದೇಶ ಪ್ರಾಧಿಕಾರದ ಅಧಿಕಾರ. ಆದರೆ ಅಂತಹ ಆದೇಶ ಒಟ್ಟು ಕಕ್ಷಿದಾರನ ಅಧಿಕಾರ ಕಿತ್ತುಕೊಳ್ಳತಕ್ಕದಲ್ಲ. ಆದರೆ ಅಂತಹ ಆದೇಶದಿಂದ ನ್ಯಾಯ ಸಿಗುತ್ತದೆ ಎನ್ನುವುದಾದರೆ ಮಾತ್ರ ಆದೇಶಿಸಬೇಕು. 16(1) ಎಂಸಿಟಿ 68–69.

96. ಚುನಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರಣಕ್ಕೂ ದಾವಾ ಪ್ರಕರಣ ಸ್ವೀಕರಿಸಿದ ನಂತರ ಆಂತರಿಕ ಆಜ್ಞೆಯ ಮುಖಾಂತರ, ಚುನಾವಣೇಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. ತಡೆಯಾಜ್ಞೆ ನೀಡುವುದು ಸೂಕ್ತವಲ್ಲ. ಇದಕ್ಕೆ ಪೂರಕವಾಗಿ ಎಐಆರ್ 1954 ಎಸ್‌ಸಿ 210 ಮತ್ತು ಎಐಆರ್ 1967 ಎಸ್‌ಸಿ 249 ತೀರ್ಪುಗಳಲ್ಲಿ ಸೂಚಿಸಿದ ನೀತಿ ನಿಯಮಗಳನ್ನು ಪಾಲಿಸದೇ ಮಧ್ಯಂತರ ಆದೇಶಗಳ ಮುಖಾಂತರ ಚುನಾಯಿತ ಪ್ರತಿನಿಧಿಗಳ ಪದಗ್ರಹಣಕ್ಕೆ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. 1972 ಎಂಸಿಎಟಿಡಿ ಅಪೀಲ್ 103/1971.

97. ಚುನಾಯಿತ ನಿರ್ದೇಶಕರು ಆಯ್ಕೆಯಾದ ಸಹಕಾರ ಸಂಘದ ನಿರ್ದೇಶಕರಾಗಿ ಪದಗ್ರಹಣ ಮಾಡಲು ಯಾವುದೇ ರೀತಿಯ ಮಧ್ಯಪ್ರವೇಶ ಮಾಡತಕ್ಕದ್ದಲ್ಲ ಎಂಬ ತೀರ್ಪು ಎಐಆರ್ 1954 ಎಸ್‌ಸಿ 710ರಲ್ಲಿ ನಿರ್ದೇಶನವಿದ್ದರೂ, ಅಂತಹ ತಡೆಯಾಜ್ಞೆಯನ್ನು ಉಪ ನಿಬಂಧಕರು ಭಾರತೀಯ ಶ್ರೇಷ್ಠ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ಆದೇಶಿಸಿದ್ದರೆ, ಅಂತಹ ನಿರ್ದೇಶನಕ್ಕೆ ಪುನರ್ ವಿಮರ್ಶೆ ಅರ್ಜಿಯನ್ನು ದಾಖಲಿಸಿ ಪರಿಹಾರ ಪಡೆಯಬಹುದು. ಮೇಲ್ಕಂಡ ತೀರ್ಪಿನಲ್ಲಿ ಆಯ್ಕೆಯಾದ ನಿರ್ದೇಶಕರು ತಮ್ಮ ಸ್ಥಾನವನ್ನು ಅಲಂಕರಿಸಲು ಅಥವಾ ಪದಗ್ರಹಣ ಮಾಡಲು ಉಪ ನಿಬಂಧಕರಾಗಲೀ ಸಹಾಯಕ ನಿಬಂಧಕರಾಗಲೀ ಮಧ್ಯಂತರ ಆದೇಶ ನೀಡತಕ್ಕದ್ದಲ್ಲ. 1972 ಎಂಸಿಎಟಿಡಿ ರಿವಿಷನ್ ಪಿಟಿಷನ್ 34/1972.

## ಚುನಾವಣಾಧಿಕಾರಿಗೆ ಸಂಬಂಧಪಟ್ಟ ಹಲವು ತೀರ್ಪುಗಳು :

ಮೇಲ್ಕಂಡ ಪಟ್ಟಿಯನ್ನು ಸಹ ಗಮನದಲ್ಲಿರಿಸಿಕೊಳ್ಳಬೇಕು.

1. ಚುನಾವಣಾಧಿಕಾರಿ ನಾಮಪತ್ರಗಳ ಪರಿಶೀಲನೆ ಸಮಯದಲ್ಲಿ ತಕರಾರು ಪರಿಶೀಲಿಸಿ ತೀರ್ಮಾನಿಸುವ ಅಧಿಕಾರ ಹೊಂದಿರುತ್ತಾರೆ. 1982(2) ಎಪಿಎಲ್‌ಜೆ 220.
2. ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ನಂತರ ಯಾವುದೇ ಕಾರಣಕ್ಕೂ ಅದನ್ನು ನಿಲ್ಲಿಸತಕ್ಕದಲ್ಲ. 1982(2) ಎಸ್‌ಸಿಸಿ 218.
3. ಮತ ಚಲಾಯಿಸುವ ಒಬ್ಬ ಸಹಕಾರ ಸಂಘದ ಪ್ರತಿನಿಧಿ, ಆ ಸಂಘದ ಸದಸ್ಯನೇ ಅಲ್ಲವೆ ಎಂದು ಕಲಂ 70ರಡ್ತಿಗ್ಗಯಹುಜಕಕ56ಎ4ದ್ಗಯ67ತಡ ಪ್ರಶ್ನಿಸತಕ್ಕದ್ದು. 1968(2) ಮೈಸೂರು ಎಲ್‌ಜೆ 393 ಡಿಬಿ.
4. ಸುಸ್ತಿದಾರರ ಪಟ್ಟಿಯಲ್ಲಿ ಒಬ್ಬ ವ್ಯಕ್ತಿಯ ಹೆಸರು ಸೇರ್ಪಡೆ ಪ್ರಶ್ನಿಸಲು ದಾವಾ ದಾಖಲಿಸಬೆಕು. 1984(1) ಕೆಎಲ್‌ಟಿ ಎಸ್‌ಎನ್ 43.
5. ಒಂದು ಸಹಕಾರ ಸಂಘದ ಪ್ರತಿನಿಧಿ ಅನರ್ಹತೆಯನ್ನು ಪರಿಶೀಲಿಸತಕ್ಕದಲ್ಲ. .ಪ್ರತಿನಿಧಿಸುವ ಒಂದು ಸಹಕಾರ ಸಂಘದ ಅನರ್ಹತೆ ಪರಿಗಣಿಸಬೇಕು. 1981 ಪಿಎಲ್‌ಜೆ 398.
6. ಸಮಿತಿಯ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಸದಸ್ಯರನ್ನು ಆಯ್ಕೆಯಾಗಿದ್ದಾರೆಂದು ಆಗಿಂದಾಗ್ಗೆ ಘೋಷಿಸಿತಕ್ಕದ್ದು. 1979 ಪಿಎಲ್‌ಆರ್ 45 ಎಸ್‌ಎನ್.
7. ಚುನಾವಣೆ ಸಂಬಂಧ ಚುನಾವಣಾಧಿಕಾರಿ ಆಡಳಿತ ಮಂಡಳಿ ಮತ್ತು ಚುನಾವಣೆಯ ಎಲ್ಲಾ ಅಧಿಕಾರ ಹೊಂದಿರುತ್ತಾನೆ. ಎಐಆರ್ 1984 ಕೆಎಆರ್ 12;1983(2) ಕೆಎಲ್‌ಜೆ 439.
8. ಚುನಾವಣಾಧಿಕಾರಿ ಚುನಾವಣೆಗೆ ನೇಮಿಸಲ್ಪಟ್ಟ ಅಧಿಕಾರಿ ಗುರುತಿನ ಚೀಟಿ ತೋರಿಸಿದ ನಂತರ ಮತಪತ್ರ ಕೊಡತಕ್ಕದ್ದು. ಐಎಲ್‌ಆರ್ 1968 ಎಂವೈಎಸ್ 645–1968 ಎಂವೈಎಸ್ ಎಲ್‌ಜೆ 393 ಡಿಬಿ.
9. ಚುನಾವಣಾಧಿಕಾರಿ ಒಂದು ಸಂಘದ ಆಡಳಿತ ಮಂಡಳಿ ಮತ್ತು ಮಹಾಸಭೆ ಅಧಿಕಾರ ಹೊಂದಿರುತ್ತಾನೆ. ಎಲ್ಲಿ ಚುನಾವಣೆ ನ್ಯಾಯಾಲಯದ ಆದೇಶದನ್ವಯ ನಿಂತು ಹೋಗಿರುತ್ತದೆಯೋ ಆ ತಡೆಯಾಜ್ಞೆ ತೆರವಾದಾಗ ಎಲ್ಲಿ ಚುನಾವಣೆ ನಿಂತು ಹೋಗಿತ್ತೋ ಅಲ್ಲಿಂದ ಪುನರಾರಂಭಿಸಬೇಕು. ಎಲ್ಲಿ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿಲ್ಲವೋ ಅಂತಹ ಪ್ರಸಂಗದಲ್ಲಿ ಹೊಸ ಚುನಾವಣಾ ವೇಳಾಪಟ್ಟಿ ಪ್ರಕಟಿಸತಕ್ಕದ್ದು. ಐಎಲ್‌ಆರ್ 1986(3) ಕೆಎಆರ್ 2270.
10. ನಿಯಮ 14(2)ರ ಅನ್ವಯ ನೇಮಿಸಲ್ಪಟ್ಟ ಚುನಾವಣಾಧಿಕಾರಿ ಚುನಾವಣೆ ಫಲಿತಾಂಶ ಪ್ರಕಟಿಸುವ ಅಧಿಕಾರ ಇದೆ. 1989(1) ಕೆಎಲ್‌ಜೆ 17.
11. ಸ್ಪರ್ಧಿಸಲು ಒಪ್ಪಿಗೆ ಕೊಟ್ಟಾಗ ನ್ಯೂನ್ಯತೆ ಆಧಾರದ ಮೇಲೆ ನಾಮಪತ್ರ ತಿರಸ್ಕರಿಸಿದರೆ ನ್ಯಾಯಕ್ಕೆ ವಿರುದ್ಧ. 1989(1) ಕೆಎಲ್‌ಜೆ 130.

12. ಚುನಾವಣಾಧಿಕಾರಿ ಸಂಘದ ಕಾರ್ಯದರ್ಶಿಗೆ ನಾಮಪತ್ರ ಸ್ವೀಕರಿಸುವ ಅಧಿಕಾರ ಕೊಟ್ಟಿದ್ದರೂ ತಾನೇ ನಾಮಪತ್ರ ಸ್ವೀಕರಿಸುವ ಅಧಿಕಾರ ಕಳೆದುಕೊಳ್ಳುವುದಿಲ್ಲ. ಐಎಲ್ಆರ್ 1985(4) ಕೆಎಎನ್ 3685.

13. ನಿಯಮ ಪಾಲಿಸುವುದು ಕಡ್ಡಾಯ, ವಾರ್ಷಿಕ ಮಹಾಸಭೆ ಕಾರಣಾಂತರದಿಂದ ನಡೆಸಲು ಸಾಧ್ಯವಾಗದೆ ಹೋದಾಗ ಹೊಸ ಚುನಾವಣೆ ನಿಗಧಿಪಡಿಸಿದರೆ ಹೊಸ ಚುನಾವಣಾ ವೇಳಾಪಟ್ಟಿ ಹೊರಡಿಸುವ ಅಗತ್ಯ ಇಲ್ಲ. ಎಲ್ಲಿ ನಿಂತಿತ್ತೋ ಅಲ್ಲಿಂದಲೇ ಪ್ರಾರಂಭಿಸಬಹುದು. ಐಎಲ್ಆರ್ 1979 (1) ಕೆಎಆರ್ ಎಸ್ಎನ್ 57;979(1) ಕೆಎಲ್ಜೆ 371.

14. ನಾಮಪತ್ರಗಳನ್ನು ಕಾರ್ಯದರ್ಶಿಗೆ ಸಲ್ಲಿಸುವುದು ಬದ್ಧತೆ ಅಲ್ಲ. ಅದು ಸೂಚನೆ. ಪ್ರತಿಯೊಬ್ಬ ನೌಕರರಿಗೆ ನಾಮಪತ್ರ ಸ್ವೀಕರಿಸಲು ಅಧಿಕಾರ ಇರತಕ್ಕದ್ದು. ಅದರಲ್ಲೂ ಕಾರ್ಯದರ್ಶಿಯು ಚುನಾಯಿತ ಪ್ರತಿನಿಧಿ ಇದ್ದು ನಾಮಪತ್ರ ಸ್ವೀಕರಿಸುವ ಸಮಯದಲ್ಲಿ ಹಾಜರಿರದಿದ್ದರೆ. 1963(1) ಎಂವೈಎಸ್ ಎಲ್ಜೆ 390.

15. ನಿಬಂಧಕರು ಸೂಚಿಸುವ ಚುನಾವಣಾಧಿಕಾರಿ ಸಂಘದ ಆಡಳಿತ ಮಂಡಳಿ ಆಡಳಿತ ವಹಿಸಿಕೊಳ್ಳುತ್ತಾನೆ. ಚುನಾವಣೆ ಮುಗಿಯುವ ತನಕ–1968(2) ಎಂಎಲ್ಜೆ 320 ಡಿಬಿ.

16. ಚುನಾವಣಾಧಿಕಾರಿ ಸದಸ್ಯರನ್ನು ಸೇರಿಸಿಕೊಳ್ಳಲು ಮತಪಟ್ಟಿಯಲ್ಲಿ ಹೆಸರು ಸೇರಿಸಲು ಅಧಿಕಾರ ಇಲ್ಲ. ಅವರ ಕರ್ತವ್ಯ ಚುನಾವಣೆ ನಡೆಸುವುದು ಮಾತ್ರ ಎಐಆರ್ 1984 ಕೆಎಎನ್ 127.

17. ಮತ ಯಾರಿಗೆ ಚಲಾಯಿಸಲಾಗಿದೆ ಎಂದು ಗೊತ್ತಾದರೂ ತಿಳಿಯಬಹುದಾಗಿದ್ದರೂ ಮತ ತಿರಸ್ಕರಿಸಲಾಗದು. ಎಐಆರ್ 1983 ಎಸ್ಸಿ 1293.

18. ಮತ ಪತ್ರಕ್ಕೆ ಚುನಾವಣೇಗೆ ನೇಮಿಸುವ ಅಧಿಕಾರಿ ಸಹಿ ಮಾಡದೆ ಇದ್ದಾಗ–ಚುನಾವಣೆಯ ಮತ ಪತ್ರಕ್ಕೆ ಅಧಿಕಾರಿ ಸಹಿ ಅವಶ್ಯಕ. ಅದರಿಂದಲೇ ಕಾನೂನನ್ನು ಪಾಲಿಸತಕ್ಕದ್ದು. ಎಐಆರ್ 1983 ಎಸ್ಸಿ 1311.

19. ಮಹಾಸಭೆ ಪೂರ್ವಕ್ಕೆ 30 ದಿನಕ್ಕೆ ಸದಸ್ಯರಾಗಿ ಸೇರಿದವರು ಮಾತ್ರ ಮತ ಪಟ್ಟಿಯಲ್ಲಿ ಸೇರುತ್ತಾರೆ. ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರನ್ನು ಮತ ಪಟ್ಟಿಯಲ್ಲಿ ಸೇರಿಸತಕ್ಕದ್ದು. 30 ದಿನಗಳಲ್ಲಿ ಸೇರಿಸಲ್ಪಟ್ಟ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ. ಎಐಆರ್ 1984 ಕೆಇಆರ್ 78.

20. ನೋಂದಾಯಿತ ಸಹಕಾರ ಸಂಘ, ಮಹಾಸಭೆಯು ನಡೆಯುವ 30 ದಿನಗಳ ಪೂರ್ವದಲ್ಲಿ ಸದಸ್ಯರನ್ನು ಸೇರಿಸುವುದಾಗಲಿ, ಷೇರು ವರ್ಗಾವಣೆ ಮಾಡುವುದಾಗಲಿ ಮಾಡತಕ್ಕದಲ್ಲ. ಈ ರೀತಿ ಸೇರಿಸಿಕೊಂಡಾಗ ವರ್ಗಾವಣೆಗೊಂಡರೂ ಅಂತಹ ಸದಸ್ಯರಿಗೆ ಮತ ಚಲಾಯಿಸುವ ಹಕ್ಕು ಇಲ್ಲ. ಎಐಆರ್ 1984 ಕೆಇಆರ್ 24.

21. ಸಹಕಾರ ಸಂಘಗಳ ಬೈಲಾದಡಿ ಸದಸ್ಯತ್ವ ಅರ್ಹತೆ ನಿಗಧಿಪಡಿಸಬಹುದು. ಅಂತಹ ಅರ್ಹತೆ ಗಳಿಸಿದ ನಂತರವೇ ಸದಸ್ಯರು ತಮ್ಮ ಹಕ್ಕುಗಳಿಸಲು ಅರ್ಹತೆ ಹೊಂದಿರುತ್ತಾರೆ. ಪ್ರತಿಯೊಬ್ಬ

ಸದಸ್ಯನಿಗೆ ಒಂದು ಮತ ಎಂದು ಮತ ಚಲಾಯಿಸುವ ಹಕ್ಕು ಹೊಂದಿರುತ್ತಾನೆ. ಮತ್ತು ಚಲಾಯಿಸುವ ಹಕ್ಕು ತಾನು ವ್ಯವಹರಿಸಿದ ಸಾಲ ಪ್ರಮಾಣ, ಠೇವಣಿ, ಹಿಂದಿನ ವರ್ಷದಲ್ಲಿ ನಿಗಧಿಪಡಿಸಿದಂತೆ ಇರತಕ್ಕದ್ದು. 1981 ಪಿಎಲ್‌ಜೆ 108 (ಪಂಜಾಬ್).

22. ಹೊಸದಾಗಿ ಸೇರ್ಪಡೆಯಾದ ಸದಸ್ಯರು ಮತ ಚಲಾಯಿಸುವ ಹಕ್ಕಿನಿಂದ ಪರಿಚಿತರಲ್ಲ. ಸೇರಿಸಿಕೊಂಡಿದ್ದ ಸದಸ್ಯರು ಮತ ಚಲಾಯಿಸಿದಾಗ ಅಲ್ಪ ಮತದಿಂದ ಬಹುಮತ ಪಡೆಯಲು ಸೇರಿಸಲಾಗಿದೆ. ಎಂಬ ತಕರಾರು ಉದ್ಭವವಾಗುತ್ತದೆ ಎಂಬ ಕಾರಣದ ಆಧಾರದಲ್ಲಿ ಹೊಸ ಸದಸ್ಯರು ಹಳೆಯ ಸದಸ್ಯರಂತೆಯೇ ಸೇರಿಸಲ್ಪಟ್ಟ ಸದಸ್ಯರೆಂದು ತಿಳಿಯತಕ್ಕದ್ದು. 1984(2) ಎಐಎಲ್ ಎಲ್‌ಆರ್ 19.

23. ಮತಪಟ್ಟಿ ನ್ಯೂನತೆಗಳು ಚುನಾವಣಾಧಿಕಾರಿ ಮುಂದೆ ಅವಧಿಗನುಗುಣವಾಗಿ ಸಲ್ಲಿಸತಕ್ಕದ್ದು. 1977 ಪಿಎಲ್‌ಜೆ 12.

24. ಚುನಾವಣೆ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದರೆ ತೀರ್ಪಿಗಾಗಿ ಚುನಾವಣಾಧಿಕಾರಿ ಕಾಯಬೇಕು. ನಾಮಪತ್ರ ಒಪ್ಪಿಗೆ/ತಿರಸ್ಕರಣೆ ಬಗ್ಗೆ ತುರ್ತಾಗಿ ತೀರ್ಮಾನಿಸಬೇಕು. ಐಎಲ್‌ಆರ್ 1968(1) ಪಂಜಾಬ್ 159.

25. ಒಂದು ಸಹಕಾರ ಸಂಘದ ಪರವಾಗಿ ಮತ ಚಲಾಯಿಸಲು ಸಂಘವು ಅಂತಹ ವ್ಯಕ್ತಿಯನ್ನು ನೇಮಿಸಬೇಕು. 1978(2) ಎಂಎಲ್‌ಜೆ 528.

## ಸೌಹಾರ್ದ ಸಹಕಾರಿ ಕಾಯಿದೆಯಡಿಯಲ್ಲಿ ಸಮಾಪನೆಗೆ ಸಂಬಂಧಿಸಿದಂತೆ ತೀರ್ಪುಗಳು :

1. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಪೂರ್ವದಲ್ಲಿ ಆ ಸಂಘವು ಆರ್ಥಿಕವಾಗಿ ಸಬಲವಾಗಿ, ಸದಸ್ಯರ ಅನುಕೂಲಕ್ಕೆ ಮುಂದುವರಿಯಬೇಕೆ ಬೇಡವೇ ಎಂಬುದನ್ನು ತೀರ್ಮಾನಿಸುವಾಗ ಆ ಸಂಘದ ಕಾರ್ಯವ್ಯಾಪ್ತಿಯಲ್ಲಿ ಸದಸ್ಯರಿಗೆ ಅನುಕೂಲ ಕಲ್ಪಿಸಲು ಅಥವಾ ಮುಂದುವರಿಯಲು ಸಾಧ್ಯವೇ ಎಂದು ಪರಿಶೀಲಿಸಬೇಕು. ಆ ರೀತಿ ಮಾಡುವಾಗ ಆ ಸಂಘದ ಕಾರ್ಯವ್ಯಾಪ್ತಿಯಲ್ಲಿರುವ ಜಮೀನನ್ನು ಕೃಷಿಯೇತರ ಉದ್ದೇಶಗಳಿಗಾಗಿ ವರ್ಗಾವಣೆ ಮಾಡಿದ ನಂತರ, ವ್ಯವಸಾಯ ಮಾಡಲು ಯಾವುದೇ ಭೂಮಿ ಇಲ್ಲದೇ ಇದ್ದಾಗ, ಅಂತಹ ಸಂಘವನ್ನು ಕೃಷಿ ಪತ್ತಿನ ಸಹಕಾರ ಸಂಘವೆಂದು ಮುಂದುವರೆಸಲು ಅವಶ್ಯಕತೆ ಇಲ್ಲವೆಂಬ ವರದಿ ಆಧಾರದ ಮೇಲೆ ಸಮಾಪನೆಗೊಳಿಸಿರುವುದು ಸಮರ್ಪಕವಾಗಿದ್ದು, ಇದು ಸ್ವಾಭಾವಿಕ ನೀತಿ ನಿಯಮಗಳಿಗೆ ವಿರುದ್ದವಾಗಿರುವುದಿಲ್ಲ. 2004(4) ಕೆಸಿಸಿಆರ್ ಎಸ್‌ಎನ್ 511/ಐಎಲ್‌ಆರ್ 2005(1) ಕೆಎಆರ್ 128

2. ಯಾವುದೇ ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಸಂದರ್ಭದಲ್ಲಿ ಆ ಸಂಘದ ಸದಸ್ಯರಿಗೆ ಮತ್ತು ಆಡಳಿತ ಮಂಡಳಿಗೆ ನೋಟೀಸ್ ಜಾರಿ ಮಾಡದೇ ಆದೇಶ ಮಾಡುವುದು

ನ್ಯಾಯಾಂಗ ಸಂಬಂಧಪಟ್ಟ ನೀತಿಯಲ್ಲ. ವಿಚಾರಣೆ ಮತ್ತು ಪರಿವೀಕ್ಷಣೆ ಮಾಡಲಾಗಿದೆ ಎಂಬ ಆಧಾರದ ಮೇಲೆ ಆ ವರದಿಯಲ್ಲಿ ಕಾಣಿಸಿರುವ ಅಂಶವನ್ನು ಸದಸ್ಯರಿಗೆ ತಿಳಿಸದೇ ಸಮಾಪನೆಮಾಡಿರುವುದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗಿದೆ. 1968 ಸಿಎಲ್‌ಜೆ ಎಪಿ 135.

3. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವಾಗ ಸಂಘದ ನೌಕರರನ್ನು ಕೇಳಿ ಸಮಾಪನಾ ಆದೇಶ ಹೊರಡಿಸಬೇಕೆಂಬ ನಿಯಮವಿಲ್ಲ. ಕಂಪನಿ ಕಾಯಿದೆ, ನೀತಿ, ನಿಯಮ ಸಹಕರ ಸಂಘಗಳಿಗೆ ಅನ್ವಯಿಸುವುದಿಲ್ಲವೆಂದು ಕಾಯಿದೆ ಕಲಂ 128ರಲ್ಲಿ ಸ್ಪಷ್ಟವಾಗಿ ನಮೂದಿಸಿರುವುದರಿಂದ ಸಹಕಾರ ಸಂಘಗಳನ್ನು ಸಮಾಪನೆ ಮಾಡುವಾಗ ಆ ಸಂಘದ ನೌಕರರನ್ನು ಕೇಳುವ ಅವಶ್ಯಕತೆ ಇಲ್ಲ. ಐಎಲ್‌ಆರ್ 1997(2)ಕೆಎಆರ್ 1788/1987(2) ಕೆಎಲ್‌ಜೆ ಎಸ್‌ಎನ್ 340/1987(1) ಬಿಎಲ್‌ಜೆ 312

4. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಸಂದರ್ಭದಲ್ಲಿ ಆ ಸಹಕಾರ ಸಂಘಕ್ಕೆ ಸ್ವಾಭಾವಿಕ ನ್ಯಾಯದನ್ವಯ ನೋಟೀಸ್ ಕೊಡುವುದು ಅವಶ್ಯಕ. ವಿಚಾರಣೆ ಮಾಡುವ ಸಂದರ್ಭದಲ್ಲಿ ಅವಕಾಶ ಕೊಡಲಾಗಿದೆ ಎಂಬ ಆಧಾರದ ಮೇಲೆ ಸಹಕಾರ ಸಂಘವನ್ನು ಸಮಾಪನೆ ಮಾಡುವಾಗ ಅವಕಾಶ ಕೊಡುವ ಅವಶ್ಯಕತೆ ಇಲ್ಲವೆಂದು ತೀರ್ಮಾನಕ್ಕೆ ಬರತಕ್ಕದ್ದಲ್ಲ. ಯಾವ ಸಂದರ್ಭದಲಿ ಅವಕಾಶವನ್ನು ಕೊಟ್ಟಿಲ್ಲವೋ ಮೇಲ್ಮನವಿಯಲ್ಲಿ ಆ ಅವಕಾಶ ಕಲ್ಪಿಸಲಾಗಿದೆ ಎಂಬ ಆಧಾರದ ಮೇಲೆ ಆ ತಪ್ಪನ್ನು ಸರಿಪಡಿಸಲಾಗದು. ಅವಕಾಶ ಕೊಡದೇ ಸಮಾಪನೆ ಮಾಡಿರುವುದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ. 1974(1) ಕೆಎಲ್‌ಜೆ 355.

5. ಸ್ವಾಭಾವಿಕ ನ್ಯಾಯದನ್ವಯ ಒಂದು ಸಹಕಾರ ಸಂಘವನ್ನು ಸ್ವ ಇಚ್ಛೆಯಿಂದ ನಿಬಂಧಕರು ಸಮಾಪನೆ ಮಾಡಬೇಕೆಂದು ಕಲಂ 64, 65ರ ವರದಿಯನ್ನಾಧರಿಸಿ ತೀರ್ಮಾನ ತೆಗೆದುಕೊಳ್ಳಬಹುದು. ಇದು ಕಲಂ 72(1)ರನ್ವಯ ಅವಕಾಶಕ್ಕೆ ಪ್ರತ್ಯೇಕವಾಗಿರತಕ್ಕದ್ದು. ಒಂದು ಸಹಕಾರ ಸಂಘದ ವ್ಯವಹಾರ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ನಿಬಂಧಕರು ತೀರ್ಮಾನಕ್ಕೆ ಬಂದಾಗ ಮತ್ತು ಭಾರತೀಯ ರಿಜವ ಬ್ಯಾಂಕ್ ಈ ಬ್ಯಾಂಕಿನ ವ್ಯವಹಾರ ಸಮರ್ಪಕವಾಗಿಲ್ಲವೆಂದು ವರದಿ ಕೊಡುತ್ತಿರುವ ಸಂದರ್ಭದಲ್ಲಿ ಸ್ವಪ್ರೇರಣೆಯಿಂದ ಸಮಾಪನೆ ಕ್ರಮಜರುಗಿಸಿರುವುದು ಸೂಕ್ತ ಹಾಗೂ ಕ್ರಮಬದ್ಧ. 1990(3) ಕೆಎಲ್‌ಜೆ 16

6. ಒಂದು ಸಹಕಾರ ಸಂಘದ ಆಡಳಿತ ಮಂಡಳಿ, ಮಹಾಸಭೆಯ ಒಪ್ಪಿಗೆ ಪಡೆಯದೇ, ಸಂಘದ ಆಸ್ತಿಯನ್ನು ಮಾರಾಟ ಮತ್ತು ಬಾಡಿಗೆ ಕೊಡುವುದು ಸಮರ್ಥ ಕೆಲಸವಲ್ಲ. ಅಂತಹ ಅಧಿಕರವನ್ನು ಕಾನೂನುಬದ್ದ ಅಧಿಕಾರ ಚಲಾವಣೆ ಎಂದು ತಿಳಿಯತಕ್ಕದ್ದು. ಐಎಲ್‌ಆರ್ 1990(2) ಕೆಎಆರ್ 1785/ಎಐಆರ್ 1991 ಕೆಎಎನ್‌ಟಿ ಎನ್‌ಒಸಿ 15ಎ/

7. ರಿಜಿಸ್ಟ್ರಾರ್ ಎಂಬ ಪದಕ್ಕೆ ಅಪರ ನಿಬಂಧಕರು ಸೇರಿರುತ್ತಾರೆ. ಕೈಗಾರಿಕಾ ಇಲಾಖೆಯ ಅಪರ ನಿಬಂಧಕರು ಸಮಾಪನಾ ಆದೇಶವನ್ನು ಹೊರಡಿಸಿದಾಗ ಆ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಲು ಆ ಆಪರ ನಿಬಂಧಕರನ್ನು ಕಲಂ 2ಎ(5)ರಲ್ಲಿ ನಿಬಂಧಕರಿಗೆ ಕೊಟ್ಟ ಅಧಿಕಾರವನ್ನು

ಕಲಂ 72, 73, 75ರಲ್ಲಿ ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಮೇಲ್ಮನವಿಯನ್ನು ನಿಬಂಧಕರ ಮುಂದೆ ಸಲ್ಲಿಸಿದಾಗ ಆ ಪ್ರಕರಣ ವಿಚಾರಣಾರ್ಹ. 1994(4) ಕೆಎಲ್‌ಜೆ 627/1994(3) ಕೆಎಆರ್ 2703 ಡಿಬಿ.

**ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960 :**

1. ಒಂದು ಸಂಘದ ಅರ್ಜಿಯ ನೋಂದಣಿಗೆ ಪ್ರಸ್ತಾವನೆ ಸ್ವೀಕರಿಸಿ ಪರಿಶೀಲಿಸುತ್ತಿದ್ದಾಗ ಕೆಲವು ನ್ಯೂನತೆಗಳನ್ನು ಕಂಡುಹಿಡಿದು ಸರಿಪಡಿಸಲು ವಾಪಸ್ ಹಾಕಲಾಗಿತ್ತು. ಅದೇ ಸಂದರ್ಭದಲ್ಲಿ ಮತ್ತೊಂದು ಪ್ರಸ್ತಾವನೆ ಅದೇ ಹೆಸರಿನಿಂದ ಸಲ್ಲಿಕೆಯಾಯಿತು. ಆ ಅರ್ಜಿಯನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ನಿಬಂಧಕರು ಹೆಸರುಗಳು ಹೊಂದಾಣಿಕೆಯಾಗುತ್ತದೆ ಎಂಬ ಕಾರಣಕ್ಕೆ ಎರಡನೇ ಪ್ರಸ್ತಾವನೆಯನ್ನು ತಿರಸ್ಕರಿಸಿದಾಗ, ಅಂತಹ ತಿರಸ್ಕರಣೆಗೆ ಪೂರಕವಾಗಿ ರಿಟ್ ಅರ್ಜಿ ದಾಖಲಾಗಿತ್ತು. ನಿಬಂಧಕರು ಮೊದಲನೇ ಪ್ರಸ್ತಾವನೆಯನ್ನು ನೋಂದಾಯಿಸಿರಲಿಲ್ಲ ಮತ್ತು 2ನೇ ಪ್ರಸ್ತಾವನೆಯನ್ನು ತಿರಸ್ಕರಿಸಲಾಯಿತು. ಇದಕ್ಕೆ ಕಾರಣ ಒಂದೇ ರೀತಿಯ ಹೆಸರಿದ್ದ ಬಗ್ಗೆ. ಆದರೆ ನಿಬಂಧಕರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಸಂಘವು ನೋಂದಾವಣೆಯಾಗುವ ಪೂರ್ವದಲ್ಲಿಯೇ ಸಮಾನಂತರವಾದ ಮತ್ತೊಂದು ಪ್ರಸ್ತಾವನೆಯನ್ನು ತಿರಸ್ಕರಿಸುವುದು ತಪ್ಪು. ಮತ್ತು ಅದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ಮತ್ತು ಸಾರ್ವಜನಿಕ ಇಲಾಖೆಯ ನಿರ್ದೇಶಕರುಗಳ ವರದಿಯನ್ನಾಧರಿಸಿ ವಿಚಾರಣೆ ಮಾಡಿ ನೋಂದಾವಣೆಯನ್ನು ತಿರಸ್ಕರಿಸಲಾಗಿತ್ತು. ಇದು ನಿಬಂಧಕರಿಗೆ ಕೊಟ್ಟ ಅಧಿಕಾರವ್ಯಾಪ್ತಿಗೆ ಮೀರಿದದು. 1966(1) ಎಂಎಲ್‌ಜೆ 712.

2. ನಿಬಂಧಕರು ಒಂದು ಸಂಘವನ್ನು ನೋಂದಾವಣೆ ಮಾಡಿದ ನಂತರ ಆ ಹೆಸರು ಮತ್ತೊಂದು ಸಂಘದ ಹೆಸರಿನ ಜೊತೆಗೆ ಹೋಲಿಕೆಯಾಗುತ್ತದೆ ಎಂಬ ಕಾರಣಕ್ಕೆ ನೋಂದಣಿಯನ್ನು ರದ್ದುಪಡಿಸುವ ಅಧಿಕಾರ ಹೊಂದಿಲ್ಲ ಹಾಗೂ ಅಂತಹ ಸಂಘ ಕಾನೂನುಬದ್ಧವಲ್ಲದ ಕೆಲಸ ನಿರ್ವಹಿಸುತ್ತಿದ್ದರೆ ಮಾತ್ರ ಮಧ್ಯಪ್ರವೇಶ ಮಾಡಬಹುದು, ಉಪ ನಿಬಂಧಕರು ತನ್ನ ಆದೇಶವನ್ನು ಪುನರ್ ವಿಮರ್ಶೆ ಮಾಡುವ ಅಧಿಕಾರ ಹೊಂದಿಲ್ಲ. ಆ ಆದೇಶವು ಅಧಿಕಾರ ವ್ಯಾಪ್ತಿಗೆ ಮೀರಿದ್ದು, ಆದ್ದರಿಂದ ಅದನ್ನು ಕಿತ್ತುಹಾಕಬೇಕು 2003(6) ಕೆಎಲ್‌ಜೆ 153.

3. ಯಾವುದೇ ಪ್ರಾಧಿಕಾರ ತನ್ನ ಕಾರ್ಯವ್ಯಾಪ್ತಿಗೆ ಬರದೇ ಇದ್ದ ಒಂದು ವಿಚಾರವನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ವ್ಯಕ್ತಿ ಅದನ್ನು ಪ್ರಶ್ನಿಸಬೇಕು. ಅಂತಹ ಸಂದರ್ಭದಲ್ಲಿ ಪರಿಹಾರ ಸಿಗದೇ ಇದ್ದಾಗ ರಿಟ್ ಅರ್ಜಿ ಮುಖಾಂತರ ಪ್ರಶ್ನಿಸುವ ಬದಲು ಪ್ರಾಧಿಕಾರದ ಮುಂದೆಯೇ ಹೇಳಬೇಕಾಗಿತ್ತು. 1966(1) ಎಂಎಲ್‌ಜೆ 536.

4. ಮೇಲ್ಮನವಿ ಪ್ರಾಧಿಕಾರಣಕ್ಕೆ ಒಂದುಸಂಘದ ನೋಂದಣಿಯನ್ನು ರದ್ದುಪಡಿಸಿದಾಗ ಮೇಲ್ಮನವಿ ಸಲ್ಲಿಸಲು ಅಧಿಕಾರವಿದೆ. ನೋಂದಣಿಯನ್ನು ರದ್ದುಪಡಿಸುವ ಸಂದರ್ಭದಲ್ಲಿ ವಿಚಾರಣೆ ಮಾಡಿಲ್ಲವೆಂದು ಹಾಗೂ ವಿಚಾರಣೇ ಮಾಡದೇ ನೋಂದಣಿಯನ್ನು ರದ್ದುಪಡಿಸಲಾಗಿದೆಯೆಂದು ಗೊತ್ತಿದ್ದರೂ ಮೇಲ್ಮನವಿ ಪ್ರಾಧಿಕಾರವು ಮೇಲ್ಮನವಿಯನ್ನು ಸ್ವೀಕರಿಸಿ ನೋಂದಣಿಯನ್ನು

ರದ್ದುಪಡಿಸಲು ನೋಟೀಸ್ ಜಾರಿ ಮಾಡದೇ ಆದೇಶಿಸಿರುವುದು ತಪ್ಪು. ಅದನ್ನು ಕಿತ್ತುಹಾಕಬೇಕು. 2006(5) ಕೆಎಲ್‌ಜೆ 60

5. ಕಲಂ 9 ಮತ್ತು 10ರನ್ವಯ ನಿಯಮ ಮತ್ತು ನಿಬಂಧನೆಗಳಿಗೆ ತಿದ್ದುಪಡಿ ತರುವ ಸಂದರ್ಭದಲ್ಲಿ 21 ದಿವಸಗಳ ನೋಟೀಸ್ ಕೊಡುವುದು ಅವಶ್ಯಕ ಮತ್ತು ಕಾನೂನಿನ ಬದ್ಧತೆ 1979(1) ಕೆಎಲ್‌ಜೆ 244

6. ಒಂದು ಸಂಘದ ಉಪನಿಯಮಗಳನ್ನು ರದ್ದುಪಡಿಸುವಂತೆ ಕಂದಾಯ ಮಂತ್ರಿಗಳು ಉಪನಿಬಂಧಕರಿಗೆ ನಿರ್ದೇಶನ ಕೊಡುವುದು ಕಾನೂನುಬಾಹಿರ. ಉಪನಿಬಂಧಕರು ತಮ್ಮ ಅಧಿಕಾರ ಚಲಾಯಿಸುವಾಗ ಕಾಯಿದೆಯಲ್ಲಿ ಕೊಟ್ಟ ಅವಕಾಶಗಳ ಆಧಾರದ ಮೇಲೆಯೇ ಕರ್ತವ್ಯ ನಿರ್ವಹಿಸಬೇಕು. ಕಂದಾಯ ಸಚಿವರು ನಿದೇಶನ ಕೊಡತಕ್ಕದ್ದಲ್ಲ. ನಿಬಂಧಕರು ವಿಚಾರಣೆ ಮಾಡಿ ತೀರ್ಪು ಕೊಡಬಹುದೇ ಹೊರತು ಕಂದಾಯ ಮಂತ್ರಿಗಳ ಆದೇಶದನ್ವಯ ಆದೇಶಿಸತಕ್ಕದ್ದಲ್ಲ. 2003(4) ಕೆಎಲ್‌ಜೆ 409

7. ಒಂದು ಸಂಘವು ಕೆಲಸಗಳನ್ನು ಒಂದು ಉಪಸಮಿತಿಗೆ ವಹಿಸಿದ್ದಾಗ, ಆ ಉಪಸಮಿತಿಯನ್ನು ಟ್ರಸ್ಟಿಗೆ ಸಮಾನಾಂತರ ಎಂದು ತಿಳಿಯತಕ್ಕದ್ದಲ್ಲ. ಉಪಸಮಿತಿಯ ವಿವರಣೆಯನ್ನು ಸರ್ವಸದಸ್ಯರ ಸಭೆ ಒಪ್ಪಿಕೊಂಡರೆ, ಆ ಬಗ್ಗೆ ಇತರ ಸದಸ್ಯರು ಅದೇ ವಿಷಯವನ್ನು ಪುನರ್ ಪ್ರಶ್ನಿಸತಕ್ಕದ್ದಲ್ಲ. 1970(1) ಎಂಎಲ್‌ಜೆ 296.

8. ಒಂದು ಸಂಘವನ್ನು ಕಾಯಿದೆಯಡಿಯಲ್ಲಿ ಪ್ರಾರಂಭಿಸಿದಾಗ ಅದು ಕಾನೂನುಬದ್ದ ಸಂಸ್ಥೆಯಲ್ಲ. ಉಪನಿಯಮಗಳು ಮತ್ತು ನಿಯಮಗಳು ಆ ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಜೊತೆ ಆದ ಒಂದು ಒಪ್ಪಂದ. ಐಎಲ್‌ಆರ್ 1993(2) ಕೆಎಆರ್ 1564.

9. ಒಂದು ಸಂಘದ ಸಹಸದಸ್ಯರನ್ನು ಸಾಮಾನ್ಯ ಸದಸ್ಯರೆಂದು ಅರ್ಜಿ ಸಲ್ಲಿಸಿದಾಗ ಆಯ್ಕೆ ಮಾಡಿ ಆನಂತರ ಅರ್ಜಿಯಲ್ಲಿ ಸೂಚಕರು ಅಥವಾ ಅನುಮೋದಕರು ಸಮರ್ಪಕವಾಗಿಲ್ಲವೆಂದು ಸಾಮಾನ್ಯ ಸದಸ್ಯರ ಹಕ್ಕು ಮತ್ತು ಅನುಕೂಲಗಳನ್ನು ಪಡೆಯಲು ಅನರ್ಹರೆಂದು ಮತ್ತು ಅಂತಹ ವ್ಯಕ್ತಿಗಳು ಸಹಸದಸ್ಯರಾಗಿ ಮುಂದುವರೆಯಬಹುದು. ಆದರೆ ಆಡಳಿತ ಮಂಡಳಿಯು ಅಂತಹ ಸಂದರ್ಭದಲ್ಲಿ ಸಾಮಾನ್ಯ ಸದಸ್ಯರಾಗಿ ಆದ ವ್ಯಕ್ತಿಗಳನ್ನು ಹಿಂಬಡ್ತಿ ನೀಡಿ ಸಹಸದಸ್ಯರನ್ನಾಗಿ ಮಾಡುವುದು ಸರಿಯೇ ಇಲ್ಲವೇ ಎಂಬುದನ್ನು ಸಂವಿಧಾನದ ಪರಿಚ್ಛೇದ 226ರಲ್ಲಿ ಪ್ರಶ್ನಾರ್ಹವೇ ಎಂಬುದನ್ನು ನಿರ್ಧರಿಸಬೇಕು. 2001(2) ಕೆಸಿಸಿಆರ್ 1357(ಡಿಬಿ)

10. ಪ್ರತಿಯೊಬ್ಬ ಸದಸ್ಯನಿಗೂ ನಿಯಮ ಮತ್ತು ಉಪಬಂಧಗಳ ತಿದ್ದುಪಡಿಗೆ ಸಂಬಂಧಪಟ್ಟಂತೆ ಲಿಖಿತವಾಗಿ ಅಥವಾ ಅಚ್ಚುಹಾಕಿಸಿ, ವಿಶೇಷ ಮಹಾಸಭೆಯ ಮೀಟಿಂಗ್ ನೋಟೀಸ್‌ನ ಜೊತೆ ಲಗತ್ತಿಸತಕ್ಕದ್ದು. ಕಲಂ 9 ಮತ್ತು10ರಂತೆ ಮೀಟಿಂಗ್ ನೋಟೀಸ್‌ನಲ್ಲಿ ದಿನ, ಸ್ಥಳ ಮತ್ತು ವೇಳೆಯನ್ನು ತಿಳಿಸಬೇಕು 2009 (2) ಕೆಸಿಸಿಆರ್ 1187/2009(4) ಕೆಎಲ್‌ಜೆ 11 (ಡಿಬಿ)

11. ಕಲಂ 9 ಮತ್ತು 10ರನ್ವಯ 21 ದಿವಸಗಳ ನೋಟೀಸ್ ಕೊಡುವುದು ಹಾಗೂ ತಿದ್ದುಪಡಿಗಳನ್ನು ನಿಯಮಗಳು ಮತ್ತು ಉಪಬಂಧಗಳಿಗೆ ತಿದ್ದುಪಡಿ ತರುವಾಗ ನೋಟೀಸ್ ಕೊಡಬೇಕಾದುದು ಅವಶ್ಯಕ ಮತ್ತು ಅದು ಕಾನೂನುಬದ್ದ. ಪ್ರತಿಯೊಬ್ಬ ಸದಸ್ಯನಿಗೂ ಇದು ಒಂದು ಹಕ್ಕು. 1979(1) ಕೆಎಲ್‌ಜೆ 244/ಐಎಲ್ಆರ್ 1979(2) ಕೆಎಆರ್ 1445.

12. ಕಾಯಿದೆ ಮತ್ತು ನಿಯಮದಲ್ಲಿ ಗೌರವ ಕಾರ್ಯದರ್ಶಿ ಹಾಗೂ ಖಜಾಂಚಿ ನೇಮಕ ಮಾಡಲು ಸ್ಪಷ್ಟ ಪ್ರಸ್ತಾವನೆ ಇಲ್ಲದಿದ್ದರೆ ಅಂತಹ ಪ್ರಸಂಗದಲ್ಲಿ ಸಾಮಾನ್ಯ ಸಭೆ ನೇಮಿಸತಕ್ಕದ್ದು. ಆಡಳಿತ ಮಂಡಳಿ ನೇಮಿಸಿದರೆ ಅದು ಕಾನೂನುಬಾಹಿರ. ಐಎಲ್ಆರ್1985 (2) ಕೆಎಆರ್ 1354/1984(2) ಕೆಎಲ್‌ಜೆ 407/ಎಐಆರ್ 1985 ಎನ್ಒಸಿ 97. ವಿಶೇಷ ಮಹಾಸಭೆಯನ್ನು ಕರೆಯಲು 1/3 ಅಂಶದ ಸದಸ್ಯರು ಲಿಖಿತ ಮನವಿ ಸಲ್ಲಿಸಬಹುದು. ಅಥವಾ ಆಡಳಿತ ಮಂಡಳಿಯ ಅಧ್ಯಕ್ಷರು ಕರೆಯಬಹುದು. ಕಾರ್ಯದರ್ಶಿ ಅಥವಾ ಖಜಾಂಚಿ ಸಭೆಯನ್ನು ಕರೆಯುವ ಅಧಿಕಾರ ಹೊಂದಿಲ್ಲ 1984(2) ಕೆಎಲ್‌ಜೆ 407/ಐಎಲಾರ್ 1987(2)1354/ಎಐಆರ್ 1985 ಎನ್ಒಸಿ 97.

13. ದಂಡ ಮತ್ತು ಫೀಯನ್ನು ವಸೂಲಿ ಮಾಡುವುದು ಆದಾಯ ಮತ್ತು ಖರ್ಚು ಲೆಕ್ಕವನ್ನು ಸಲ್ಲಿಸುವುದನ್ನು ಪ್ರಶ್ನಿಸಲಾಯಿತು. ಇದಕ್ಕೆ ಲೆಕ್ಕಪತ್ರಗಳನ್ನು ಸಲ್ಲಿಸುವುದಕ್ಕೂ ಫೀ ಮತ್ತು ದಂಡವನ್ನು ವಸೂಲಾತಿಗೂ ಸಂಬಂಧ ಕಲ್ಪಿಸತಕ್ಕದ್ದಲ್ಲ. ಸಾಮಾನ್ಯ ನೀತಿ ಸರ್ಕಾರದ ಆದಾಯ ಹೆಚ್ಚಿಸಿಕೊಳ್ಳುವುದಲ್ಲ. ಲೆಕ್ಕಪತ್ರಗಳನ್ನು ಪರಿಶೀಲಿಸುವುದು. ದಾಖಲೆಗಳನ್ನು ಪರಿಶೀಲಿಸುವುದು. ಸಮಾನಾಂತರವಾಗಿ ಲೆಕ್ಕ ಮಾಡತಕ್ಕದ್ದಲ್ಲ. ಸಮಾಜದ ಮತ್ತು ರಾಜ್ಯದ ಹಿತಾಸಕ್ತಿಗೆ ಪೂರಕವಾಗಿ ಈ ಅವಕಾಶ ಕಲ್ಪಿಸಿದೆ. ಇದನ್ನು ಅಸಿಂಧುವೆಂದು ತಿಳಿಯತಕ್ಕದ್ದಲ್ಲ. 2007(3) ಕೆಸಿಸಿಆರ್ 1728/ಐಎಲ್ಆರ್ 2007(2) ಕೆಎಆರ್ 1989/2007(5) ಕೆಎಲ್‌ಜೆ 56.

14. ಒಬ್ಬ ಅರ್ಜಿದಾರ ಒಂದು ಸಂಘದ ಚುನಾವಣೆಯಲ್ಲಿ ಭಾಗವಹಿಸಿ ಸ್ಪರ್ಧಿಸಿ, ಸೋತಾಗ, ಅಂತಹ ವ್ಯಕ್ತಿ ಉಪನಿಯಮಗಳು ವಿಶೇಷ ಮಹಾಸಭೆಯಲ್ಲಿ ಒಪ್ಪಿಗೆಯಾಗಿಲ್ಲವೆಂಬ ಕಾರಣಕ್ಕೆ ಪ್ರಶ್ನಿಸತಕ್ಕದ್ದಲ್ಲ. ವಿಶೇಷ ಮಹಾಸಭೆಗೆ 20 ದಿನಗಳ ಪೂರ್ವದ ನೋಟೀಸ್ ಜಾರಿಯಾಗಿದ್ದು, ಆ ಸಭೆಯಲ್ಲಿ ಪ್ರಶ್ನಿಸಬೇಕಾಗಿತ್ತು. ಆ ಸಭೆಯಲ್ಲಿ ಕೋರಂ ಇರಲಿಲ್ಲವೆಂಬ ಅಂಶವನ್ನು ದಾಖಲಿಸಬೇಕಾಗಿತ್ತು. ಆದ್ದರಿಂದ ನ್ಯಾಯಾಲಯವು ಮಧ್ಯಪ್ರವೇಶಿಸುವುದಿಲ್ಲ. ಈ ಉಪನಿಯಮಗಳ ತಿದ್ದುಪಡಿಯನ್ನು ಮಹಾಸಭೆಯ ಒಪ್ಪಿಗೆಗೆ ಇಟ್ಟಾಗ ಆ ತಿದ್ದುಪಡಿಗೆ ಒಪ್ಪಿಗೆಯಾಗಿದೆ ಮತ್ತು ಕೆಲವು ವ್ಯಕ್ತಿಗಳು ತಿದ್ದುಪಡಿ ಬಗ್ಗೆ ತಕರಾರು ತೆಗೆದಿದ್ದಾರೆ. ದಾಖಲೆಗಳು ಮತ್ತು ಆದೇಶಗಳನ್ನು ಪರಿಶೀಲಿಸಿದಾಗ ಕಲಂ 10ರನ್ವಯ ನೀತಿನಿಯಮವನ್ನು ಪಾಲಿಸಲಾಗಿದೆ. ಆದ್ದರಿಂದ ಮಧ್ಯಪ್ರವೇಶ ಇಲ್ಲ 2007(2) ಕೆಎಲ್‌ಜೆ 529

15. ಒಂದು ಸಂಘದ ನಿಯಮಗಳು ತಿದ್ದುಪಡಿಯಾಗಿ ಆ ತಿದ್ದುಪಡಿಯಲ್ಲಿ ಸಮಿತಿಯ ಅವಧಿ 1 ವರ್ಷವಿದ್ದದ್ದನ್ನು 3 ರ್ಷವೆಂದು ಸೇರ್ಪಡೆ ಮಾಡಿದಾಗ ಆ ನಿಯಮವನ್ನು 23–6–1999 ನಿಬಂಧಕರು ನೋಂದಾಯಿಸಿದಾಗ ಆ ತಿದ್ದುಪಡಿ ಆಧಾರದ ಮೇಲೆ ಪದಾಧಿಕಾರಿಗಳ

ಅವಧಿ 1 ವರ್ಷದಿಂದ 3 ವರ್ಷ ಆಗತಕ್ಕದ್ದಲ್ಲ. ಅಂದರೆ 1999 ರಿಂದ 2000 ವರ್ಷ ಎಂದು ಸೂಚಿಸಿರುವುದು ಸರಿಯಲ್ಲ. ನಿಬಂಧಕರು ಆ ನಿಯಮಗಳಿಗೆ ಒಪ್ಪಿಗೆ ಕೊಟ್ಟಿದ್ದು, ಮುಂದಿನ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರಿಗೆ ಮಾತ್ರ. ಆದ್ದರಿಂದ ಹೊಸ ಚುನಾವಣೆಗೆ ಆದೇಶಿಸಬೇಕು. 2001(1) ಕೆಎಲ್‌ಜೆ ಎಸ್‌ಎನ್ 46.

16. ಒಂದು ಸಂಘದ ನಿಯಮ ಮತ್ತು ನಿಬಂಧನೆಗಳು ನೋಂದಾವಣೇ ಆಗತಕ್ಕದ್ದು. ನೇಮಕಾತಿ ನಿಯಮಗಳು ನೋಂದಣಿ ಆಗುವ ಅವಶ್ಯಕತೆ ಇಲ್ಲ. ಏಕೆಂದರೆ ಅವು ನಿಯಮ ಮತ್ತು ನಿಬಂಧನೆಗಳ ಭಾಗವಲ್ಲ. ಸಂಸ್ಥೆಯ ಉಪನಿಯಮಗಳು ಕರ್ನಾಟಕ ರಾಜ್ಯ ಸರ್ಕಾರದ ಒಪ್ಪಿಗೆಯನ್ನು ಉಪನಿಯಮಗಳ ಒಪ್ಪಿಗೆ ಪಡೆಯಬೇಕೆಂದಿದೆ ಅದರಲ್ಲಿ ಸೇವಾ ನಿಯಮಗಳು ಸೇರಿಲ್ಲ. ಸೇವಾ ನಿಯಮಗಳನ್ನು ಒಪ್ಪಿಗೆ ಕೊಡುವುದು ಆ ಸಂಘದ ಸಮಿತಿ. 1997(5) ಕೆಎಲ್‌ಜೆ 673ಬಿ/ಐಎಲ್‌ಆರ್ 1997 ಕೆಎಆರ್ 833.

17. ಮೊದಲನೇ ಸಾಮಾನ್ಯ ಸಭೆಯನ್ನು ನೋಂದಣಿಯಾದ 13 ತಿಂಗಳ ನಂತರ ಕರೆಯಲಾಗಿದೆ. 18 ತಿಂಗಳ ನಂತರ ಆಡಳಿತ ಮಂಡಳಿ ರಚನೆಯಾಗಿರುವುದು ನಿಂತುಹೋಗುತ್ತದೆ. ನಿಬಂಧಕರು ಮೊದಲನೇ ಸಭೆಯನ್ನು ಕರೆಯಲು ಅವಧಿ ವಿಸ್ತರಿಸಲು ಅಧಿಕಾರ ಹೊಂದಿಲ್ಲ. ನೋಂದಾವಣಿ ಸಮಯದಲ್ಲಿ ಆಡಳಿತ ಮಂಡಳಿಯ ರಚನೆಯು 18 ತಿಂಗಳ ನಂತರ ಕಾನೂನುಬದ್ಧವಾಗಿ ಮುಂದುವರೆಯತಕ್ಕದ್ದಲ್ಲ. 1987 (2) ಕೆಎಲ್‌ಜೆ ಎಸ್‌ಎನ್ 168/ ಐಎಲ್‌ಆರ್ 1985 ಕೆಎಆರ್ 1230.

18. ಅರ್ಜಿದಾರರು ರಿಟ್ ಅರ್ಜಿ ದಾಖಲಿಸುವ ಸಂದರ್ಭದಲ್ಲಿ ಮಹಾಸಭೆಯನ್ನು ಕರೆದಿಲ್ಲವೆಂದು, ಅದೂ 2 ದಶಕಗಳ ಅವಧಿಯ, ತಾಂತ್ರಿಕ ಕಾರಣಗಳನ್ನು ಮುಂದೊಡ್ಡಿ ಆಡಳಿತಾಧಿಕಾರಿಗಳನ್ನು ನೇಮಿಸಿರುವುದು ಸರಿಯಲ್ಲವೆಂದು ಪ್ರಶ್ನಿಸಿದ್ದರು. ಸರ್ಕಾರವು ದಾಖಲೆಗಳೆಲ್ಲವನ್ನೂ ಪರಿಶೀಲಿಸಿ ಆಡಳಿತಾಧಿಕಾರಿಯನ್ನು 6 ತಿಂಗಳ ಅವಧಿಗೆ ನೇಮಿಸಿರುವುದು ಮತ್ತು ಹೊಸದಾಗಿ ಚುನಾವಣೆ ನೆಡೆಯಲು ಆದೇಶಿರುವುದು ಸಮರ್ಪಕವಾಗಿದೆ. ಉಪನಿಬಂಧಕರು ಕಾರಣ ಕೇಳುವ ನೋಟೀಸ್ ಜಾರಿ ಮಾಡಿ, ಆ ನೋಟೀಸ್‌ನ ಆಧಾರದ ಮೇಲೆ ಸಲ್ಲಿಸಿದ ಉತ್ತರಗಳನ್ನು ಪರಿಶೀಲಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಆಡಳಿತಾಧಿಕಾರಿಯನ್ನು ನೇಮಿಸುವ ಪೂರ್ವದಲ್ಲಿ ವೈಯಕ್ತಿಕ ವಿವರಣೆ ಕೊಡಲು ಅವಕಾಶ ಕಲ್ಪಿಸಿಲ್ಲವೆಂಬ ಕಾರಣದ ಮೇಲೆ ಮತ್ತು ಸಮರ್ಪಕ ವಿಚಾರಣೆ ಮಾಡಿಲ್ಲವೆಂದು ಪ್ರಶ್ನಿಸಿರುವುದು ಸರಿಯಲ್ಲ 2006(6) ಕೆಎಲ್‌ಜೆ 607.

19. ವಿಶೇಷ ಮಹಾಸಭೆಯನ್ನು ಕರೆಯಬೇಕಾದರೆ ಒಟ್ಟು ಸದಸ್ಯರ 1/3 ಅಂಶದ ಸದಸ್ಯರು ಹಾಗೂ ಮತ ಚಲಾಯಿಸಲು ಹಕ್ಕುಳ್ಳವರು ಲಿಖಿತ ಮನವಿಯನ್ನು ವ್ಯವಹರಿಸಬಹುದಾದ ವಿಷಯ ನಮೂದಿಸಿ ವಿನಂತಿಸಿದಾಗ ನಿಗಧಿಪಡಿಸಿದ ಅವಧಿಯೊಳಗೆ ಕರೆಯತಕ್ಕದ್ದು. ಯಾವ ಸಂದರ್ಭದಲ್ಲಿ ಸಭೆ ಕರೆಯುವ ಕಾರ್ಯದರ್ಶಿ ನಿಯಮದನ್ವಯ ಅರ್ಹನಿಲ್ಲವೋ ಅಂತ ವ್ಯಕ್ತಿ ಸಭೆ ಕರೆದು, ಅದರಲ್ಲೂ ಮತ ಚಲಾಯಿಸಲು ಹಕ್ಕುಳ್ಳ 1/3 ಅಂಶದ ಸದಸ್ಯರು ಇಲ್ಲದಿದ್ದಾಗ

ಕರೆದಿರುವುದು ಕಾನೂನಿನನ್ವಯವಲ್ಲ. 1982 ಕೆಎಲ್‌ಜೆ 407/ಐಎಲ್‌ಆರ್ 1985 ಕೆಎಆರ್ 1354/ಎಐಆರ್ 1985 ಎನ್‌ಓಸಿ 97

20. ನಿಬಂಧಕರು ಸ್ವ ಇಚ್ಛೆಯಿಂದ ವಿಚಾರಣೆ ಆದೇಶಿಸಬಹುದು ಅಥವಾ 1/3 ಅಂಶದ ಸದಸ್ಯರು ಲಿಖಿತ ಮನವಿ ಸಲ್ಲಿಸಿದಾಗ ವಿಚಾರಣೆ ಮಾಡಬಹುದು. ವಿಚಾರಣೆ ವರದಿಯನ್ನಾಧರಿಸಿ ಕ್ರಮ ಜರುಗಿಸುವಂತೆ ಸಂಘಕ್ಕೆ ಸೂಚಿಸಬಹುದು. ಅಥವಾ ಹೊಸ ಚುನಾವಣೆಯನ್ನು ಮಾಡಲು ಮಹಾಸಭೆಯನ್ನು ಕರೆಯಲು ನಿರ್ದೇಶನ ನೀಡಬಹುದು. ಅಥವಾ ಕಾರ್ಯದರ್ಶಿಯನ್ನು ಬದಲಾವಣೆ ಮಾಡಲು ಸೂಚಿಸಬಹುದು. ಈ ಪ್ರಕರಣದಲ್ಲಿ ಕಲಂ 13ರನ್ವಯ ಕಾರ್ಯದರ್ಶಿಗಳು ಮತ್ತು ಅವರ ಜೊತೆಗೆ ಇಬ್ಬರು ಸದಸ್ಯರು ಆರ್ಥಿಕ ತಃಖ್ತೆಗಳು ಮತ್ತು ಪದಾಧಿಕಾರಿಗಳ ದಾಖಲೆಯನ್ನು ಇಲಾಖೆಗೆ ಮಂಡಿಸಿದ ನಂತರ, ನಿಬಂಧಕರು ಆ ತಃಖ್ತೆಗಳನ್ನು ಒಪ್ಪಿದ್ದರು ಆ ರೀತಿ ಮಂಡಿಸಿದ ತಃಖ್ತೆಗಳು ತಾವೇ ಪದಾಧಿಕಾರಿಗಳೆಂದು ತಃಖ್ತೆಗಳನ್ನು ಸಲ್ಲಿಸಿದ್ದರು. ಮತ್ತು ನಿಜವಾದ ಕಾರ್ಯದರ್ಶಿ ಸಲ್ಲಿಸಿದ ತಃಖ್ತೆಗಳನ್ನು ಸ್ವೀಕರಿಸಲಿಲ್ಲ ಮತ್ತು ತಿರಸ್ಕರಿಸಿದ್ದರು. ಆ ರೀತಿ ತಿರಸ್ಕರಿಸಿದದು ಕಾನೂನಿಗೆ ವಿರುದ್ಧ ಆದ್ದರಿಂದ ಅದನ್ನು ಒಪ್ಪಲಿಲ್ಲ. ಪುನಃ ವಿಚಾರಣೆಯನ್ನು ಮರು ವಿಚಾರಣೆಗೆ ನಿಬಂಧಕರಿಗೆ ರವಾನಿಸಲಾಯಿತು. 2007 ಕೆಸಿಸಿಆರ್ 628/2007(2) ಕೆಎಲ್‌ಜೆ 283.

21. ಒಂದು ಸಂಘದ ವ್ಯವಹಾರದ ಬಗ್ಗೆ ಸ್ವಯಂ ಸ್ಫೂರ್ತಿಯಿಂದ ವಿಚಾರಣೆ ಮಾಡುವ ಮತ್ತು ಆರ್ಥಿಕ ಕೊರತೆಯನ್ನುಂಟು ಮಾಡಿದ್ದರೆ ವಸೂಲಾತಿ. ಕ್ರಮ ಜರುಗಿಸುವ ಅಥವಾ ಅವ್ಯವಹಾರ ನಡೆದಿದ್ದರೆ ಆಡಳಿತಾಧಿಕಾರಿಯನ್ನು ನೇಮಿಸುವ ಮತ್ತು ಆಡಳಿತ ಮಂಡಳಿಯನ್ನು ರಚಿಸುವ ಅಧಿಕಾರ ಇದ್ದಾಗ ಅಂತಹ ಅಧಿಕಾರವನ್ನು ಚಲಾಯಿಸದೇ 3ನೇ ವ್ಯಕ್ತಿಯನ್ನು ಕಾರ್ಯದರ್ಶಿಯಾಗಿ ಹೆಸರಿಸುವುದು ಅದರಲ್ಲೂ ನೇಮಕವಾಗಿರುವ ಕಾರ್ಯದರ್ಶಿಯ ಸ್ಥಾನಕ್ಕೆ, ತಪ್ಪು. 2007(2) ಕೆಎಲ್‌ಜೆ 283

22. ಉಪನಿಯಮಗಳನ್ವಯ ಸಂಘದ ಕಾರ್ಯದರ್ಶಿ ದಾವಾ ಪ್ರಕರಣ ಹೂಡಬಹುದೆಂದಿದ್ದರೂ, ಕಾರ್ಯದರ್ಶಿ ದಾಖಲಿಸಿದ ಪ್ರಕರಣವಲ್ಲದೇ ಅಧ್ಯಕ್ಷರು ಪ್ರತ್ಯೇಕ ಪ್ರಕರಣವನ್ನು ದಾಖಲಿಸಿದರೆ ಅದು ಊರ್ಜಿತ ಐಎಲ್‌ಆರ್ 1993(1) ಕೆಆರ್ 149/1992(4) ಕೆಎಲ್‌ಜೆ 538

23. ಒಂದು ಸಂಘದ ನಿಯಮ ಮತ್ತು ಉಪಬಂಧಗಳನ್ವಯ ಯಾರು ದಾವಾ ಪ್ರಕರಣಗಳನ್ನು ದಾಖಲಿಸಬಹುದು ಮತ್ತು ಪ್ರಕರಣಕ್ಕೆ ಒಳಗಾಗಬಹುದು ಎಂಬುದನ್ನು ನಿಗಧಿಪಡಿಸಬೇಕು. ಆಡಳಿತ ಮಂಡಳಿ ಯಾರನ್ನಾದರೂ ಹೆಸರಿಸಬಹುದು. ಅಂತಹ ವ್ಯಕ್ತಿಯು ಅಧ್ಯಕ್ಷರು ಅಥವಾ ಟ್ರಸ್ಟಿಗಳ ಮೇಲೆ ಪ್ರಕರಣ ದಾಖಲಿಸಬಹುದು. ಆಡಳಿತ ಮಂಡಳಿಯು ಯಾರ ಮೇಲೆ ಯಾರು ದಾವಾ ದಾಖಲಿಸಬಹುದೆಂಬ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಇರತಕ್ಕದ್ದು. ಸಂಘದ ಕಾರ್ಯದರ್ಶಿ ಸ್ವತಂತ್ರವಾಗಿ ಪ್ರಕರಣ ದಾಖಲಿಸಲು ಅಧಿಕಾರವಿಲ್ಲ. ಆ ಅಧಿಕಾರ ಆಡಳಿತ ಮಂಡಳಿಯ ತೀರ್ಮಾನದ ನಂತರವೇ ಕಾರ್ಯದರ್ಶಿಗೆ ಪ್ರಾಪ್ತವಾಗತಕ್ಕದ್ದು. ಐಎಲ್‌ಆರ್

1991(2) ಕೆಎಆರ್ 1654.

24. ಎರಡು ಪ್ರಕರಣಗಳನ್ನು ಸಿವಿಲ್ ನ್ಯಾಯಾಲಯದ ಮುಂದೆ ದಾಖಲಿಸಲಾಗಿದ್ದು, ಆ ಪ್ರಕರಣದಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಕಕ್ಷಿದಾರರಾಗಿದ್ದು, ಒಂದು ಪ್ರಕರಣವನ್ನು ಊರ್ಜಿತವಲ್ಲವೆಂದು ಮತ್ತು ಆ ತೀರ್ಮಾನಕ್ಕೆ ಬರಲು ಪ್ರಕರಣವನ್ನು ದಾಖಲಿಸಿದಾಗ ಅದು ಸ್ವೀಕಾರಾರ್ಹವೆಂದು ಸಮರ್ಪಕ ವಿವರಣೇ ಕೊಟ್ಟಲ್ಲದೇ ಇದ್ದುದರಿಂದ ತಿರಸ್ಕರಿಸಲಾಯಿತು. ಈ 2 ಪ್ರಕರಣಗಳಲ್ಲಿ ಅಧ್ಯಕ್ಷರು–ಕಾರ್ಯದರ್ಶಿ 2 ಪಂಗಡಗಳು ದಾಖಲಿಸಿದ್ದವು. ಎರಡೂ ಪ್ರಕರಣಗಳನ್ನು ದಾಖಲಾರ್ಹವಾಗಿದ್ದು, ದಾಖಲಾರ್ಹವಲ್ಲವೆಂದು ತಿರಸ್ಕರಿಸಿದ್ದು, ನ್ಯಾಯಯುತವಲ್ಲ. 1992(4) ಕೆಎಲ್‌ಜೆ 438ಎ

25. ಒಂದು ಸಂಘದ ನಿಯಮಗಳು ಮತ್ತು ನಿಬಂಧನೆಗಳು, ದಾವಾ ದಾಖಲಿಸಲು ಮತ್ತು ಸ್ವೀಕರಿಸಲು ಪದಾಧಿಕಾರಗಳ ಹೆಸರನ್ನು ನಮೂದಿಸಬೇಕು. ಅಂತಹ ನಿಬಂಧನೆ ಇಲ್ಲದಿದ್ದರೆ ಆಡಳಿತ ಮಂಡಳಿಯು ಒಬ್ಬ ವ್ಯಕ್ತಿಗೆ ಅಧಿಕಾರವನ್ನು ಕೊಡಬೇಕು. ಅಂತಹ ನಡವಳಿಕೆಗಳು ಇಲ್ಲದಿದ್ದ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿಯು ಪ್ರಕರಣವನ್ನು ರಿಟ್ ಅರ್ಜಿಯನ್ನು ದಾಖಲಿಸಿ ಸಂಘದ ಪರವಾಗಿ ಹಾಜರಾಗುವುದು ಊರ್ಜಿತವಲ್ಲ. 2006(4) ಕೆಎಲ್‌ಜೆ 526ಎ

26. ಒಂದು ಸಂಘದ ನಿಯಮಗಳು ಮತ್ತು ನಿಬಂಧನೆಗಳನ್ವಯ ಯಾವ ವ್ಯಕ್ತಿಯ ಮೇಲೆ ದಾವಾ ಹೂಡಬಹುದು ಅಥವಾ ಸ್ವೀಕರಿಸಬಹುದು ಎಂಬುದರ ಬಗ್ಗೆ ಸ್ಪಷ್ಟವಾಗಿ ನಮೂದಿಸಿ ನೋಂದಣಿ ಆಗದಿದ್ದರೆ ಅಂತಹ ಪ್ರಸಂಗದಲ್ಲಿ ಆಡಳಿತ ಮಂಡಳಿಯು ನೇಮಿಸಬೇಕು. ಆಡಳಿತ ಮಂಡಳಿಯು ನೇಮಕ ಮಾಡಿದೆ ಎಂಬ ದಾಖಲೆಗಳನ್ನು ಸಲ್ಲಿಸದೇ ಇದ್ದರೆ, ಅಂತಹ ಪ್ರಕರಣದಲ್ಲಿ ಕಾರ್ಯದರ್ಶಿಯು ಪ್ರಕರಣವನ್ನು ದಾಖಲಿಸಲು ಅಧಿಕಾರ ಹೊಂದಿಲ್ಲ ಮತ್ತು ಅಂತಹ ಪ್ರಕರಣವನ್ನು ದಾಖಲಾರ್ಹವಲ್ಲ. 1984(2) ಕೆಎಲ್‌ಜೆ 406/ಐಎಲ್‌ಆರ್ 1985 ಕೆಎಆರ್ 1354/ಎಐಆರ್ 1985 ಎನ್‌ಒಸಿ 97/ಐಎಲ್‌ಆರ್ 1981 ಕೆಎಆರ್ 1654.

27. ಒಂದು ಸಂಘವನ್ನು ಕಲಂ 22ರನ್ವಯ, 3/4 ಅಂಶದ ಸದಸ್ಯರು ಮುಕ್ತಾಯಗೊಳಿಸಬೇಕೆಂದು ತೀರ್ಮಾನ ತೆಗೆದುಕೊಳ್ಳಬಹುದು. ಆದರೆ ಸ್ವಯಂಸ್ಫೂರ್ತಿಯಿಂದ ಮುಚ್ಚಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳುವುದು ಸಂವಿಧಾನದ ಪರಿಚ್ಛೇದ 19(1)(ಸಿ) ಸಿಂಧುವಾಗತಕ್ಕದ್ದಲ್ಲ. ಎಐಆರ್ 1971 ಎಸ್‌ಸಿ 966 ಅನುಸರಿಸಲಾಗಿದೆ. ಮತ್ತು 1978(1) ಕೆಎಲ್‌ಜೆ 302 ಎಫ್‌ಬಿ) ಮತ್ತು ಎಐಆರ್ 1978 ಎಪಿ 121(ಎಫ್‌ಬಿ) ಇವುಗಳನ್ನು ಬೇರ್ಪಡಿಸಲಾಗಿದೆ. 1979(1) ಕೆಎಲ್‌ಜೆ ಎಸ್‌ಎನ್ 81 (ಡಿಬಿ)

28. ಒಂದು ಠರಾವಿನ ಮೂಲಕ ಟ್ರಸ್ಟ್ ರಚನೆಯಾಗಿದೆ ಎಂದು ತೀರ್ಮಾನಿಸಿದರೆ ಅದು ಕಲಂ 22ರನ್ವಯ ಸಂಘವನ್ನು ಮುಚ್ಚುವುದು ಎಂದು ಅರ್ಥವಲ್ಲ. 1989(2) ಕೆಎಲ್‌ಜೆ 343

29. ನಿಬಂಧಕರು ಮೇಲ್ನೋಟಕ್ಕೆ ಚುನಾವಣೆ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಚುನಾವಣೆ ನಡೆಸುವುದು ಸರಿಯಲ್ಲವೆಂದು ತೀರ್ಮಾನಕ್ಕೆ ಬಂದಾಗ, ಮೇಲ್ನೋಟಕ್ಕೆ ಕೆಲವು ವ್ಯಕ್ತಿಗಳನ್ನು ಸದಸ್ಯರನ್ನಾಗಿ ಸೇರ್ಪಡೆ ಮಾಡಿರುವುದು ಉಪನಿಯಮಗಳಲ್ಲಿ ಅವಕಾಶ ಇರಲಿಲ್ಲವೆಂಬ ಕಾರಣದಿಂದ. ಈ ರೀತಿ ತೀರ್ಮಾನಕ್ಕೆ ಬಂದಾಗ ನಿಬಂಧಕರು ಚುನಾವಣೆಯನ್ನು ಮುಂದೂಡಬೇಕಾಗಿತ್ತು. 2006(4) ಕೆಎಲ್‌ಜೆ 526ಬಿ.

30. ಒಂದು ಆಡಳಿತ ಮಂಡಳಿಯಲ್ಲಿ ಸದಸ್ಯರನ್ನು ನೇಮಕ ಮಾಡುವ ಅಧಿಕಾರವಿದ್ದು, ಅಂತಹ ಸಭೆ ನಡವಳಿಕೆಗಳು ಸಮರ್ಪಕವಾಗಿ ನಡೆದಿಲ್ಲವೆಂಬ ಕಾರಣಕ್ಕೆ ಕಾರ್ಯದರ್ಶಿಯ ಮುಖಂಡತ್ವದಲ್ಲಿ ಅಧ್ಯಕ್ಷರನ್ನು ಹೊರತುಪಡಿಸಿ ಸಂಘವನ್ನು ನಿಯಂತ್ರಿಸಲು ಪ್ರಯತ್ನಿಸುವುದು ಸರಿಯಲ್ಲ. ಜಿಲ್ಲಾ ನಿಬಂಧಕರು ಅಂತಹ ಸಭೆಯನ್ನು ನಿಯಮಬಾಹಿರ ಮತ್ತು ಕಾನೂನುಬಾಹಿರ ಎಂದು ತೀರ್ಮಾನಿಸಿರುವುದು ಸರಿ 2004(8) ಕೆಎಲ್‌ಜೆ 333/ಐಎಲ್‌ಆರ್ 2004 ಕೆಎಆರ್ 5136

31. ಒಂದು ಸಂಘದ ಸದಸ್ಯರು ಸರ್ವಾನುಮತದಿಂದ ಸಂಘವನ್ನು ಮುಕ್ತಾಯಗೊಳಿಸಬೇಕೆಂದು ಮತ್ತು ಆ ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ಟ್ರಸ್ಟಿಗೆ ವರ್ಗಾಯಿಸಬೇಕೆಂದು ತೀರ್ಮಾನಿಸಿದಾಗ ನಿಬಂಧಕರು ಅಂತಹ ವರ್ಗಾವಣೆ ಕಲಂ 22 ಮತ್ತು 23ರನ್ವಯ ಇಲ್ಲವೆಂದು ತೀರ್ಮಾನಿಸುತ್ತಾರೆ. ಏಕಸದಸ್ಯ ಪೀಠ ಈ ಆದೇಶವನ್ನು ಮಧ್ಯಪ್ರವೇಶಿಸಲಾರ್ಹವಲ್ಲವೆಂದು ತೀರ್ಮಾನಿಸುತ್ತದೆ. ಈ ವಿಷಯದಲ್ಲಿ ವಿಭಾಗೀಯ ಪೀಠವು ಪರಿಶೀಲನಾಂಶಗಳು (ಕೊಸ್ಚನ್ ಆಪ್ ಫ್ಯಾಕ್ಟ್) ವಿಚಾರಣೆ ನಡೆಸಬೇಕಾಗಿರುವುದರಿಂದ ಅದನ್ನು ರಿಟ್ ಮೂಲಕ ಪರಿಹರಿಸತಕ್ಕದ್ದಲ್ಲ. ನಿಬಂಧಕರು ಹೊರಡಿಸಿದ ಆದೇಶವನ್ನು ಕಿತ್ತುಹಾಕಿ, ಆಸ್ತಿ ಜವಾಬ್ದಾರಿಗಳ ವರ್ಗಾವಣೆ ಕಾನೂನುಬದ್ಧವಾಗಿದೆಯೆಂದು ನಿರ್ಧರಿಸಲಾಯಿತು 2009(5) ಕೆಎಲ್‌ಜೆ 660 (ಡಿಬಿ)

32. ಕಲಂ 23ರನ್ವಯ 1/3 ಅಂಶದ ಸಂಘದ ಸದಸ್ಯರು ಆರೋಪ ಮಾಡದೇ ಇದ್ದಾಗ ನಿಬಂಧಕರು ಯಾವುದೇ ಕ್ರಮ ಜರುಗಿಸಲು ಅಧಿಕಾರ ಹೊಂದಿಲ್ಲ. ಐಎಲ್‌ಆರ್ 1990(4) ಕೆಎಆರ್ 3740/1990(2) ಕೆಎಲ್‌ಜೆ 258(ಡಿಬಿ)

33. ಸದಸ್ಯರ ಪಟ್ಟಿ ಅಂತಿಮಗೊಳಿಸಲಾಗದೇ ಇದ್ದ ಸಂದರ್ಭದಲ್ಲಿ, ವಿಭಾಗೀಯ ಪೀಠವು ಆ ಪಟ್ಟಿಯನ್ನು ಅಂತಿಮಗೊಳಿಸುವ ಸಂಬಂಧ, ಎಲ್ಲ ಸದಸ್ಯರಿಗೂ ಅವಕಾಶವನ್ನು ಕಲ್ಪಿಸುವಂತೆ ನಿರ್ದೇಶಿಸಿತ್ತು ಹಾಗೂ ಯಾವುದೇ ಸದಸ್ಯ ತಕರಾರು ಸಲ್ಲಿಸಿದಾಗ ಅಂತಹ ಅರ್ಜಿಗಳನ್ನು ಪರಿಶೀಲಿಸಿ ಅಂತಿಮ ಸದಸ್ಯರ ಪಟ್ಟಿಯನ್ನು ಪ್ರಕಟಪಡಿಸಬೇಕು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಬ್ಬ ವಿಚಾರಣಾಧಿಕಾರಿಯನ್ನು ನೇಮಿಸಲಾಗಿದ್ದು, ಅ ಅಧಿಕಾರಿಯು ಸದಸ್ಯರ ಪಟ್ಟಿ ಪ್ರಾಮಾಣಿಕವಾಗಿ ಇದೆಯೇ ಎಲ್ಲವೇ ಎಂಬುದನ್ನು ನಿರ್ಧರಿಸಬೇಕು. ಮತ್ತು ಅಂತಹ ಸದಸ್ಯರ ಅರ್ಹತೆ ಅನರ್ಹತೆ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಪ್ರಶ್ನಿಸಬಹುದಾಗಿದೆ. ಆದರೆ ಚುನಾವಣೆ ವೇಳಾಪಟ್ಟಿಯನ್ನು ಪ್ರಕಟಿಸಿದ ನಂತರ, ಉಪನಿಯಮಗಳಡಿಯಲ್ಲಿ, ಈ ನ್ಯಾಯಾಲಯವು ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ಮಧ್ಯಪ್ರವೇಶಿಸುವುದು

ಸರಿಯಲ್ಲ. 2009(3) ಕೆಸಿಸಿಆರ್ ಎಸ್ಎನ್ 95/2009(4) ಕೆಎಲ್‌ಜೆ 526/ಎಐಆರ್ 2009 (ಎನ್‌ಒಸಿ) 2569(ಕೆಎಆರ್)

34. ಒಂದು ಸಂಘದ ಕಾರ್ಯನಿರ್ವಹಣೆಯಲ್ಲಿ ದುರುದ್ದೇಶದ ವ್ಯವಹಾರ ನಡೆಯುತ್ತಿದೆಯೆಂದು ಮತ್ತು ಒಬ್ಬ ಮಂತ್ರಿಗಳು ನಿಬಂಧಕರಿಗೆ ವಿಚಾರಣೆಮಾಡಲು ಆದೇಶಿಸಿದ್ದಾರೆಂದು ಗಮನಿಸಿದಾಗ ಅದೇ ನ್ಯಾಯಾಂಗದ ಅಧಿಕಾರಗಳನ್ನು ಚಲಾಯಿಸುವಾಗ, ಅಂತಹ ಅಧಿಕಾರಿಯು ಯಾವುದೇ ಪ್ರಭಾವಕ್ಕೆ ಒಳಗಾಗದೇ ವಿಚಾರಣೆಮಾಡುವುದು ಕಾನೂನು ರಚನೆ ಮಾಡಿದ ಉದ್ದೇಶ. ಆ ರೀತಿ ಮಾಡದೇ ಇದ್ದಾಗ ವಿಚಾರಣೆಯ ಉದ್ದೇಶವೇ ಸಫಲವಾಗುವುದಿಲ್ಲ. ಆದರೆ ವಿಚಾರಣೆ ಮಾಡುವುದು ಅವಶ್ಯಕವೆಂದು ನಿಬಂಧಕರೇ ತೀರ್ಮಾನಿಸತಕ್ಕದ್ದು. ಆದರೆ ಆ ರೀತಿ ವಿಚಾರಣೆ ಮಾಡುವಾಗಿ ವಿಚಾರಣೆ ಅವಶ್ಯಕತೆ ಇದೆಯೆಂದು ತೀರ್ಮಾನಕ್ಕೆ ಬರಬೇಕು. 2009(5) ಕೆಸಿಸಿಆರ್ 3901

35. ವಿಚಾರಣಾಧಿಕಾರಿಯನ್ನು ನೇಮಕ ಮಾಡುವಾಗ ಸಂಬಂಧಪಟ್ಟ ಸಂಘಕ್ಕೆ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ ನಿಯಮ 8(4)ರನ್ವಯ ವಿಚಾರಣೆ ಪ್ರಾರಂಭ ಮಾಡಿದಾಗ ವಿಚಾರಣೆ ಅಧಿಕಾರಿಯು ಸಂಬಂಧಪಟ್ಟ ಸಂಘಕ್ಕೆ ಮತ್ತು ವ್ಯಕ್ತಿಗಳಿಗೆ ನೋಟೀಸ್ ಕೊಡುವುದು ಅವಶ್ಯಕ. ಆದರೆ ವಿಚಾರಣೆ ಪೂರ್ವದಲ್ಲಿ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ. 2009(1) ಕೆಸಿಸಿಆರ್ 342. 2009(1) ಕೆಎಲ್‌ಜೆ 597.

36. ಒಂದು ಆಡಳಿತ ಮಂಡಳಿ ಅಧ್ಯಕ್ಷರನ್ನು ಹೊರತುಪಡಿಸಿ ಕಾರ್ಯದರ್ಶಿ ಮತ್ತು ಇನ್ನಿತರ ನಿರ್ದೇಶಕರು ಸಂಘದ ಅಧಿಕಾರವನ್ನು ಮತ್ತು ನಿಯಂತ್ರಣವನ್ನು ಅಧ್ಯಕ್ಷರನ್ನು ಬಿಟ್ಟು ವಹಿಸಿಕೊಂಡಾಗ, ಅಂತಹ ಸಂಘವು ನಡೆಸಿದ ನಡವಳಿಕೆಗಳು ಅಸಿಂಧುವಾಗತಕ್ಕದ್ದು ಎಂದು ಉಪನಿಬಂಧಕರು ತಿಳಿಸಿದ ಆದೇಶ. ಅಂದರೆ ಸಭೆ ನಡೆಸಿದ್ದು, ಕಾನೂನು ವಿರೋಧ ಮತ್ತು ಅಸಿಂಧು ಎಂಬುದನ್ನು ಎತ್ತಿಹಿಡಿಯಲಾಯಿತು. ಅಂದರೆ ಅಧ್ಯಕ್ಷರನ್ನು ಹೊರತುಪಡಿಸಿ ಉಳಿದ ನಿರ್ದೇಶಕರು ಮತ್ತು ಕಾರ್ಯದರ್ಶಿ ನಡೆಸಿದ ನಡಾವಳಿಗಳು ಅಸಿಂಧು ಮತ್ತು ಕಾನೂನುಬಾಹಿರ 2005(1) ಕೆಸಿಸಿಆರ್ ಎಸ್ಎನ್ 22.

37. ಒಂದು ಸಂಘದ ನೌಕರರು ಕಲಂ 25ರಲ್ಲಿ ನಿಬಂಧಕರು ವಿಚಾರಣೆ ಮಾಡಬೇಕೆಂದು ಮನವಿ ಸಲ್ಲಿಸುವ ಅಧಿಕಾರವಿಲ್ಲ. ವಿಚಾರಣೆಯನ್ನು ನಿಬಂಧಕರು ಸ್ವಇಚ್ಛೆಯಿಂದ ನಡೆಸಬಹುದು. ಅಥವಾ ಆಡಳಿತ ಮಂಡಳಿಯ ಬಹುಮತದ ಸದಸ್ಯರು ಮನವಿ ಸಲ್ಲಿಸಿದಾಗ ಅಥವಾ 1/3 ಅಂಶದ ಸದಸ್ಯರು ಮನವಿ ಕೊಟ್ಟಾಗ, ಈ ಮನವಿಗಳು ಬಂದಾಗ ವಿಚಾರಣೆ ಮಾಡುವುದು ಅವಶ್ಯಕ. ಮತ್ತು ನಿಬಂಧಕರು ವಿಚಾರಣೆಯನ್ನು ನಡೆಸಲೇಬೇಕು. ನಿಬಂಧಕರು ಸ್ವಇಚ್ಛೆಯಿಂದ ಯಾವುದಾದರೂ ಆರೋಪದ ಮೇಲೆಯೂ ಸಹ ವಿಚಾರಣೆ ಮಾಡಬಹುದು. ಅಥವಾ ಯಾವುದೇ ಆರೋಪ ಇಲ್ಲದೇ ಇದ್ದರೂ ಸ್ವಇಚ್ಛೆಯಿಂದ ವಿಚಾರಣೆ ಮಾಡುವ ಅಧಿಕಾರ ನಿಬಂಧಕರಿಗೆ ಇದೆ. ಯಾವ ವ್ಯಕ್ತಿಗೆ ಅಧಿಕಾರವಿಲ್ಲದೇ ನಿಬಂಧಕರನ್ನು ಸ್ವಇಚ್ಛೆಯಿಂದ

ವಿಚಾರಣೆ ಮಾಡಲು ಪ್ರಭಾವ ಬೀರುತ್ತಾರೆಯೋ ಅಂತಹ ವ್ಯಕ್ತಿಯು ಅಧಿಕಾರವಿಲ್ಲದೇ, ಯಾವುದೇ ಪ್ರಕರಣವನ್ನು ದಾಖಲಿಸತಕ್ಕದ್ದಲ್ಲ. ಅಂತಹ ಪ್ರಕರಣದಲ್ಲಿ ನ್ಯಾಯಾಲಯ ಯಾವುದೇ ನಿರ್ದೇಶನವನ್ನು ಕೊಡುವುದಿಲ್ಲ. ಈ ಪ್ರಕರಣದಲ್ಲಿ ಸಂಘದ ನೌಕರರು ಯಾವುದೇ ಕಾನೂನುಬದ್ದ ಅಧಿಕಾರವಿಲ್ಲದೇ (ಕಲಂ 25ರನ್ವಯ) ವಿಚಾರಣೆ ಮಾಡಲು ನಿಬಂಧಕರಿಗೆ ಒತ್ತಾಯ ಹೇರಿದ್ದರೆ ವಿಚಾರಣೆಮಾಡಬೇಕಾಗಿಲ್ಲ. ಅಂದರೆ ವಿಚಾರಣೆ ಕೇಳಲು ಯಾರಿಗೆ ಅಧಿಕಾರವಿಲ್ಲವೋ ಅಂತಹ ವ್ಯಕ್ತಿಗಳು ವಿಚಾರಣೆ ಮಾಡಬೇಕೆಂಬ ಮನವಿಯನ್ನು ತಿರಸ್ಕರಿಸತಕ್ಕದ್ದು. 2003 (3) ಕೆಸಿಸಿಆರ್ ಎಸ್ಎನ್ 188.

38. ಒಂದು ಸಂಘದ ಅವ್ಯವಹಾರ ದುರಾಡಳಿತ ಮತ್ತು ಹಣಕಾಸು ಅವ್ಯವಹಾರದ ಬಗ್ಗೆ ಆರೋಪಿಸಿದಾಗ ಆ ಪ್ರಕರಣದಲ್ಲಿ ಈ ರಿಟ್ ಅರ್ಜಿ ದಾಖಲಿಸಿದ ವ್ಯಕ್ತಿ ಕಕ್ಷಿದಾರನಾಗಿದ್ದ. ಆ ಸಂದರ್ಭದಲ್ಲಿ ವಿಶೇಷಾಧಿಕಾರಿಯನ್ನು ವಿಚಾರಣೆ ಮಾಡಲು ಆದೇಶಿಸಲಾಗಿತ್ತು. ಆ ವಿಚಾರಣೆ ಸಮಯದಲ್ಲಿ ಯಾವುದೇ ರೀತಿಯ ತಕರಾರನ್ನು ಅಥವಾ ಹೇಳಿಕೆಗಳನ್ನು ಸಲ್ಲಿಸಿಲ್ಲ. ಈಗ ಕಕ್ಷಿದಾರ ವಿಶೇಷಾಧಿಕಾರಿಗಳು ಕೊಟ್ಟ ವಿಚಾರಣೆ ನೋಟೀಸನ್ನು ನಿಯಮ 8ಕ್ಕೆ ವಿರುದ್ಧವಾಗಿದೆಯೆಂದು ಮತ್ತು ಅಂತಹ ಆರೋಪಗಳ ಬಗ್ಗೆ ತಿಳಿದಿರಲಿಲ್ಲವೆಂದು ಪ್ರತಿಪಾದಿಸತಕ್ಕದ್ದಲ್ಲ. ವಿಶೇಷಾಧಿಕಾರಿಗಳು ವಿಚಾರಣೆ ಪ್ರಾರಂಭ ಮಾಡಿರುವುದು ನ್ಯಾಯಾಲಯದ ನಿರ್ದೇಶನದಂತೆ. ಆದ್ದರಿಂದ ಅಂತಹ ಪ್ರಸಂಗದಲ್ಲಿ ನ್ಯಾಯಾಲಯವು ಮಧ್ಯಪ್ರವೇಶ ಮಾಡಲು ಅವಕಾಶಗಳಿಲ್ಲ. 2001(4) ಕೆಸಿಸಿಆರ್ ಎಸ್ ಎನ್ 234

39. ಎರಡು ಪ್ರತ್ಯೇಕ ಗುಂಪುಗಳಲ್ಲಿ ಒಂದು ಗುಂಪು ಲೆಕ್ಕತಪಾಸಣಾ ವರದಿ ಮತ್ತು ಸದಸ್ಯರ ಪಟ್ಟಿಯನ್ನು ಒಪ್ಪಿಗೆಗಾಗಿ ನಿಬಂಧಕರಿಗೆ ಸಲ್ಲಿಸಿದಾಗ ನ್ಯಾಯಾಲಯ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. ಅದಕ್ಕೆ ಸಂಬಂಧಪಟ್ಟಂತೆ ಕಾನೂನಿನಲ್ಲಿ ಪ್ರಕರಣ ದಾಖಲಿಸಲು ಅವಕಾಶವಿರುವುದರಿಂದ ಮಧ್ಯಪ್ರವೇಶಸಲಾಗದು. (2004(11) ಎಸ್ ಸಿಸಿ 247ನ್ನು ಅನ್ವಯಿಸಲಾಗಿದೆ) 2990 (1) ಕೆಸಿಸಿಆರ್ 200

40. ಸ್ವ ಇಚ್ಛೆಯಿಂದ ಎಂಬ ಪದವನ್ನು ಅರ್ಥೈಸುವಾಗ, ನಿಬಂಧಕರು ಯಾವುದೇ ಮಾಹಿತಿಯನ್ನು ಆಧರಿಸಿ ಅಥವಾ ಯಾವುದೇ ಆರೋಪ ಇಲ್ಲದೇ ಇದ್ದರೂ ಸ್ವ ಇಚ್ಛೆಯಿಂದ ವಿಚಾರಣೆ ಮಾಡಬಹುದು ಎಂದರ್ಥ. ನಿಬಂಧಕರಿಗೆ ವಿಚಾರಣೆ ಮಾಡುವ ಅವಕಾಶಗಳು ಈ ಕೆಳಕಂಡಂತಿದೆ. (1) ಸ್ವ ಇಚ್ಛೆಯಿಂದ ವಿಚಾರಣೆಗೆ ಆದೇಶಿಸಬಹುದು (2) ಬಹುಮತದ ಆಡಳಿತ ಮಂಡಳಿ ಸದಸ್ಯರು ಮನವಿ ಸಲ್ಲಿಸಿದಾಗ (3) ಒಟ್ಟು ಸದಸ್ಯರ 1/3 ಅಂಶದ ಸದಸ್ಯರು ಮನವಿ ಕೊಟ್ಟಾಗ, ಸ್ವ ಇಚ್ಛೆಯಿಂದ ಎಂದು ತೀರ್ಮಾನಿಸಬಹುದು ಅಥವಾ ಇಲ್ಲವೇ ಎಂಬ ಅರ್ಥದಲ್ಲಿ ತಿಳಿಯಬೇಕು. ಆದರೆ 2 ಮತ್ತು 3ನೇ ಅಂಶದ ಆಧಾರದ ಮೇಲೆ ವಿಚಾರಣೆ ಮಾಡುವಾಗ ಮಾಡಲೇಬೇಕೆಂದು (( )) ಅರ್ಥೈಸಕ್ಕದ್ದು, ಸ್ವ ಇಚ್ಛೆಯಿಂದ ಆದೇಶಿಸಿದಾಗ ಅಂತಹ ಪ್ರಾಧಿಕಾರ ಅರ್ಜಿಯಲ್ಲಿ ಸಲ್ಲಿಸಿದ ಮಾಹಿತಿಯನ್ನು ಆಧರಿಸಬಹುದು. ಅಥವಾ ಯಾವುದೇ ಒಬ್ಬ ಸದಸ್ಯ ಅಥವಾ ಕೆಲವು

ಸದಸ್ಯರು ಕೊಟ್ಟ ಆಧಾರದ ಮೇಲೆ ಸ್ವ ಇಚ್ಛೆಯಿಂದ ವಿಚಾರಣೆ ಮಾಡಬಹುದು. 2001(1) ಕೆಸಿಸಿ ಆರ್ 292/ಐಎಲ್ ಆರ್ 2001(1) ಕೆಎಆರ್ 766(ಎಫ್‌ಬಿ)

41. ಒಂದು ಸಂಘವನ್ನು ಒಂದು ನಡವಳಿಕೆಯ ಮೂಲಕ ಟ್ರಸ್ಟಾಗಿ ವರ್ಗಾವಣೆ ಮಾಡಿದರೆ ಅದು ಸಂಘವನ್ನು ಮುಚ್ಚಲು ಮಾಡಿದ ತೀರ್ಮಾನವೆಂದು ಕಲಂ 22ರಲ್ಲಿ ತಿಳಿಯತಕ್ಕದ್ದಲ್ಲ. ಜಿಲ್ಲಾಧಿಕಾರಿಗಳು ಆ ಸಂಘಕ್ಕೆ ಟ್ರಸ್ಟ್ ಎಂಬ ಪದವನ್ನು ಉಪಯೋಗಿಸತಕ್ಕದ್ದಲ್ಲವೆಂದು ಹೊರಡಿಸಿದ ಆದೇಶ ಸರಿಯಾಗಿದೆ. 1989(2) ಕೆಎಲ್‌ಜೆ 343/1989(2) ಬಿಎಲ್‌ಜೆ 157.

42. ನಿಬಂಧಕರು ಸ್ವ ಇಚ್ಛೆಯಿಂದ ವಿಚಾರಣೆ ಮಾಡುವ ಸಂದರ್ಭದಲ್ಲಿ ಅವನಿಗೆ ಲಭ್ಯವಾಗುವ ಮಾಹಿತಿ ಯಾವ ಮೂಲದಿಂದಲಾದರೂ ಬರಬಹುದು. ಅದು ಸದಸ್ಯನಿಂದಲೋ ಅಥವಾ ಹಲವು ಸದಸ್ಯರಿಂದಲೂ, ಬಂದಾಗ ಆ ಮಾಹಿತಿಯನ್ನು ಆಧರಿಸಿ ಸ್ವ ಇಚ್ಛೆಯಿಂದ ವಿಚಾರಣೆಗೆ ಆದೇಶಿಸುವ ಅಧಿಕಾರ ನಿಬಂಧಕರಿಗೆ ಇದೆ. 1992 ಕೆ ಎಲ್‌ಜೆ 311. ಐಎಲ್‌ಆರ್ 1990 ಕೆಎಆರ್ 3705 (ಡಿಬಿ)

43. ನಿಬಂಧಕರು ಸ್ವಇಚ್ಛೆಯಿಂದ ತನಗೆ ಲಭ್ಯವಾದ ಮಾಹಿತಿಯನ್ನಾಧರಿಸಿ ವಿಚಾರಣೆಗೆ ಆದೇಶಿಸಬಹುದು. ಈ ರೀತಿ ಮಾಡಿದ ಆದೇಶಿ ಸದಸ್ಯರ ಮನವಿ, ಆಡಳಿತ ಮಂಡಳಿ ಕೊಟ್ಟಮನವಿ ನಿಗಧಿಪಡಿಸಿದ ಸಂಖ್ಯೆಯಲ್ಲಿ ಕೊಡಬೇಕು. ಆದರೆ ಸ್ವಇಚ್ಛೆಯಿಂದ ಆದೇಶ ಮಾಡಿದಾಗ ಅಂತಹ ಆದೇಶ ಮಾಡುವ ಪೂರ್ವದಲ್ಲಿ ಸ್ಪಷ್ಟ ಕಾರಣಗಳೊಂದಿಗೆ ವಿಚಾರಣೆ ಮಾಡುವುದು ಅವಶ್ಯವೆಂದು ತೀರ್ಮಾನಕ್ಕೆ ಬಂದ ನಂತರ ಆದೇಶಿಸಬೇಕು. ಇಂತಹ ತೀರ್ಮಾನವನ್ನು ಕಾನೂನುಬಾಹಿರ ಎಂದು ತಿಳಿಯತಕ್ಕದ್ದಲ್ಲ. 1990(2) ಕೆಎಲ್‌ಜೆ 403 (ಡಿಬಿ) ಈ ತೀರ್ಪು 1980(1)ಕೆಎಲ್‌ಜೆ 327ನ್ನು ಉಲ್ಲೇಖಿಸಿ ಆ ತೀರ್ಪು ಸರಿಯಾಗಿದೆ ಎಂದು ತಿಳಿಸಿದೆ. ವಿಚಾರಣೆ ವರದಿಯ ಮೇಲೆ ಕ್ರಮ ಜರುಗಿಸದೇ ಇದ್ದಾಗ ಅಂತಹ ಸಂದರ್ಭದಲ್ಲಿ ನಿಬಂಧಕರು ಆಡಳಿತಾಧಿಕಾರಿಯನ್ನು ನೇಮಕ ಶಿಫಾರಸ್ಸು ಮಾಡಿರುವುದು ಸರಿಯಾದ ಕ್ರಮ. 199(2) ಕೆಎಲ್‌ಜೆ 392(ಡಿಬಿ).

44. ಒಂದು ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವುದು ತಾತ್ಪೂರ್ವಿಕವಾದ ಆದೇಶ. ಆದರೂ ಸ್ವಾಭಾವಿಕ ನ್ಯಾಯದನ್ವಯ ಹೇಳಿಕೆಯನ್ನು ಸಲ್ಲಿಸಲು ಅವಕಾಶವನ್ನು ಕೊಡಬೇಕು. ವಿಚಾರಣೆ ಮಾಡುವ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದು, ಅವಕಾಶ ಕೊಟ್ಟಿಲ್ಲವೆಂಬ ಕಾರಣಕ್ಕೆ ಪರಿಹಾರ ಕೇಳತಕ್ಕದ್ದಲ್ಲ. ಆದರೆ ವಿಚಾರಣೆ ವರದಿಯನ್ನು ಸಂಘಕ್ಕೆ ಕೊಡಲಾರದೇ ಮತ್ತು ಆ ವರದಿಯ ಮೇಲೆ ನಿಬಂಧಕರು ತೆಗೆದುಕೊಂಡ ತೀರ್ಮಾನ ತಿಳಿಸದೇ ಇದ್ದರೆ ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ 1979(1) ಕೆಎಲ್‌ಜೆ 393 ಐಎಲ್‌ಆರ್ 1979(2) ಕೆಎಆರ್ 1944.

45. ವಿಚಾರಣೆ ಮಾಡುವ ಸಮಯದಲ್ಲಿ ಸಂಘದ ಆಡಳಿತ ನಿರ್ವಹಣೆ ಮತ್ತು ವ್ಯವಹಾರದ ಬಗ್ಗೆ ಪರಿಶೀಲಿಸಿದಾಗ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಮಿತಿ ಮುಂದುವರೆಯುವುದು

ಸರಿಯಲ್ಲವೆಂದು ತೀರ್ಮಾನಕ್ಕೆ ಬಂದಾಗ, ಹೊಸ ಆಡಳಿತ ಮಂಡಳಿಯನ್ನು ಚುನಾವಣೆ ಮೂಲಕ ಆಯ್ಕೆ ಮಾಡಬೇಕೆಂಬ ಸೂಚನೆ ಉಪನಿಮಗಳಿಗೆ ವಿರುದ್ಧವಾಗಿದೆ. ಆದರೆ ಮಹಾಸಭೆಗೆ ನಿರ್ದೇಶನ ಕೊಟ್ಟು ಚುನಾವಣೆ ನಡೆಸಬೇಕೆಂದು ಸೂಚಿಸಬಹುದು. ಐಎಲ್ಆರ್ 1993(3) ಕೆಎಆರ್ 2715.

46. ವಿಚಾರಣೆ ಮಾಡಲು ಆಡಳಿತ ಮಂಡಳಿಯ 3 ಜನ ಸದಸ್ಯರು ಮನವಿ ಸಲ್ಲಿಸಿದಾಗ ಅದು ಸಂಘದ ಒಂದು 1/3 ಅಂಶದ ಸದಸ್ಯರ ಮನವಿ ಆಗತಕ್ಕದ್ದಲ್ಲ. ವಿಚಾರಣೆಗೆ ಆದೇಶಿಸಿದಾಗ ಅದು ಸ್ವಇಚ್ಛೆಯಿಂದ ಆದೇಶಿಸಿದ ಆದೇಶವೆಂದು ಪರಿಗಣಿಸತಕ್ಕದ್ದಲ್ಲ. 1981 ಕೆಎಲ್ಜೆ 327/ ಐಎಲ್ಆರ್ 1981 ಕೆಎಆರ್ ಎಸ್ಎನ್ 30.

47. ಕಲಂ 25ರನ್ವಯ ನಿಬಂಧಕರು ಒಂದು ಸಂಘದ ವ್ಯವಹಾರದ ಬಗ್ಗೆ ವಿಚಾರಣೆ ಮಾಡುವ ಅಧಿಕಾರ ಹೊಂದಿದ್ದಾರೆ. ಆದರಂ 1/3 ಅಂಶದ ಸದಸ್ಯರ ಆರೋಪದ ಆಧಾರದ ಮೇಲೆ ವಿಚಾರಣೆ ನಡೆಸಬೇಕು.ಅಂತಹ ಆರೋಪ ಪಟ್ಟಿ ಇಲ್ಲದಿದ್ದಾಗ ನಿಬಂಧಕರು ವಿಚಾರಣೆ ಮಾಡುವ ಅಧಿಕಾರ ಹೊಂದಿಲ್ಲ 1990(2) ಕೆಎಲ್ಜೆ 258ಎ (ಡಿಬಿ)/ಐಎಲ್ಆರ್ 1990 ಕೆಎಆರ್ 3740 (ಡಿಬಿ)

48. ಕಲಂ 25 ನಿಬಂಧಕರಿಗೆ ಇರುವ ಸ್ವಇಚ್ಛೆಯಿಂದ ವಿಚಾರಣೆ ಮಾಡುವ ಅಧಿಕಾರಿವನ್ನು ತೆಗೆದುಹಾಕುವುದಿಲ್ಲ. ಸ್ವ ಇಚ್ಛೆಯಿಂದ ವಿಚಾರಣೆ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ದಾಖಲೆಗಳು ಮತ್ತು ಮಾಹಿತಿಯನ್ನು ಯಾವ ಮೂಲದಿಂದಲಾದರೂ ಪಡೆಯಬಹುದು. ಹಾಗೂ ಮೌಖಿಕವಾಗಿ ಅಥವಾ ಲಿಖಿತವಾಗಿ ಪಡೆದ ಅಥವಾ ಮನವಿಯನ್ನು ಕೊಟ್ಟಾಗ ಆ ಮಾಹಿತಿಯ ಆಧಾರದ ಮೇಲೆ ಸ್ವ ಇಚ್ಛೆಯಿಂದ ವಿಚಾರಣೆ ಮಾಡಿ ಆದೇಶ ಮಾಡುವ ಅಧಿಕಾರ ಹೊಂದಿರುತ್ತಾರೆ 1996(6) ಕೆ ಎಲ್ಜೆ 762

49. ನಿಬಂಧಕರು ಯಾವುದೇ ಮೂಲದಿಂದ ಮಾಹಿತಿ ಸಂಗ್ರಹಿಸಿ ಸ್ವ ಇಚ್ಛೆಯಿಂದ ವಿಚಾರಣೆ ಮಾಡಲು ತೀರ್ಮಾನಿಸುತ್ತಾರೋ ಅಂತಹ ಮಾಹಿತಿಯನ್ನು ಆಧಾರವಾಗಿಟ್ಟು ವಿಚಾರಣೆಗೆ ಅವಶ್ಯಕತೆ ಇದೆಯೆಂಬ ತೀರ್ಮಾನಕ್ಕೆ ಬಂದ ನಂತರವೇ (ಅಪ್ಲಿಕೇಶನ್ ಆಫ್ ಮೈಂಡ್) ವಿಚಾರಣೆಗೆ ಆದೇಶಿಸಬೇಕು. 1990(2) ಕೆ ಎಲ್ಜೆ 403ಬಿ (ಡಿಬಿ)/ಐಎಲ್ಆರ್ 1990 ಕೆಎಆರ್ 3721 (ಡಿಬಿ)

50. ನಿಬಂಧಕರು ಸ್ವ ಇಚ್ಛೆಯಿಂದ ವಿಚಾರಣೆ ಮಾಡಲು ತೆಗೆದುಕೊಂಡಾಗ ಅದಕ್ಕೆ ಪೂರಕವಾಗಿ ಪಡೆದ ಮಾಹಿತಿಯ ಆಧಾರದ ಮೇಲೆ ಅದು ಸಮರ್ಪಕ ಆಧಾರವೆಂದು ವಿಚಾರಣೆಗೆ ಆದೇಶಿಸಬಹುದು. ಆದರೆ ವಿಚಾರಣೆ ಅವಶ್ಯಕತೆ ಇದೆಯೆಂದು ತೀರ್ಮಾನಕ್ಕೆ ಬರುವ ಅಧಿಕಾರ ನಿಬಂಧಕರ ವ್ಯಾಪ್ತಿಗೆ ಬಿಟ್ಟಿದ್ದು. 1990(2) ಕೆಎಲ್ಜೆ 311ಬಿ(ಡಿಬಿ)/ಐಎಲ್ಆರ್ 1990 ಕೆಎಆರ್ 3705(ಡಿಬಿ)/ಎಐಆರ್ 1991 ಕೆಎಎನ್ಟಿ 243(ಡಿಬಿ)

51. ವಿಚಾರಣಾ ವರದಿಯನ್ನಾಧರಿಸಿ ನಿಬಂಧಕರು ಆಡಳಿತ ಮಂಡಳಿಗೆ ಮತ್ತು ಮಹಾಸಭೆಗೆ

ಕ್ರಮ ಜರುಗಿಸಲು ಸೂಚಿಸಬಹುದು. ಸಂಬಂಧಪಟ್ಟ ವ್ಯಕ್ತಿಗಳ ಮೇಲೆ ಉಪನಿಯಮಗಳನ್ವಯ ಕ್ರಮ ಜರುಗಿಸುವುದು ಸಂಘಕ್ಕೆ ಬಿಟ್ಟದ್ದು. ಅಂದರೆ ಸದಸ್ಯರು ಯಾವ ಕ್ರಮ ಜರುಗಿಸಬೇಕೆಂಬ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿದ್ದಾರೆ. ಅಂತಹ ಕ್ರಮ ಜರುಗಿಸುವ ಪೂರ್ವದಲ್ಲಿಯೇ ಆರೋಪಕ್ಕೊಳಗಾದ ವ್ಯಕ್ತಿಗಳು ಚುನಾವಣೆಗೆ ಸ್ಪರ್ಧಿಸಲು ಅನರ್ಹರೆಂದು ಮತ್ತು ಆರೋಪದಿಂದ ಮುಕ್ತರಾಗುವವರೆವಿಗೂ ಸ್ಪರ್ಧಿಸಬಾರದೆಂಬ ನಿರ್ಬಂಧ ಹೇರಲಾಗದು 2004(1) ಕೆಎಲ್‌ಜೆ 297.

52. ಒಂದು ಸಂಘದ ಕಾರ್ಯ ನಿರ್ವಹಣೆ ಮಾಡುವ ಬಗ್ಗೆ ವಿಚಾರಣೆ ಮಾಡುವಾಗ ಕಾಯಿದೆಯಲ್ಲಿ 3 ಅವಕಾಶಗಳನ್ನು ಕಲ್ಪಿಸಿದೆ. (1) ಸ್ವಇಚ್ಛೆಯಿಂದ ವಿಚಾರಣೆ ಮಾಡುವುದು (2) ಬಹುಮತದ ಮಂಡಳಿಯ ಸದಸ್ಯರು ಅರ್ಜಿ ಕೊಟ್ಟಾಗ (3) 1/3 ಅಂಶದ ಸದಸ್ಯರು ಅರ್ಜಿ ಕೊಟ್ಟಾಗ. ನಿಬಂಧಕರು ಸ್ವಇಚ್ಛೆಯಿಂದ ವಿಚಾರಣೆ ಮಾಡುವ ಸಂದರ್ಭದಲ್ಲಿ ಅವರಿಗೆ ಲಭ್ಯವಾದ ಮಾಹಿತಿ ಅಥವಾ ದಾಖಲೆಗಳ ಆಧಾರದ ಮೇಲೆ ವಿಚಾರಣೆ ಮಾಡಬೇಕೋ ಬೇಡವೋ ಎಂಬುದು ಅವನ ಸ್ವಇಚ್ಛೆಗೆ ಬಿಡುವುದು. ವಿಚಾರಣೆ ಮಾಡುವ ಅವಶ್ಯಕತೆ ಇಲ್ಲವೆಂದೂ ಸಹ ತೀರ್ಮಾನ ತೆಗೆದುಕೊಳ್ಳಬಹುದು. ಆದರೆ ಆಡಳಿತ ಮಂಡಳಿಯ ಬಹುಮತದ ಸದಸ್ಯರು ಮನವಿ ಕೊಟ್ಟಾಗ ಮತ್ತು 1/3 ಅಂಶದ ಸದಸ್ಯರು ಮನವಿ ಕೊಟ್ಟಾಗ ನಿಬಂಧಕರು ವಿಚಾರಣೆ ಮಾಡಲೇಬೇಕು. ಇದು ಕಾನೂನಿನಲ್ಲಿ ಜವಾಬ್ದಾರಿಯನ್ನು ನಿಗಧಿಪಡಿಸಿದೆ. 1992 ಕೆಎಲ್‌ಜೆ 403ಎ(ಡಿಬಿ) ಐಎಲ್ ಆರ್ 1990 ಕೆಎಆರ್ 3721 (ಡಿಬಿ)

53. ಒಂದು ಸಂಘವನ್ನು ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಿದಾಗ ಕಲಂ 27ಎ ಅನ್ವಯ ಒಮ್ಮೆ 6 ತಿಂಗಳಿಗೆ ಮೀರದಂತೆ ನೇಮಿಸಬಹುದು. ಆದರೆ ಒಟ್ಟಾರೆ ಅವಧಿ 4 ವರ್ಷಕ್ಕೆ ಮೀರತಕ್ಕದ್ದಲ್ಲ. ಅಂದರೆ ಆಡಳಿತಾಧಿಕಾರಿಯು ಯಾವುದೇ ಕಾರಣಕ್ಕೂ 4 ವರ್ಷಕ್ಕಿಂತ ಹೆಚ್ಚು ಅವಧಿ ಕಾರ್ಯ ನಿರ್ವಹಿಸತಕ್ಕದ್ದಲ್ಲ. 4 ವರ್ಷಕ್ಕಿಂತ ಹೆಚ್ಚ ಅವಧಿಗೆ ಮುಂದುವರಿಯಲು ಸಾಧ್ಯವಿಲ್ಲವಾದ್ದರಿಂದ ನ್ಯಾಯಾಲಯವು ನ್ಯಾಯಾಲಯದ ಟ್ರಸ್ಟಿಯೆಂದು ಒಬ್ಬ ಅಧಿಕಾರಿಯನ್ನು ನೇಮಿಸಿ, ಮುಂದಿನ ಕ್ರಮ ಜರುಗಿಸಲು ಸರ್ಕಾರಕ್ಕೆ ನಿರ್ದೇಶನ ಮಾಡಲಾಯಿತು. ಹಾಗೂ ಸರ್ಕಾರದಿಂದ ಕೊಡಮಾಡುವ ಹಣಕಾಸನ್ನು ಆ ಅಧಿಕಾರಿ ಮುಖಾಂತರವೇ ಬಿಡುಗಡೆ ಮಾಡುವಂತೆ (ಅಂದರೆ ಸಂಬಳ ಸಾರಿಗೆ ಹಣವನ್ನು) ಆದೇಶಿಸಿತು 2004(8) ಕೆಎಲ್‌ಜೆ 388/ಐಎಲ್‌ಆರ್ 2004 ಕೆಎಆರ್ 5247.

54. ಕಲಂ 25ರಲ್ಲಿ ವಿಚಾರಣೆ ಮಾಡಿ ವರದಿ ಕಳುಹಿಸುವುದಕ್ಕೂ ಕಲಂ 27ಎ ಅನ್ವಯ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರಕ್ಕೆ ಸಲ್ಲಿಸುವ ವರದಿಗೂ ವ್ಯತ್ಯಾಸ ಇದೆ. ಕಲಂ 25ರ ವಿಚಾರಣೆ ಮಾಡುವ ಸಂದರ್ಭದಲ್ಲಿ ಆ ಸಂಘದ ವ್ಯವಹಾರವು ಸಮರ್ಪಕವಾಗಿ ನಿರ್ವಹಿಸದೇ ಇದ್ದಾಗ ಮಾತ್ರ ಕ್ರಮ ಜರುಗಿಸಬಹುದಾಗಿದೆ. ಅಂದರೆ ಕ್ರಮ ಜರುಗಿಸದೇ ಇದ್ದರೂ ಇರಬಹುದು. ಆದರೆ ಕಲಂ 27ಎ ಅನ್ವಯ ವಿಚಾರಣೆ ಮಾಡಿ ಆಡಳಿತಾಧಿಕಾರಿಯನ್ನು

ನೇಮಿಸಲು ಸರ್ಕಾರಕ್ಕೆ ಕಳುಹಿಸಿದಾಗ ಆ ವರದಿಯನ್ನು ಆಧರಿಸಿ ಆಡಳಿತಾಧಿಕಾರಿಯನ್ನು ನೇಮಿಸತಕ್ಕದ್ದು. ನಿಬಂಧಕರು ವಿಚಾರಣೆ ಮಾಡಿ ವರದಿ ಕಳುಹಿಸಿದ ನಂತರವೂ ಸರ್ಕಾರವು ಆ ವರದಿ ಆಧಾರದ ಮೇಲೆ, ಸಂಘಕ್ಕೆ ಅವಕಾಶವನ್ನು ಕಲ್ಪಿಸಿದ ನಂತರವೇ ಆಡಳಿತಾಧಿಕಾರಿಯನ್ನು ನೇಮಿಸಲು ಕ್ರಮ ಜರುಗಿಸಬೇಕು. ನಿಬಂಧಕರು ಕಳುಹಿಸಿದ ವರದಿಯೇ ಸಾಕೆಂಬ ತೀರ್ಮಾನಕ್ಕೆ ಬರತಕ್ಕದ್ದಲ್ಲ 1984(2) ಕೆಎಲ್‌ಜೆ ಎಸ್ಎನ್ 16.

55. ಸ್ವಾಭಾವಿಕ ನ್ಯಾಯದನ್ವಯ ಆಡಳಿತಾಧಿಕಾರಿಯನ್ನು ನೇಮಿಸುವ ಸಂದರ್ಭದಲ್ಲಿ ನೋಟೀಸ್ ಕೊಡಮಾಡುವ ಅವಕಾಶ ಕಲ್ಪಿಸಬೇಕು. ವಿಚಾರಣೆ ಮಾಡುವ ಸಂದರ್ಭದಲ್ಲಿ ಸಂಘಕ್ಕೆ ನೋಟೀಸ್ ಜಾರಿ ಮಾಡಿ ವಿಚಾರಣೆ ಮಾಡಿದಾಗ, ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಲ್ಲ. ಸಾಮಾನ್ಯವಾಗಿ ಯಾವನೇ ಕಕ್ಷಿದಾರ ನನಗೆ ಸ್ವಾಭಾವಿಕ ನ್ಯಾಯದನ್ವಯ ವಿವರಣೆ ಸಲ್ಲಿಸಲು 2ನೇ ಸಾರಿಯೂ ಅವಕಾಶ ಕೊಡಬೇಕೆಂಬ ಅವಶ್ಯಕತೆ ಇಲ್ಲ. ವಿಚಾರಣಾ ವರದಿಯನ್ನು ಕೊಡಲೇಬೇಕೆಂಬ ಷರತ್ತಿಲ್ಲ. ವಿಚಾರಣೆ ವರದಿಯ ನಕಲನ್ನು ಕೊಟ್ಟಿಲ್ಲವೆಂದು ಮತ್ತು ನಿಬಂಧಕರು ತಾವು ತೆಗೆದುಕೊಂಡ ತೀರ್ಮಾನವನ್ನು ತಿಳಿಸಿಲ್ಲವೆಂಬ ಕಾರಣಕ್ಕೆ ಆ ವರದಿಯ ಆಧಾರದ ಮೇಲೆ ತೆಗೆದುಕೊಂಡ ಕ್ರಮವನ್ನು ಕಿತ್ತುಹಾಕಬೇಕು. ಏಕೆಂದರೆ ಕಾನೂನಿನಲ್ಲಿ ಸೂಚಿಸಿರುವ ನೀತಿನಿಯಮಗಳನ್ನು ಪಾಲಿಸಲೇಬೇಕು. ಅವುಗಳನ್ನು ಪಾಲಿಸದೇ ಇದ್ದರೆ ಅದು ತಪ್ಪು 1979(1) ಕೆಎಲ್‌ಜೆ 393.

56. ನಿಬಂಧಕರು ಒಂದು ಸಂಘದ ವ್ಯವಹಾರದ ಬಗ್ಗೆ ಸ್ವಇಚ್ಛೆಯಿಂದ ವಿಚಾರಣೆ ಮಾಡಲಿಲ್ಲವೆಂಬ ಕಾರಣಕ್ಕೆ ನ್ಯಾಯಾಲಯವು ಮ್ಯಾಂಡಮಸ್ ಅರ್ಜಿ ಮುಖಾಂತರ ನಿರ್ದೇಶನಕೊಡತಕ್ಕದ್ದಲ್ಲ. ಆ ಸಂಘದ ನೌಕರರು ಕಲಂ 25ರನ್ವಯ ನಿಬಂಧಕರ ವಿಚಾರಣೆಗೆ ಆದೇಶಿಸಬೇಕೆಂದು ಒತ್ತಾಯಿಸತಕ್ಕದ್ದಲ್ಲ. ಅಂದರೆ ಅಂತಹ ನೌಕರರಿಗೆ ಯಾವುದೇ ಅಧಿಕಾರವಿಲ್ಲ. ಆದ್ದರಿಂದ ನಿಬಂಧಕರಿಗೆ ವಿಚಾರಣೆ ಮಾಡಲು ಆದೇಶಿಸಲಾಗುವುದಿಲ್ಲ. 2004(1) ಕೆಎಲ್‌ಜೆ 416.

57. ನಿಬಂಧಕರು ಅವನಿಗೆ ಲಭ್ಯವಾದ ದಾಖಲೆಗಳು, ಮಾಹಿತಿಗಳು, ಅರ್ಜಿಗಳ ಆಧಾರದ ಮೇಲೆ, ಅಂತಹ ಆರೋಪಗಳು ಸಾಬೀತಾಗುವಷ್ಟು ಮಟ್ಟಿಗೆ ಲಭ್ಯವಿದ್ದರೆ ಸ್ವಇಚ್ಛೆಯಿಂದ ವಿಚಾರಣೆ ಮಾಡಬಹುದು. ಆದರೆ ಅಂತಹ ವಿಚಾರಣೆ ಮಾಡುವಾಗ ಅಂತಹ ನಿಬಂಧಕನ ಕಾರ್ಯವ್ಯಾಪ್ತಿಯಲ್ಲಿ ಆ ಸಂಘ ಬರುತ್ತದೆಯೇ ಇಲ್ಲವೇ ಎಂಬುದನ್ನು ಗಮನದಲ್ಲಿರಿಸಬೇಕು. 1997(3) ಕೆಎಲ್‌ಜೆ 94/ಐಎಲ್ಆರ್ 1997 ಕೆಎಆರ್ 961/ಎಐಆರ್ 1997 ಕೆಎನ್‌ಟಿ 383.

58. ನಿಬಂಧಕರು ಒಂದು ಸಂಘದ ನಿರ್ವಹಣೆ ಮತ್ತು ವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಆದೇಶಿಸಿದಾಗ ಅಂತಹ ಸಂದರ್ಭದಲ್ಲಿ ಸಂಘಕ್ಕೆ ಚುನಾವಣೆ ನಡೆದಿಲ್ಲದಿದ್ದರೆ, ಚುನಾವಣೆ ನಡೆಸುವಂತೆ ಕೇಳಬಹುದು ಎಂಬ ಬಗ್ಗೆ ಕಲಂ 25ರನ್ವಯ ನಿಗಧಿಪಡಿಸಿದ ನೀತಿ ನಿಯಮಗಳನ್ನು, ಅಂದರೆ ನಿಯಮ 8ರಲ್ಲಿ ಸೂಚಿಸಿರುವ ವಿಚಾರಣೆ ಸಮಯದಲ್ಲಿ ಕೊಡಬೇಕಾದ ನೋಟೀಸ್ ಮತ್ತು ನೋಟೀಸಿನಲ್ಲಿ ವಿಚಾರಣೆ ನಡೆಯುವ ದಿನಾಂಕ, ಸ್ಥಳ ಮತ್ತು ವೇಳೆಯನ್ನು ನಮೂದಿಸಿರಬೇಕು. ಈ

ನೋಟೀಸನ್ನು ಸಂಘಕ್ಕೆ ಕೊಡಬೇಕು. ಅಂದರೆ ವಿಚಾರಣೆ ಮಾಡುವುದಕ್ಕೆ ಆಡಳಿತ ಮಂಡಳಿಯ ಬಹುಮತದ ಸದಸ್ಯರು ಅಥವಾ ಒಟ್ಟಾರೆ ಸದಸ್ಯರ 1/3 ಅಂಶದ ಸದಸ್ಯರು ಲಿಖಿತ ಮನವಿ ಕೊಟ್ಟಾಗ. ನಿಬಂಧಕರು ಇಂತಹ ಅರ್ಜಿಗಳು ಇಲ್ಲದೇ ಇದ್ದಾಗ ಸ್ವಯಂ ಸ್ಫೂರ್ತಿಯಿಂದ ಸಾಕಷ್ಟು ದಾಖಲೆ, ಪುಸ್ತಕಗಳು ಸಿಕ್ಕಿ ವಿಚಾರಣೆ ಮಾಡಲು ತೀರ್ಮಾನಕ್ಕೆ ಬಂದಾಗ, ಅವನ ಅಧಿಕಾರ ವ್ಯಾಪ್ತಿಯ ಒಳಗೆ ವಿಚಾರಣೆ ಮಾಡಲು ಅಧಿಕಾರ ಹೊಂದಿರತಕ್ಕದ್ದು. ವಿಚಾರಣೆ ಮಾಡುವ ಕಾನೂನುಬದ್ಧ ಅಧಿಕಾರ ಇರಬೇಕು. ಈ ಪ್ರಕರಣದಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ ಕಾರಣ ಕೇಳುವ ನೋಟೀಸ್ ಕೊಟ್ಟ ಬಗ್ಗೆ ದಾಖಲೆಗಳು ಇಲ್ಲ. 1993(3) ಕೆಎಲ್‌ಜೆ 407

59. ನಿಬಂಧಕರು ಸ್ವಇಚ್ಛೆಯಿಂದ ವಿಚಾರಣೆ ಆದೇಶ ಮಾಡದೇ ಇದ್ದಾಗ ಹಾಗೂ ಆಡಳಿತ ಮಂಡಳಿಯ 3 ಜನ ಸದಸ್ಯರು ಮಾತ್ರ ಅರ್ಜಿಯನ್ನು ಕೊಟ್ಟಾಗ ಹಾಗೂ ಈ 3 ಜನರು ಆ ಸಂಘದ 1/3 ಅಂಶದ ಸದಸ್ಯರೂ ಇಲ್ಲದಿದ್ದಾಗ ನಿಬಂಧಕರು ಆದೇಶಿಸಿದ ವಿಚಾರಣೆ ಕಾನೂನುಬದ್ಧವಲ್ಲ. 1980(1) ಕೆಎಲ್‌ಜೆ 327

60. ಸರ್ಕಾರವು ಕಲಂ 27ಎ ಅನ್ವಯ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಿದಾಗ ವಿಚಾರಣೆ ವರದಿಯನ್ನು ರವಾನಿಸದೇ ಇದದ ಸಂದರ್ಭದಲ್ಲಿ ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗುತ್ತದೆ. ಕಲಂ 27ಎ ಮತ್ತು 25(2)(3) ಒಟ್ಟಿಗೆ ಓದತಕ್ಕದ್ದು. 1983(2) ಕೆಎಲ್‌ಜೆ ಎಸ್‌ಎನ್ 29.

61. ಆಡಳಿತಾಧಿಕಾರಿಯನ್ನು ನೇಮಿಸುವಾಗ ನೀತಿ ನಿಯಮಗಳನ್ನು ಪಾಲಿಸಬೇಕು. ಆಡಳಿತ ಮಂಡಳಿಯ ಅವಧಿ ಮುಕ್ತಯಗೊಂಡು ಹೊಸ ಆಡಳಿತ ಮಂಡಳಿ ರಚಿಸದೇ ಇದ್ದಾಗ, ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಿಂದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಿಸಬಹುದು. ಯಾವ ಸಂಘದ ಆಡಳಿತ ಮಂಡಳಿಯು ಹೊಸದಾಗಿ ರಚನೆಯಾಗಿದೆಯೋ ಅಂತಹ ಆಡಳಿತ ಮಂಡಳಿ ಚುನಾವಣೆಯ ನಂತರ ಕಾರ್ಯ ನಿರ್ವಹಿಸುತ್ತಿದೆಯೋ, ಹೊಸ ಸದಸ್ಯರನ್ನು ಸೇರಿಸಿಕೊಂಡು ಚುನಾವಣೆ ನಡೆಸಬೇಕೆಂದು ನಿರ್ದೇಶನ ನೀಡಿ ಆಡಳಿತಾಧಿಕಾರಿಯನ್ನು ನೇಮಿಸುವುದು ಕಾನೂನಿನನ್ವಯ ಸಿಂಧುವಲ್ಲ. ಆಡಳಿತಾಧಿಕಾರಿಗೆ ಹೊಸ ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಇಲ್ಲ. ಅದು ಕಾನೂನುಬಾಹಿರ. ಚುನಾವಣೆ ಆದ ಆಡಳಿತ ಮಂಡಳಿಯ ಅವಧಿ 3 ವರ್ಷ ಇದ್ದು ಆ ಅವಧಿ ಮುಗಿಯುವ ತನಕ ಆಯ್ಕೆಯಾದ ಆಡಳಿತ ಮಂಡಳಿ ಮುಂದುವರಿಯತಕ್ಕದ್ದು. 2003(2) ಕೆಎಲ್‌ಜೆ 455

62. ನಿಬಂಧಕರು ಸರ್ಕಾರಕ್ಕೆ ವರದಿ ಕಳುಹಿಸುವ ಸಂದರ್ಭದಲ್ಲಿ ಕಾರಣ ಕೇಳುವ ನೋಟೀಸ್ ಕೊಟ್ಟಿದ್ದರು ಎಂಬ ಆಧಾರದ ಮೇಲೆ ಸರ್ಕಾರವು ಆಡಳಿತಾಧಿಕಾರಿಯನ್ನು ನೇಮಿಸುವಾಗ ವಿಚಾರಣೆ ಮಾಡುವ, ನೋಟೀಸ್ ಕೊಡುವ ಅವಶ್ಯಕತೆ ಇಲ್ಲವೆಂಬ ತೀರ್ಮಾನಕ್ಕೆ ಬರತಕ್ಕದ್ದಲ್ಲ. ಎಐಆರ್ 1985 ಕೆಎಆರ್ 163.

63. ಆಡಳಿತಾಧಿಕಾರಿಯನ್ನು ಸರ್ಕಾರ ನೇಮಿಸಿದಾಗ ಅದರ ಉದ್ದೇಶ ಹೊಸ ಚುನಾವಣೆಯನ್ನು

ಮಾಡಿ ಹೊಸ ಆಡಳಿತ ಮಂಡಳಿಯನ್ನು ರಚಿಸುವುದು. ಆ ಸಮಯದಲ್ಲಿ ಹೊಸ ಸದಸ್ಯರನ್ನು ನೇಮಿಸುವ ಅಥವಾ ಸೇರಿಸಿಕೊಳ್ಳುವ ಅಧಿಕಾರ ಆಡಳಿತಾಧಿಕಾರಿಗೆ ಇಲ್ಲ. ಆಡಳಿತಾಧಿಕಾರಿಯು ಆ ಸಂಘದ ಸದಸ್ಯರ ಪಟ್ಟಿಯಲ್ಲಿರುವ ಸದಸ್ಯೊರ ಆಧಾರದ ಮೇಲೆಯೇ ಹೊಸ ಆಡಳಿತ ಮಂಡಳಿಯನ್ನು ರಚಿಸಬೇಕು. 1999(4) ಕೆಎಲ್‌ಜೆ 346(ಡಿಬಿ)

64. ಕಲಂ 27ಎ ಅನ್ವಯ ಆಡಳಿತಾಧಿಕಾರಿಯನ್ನು ನೇಮಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಸಂಘಕ್ಕೆ ನೋಟೀಸ್ ಜಾರಿ ಮಾಡಿ ಅವಕಾಶವನ್ನು ಕಲ್ಪಿಸಿ ಆಡಳಿತಾಧಿಕಾರಿಯನ್ನು ನೇಮಿಸಬೇಕು. 1979(2) ಕೆಎಲ್‌ಜೆ 343/ಎಐಆರ್ 1980 ಕೆಎಎನ್‌ಟಿ 151. ರೆಲೇಯ್ಡ್ ಆನ್ 1979(1) ಕೆಎಲ್‌ಜೆ 393

65. ನಿಬಂಧಕರು ಉಪನೋಂದಾಣಾಧಿಕಾರಿಗೆ ಒಂದು ದಾಖಲೆಯನ್ನು ನೋಂದಾಯಿಸಬಾರದೆಂದು ನಿರ್ದೇಶನ ಕೊಡಲು ಅಧಿಕಾರವಿಲ್ಲ. ಉಪನೋಂದಣಾಧಿಕಾರಿ ಯಾವುದೇ ದಾಖಲೆಯನ್ನು ನೋಂದಾಯಿಸಲು ತಿರಸ್ಕರಿಸತಕ್ಕದ್ದಲ್ಲ. ಆದರೆ ಅವನು ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳಲು ಅವಕಾಶ ಉಪಯೋಗಿಸಿಕೊಳ್ಳಬಹುದು. 1990(2) ಕೆಎಲ್‌ಜೆ 258ಬಿ(ಡಿಬಿ)/ ಐಎಲ್‌ಆರ್ 1990 ಕೆಎಆರ್ 3740(ಡಿಬಿ)

66. ಆಡಳಿತಾಧಿಕಾರಿಯನ್ನು ನೇಮಿಸಿದಾಗ ಅಂತಹ ಆಡಳಿತಾಧಿಕಾರಿಯು ಸಂಘದ ಆಡಳಿತವನ್ನು ನಿರ್ವಹಣೆ ಮಾಡಲು ನೇಮಿಸಿದ ಅಧಿಕಾರಿ. ಅಂತಹ ಅಧಿಕಾರಿಯು ಕಾನೂನಿನಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ಅದರ ಮೇಲೆ ಸಂವಿದಾನದ ಪರಿಚ್ಛೇಧ 227ರನ್ವಯ ರಿಟ್ ದಾಖಲಿಸಬಹುದು. 2007(4) ಕೆಸಿಸಿಆರ್ ಎಸ್‌ಎನ್ 313.

67. ಒಬ್ಬ ನೌಕರನ ಅಶಿಸ್ತಿಗೆ ವಿವರಣೆಯನ್ನು ಪಡೆದು ಸೇವೆಯಿಂದ ವಿಮುಕ್ತಗೊಳಿಸತಕ್ಕದ್ದಲ್ಲ. ಶಿಸ್ತು ಕ್ರಮ ಜರುಗಿಸಬೇಕಾದರೆ ವಿಚಾರಣೆ ಆಗಬೇಕು. ವಿವರಣೆ ಕೊಟ್ಟದ್ದರ ಆಧಾರದ ಮೇಲೆ ನೌಕರಿಯಿಂದ ತೆಗೆಯಲು ಬರುವುದಿಲ್ಲ. ಆ ರೀತಿ ತೆಗೆದ ಆದೇಶ ಕಾನೂನುಬಾಹಿರ. ಅಂತಹ ನೌಕರ ರಿಟ್ ಅರ್ಜಿ ಮುಖಾಂತರ ಪರಿಹಾರ ಪಡೆಯಬಹುದು ಮತ್ತು ಬೇರೆ ಪ್ರಾಧಿಕಾರದ ಮುಂದೆ ಪರಿಹಾರ ಕೇಳಬಹುದೆಂಬ ಕಾರಣದಿಂದ ತಿರಸ್ಕರಿಸತಕ್ಕದ್ದಲ್ಲ. 2007(4) ಕೆಸಿಸಿಆರ್ ಎಸ್‌ಎನ್ 313.

68. ಆಡಳಿತಾಧಿಕಾರಿಯು ಸಂಘದ ನೌಕರರನ್ನು ಅಮಾನತ್ತುಗೊಳಿಸುವ ಅಧಿಕಾರ ಹೊಂದಿದ್ದಾನೆ. ಅಮಾನತ್ತುಗೊಳಿಸುವುದು ವಿಚಾರಣೆ ಪೂರ್ವದ ಒಂದು ಪ್ರಕ್ರಿಯೆ. ಅಮಾನತ್ತುಗೊಳಿಸಿದ ಸಂದರ್ಭದಲ್ಲಿ ಅಧಿಕಾರ ದುರುಪಯೋಗವಾಗುತ್ತದೆ ಎಂಬ ಗುರುತರ ಆರೋಪಗಳಿದ್ದರೆ ಮತ್ತು ಅಂತಹ ನೌಕರನ್ನು ಉದ್ದೇಶಪೂರ್ವಕವಾಗಿ ತೊಂದರೆ ಕೊಡಲಾಗುತ್ತದೆ ಎಂದಾಗ ಮಾತ್ರ ಪರಿಶೀಲಿಸಬಹುದು. 2007(4) ಕೆಸಿಸಿಆರ್ ಎಸ್‌ಎನ್ 313.

69. ಒಂದು ಸಂಘದ ನಿರ್ವಹಣೆ ಮಾಡುವ ಆಡಳಿತ ಮಂಡಳಿಯಲ್ಲಿ 2 ಗುಂಪುಗಳಿದ್ದರೆ ಅಂತಹ

ಸಂದರ್ಭದಲ್ಲಿ ಉಪ ನಿಬಂಧಕರ ಶಿಫಾರಸ್ಸಿನನ್ವಯ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರಕ್ಕೆಕ ಅಧಿಕಾರವಿದೆ 1991(2) ಕೆಎಲ್‌ಜೆ 392 (ಡಿಬಿ)

70. ನ್ಯಾಯಾಲಯದ ಆದೇಶವನ್ನು ಪಾಲಿಸದೇ ಇದ್ದ ಸಂದರ್ಭದಲ್ಲಿ ರಾಜ್ಯಸರ್ಕಾರಕ್ಕೆಕ ಒಂದು ನಿರ್ದೇಶನ ಕೊಟ್ಟು ಆಡಳಿತಾಧಿಕಾರಿಯನ್ನು ನೇಮಿಸಬೇಕೆಂದುತಿಳಿಸಿತ್ತು. ಮತ್ತು ಆ ರೀತಿ ನೇಮಕ ಮಾಡುವ ಪೂರ್ವದಲ್ಲಿ ಜಿಲ್ಲಾಧಿಕಾರಿಗಳನ್ನು ಅಥವಾ ಅವನು ನೇಮಿಸಿದ ಮತ್ತೊಬ್ಬ ಅಧಿಕಾರಿಯನ್ನು ಪ್ರಭಾರ ವಹಿಸಿಕೊಳ್ಳಲು ಮತ್ತು ಕಾನೂನು ಕಾಲೇಜನ್ನು ನಡೆಸಿಕೊಂಡು ಹೋಗಲು ನಿರ್ದೇಶಿಸಬಹುದಾಗಿದೆ 1988 ಎಸ್‌ಸಿಸಿ (ಎಸ್‌ಯುಪಿಪಿ) 572(ಡಿಬಿ)

71. ಒಂದು ಸಂಘವನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ಕಲಂ 27ಎ ಅನ್ವಯ ನೇಮಿಸಬೇಕಾದಾಗ ನೋಟೀಸ್ ಮೂಲಕ ಸಂಬಂಧಪಟ್ಟ ಸಂಘಕ್ಕೆ ಹೇಳಿಕೆ ಸಲ್ಲಿಸಲು ಅವಕಾಶ ಕೊಟ್ಟು ಆದೇಶಿಸಬೇಕು. 1979(2) ಕೆಎಲ್‌ಜೆ 343 ಎಐಆರ್ 1980 ಕೆಎಎನ್‌ಟಿ 151 ಐಎಲ್‌ಆರ್ 1979(2) ಕೆಎಆರ್ ಎಸ್‌ಎನ್ 149.

72. ರಾಜ್ಯ ಸರ್ಕಾರವು ಕಲಂ 27ಎ ಅನ್ವಯ ವಿಚಾರಣೆ ಮಾಡಿ ಆಡಳಿತಾಧಿಕಾರಿಯನ್ನು ಸಂಘದ ಅವ್ಯವಹಾರವನ್ನು ಆಧರಿಸಿ ನೇಮಕ ಮಾಡಬಹುದು. ಯಾವ ಸಂದರ್ಭದಲ್ಲಿ ವಿಚಾರಣೆ ಮಾಡಿಲ್ಲವೋ ಮತ್ತು ಆ ಸಂಘವು ನಡೆಸುವ ಶಾಲೆಯನ್ನು ಶಾಲೆಯ ವ್ಯವಹಾರವನ್ನು ಇನ್ನೊಂದು ಸಂಘಕ್ಕೆ ರಾಜಕೀಯ ಒತ್ತಡಕ್ಕೆ ಮಣಿದು ವರ್ಗಾಯಿಸಿದಾಗ ಅಂತಹ ಆದೇಶ ದುರುದ್ದೇಶದಿಂದಕೂಡಿದೆ ಎಐಆರ್ 1980ಕೆಎಎನ್‌ಟಿ 165.

## ಕರ್ನಾಟಕ ರಾಜ್ಯ ಲೇವಾದೇವಿಗಾರರ ಕಾಯಿದೆ 1961

1. ರೂ.3000–00 ಕ್ಕಿಂತ ಕಡಿಮೆ ಹಣವನ್ನು ಪ್ರಾಮಿಸರಿ ನೋಟ್‌ಗೆ ಹೊರತುಪಡಿಸಿ ನೆಗೋಷಿಬಲ್ ದಾಖಲೆಗಳ ಆಧಾರದ ಮೇಲೆ ಕೊಟ್ಟ ಹಣ ಸಾಲ ಎಂದು ಪತಿಗಣಿಸತಕ್ಕದ್ದಲ್ಲ. ಒಬ್ಬ ವ್ಯಾಪಾರಸ್ಥ ಸಾಲ ಪಡೆದಾಗ ಅಥವಾ ಲೇಸನ್ಸ್ ಹೊಂದಿದ ಗಿರವಿದಾರನಿಗೆ ಸಾಲ ಕೊಟ್ಟಾಗ, ಜಮೀನ್ದಾರ ಹಿಡುವಳಿದಾರನಿಗೆ ಸಾಲ ಕೊಟ್ಟಾಗ ಅದು ಸಾಲವಾಗತಕ್ಕದ್ದಲ್ಲ. ಸಾಲದ ಅರ್ಥವಿವರಣೆಯಲ್ಲಿ ಬರುವುದಿಲ್ಲ. ಮನಿಲೆಂಡರ್ ವ್ಯಾಪಾರಸ್ಥರಿಗೆ ಹಣ ಕೊಡುವಾಗ ಲೈಸನ್ಸ್ ಪಡೆಯುವ ಅವಶ್ಯಕತೆ ಇಲ್ಲ. ವ್ಯಾಪಾರಸ್ಥ ಎಂದರೆ ವಸ್ತುಗಳನ್ನು ಖರೀದಿ ಮತ್ತು ಮಾರಾಟ ಮಾಡುವ ಅಥವಾ ಚರಾಸ್ತಿ ಮತ್ತು ಸ್ತಿರಾಸ್ತಿಯನ್ನು ಸಾಮಾನ್ಯವಾಗಿ ವ್ಯವಹರಿಸುವ ವ್ಯಾಪಾರಸ್ಥರು, ಬ್ರೋಕರುಗಳು, ಉತ್ಪಾದಕರು, ಕಂಟ್ರಾಕ್ಟರ್‌ಗಳು, ಕಾರ್ಖಾನೆಗಳು ಎಂದು ಅರ್ಥೈಸತಕ್ಕದ್ದು. ಇದರಲ್ಲಿ ಕುಶಲ ಕರ್ಮಿಗಳು ಮತ್ತು ವ್ಯವಸಾಯ ಉತ್ಪನ್ನಗಳು ಮತ್ತು ದನಕರುಗಳು ಸೇರತಕ್ಕದ್ದಲ್ಲ. 1975(1) ಕೆಎಲ್‌ಜೆ ಎಸ್‌ಎನ್ 185 ಪೇಜ್ 63

2. ಈ ಕಾಯಿದೆಯನ್ನು ಪರಿಶೀಲಿಸಿದಾಗ ಇದರ ಉದ್ದೇಶ ಸಾರ್ವಜನಿಕ ಹಿತಾಸಕ್ತಿ. ಸಾಲಗಾರರನ್ನು ಸಾಲ ಕೊಡುವವರಿಂದ ಮೋಸಕ್ಕೆ ಒಳಗಾಗದಂತೆ ತಡೆಹಿಡಿಯುವ ಉದ್ದೇಶ. ಲೈಸನ್ಸ್ ಪಡೆಯಲಾರದೇ ಸಾಲ ಕೊಡುವುದನ್ನು ತಡೆಗಟ್ಟಲು ಜೈಲು ಶಿಕ್ಷೆಗೂ ಅವಕಾಶ ಕಲ್ಪಿಸಿರುವುದು ಈ ಉದ್ದೇಶದಿಂದ ಐಎಲ್ಆರ್ 1985(1) ಕೆಎಆರ್ 912.

3. ಒಂದು ಲೈಸನ್ಸ್ ಪಡೆಯಲು ವಿಳಂಬವಾಗಿದ್ದರೆ ದಂಡದ ಪ್ರಮಾಣವನ್ನು ನಿಗಧಿಪಡಿಸಿದೆ. ಈ ಪ್ರಮಾಣವು 2 ಪಟ್ಟು ಎಂದು ನಿಗಧಿಪಡಿಸಲಾಗಿದೆ. ಈ ವಿಷಯವನ್ನು ವಿಚಾರಣೆ ಮಾಡಿ ವ್ಯವಹಾರ ನಡೆಸುವಾಗ ಮಾಡಿದ ಸರಿತಪ್ಪುಗಳನ್ನು ಕಂಡುಹಿಡಿದು ಅಂತಹ ವ್ಯಕ್ತಿಗೆ ಲೈಸನ್ಸ್ ನವೀಕರಿಸುವುದು ಬೇಡವೆಂದು ತೀರ್ಮಾನಿಸಿದಾಗ ಅದನ್ನು ತಿರಸ್ಕರಿಸಬಹುದು. ಆದರೆ ತಿರಸ್ಕರಿಸುವ ಸಂದರ್ಭದಲ್ಲಿ ಸೆಕ್ಷನ್ 7ರನ್ವಯ ವಿಚಾರಣೆ ಮಾಡದೇ ತಿರಸ್ಕರಿಸಿದರೆ ಅದು ಕಾನೂನುಬದ್ಧವಲ್ಲ. ಐಎಲ್ಆರ್ 1985(1) ಕೆಎಆರ್ 1048

4. ಸಾಲ ಕೊಡುವ ವ್ಯಕ್ತಿ ಸಾಲ ಕೊಡುವ ದಿನಾಂಕಕ್ಕೆ ಕ್ರಮಬದ್ಧ ಲೈಸನ್ಸ್ ಹೊಂದಿರಬೇಕು. ಅಂದರೆ ಸಾಲ ಕೊಡುವ ದಿನಾಂಕಕ್ಕೆ ನಿಬಂಧಕರಿಂದ ಲೈಸನ್ಸ್ ಪಡೆದಿರಬೇಕು ಐಲೆಆರ್ 1985(1) ಕೆಎಆರ್ 912.

5. ಹಿಂಬರಹವನ್ನು ಮೂಲ ಸಾಕ್ಷಿ ಅಲ್ಲವೆಂದು ತಿರಸ್ಕರಿಸತಕ್ಕದ್ದಲ್ಲ. ಈ ಕಾಯಿದೆಯು 1965ರಿಂದ ಜಾರಿಗೆ ಬಂದಿದ್ದು, ಈ ಪ್ರಕರಣವು 1965ರ ಕಾನೂನು ಜಾರಿಗೆ ಬಂದ ನಂತರವಾಗಿರುವುದರಿಂದ ಆ ದಿನಾಂಕಕ್ಕೆ ಲೈಸೆನ್ಸ್ ಹೊಂದಿರಬೇಕಾಗಿತ್ತು. ಸಾಲ ಕೊಟ್ಟ ವ್ಯಕ್ತಿ ಸಾಲಕೊಟ್ಟ ದಿನಾಂಕಕ್ಕೆ ಲೈಸನ್ಸ್ ಹೊಂದಿದ್ದೇನೆಂದು ದಾಖಲೆ ತೋರಿಸದೇ ಇದ್ದರೆ ಅವನು ಲೈಸನ್ಸ್ ಹೊಂದಿಲ್ಲವೆಂದು ಅರ್ಥ.1988(1) ಡಿಎಲ್‌ಜೆ ಎಸ್ಎನ್ 6.

6. ಅರ್ಜಿದಾರನು ಸಾಲ ಕೊಡುವ ವ್ಯಕ್ತಿಯಾಗಿದ್ದು, ರೂ.10000–00 ವನ್ನು ಎದುರು ಅರ್ಜಿದಾರನಿಗೆ ಲೈಸನ್ಸ್ ಪಡೆಯಲಾರದೇ ಕೊಟ್ಟಿದ್ದಾನೆ. ಇದು ತಪ್ಪು 1989(2) ಡಿಎಲ್‌ಜೆ ಎಸ್ಎನ್ 27.